
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

20 ಜುಲೈ 2016 ಪುಟ 20 ರೂ. 15/-

ಗುಡಿಸಲಿನ ಹಣತೆ
ಪ್ರೊಫೆಸರ್ ಬಿ.ಕೃಷ್ಣಪ್ಪ


ಚೆಡ್ಡಿಗಳಿಗೆ ಕಲ್ಲಪ್ಪ ಬಲಿ





ಮತ್ತೆ ಮದುವೆ ರಂಪಾಟ

ಮಂಡ್ಯ
ಡಿಕೆಶಿಯದ್ದೇ ಹವಾ




ಮೈಸೂರು
ಮರೀಗೌಡನ ಭೂಗತ ಫಜೀತಿ



ಕೊಡಗು
ತಾವೇ ತೋಡಿದ ಗುಂಡಿಗೆ ಚೆಡ್ಡಿಗಳು


ಮಲೆನಾಡು-ಕರಾವಳಿ
ಅಡಿಕೆ ಬೆಳೆಗಾರರಿಗೆ ಮೋದಿ ನಾಮ




ಕಳೆದ ಲೋಕಸಭಾ ಚುನಾವಣೆ ಹೊತ್ತಲ್ಲಿ ಯುಪಿಎ ಗೆದ್ದರೆ ಅಡಿಕೆ ಬೆಳೆಗಾರರಿಗೆ ಗಂಡಾಂತರ ಖಂಡಿತ ಎಂದು ಬೊಬ್ಬೆ ಹೊಡೆದಿದ್ದರು. ಸುಳ್ಳು ಹೇಳುವುದರಲ್ಲಿ ಎಕ್ಸ್‌ಪರ್ಟ್‌ಗಳಾದ ಚೆಡ್ಡಿಗಳು ಅಡಿಕೆ ಬೆಳೆಗಾರರ ಸಂಕಷ್ಟವನ್ನು ಬಂಡವಾಳ ಮಾಡಿಕೊಂಡು ಪ್ರಚಾರ ನಡೆಸಿದ್ದರು. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಅಡಿಕೆ ತೋಟಿಗರಿಗೆ ಸ್ವರ್ಗ ಸಿಗಲಿದೆ ಎಂದು ಗೊಂದಲಗೊಳಿಸಿದ್ದರು. ಅಡಿಕೆ ನಿಷೇಧದ ಹುಸಿ ಗುಮ್ಮ ತೋರಿಸಿ ಮಲೆನಾಡು- ಕರಾವಳಿಯ ನಾಲ್ಕು ಎಂಪಿ ಸ್ಥಾನ ಗೆದ್ದಿದ್ದರು ಬಿಜೆಪಿಗರು. ಯಡವಟ್ಟು ಯಡ್ಡಿ, ಗಿಲೀಟಿನ ಕಟೀಲ್, ಕೂಗು ಮಾರಿ ಶೋಭಕ್ಕ, ಅಡ್ನಾಡಿ ಅನಂತ್‌ಹೆಗ್ಡೆಯಂಥ ಚಂಡ-ಪ್ರಚಂಡರು ಸಂಸತ್ತು ಕಾಣಲು ಅಡಿಕೆ ಬೆಳೆಗಾರರ ಮತ ಬ್ಯಾಂಕ್ ನೆರವಾಗಿತ್ತು. ಆದರೆ ಸಂಸದರು ಅಡಿಕೆ ಬೆಳೆಗಾರರಿಗೆ ಈ ಎರಡು ವರ್ಷ ಮೋಸ-ವಂಚನೆ-ದಗಾ-ದೋಖಾ ಮಾಡುತ್ತಲೇ ಬಂದಿದ್ದಾರೆ. ಬಿಜೆಪಿ ಪ್ರಧಾನಿ ಮೋದಿ ಮಹಾತ್ಮನೇ ಅಡಿಕೆ ನಂಬಿ ಬದುಕುತ್ತಿರುವ ಅಮಾಯಕರಿಗೆ ಕಂಟಕನಾಗಿದ್ದಾನೆ. ಗುಟ್ಕಾ ಸಾಮ್ರಾಜ್ಯದ ಡಾನ್ ಬಿಮಲ್ ಕುಮಾರ್‌ನ ಬೆನ್ನಿಗೆ ನಿಂತಿರುವ ಮೋದಿ ದೇಶಿ ಅಡಿಕೆಗೆ ಉತ್ತಮ ದರ ಬರದಂತೆ ಮಾಡುತ್ತಿದ್ದಾನೆ. ಕಳಪೆ ವಿದೇಶಿ ಅಡಿಕೆ ಆಮದು ಮಾಡಿಕೊಳ್ಳುತ್ತಿದ್ದಾನೆ. ಕಳ್ಳ ಸಾಗಾಣಿಕೆಯೂ ಜೋರಾಗಿಯೇ ನಡೆದಿದೆ. ಜನರ ಜೀವಕ್ಕೆ ಮಾರಕವಾದ ರಾಸಾಯನಿಕ-ತಂಬಾಕು ಬೆರೆತ ಗುಟ್ಕಾ ದಂಧೆದಾರ ಬಿಮಲ್‌ಕುಮಾರ್‌ನ 40 ಸಾವಿರ ಟನ್ ಕಳ್ಳ ಅಡಿಕೆ ವಿದೇಶದಿಂದ ಈಚೆಗೆ ಕೋಲ್ಕತ್ತಾ ಬಂದರಿಗೆ ಬಂದಿತ್ತು. ಅದನ್ನು ತೆರಿಗೆ ಅಧಿಕಾರಿಗಳು ಸೀಜ್ ಮಾಡಿದ್ದರು. ಆದರೆ ಸಾಕ್ಷಾತ್ ಪಿಎಂ ಸಾಹೇಬರ ಸಖನ ಅಕ್ರಮ ಅಡಿಕೆ ರಾತ್ರೋರಾತ್ರಿ ದೇಶಿ ಮಾರುಕಟ್ಟೆಗೆ ಬಂತು. ವಿದೇಶಿ ಕಳ್ಳಡಿಕೆ ಮಾಫಿಯಾದ ಹಿಡಿತಕ್ಕೆ ಸಿಲುಕಿರುವ ಮೋದಿ ಸರ್ಕಾರದಿಂದ ದೇಶಿ ರೈತರಿಗೆ ಹಿತವಾಗಲು ಸಾಧ್ಯವಾ?


ಅಡಿಕೆ ತೋಟಿಗರಿಗೆ ಮೋದಿ ಮಾಮನ ನಾಮ






ಯಡ್ಡಿ







ಮಲೆನಾಡು ಮತ್ತು ಕರಾವಳಿಯ ನಾಲ್ಕೈದು ಜಿಲ್ಲೆಯಲ್ಲಿ ಅಡಿಕೆ ಜೀವನಾಧಾರ ಫಸಲು. ಅಡಿಕೆಗೆ ಮಾನ ಇದ್ದರಷ್ಟೇ ಬೆಳೆಗಾರ ಕುಟುಂಬಕ್ಕೆ ಪ್ರಾಣ. ಆದರೆ ಕೇಂದ್ರದಲ್ಲಿ ಹುಸಿಹುಸೀ ಸುಳ್ಳು-ದಗಾಗಳಿಗೆ ಆಕರ್ಷಕ ಹೊದಿಕೆ ಸುತ್ತಿ ಭರ್ಜರಿ ಮಾರಾಟ ನಡೆಸುವ ಮಾರ್ಕೆಟಿಂಗ್ ಪ್ರವೀಣ ಮೋದಿ ಮಾಮನ ಬೂಟಾಟಿಕೆ ಸರ್ಕಾರ ಅಧಿಕಾರ ಹಿಡಿದ ಲಾಗಾಯ್ತಿನಿಂದ ಅಡಿಕೆ ಮಾನ ಸರಸರನೆ ಇಳಿಯುತ್ತಲೇ ಇದೆ. ಯುಪಿಎ ಸರ್ಕಾರ ಅಡಿಕೆ ನಿಷೇಧಕ್ಕೆ ಹುನ್ನಾರ ನಡೆಸಿದೆ ಎಂಬ ಗುಮ್ಮ ತೋರಿಸಿ ರಾಜ್ಯದ ನಾಲ್ಕು ಸಂಸದ ಸ್ಥಾನ ಸಲೀಸಾಗಿ ಗೆದ್ದಿದ್ದ ಚೆಡ್ಡಿ-ಕಾವಿ ಬಳಗ ಅಡಿಕೆ ತೋಟಗರ ಋಣ ತೀರಿಸುವ ಕನಿಷ್ಠ ಕಾಳಜಿಯೂ ತೋರಿಸಿಲ್ಲ. ದುರಂತ ವಾಸ್ತವವೆಂದರೆ, ಬಿಜೆಪಿ ಪ್ರಭುತ್ವ ಸ್ಥಾಪಿತವಾದ ನಂತರ ಗುಟ್ಕಾ, ಪಾನ್ ಮಸಾಲಾ ಡಾನ್‌ಗಳು ಮಜಬೂತಾಗಿ ಕೊಬ್ಬಿದ್ದಾರೆ; ಅಡಿಕೆ ಬೆಳೆಗಾರರು ಕಷ್ಟ-ನಷ್ಟಕ್ಕೆ ಈಡಾಗಿ ಹೈರಾಣಾಗಿ ಹೋಗಿದ್ದಾರೆ.

ಮೋದಿ ಮಾಮನ ಜಾದೂಗಾರಿಕೆ ನೋಡಿ. ಬೇರೆಲ್ಲ ಬೆಳೆಗಳ ಬೆಲೆ ಗಗನಕ್ಕೇರುತ್ತಿದ್ದರೆ, ಅಡಿಕೆ ಕಿಮ್ಮತ್ತು ಮಾತ್ರ ನಿಕೃಷ್ಟವಾಗುತ್ತಿದೆ! ವಿದೇಶಿ ಅಡಿಕೆ ಯಥೇಚ್ಛವಾಗಿ ಆಮದು ಮಾಡಿಕೊಳ್ಳುವ ಮೋದಿಯ ವಾಣಿಜ್ಯ ನೀತಿಯಿಂದ ದೇಶಿ ಅಡಿಕೆಗೆ ಮಾರುಕಟ್ಟೆಯೇ ಸಿಗದೆ ಮಣ್ಣುಪಾಲಾಗುತ್ತಿದೆ. ಗುಟ್ಕಾ ಡಾನ್ ಬಿಮಲ್‌ಕುಮಾರ್ ಎಂಬ ಮೋದಿ ಮಾಮನ ಅತ್ಯಾಪ್ತ ದೋ ನಂಬರ್ ವ್ಯಾಪಾರಿ ವಿದೇಶದಿಂದ ಅಡಿಕೆ ಕಳ್ಳಸಾಗಾಣಿಕೆ ಮಾಡಿಕೊಳ್ಳುತ್ತಿದ್ದಾನೆ. ಅಕ್ರಮವಾಗಿ ಸಾವಿರಾರು ಟನ್ ಅಡಿಕೆ ವಿದೇಶದಿಂದ ದೇಶಿ ಮಾರುಕಟ್ಟೆಗೆ ಬರುತ್ತಿದ್ದರೂ ಸ್ವಯಂಘೋಷಿತ ದೇಶೋದ್ಧಾರಕ ಮೋದಿ ಮತ್ತಾತನ ವಾಣಿಜ್ಯ ಮಂತ್ರಿಣಿ ನಿರ್ಮಲಾ ಸೀತಾರಾಮನ್ ಕಣ್ಣು-ಬಾಯಿ ಮುಚ್ಚಿಕೊಂಡು ಕುಂತಿದ್ದಾರೆ.

. ಅಡಿಕೆಯನ್ನೇ ಅವಲಂಬಿಸಿ ಬದುಕು ಕಟ್ಟಿಕೊಂಡಿರುವ ದೇಶಿ ಅಡಿಕೆ ಬೆಳೆಗಾರರು ನಿರ್ನಾಮವಾದರೂ ತಮ್ಮ ದಗಾಕೋರ ಉದ್ಯಮಪತಿ ಪಟಾಲಮ್‌ನ ಗುಟ್ಕಾ ದೊರೆಗಳ ಲಾಬಿಗೆ ಮಾತ್ರ ಒಂಚೂರೂ ತೊಂದರೆ-ಹಾನಿ ಆಗಬಾರದೆಂಬ ಹಿಡನ್ ಅಜೆಂಡಾ ಮೋದಿಯ ಬಳಗದ್ದು. ಹೀಗಾಗಿ ಭಾರತದಲ್ಲಿ ಹೇರಳವಾಗಿ ಉತ್ಕೃಷ್ಟ ದರ್ಜೆಯ ಅಡಿಕೆ ಫಸಲಾಗುತ್ತಿದ್ದರೂ ಕಳಪೆ ವಿದೇಶಿ ಅಡಿಕೆ ಆಮದಿನ ಮೇಲೆ ನಿಷೇಧ ಹೇರಲು ಕೇಂದ್ರದ ಚೆಡ್ಡಿ ತಂಡ ತಯಾರಾಗುತ್ತಿಲ್ಲ! ಅಡಿಕೆ ಕಳ್ಳ ಸಾಗಾಣಿಕೆ ಹಾಗು ಆಮದು ದಂಧೆಯಿಂದ ಸ್ಥಳೀಯ ಮಾರುಕಟ್ಟೆ ದರ ಏರುತ್ತಿಲ್ಲ, ಬುರ್ನಾಸ್ ವಿದೇಶಿ ಅಡಿಕೆ ಅಗ್ಗದಲ್ಲಿ ಸಿಗುವುದರಿಂದ ಒಳ್ಳೆಯ ದೇಶಿ ಅಡಿಕೆಗೆ ಮಾನ ಬರುತ್ತಿಲ್ಲ. ಇದು ಗುಟ್ಕಾ ಲಾಬಿ ಆಳುವವರ ಸಂಪೂರ್ಣ ಸಹಕಾರದಿಂದ ನಾಜೂಕಾಗಿ ನಡೆಸಿರುವ ದೇಶಿ ಅಡಿಕೆ ಬೆಳೆಗಾರರ ಕೊಲ್ಲುವ ಕುತಂತ್ರಗಾರಿಕೆ!!

ಅಮಾಯಕ ಅಡಿಕೆ ತೋಟಿಗರು "ಇಂದು ರೇಟು ಬರುತ್ತದೆ... ನಾಳೆ ಬರಬಹುದು..." ಎಂದು ಮಹಸೂಲನ್ನು ಹಾಗೇ ಇಟ್ಟುಕೊಂಡು ಕಾಯುತ್ತಿದ್ದಾರೆ. ರಾಜ್ಯದ ವಿವಿಧ ಅಡಿಕೆ ಮಾರುಕಟ್ಟೆಗೆ ಈಗ ಬಂದು ಖರ್ಚಾಗಿರುವ ಅಡಿಕೆ ~ ಶೇ.40ರಷ್ಟು ಅಷ್ಟೇ! ಉಳಿದ ಶೇ. 60 ಅಡಿಕೆ ಮನೆಯಲ್ಲೇ ದರದ ನಿರೀಕ್ಷೆಯಲ್ಲಿ ಕಾಯ್ದಿಟ್ಟಿದ್ದಾರೆ. ಆದರೆ ಗುಟ್ಕಾ ಲಾಬಿ, ಅಡಿಕೆ ಕಳ್ಳ ಸಾಗಾಣಿಕೆ ...


ಬಾಂಗ್ಲಾ, ಶ್ರೀಲಂಕಾ ಮತ್ತು ನೇಪಾಳದಿಂದ ನಿಷೇಧಿತ ದೇಶದ ಅಡಿಕೆ ತರುತ್ತಿದೆ. ಇಂಡೋನೇಷ್ಯಾ ಮತ್ತು ಮಲೇಷ್ಯಾದ ಅಡಿಕೆ ಭಾರತಕ್ಕೆ ತರಲು ನಿಷೇಧ ಹೇರಲಾಗಿದೆ. ಆದರೆ 'ಸಾರ್ಕ್' ರಾಷ್ಟ್ರಗಳ ವಾಣಿಜ್ಯ ಒಪ್ಪಂದದ ದೌರ್ಬಲ್ಯ ಬಳಸಿಕೊಂಡು ಅಡಿಕೆ ಮಾಫಿಯಾ ಒಳ ಮಾರ್ಗದಲ್ಲಿ ಮಲೇಷ್ಯಾ-ಇಂಡೋನೇಷ್ಯಾದ ಕೆಟ್ಟ ಅಡಿಕೆ ತಂದು ಗುಟ್ಕಾ ಲಾಬಿಗೆ ಬಿಕರಿ ಮಾಡುತ್ತಿದೆ.

ಶ್ರೀಲಂಕಾ-ಬಾಂಗ್ಲಾಗಳು ಸಾರ್ಕ್ ಒಕ್ಕೂಟದ ಒಡಂಬಡಿಕೆ-ದುರ್ಬಳಕೆ ಮಾಡಿಕೊಂಡು 'ದಲ್ಲಾಳಿ' ದಂಧೆ ಮಾಡುತ್ತಿವೆ. ಡ್ರೈಫ್ರೂಟ್ ಹೆಸರಲ್ಲಿ ಅಕ್ರಮ ವ್ಯವಹಾರಕ್ಕೆ ಆಸ್ಪದ ಕೊಡುತ್ತಿವೆ. ಮಲೇಷ್ಯಾ-ಇಂಡೋನೇಷ್ಯಾದ ಅಡಿಕೆ ಕೊಲ್ಕತ್ತಾ ಬಂದರಿಗೆ ಬಂದಿಳಿಯುತ್ತದೆ. ಅಲ್ಲಿಂದ ನೇಪಾಳ-ಬಾಂಗ್ಲಾಕ್ಕೆ ಹೋಗುತ್ತದೆ. ಇದೇ ಅಡಿಕೆ ಮತ್ತೆ ಕಳ್ಳಮಾರ್ಗದಲ್ಲಿ ಭಾರತದ ಮಾರುಕಟ್ಟೆ ಪ್ರವೇಶಿಸಿ ಗುಟ್ಕಾ ಡಾನ್-ಡಾಕೂಗಳ ತಂಬಾಕೂ ಮತ್ತಿತರ ಅಮಲುಕಾರಕ ರಾಸಾಯನಿಕದೊಂದಿಗೆ ಸೇರಿಸಿ ಸ್ಯಾಚೆಟ್ ರೂಪದಲ್ಲಿ ದೇಶದಾದ್ಯಂತ ಮಾರಾಟವಾಗುತ್ತಿದೆ. ನಾಚಿಕೆಗೇಡಿನ ಸಂಗತಿಯೆಂದರೆ ದೇಶಪ್ರೇಮ, ಮೇಕ್ ಇನ್ ಇಂಡಿಯಾ ಬೊಗಳೆ ಬಿಡುವ ಮೋದಿ ಮಾಮ ಈ ಕಳ್ಳ ಗುಟ್ಕಾ ಜಾಲದ ಆಟಕ್ಕೆ ಒಳಗೊಳಗೇ ಸಹಾಯ ಸಹಕಾರ ನೀಡುತ್ತಿದ್ದಾನೆ. ಇದೇ ನೋಡಿ ಚೆಡ್ಡಿಗಳ ಅಸಲೀ ದೇಶಭಕ್ತಿ!!

ಯುಪಿಎ ಸರ್ಕಾರ ಇದ್ದಾಗ ಅಂದಿನ ವಾಣಿಜ್ಯ ಮಂತ್ರಿ ಆನಂದಶರ್ಮ ಆಮದು ಅಡಿಕೆ ಸುಂಕ ಗಣನೀಯವಾಗಿ ಏರಿಸಿ ದೇಶಿ ಅಡಿಕೆಗೆ ಬೇಡಿಕೆ ಬರುವಂತೆ ಮಾಡಿದ್ದರು. ಆಗ ಅಡಿಕೆ ಬೆಲೆ ಒಂದಿಷ್ಟು ಏರಿತ್ತು, ರೈತರು ಸಣ್ಣ ನಿಟ್ಟುಸಿರ ಬಿಟ್ಟಿದ್ದರು. ದೇಶದ ಬಂದರುಗಳಲ್ಲಿ ನಿಗಾ ವಹಿಸಿ ಕಳ್ಳಡಿಕೆ ಒಳ ನುಸುಳದಂತೆ ತಡೆ ಹಾಕಲಾಗಿತ್ತು. ಆಮದಿಗೂ ಯುಪಿಎ ಸರ್ಕಾರ ಕಡಿವಾಣ ಹಾಕಿತ್ತು. ಯಾವಾಗ ಮೋದಿ ಮಾಮನ ವಾಣಿಜ್ಯ ಮೌಲ್ಯಗಳ ಮಸಲತ್ತಿನ ಸರ್ಕಾರ ಬಂತೋ ಆಗ, ದೇಶಿ ಬಂದರುಗಳಲ್ಲಿ ಕಳ್ಳಾಟ ಜೋರಾಯ್ತು. ಮೋದಿ ಗೆಣೆಗಾರ ಬಿಮಲ್‌ಕುಮಾರ್‌ನ ದೋ ನಂಬರ್ ಗುಟ್ಕಾ ದಂಧೆ ಸಾಮ್ರಾಜ್ಯದ ದಿಗ್ವಿಜಯಕ್ಕೆ ಅನುಕೂಲವಾಗುವಂತೆ ಆಳುವ ಖೂಳರು ಎಲ್ಲ ಕಳ್ಳ ದಾರಿ ತೆರೆದಿಟ್ಟರು! ತೀರಾ ಈಚೆಗೆ ವಿದೇಶದಿಂದ ಬಂದಿದ್ದ 40 ಸಾವಿರ ಟನ್ ಅಕ್ರಮ ಅಡಿಕೆಯನ್ನು ಕೋಲ್ಕತ್ತಾ ಬಂದರಿನಲ್ಲಿ ತೆರಿಗೆ ಅಧಿಕಾರಿಗಳು ಮುಟ್ಟುಗೋಲು ಹಾಕಿಟ್ಟುಕೊಂಡಿದ್ದರು. ಸಾಕ್ಷಾತ್ ಪ್ರಧಾನಮಂತ್ರಿಗಳ ಪ್ರಭಾವವನ್ನೇ ಗುಟ್ಕಾ ಡಾನ್ ಬಿಮಲ್ ಕುಮಾರ್ ಪ್ರಯೋಗಿಸಿ ಈ ಕಳ್ಳ ಅಡಿಕೆ ದೇಶದೊಳಗೆ ನಿರಾಯಾಸವಾಗಿ ತಂದು ಮಾರಕ ಗುಟ್ಕಾ ತಯಾರಿಸಿ ಕೋಟಿ-ಕೋಟಿ ಕಾಸು ಕೂಡಿಹಾಕಿದ್ದಾನೆ.

ದೇಶದಲ್ಲಿ ಸಾಕಷ್ಟು ಅಡಿಕೆ ಫಸಲಾಗುತ್ತಿದೆ. ಅಡಿಕೆಯನ್ನೇ ನಂಬಿ ಲಕ್ಷಾಂತರ ಸಂಸಾರಗಳು ಜೀವಿಸುತ್ತಿವೆ. ಆದರೆ ಮೋದಿ ವಿದೇಶದಿಂದ ಕಳಪೆ ಅಡಿಕೆ ತರಿಸಿ ಕೊಳಕು ಗುಟ್ಕಾ ಉದ್ಯಮಕ್ಕೆ ಬೆಂಗಾವಲಾಗಿ ನಿಂತಿದ್ದಾನೆ. ಇದು ಮೋದಿ ಮಾಮನಿಗೆ ದೇಶವಾಸಿ ರೈತರ-ಅಸಹಾಯಕರ ಬಗ್ಗೆ ಇರುವ ಕಾಳಜಿ ತೋರಿಸುವಂತಿದೆ. ಹಿಂದಿನ ಯುಪಿಎ ಸರ್ಕಾರ ರಾಷ್ಟ್ರೀಯ ತೋಟಗಾರಿಕಾ ಮಂಡಳಿಗೆ 300 ಕೋಟಿ ವಾರ್ಷಿಕ ಸಬ್ಸಿಡಿ ಕೊಡುತ್ತಿತ್ತು. ಮೋದಿಯ ಕೇಸರಿ ಸರ್ಕಾರ ಈ ಹಸಿರು ಸಬ್ಸಿಡಿ ರದ್ದು ಮಾಡಿದೆ. ಸ್ಥಳೀಯ ಅಡಿಕೆ ಹಂಗಾಮಿನಲ್ಲಾದರೂ ವಿದೇಶಿ ಅಡಿಕೆ ಆಮದಿಗೆ ನಿಷೇಧ ಹಾಕುವುದಕ್ಕೂ ಮೋದಿ ಸರ್ಕಾರಕ್ಕೆ ಮನಸ್ಸಿಲ್ಲ. ಬಿಜೆಪಿಯ ತೋಟಗರ ವಿರೋಧಿನೀತಿಯಿಂದ ಅಡಿಕೆ ಬೆಳೆಗಾರ ಕಂಗಾಲಾಗಿ ಕೂತಿದ್ದಾನೆ. ಅಡಿಕೆ ತೋಟಗರ ಹಿತ ಕಾಪಾಡುವ ಭರವಸೆ ಕೊಟ್ಟು ಗೆದ್ದಿದ್ದ ಬಿಜೆಪಿ ಸಂಸದರ ಬಂಡಲ್‌ಬಾಜಿಯೂ ಈಗ ಅಡಿಕೆ ಅವಲಂಬಿತರಿಗೆ ಅರ್ಥವಾಗುತ್ತಿದೆ. ಮೋದಿ ಮಾಮನ ಸರ್ಕಾರ ಗುಟ್ಕಾ ಡಾನ್-ಡಾಕೂಗಳ ಹಿಡಿತಕ್ಕೆ ಸಿಲುಕಿರುವುದಂತೂ ತೋಟಗರಿಗೆ ಪಕ್ಕಾ ಆಗಿಹೋಗಿದೆ.

ಕಳೆದ ಚುನಾವಣೆಯಲ್ಲಿ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಬೆಳಗಾರರ ದುಃಸ್ಥಿತಿ, ಯುಪಿಎ ಸರ್ಕಾರ ಅಡಿಕೆ ಜೀವಕ್ಕೆ ಹಾನಿಕಾರಕ ಎಂದು ಸುಪ್ರೀಂಕೋರ್ಟ್‌ಗೆ ಕೊಟ್ಟಿದ್ದ ಅಫಿಡವಿತ್ ಮತ್ತು ಅಡಿಕೆ ನಿಷೇಧದ ಭೂತ ಸೃಷ್ಟಿಯೇ ಚೆಡ್ಡಿ ಪರಿವಾರಕ್ಕೆ ದೊಡ್ಡ ಅಸ್ತ್ರವಾಗಿತ್ತು. ಈ 'ಅಡಿಕೆ ಸಮಸ್ಯೆ' ಯಡ್ಡಿ, ಕೂಗುಮಾರಿ ಶೋಭಕ್ಕ, ಗಿಲೀಟು ಕಟೀಲ್ ಮತ್ತು ಅಡ್ನಾಡಿ ಅನಂತ್‌ಹೆಗ್ಡೆ ಗೆಲುವಿಗೆ ದೊಡ್ಡ ಕೊಡುಗೆ ನೀಡಿತ್ತು. ಅಡಿಕೆ ಬೆಳೆಗಾರರ ಹಿತ ಬಿಜೆಪಿ ಬಿಟ್ಟು ಬೇರ‍್ಯಾರಿಂದಲೂ ಸಾಧ್ಯವೇ ಇಲ್ಲವೆಂಬಂತೆ ಹಾರಾಡಿದ್ದ ಈ ಚಮತ್ಕಾರಿ ಚತುಷ್ಟಯರು ಗೆದ್ದ ನಂತರ ತೋಟಿಗರತ್ತ ತಿರುಗಿಯೂ ನೋಡಲಿಲ್ಲ. ದೇಶಿ ಅಡಿಕೆ ಬೆಳೆಗಾರರು ಫಸಲಿಗೆ ಬೆಲೆಯಿಲ್ಲದೆ ವಿಲವಿಲ ಒದ್ದಾಡುತ್ತಿದ್ದರೂ ಈ ಹೊಣೆಗೇಡಿ ಸಂಸದರು ವಿದೇಶಿ ಅಡಿಕೆ ಆಮದಿಗೆ ನಿಷೇ... ಕೇಂದ್ರ ಸರ್ಕಾರದಿಂದ ಹಾಕಿಸುವ ಸಣ್ಣ ಪ್ರಯತ್ನ... ಮಾಡಲಿಲ್ಲ. ಮೋದಿ ಮಾಮನ ಧಡಪ್‌ಶಾಹಿ ಮು... ನಿಂತು ಮಾತಾಡುವ ತಾಕತ್ತು ಈ ದಂಡ ಪಿಂಡಗಳಿಗೆಲ್ಲಿ... ಪಾಪ?!



ಅಡಿಕೆ ಮರಗಳ ತೋಟ

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಎರ... ವರ್ಷ ಕಳೆದಿದೆ. 'ಅಡಿಕೆ ಮಾನ'ದ ಹೆಸರಲ್ಲಿ ಗೆದ್ದ ಸಂಸದ... ಗೆಲ್ಲಿಸಿದ ರೈತರಿಗೆ ಬುದ್ಧಿಪೂರ್ವಕವಾಗೇ ದ್ರೋಹ-ಅನ್ಯಾ... ಮಾಡುತ್ತಿದ್ದಾರೆ. ಈ ಎರಡು ವರ್ಷದಲ್ಲಿ ಅಡಿಕೆ ಬೆಳೆಗಾರ... ಅನುಕೂಲವಾಗುವಂತಹ ಒಂದೇ ಒಂದು ಮಾತು ನಾ... ಚೆಡ್ಡಿ ಸಂಸದರು ಆಡಿದ ದಾಖಲೆಯೇ ಇಲ್ಲ. ಹಿಂದಿ... ಸರ್ಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಇಂದಿ... ಜೈಸಿಂಗ್ ಸುಪ್ರೀಂಕೋರ್ಟ್‌ಗೆ ಅಚಾತುರ್ಯದಲ್ಲಿ ಅ... ಜೀವಕ್ಕೆ ಹಾನಿಕಾರಕ ಎಂದು ಸಲ್ಲಿಸಿದ ಅಫಿಡವಿ... ತಿದ್ದುಪಡಿಗೆ ಅಥವಾ ವಾಪಸಿಗೆ ಈ ನಾಲಾಯಕ್ ನಾ... ಸಂಸದರು ಯಾವ ಪ್ರಯತ್ನವೂ ಈ ಎರಡು ವರ್ಷದ... ಮಾಡಿಲ್ಲ. ಯಡ್ಡಿ, ಶೋಭಕ್ಕ, ಕಟೀಲು, ಅನಂತ್ ಹ... ಬಿಜೆಪಿ ಸರ್ಕಾರ ಬಂದಕ್ಷಣವೇ ಅಡಿಕೆ ಹಾನಿಕರವ... ಎಂಬ ವರದಿ ಸುಪ್ರೀಂಕೋರ್ಟಿಗೆ ಸಲ್ಲಿಸುತ್ತೇನೆ ಎಂ... ವೀರಾವೇಶದ ಮಾತಾಡಿ ಮುಗ್ಧ ಅಡಿಕೆ ಬೆಳೆಗಾರ ಮರು... ಮಾಡಿದ್ದರು. ಆದರೆ ಇವತ್ತಿಗೂ ಆರೋಗ್ಯ ಇಲಾ... ಸಿಎಫ್‌ಟಿಆರ್‌ಐ ವರದಿ ಸುಪ್ರೀಂಗೆ ಸಲ್ಲಿಸುವ... ಮಾಡಲಾಗಲಿಲ್ಲ ಈ ತಂಡ ಪ್ರಚಂಡರಿಗೆ!

ಅಡಿಕೆ ಬೆಳೆಗಾರರ ಪ್ರದೇಶದ 'ಪುತ್ರ ರತ್ನ' ಸದಾನ... ಗೌಡ ಕೇಂದ್ರ ಕಾನೂನು ಮಂತ್ರಿಯಾಗಿದ್ದರೂ ಆತನಿಂದ... 'ಅಡಿಕೆ ಹಾನಿಕಾರಕ' ಎಂಬ ಅಫಿಡವಿಟ್ ಸರಿಪಡಿಸ... ಆಗಿಲ್ಲ. ಅಡಿಕೆ ಬೆಳೆಗಾರರ ಓಟಿಂದ ಗೆದ್ದಿರುವ ಚೆಡ್ಡಿಗಳ... ಇಚ್ಛಾಶಕ್ತಿ, ಕೃತಜ್ಞತಾಭಾವಗಳು ಇಲ್ಲದಿರುವುದೇ ... ಗೊಂದಲ-ಸಮಸ್ಯೆ-ಸಂಕಷ್ಟಕ್ಕೆ ಮೂಲ ಕಾರಣ. ದುರ... ಎಂದರೆ, ಕರ್ನಾಟಕದಿಂದ ರಾಜ್ಯಸಭೆಗೆ ಹೋಗಿರುವ ವಾಣಿ... ಮಂತ್ರಿಯಾಗಿ ನಿರ್ಮಲಾ ಸೀತಾರಾಮನ್‌ಗೆ ಅ... ಬೆಳೆಗಾರರ ಬವಣೆ ಅರ್ಥವೇ ಆಗುತ್ತಿಲ್ಲ.

ರಾಜ್ಯ ರೈತಸಂಘದ ಅಧ್ಯಕ್ಷ ಶಾಸಕ ಕೆ.ಎಸ್. ಪುಟ್ಟಣ್ಣ... ಮೊನ್ನೆ ಬೆಂಗಳೂರಲ್ಲಿ ಅಡಿಕೆ-ತೆಂಗು ಬೆಳೆಗಾರರ ಪ್ರತಿಭಟ... ಸಮಾವೇಶ ನಡೆಸಿದಾಗ ರಾಜ್ಯ ಬಿಜೆಪಿ ಯಜಮಾನ ಯ... ಮಹಾತ್ಮ ಬೆಚ್ಚಿಬಿದ್ದಿದ್ದಾರೆ. ಅಡಿಕೆ ಬೆಳೆಗಾರರನ್ನು ಮ... ಕಡೆಗಣಿಸಿದರೆ ಹತಾಶ ತೋಟಿಗರು ಮೂತಿಗೆ ಇಕ್ಕು... ಭಯದಿಂದ ಹಿಂಬಾಲಕರ ತಂಡ ಕಟ್ಟಿಕೊಂಡು ಕೇಂ... ವಾಣಿಜ್ಯ ಮಂತ್ರಿಣಿ ಸನ್ನಿಧಾನಕ್ಕೆ ಹೋಗಿದ್ದಾರೆ. ಅಲ್ಲೊಂದ... ಮನವಿ ಕೊಟ್ಟದ್ದೇ ಅಡಿಕೆ ಬೆಳೆಗಾರರು ಉದ್ಧಾರವಾದರ... ಹೇಳಿಕೆಗಳನ್ನು ಒಗಾಯಿಸುತ್ತಿದ್ದಾರೆ. ಲಡ್ಡು ವಿದೇಶಿ ಅಡಿ... ಆಮದು ನಿಲ್ಲಿಸದ ಹೊರತು ದೇಶಿ ಬೆಳೆಗಾರ ಸಮಸ್... ಸಂಕಟ ಪರಿಹಾರವಾಗಲು ಸಾಧ್ಯವೇ ಇಲ್ಲ. ಮೋದಿ... ಮೂಗುದಾರ ಹಾಕಿ ಅಡಿಕೆ ಬೆಳೆಗಾರ ಫಸಲಿಗೆ ಯೋಗ್... ನ್ಯಾಯೋಚಿತ ಬೆಲೆ ಸಿಗುವಂತೆ ಮಾಡುವ ತಾಕತ್... ಯಾರಿಗಿದೆ? ಹಿಂದೆ ವಾಣಿಜ್ಯ ಮಂತ್ರಿಗಳಾಗಿದ್ದ ರಾಮಕೃ... ಹೆಗಡೆ ಹಾಗು ಆನಂದ ಶರ್ಮ ಅಡಿಕೆ ಆಮದು ಸುಂ... ಹೆಚ್ಚಿಸಿ ಸ್ಥಳೀಯ ಬೆಳೆಗಾರರ ಹಿತ ಕಾಪಾಡಿದ್ದು ಚೆ... ಆಡಳಿತಗಾರರಿಗೆ ಗೊತ್ತಿದೆಯಾ?

ದಿಕ್ಕೆಟ್ಟ ಅಡಿಕೆ ಬೆಳೆಗಾರ ಉತ್ತಮ ರೇಟಿಗಾ... ಕಾಯುತ್ತಿದ್ದಾನೆ; ಆತನ ಗೊಂದಲ ಗೊಳಿಸಿ ಮತ ಪಡೆದ... ಗೆದ್ದು ಗದ್ದುಗೆ ಏರಿದವರು ಮತ್ತದೇ ಬುರ್ನಾಸ್ ರಾಜಕಾರ... ಮಾಡುತ್ತಿದ್ದಾರೆ. ಒಂದಂತೂ ಖರೆ; ಅಡಿಕೆ ಬೆಳೆಗಾರರ... ಸಂಘಟಿತರಾಗದೇ ಉಳಿಗಾಲವಿಲ್ಲ; ಅಡಿಕೆ ಮಂಡಳಿ ರಚ... ಪ್ರತಿ ಕ್ವಿಂಟಾಲ್‌ಗೆ ಕನಿಷ್ಠ 45 ಸಾವಿರ ಬೆಲೆಯಿಂದಷ್ಟೆ... ಅಡಿಕೆ ತೋಟಗ ಬಚಾವಾಗಬಹುದು!!

○ ನಹುಷ

ಪೆರುಮಾಳ್ ಮುರುಗನ್ ಅವರಿಗೆ ಸಿಕ್ಕ ಕಾವ್ಯಾತ್ಮಕ ನ್ಯಾಯ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

"ಈ ತೀರ್ಪಿನಿಂದಾಗಿ ನನಗೆ ತುಂಬಾ ಸಂತೋಷವಾಗಿದೆ. ಬಾಡಿಹೋಗಿದ್ದ, ಮುದುಡಿಕೊಂಡಿದ್ದ ನನ್ನ ಹೃದಯಕ್ಕೆ ಇದರಿಂದ ಸಾಂತ್ವನ ಸಿಕ್ಕಿದೆ. ಈ ತೀರ್ಪಿನ ಅಂತ್ಯದಲ್ಲಿ 'ಲೇಖಕನು ಜೀವಂತಗೊಂಡು ಆತ ಯಾವುದರಲ್ಲಿ ಉತ್ತಮನೋ ಅದನ್ನೇ ಮಾಡಲಿ. ಬರೆಯಲಿ' ಎಂದಿರುವ ಸಾಲಿನಲ್ಲಿರುವ ಬೆಳಕನ್ನು ಆಶ್ರಯಿಸಿ ನಾನು ಎದ್ದು ನಿಲ್ಲಲು ಪ್ರಯತ್ನಿಸುತ್ತಿದ್ದೇನೆ. ಸದ್ಯಕ್ಕೆ ಈ ಘಳಿಗೆಯ ಸಂತೋಷದಲ್ಲೇ ಮಿಂದೇಳಲು ನನ್ನ ಮನಸ್ಸು ಬಯಸುತ್ತಿದೆ. ನನ್ನ ಜೊತೆ ನಿಂತ ಎಲ್ಲ ಸ್ನೇಹಿತರಿಗೂ, ನನ್ನ ವಿರುದ್ಧ ನಿಂತ ಮಿತ್ರರಿಗೂ ನನ್ನ ಧನ್ಯವಾದಗಳು"... ಹೀಗೆ ನಿನ್ನೆ (ಮಂಗಳವಾರ) ಪ್ರತಿಕ್ರಿಯಿಸಿರುವವರು ತಮಿಳಿನ ಪ್ರಮುಖ ಲೇಖಕ ಪೆರುಮಾಳ್ ಮುರುಗನ್.


ಹಲವಾರು ಕತೆ, ಕಾದಂಬರಿ ಮತ್ತು ಕವನಗಳನ್ನು ಬರೆದಿರುವ ಮುರುಗನ್ ಅವರು ತಮಿಳುನಾಡಿನಲ್ಲಿ ಬಹಳ ಜನಪ್ರಿಯ ಲೇಖಕ. ಅವರು ನಾಲ್ಕು ವರ್ಷಗಳ ಹಿಂದೆ ಬರೆದ 'ಮದೋರುಬಾಗನ್' ಕಾದಂಬರಿ ಅದೆಷ್ಟು ಜನಪ್ರಿಯವಾಗಿತ್ತೆಂದರೆ ಅದು ಬಿಡುಗಡೆಯಾದ ದಿನವೇ 500 ಪ್ರತಿಗಳು ಮಾರಾಟವಾಗಿದ್ದವು. ಅದಾದನಂತರ ಅದು ಮರು ಮುದ್ರಣಗೊಂಡು ಸುಮಾರು 5,000 ಪ್ರತಿಗಳು ಮಾರಾಟವಾಗಿದ್ದವು. 2015ರಲ್ಲಿ ಪೆಂಗ್ವಿನ್ ಸಂಸ್ಥೆಯವರು 'ಒನ್ ಪಾರ್ಟ್ ವುಮೆನ್' ಎಂಬ ಶೀರ್ಷಿಕೆಯಡಿ ಆ ಕಾದಂಬರಿಯ ಇಂಗ್ಲಿಷ್ ಅನುವಾದವನ್ನು ಪ್ರಕಟಿಸಿದರು. ಆಗ ಶುರುವಾಯಿತು ಗಲಾಟೆ.

ನಾಲ್ಕು ವರ್ಷಗಳ ಹಿಂದೆಯೇ ತಮಿಳು ಭಾಷೆಯಲ್ಲಿ ಪ್ರಕಟಗೊಂಡಿದ್ದ ಕಾದಂಬರಿಯ ವಿರುದ್ಧ ಮುರುಗನ್ ಅವರು ವಾಸಿಸುತ್ತಿದ್ದ ಮತ್ತು 'ಮದೋರುಬಾಗನ್' ಕಾದಂಬರಿಯಲ್ಲಿ ಪ್ರಸ್ತಾಪವಾಗಿರುವ ತಿರುಚೆಂಗೊಡೆ ಎಂಬ ಸಣ್ಣ ಊರಿನ ಬಗ್ಗೆ ಯಾರೂ ಚಕಾರವೆತ್ತಿರಲಿಲ್ಲ. ಆದರೆ ಅದು ಇಂಗ್ಲಿಷ್‌ನಲ್ಲಿ ಪ್ರಕಟಗೊಂಡಾಗ ಅಲ್ಲಿನ ಜನ, ಅದರಲ್ಲೂ ಗೌಂಡರ್ ಜಾತಿಯವರು, ಮುರುಗನ್ ಮತ್ತು ಅವರ ಕಾದಂಬರಿಯ ವಿರುದ್ಧ ಹಾರಾಟ ಪ್ರಾರಂಭಿಸಿದರು. ಯಾಕೆಂದರೆ ಅದರ ಹಿಂದೆ ಚೆಡ್ಡಿಗಳ ಕಿತಾಪತಿ ಇತ್ತು. ಬಿಜೆಪಿಗೆ ತಮಿಳುನಾಡಿನಲ್ಲಿ ಹೆಚ್ಚು ಪ್ರಾಮುಖ್ಯತೆ ಇಲ್ಲ. ಅಲ್ಲಿನ ವಿಧಾನಸಭೆ ಚುನಾವಣೆ ಎದುರಾಗುತ್ತಿದ್ದರಿಂದ ಇಂತಹದ್ದೊಂದು ವಿವಾದ ಎಬ್ಬಿಸುವ ಮೂಲಕ ಚೆಡ್ಡಿಗಳು ಅಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಲು ಪ್ರಯತ್ನಿಸಿದ್ದರು. ಅವರ ಕಿತಾಪತಿಯನ್ನರಿಯದ ಗೌಂಡರ್ ಸಮುದಾಯದವರು, ಅದರಲ್ಲೂ ಮಹಿಳೆಯರು ಮತ್ತು ತಿರುಚೆಂಗೊಡೆ ಊರಿನ ಜನರು ಪ್ರಚೋದನೆಗೊಂಡು ಮುರುಗನ್ ಅವರಿಗೆ ಬೆದರಿಕೆಗಳನ್ನು ಹಾಕಿದ್ದರು, ಪ್ರತಿಭಟನೆ, ಬಂದ್‌ಗಳನ್ನೂ ಆಚರಿಸಿದ್ದರು. ಇದೆಲ್ಲದರಿಂದ ದಂಗಾಗಿದ್ದ ಮುರುಗನ್ ಅವರು ಇನ್ನು ಮುಂದೆ ತಮ್ಮ ಪುಸ್ತಕಗಳನ್ನು ಮಾರುವುದಿಲ್ಲವೆಂದೂ, ಅಂಗಡಿಗಳಲ್ಲಿರುವ ಪುಸ್ತಕಗಳನ್ನೆಲ್ಲ ವಾಪಸ್ ಪಡೆಯುವೆ ಎಂದೂ ಸ್ಥಳೀಯ ಆಡಳಿತಕ್ಕೆ ಬರೆದುಕೊಟ್ಟಿದ್ದರಲ್ಲದೆ, ಫೇಸ್‌ಬುಕ್‌ನಲ್ಲಿ 'ಇವತ್ತು ಲೇಖಕ ಪೆರುಮಾಳ್ ಮುರುಗನ್ ತೀರಿಕೊಂಡ. ಆತ ದೇವನಲ್ಲವಾದ್ದರಿಂದ ಆತ ಮತ್ತೆ ಪುನರ್ ಜನ್ಮವೆತ್ತಿ ಬರುವುದಿಲ್ಲ, ಇನ್ನು ಮುಂದೆ ಅಧ್ಯಾಪಕ ಮುರುಗನ್ ಮಾತ್ರ ಇರುತ್ತಾನೆ' ಎಂದು ಘೋಷಿಸಿದ್ದರು.

ಹೀಗೆ ಮುರುಗನ್ ಅವರ ಬಾಯಿ ಮತ್ತು ಬರಹವನ್ನು ಯಶಸ್ವಿಯಾಗಿ ಮುಚ್ಚಿಸಿದ ಚೆಡ್ಡಿಗಳು ಅಲ್ಲಿಗೂ ಸುಮ್ಮನಾಗಲಿಲ್ಲ, ಮುರುಗನ್ ಅವರು ತಮ್ಮ ನಂಬಿಕೆ ಮತ್ತು ಭಾವನೆಗಳಿಗೆ ಧಕ್ಕೆ ಮಾಡಿರುವುದರಿಂದ ಅವರಿಗೆ ಶಿಕ್ಷೆ ಆಗಬೇಕೆಂದು ನ್ಯಾಯಾಲಯದ ಮೊರೆ ಹೋಗಿದ್ದರು. ಒಂದೂವರೆ ವರ್ಷಗಳ ಕಾಲ ವಿಚಾರಣೆಯನ್ನು ನಡೆಸಿದ ಮದ್ರಾಸ್ ಹೈಕೋರ್ಟ್ ನಿನ್ನೆ ಒಂದು ಅತ್ಯದ್ಭುತವಾದ ತೀರ್ಪನ್ನು ನೀಡಿದೆ. ಮುಖ್ಯ ನ್ಯಾಯಾಧೀಶರಾದ ಸಂಜಯ್ ಕಿಶನ್ ಕೌಲ್ ಮತ್ತು ನ್ಯಾಯಾಧೀಶರಾದ ಪುಷ್ಪಾ ಸತ್ಯನಾರಾಯಣ ಅವರುಗಳಿದ್ದ ಪೀಠವು ಕಲೆ ಮತ್ತು ಅಶ್ಲೀಲತೆ, ಇತಿಹಾಸ ಮತ್ತು ಸಾಹಿತ್ಯ ಅಭಿವ್ಯಕ್ತಿ ಸ್ವಾತಂತ್ರ ಮತ್ತು ಸರ್ಕಾರದ ಜವಾಬ್ದಾರಿಗಳನ್ನು ಕುರಿತು ಎಂತಹ ನಿರ್ಧಾರವನ್ನು ತೆಗೆದುಕೊಂಡಿದೆ ಎಂದರೆ ಇದು ಇಡೀ ದೇಶದ ಜನರಿಗೆ ಮಾತ್ರವಲ್ಲ, ಕೇಂದ್ರ ಮತ್ತು ಎಲ್ಲಾ ರಾಜ್ಯಗಳ ಸರ್ಕಾರಗಳ ಗಮನಕ್ಕೆ ಬರುವುದು ಅತ್ಯವಶ್ಯಕವಾಗಿದೆ.

"ಭಾರತ ಅತ್ಯಂತ ಆಧುನಿಕ ಮತ್ತು ಪ್ರಗತಿಪರವಾದ ಸಂವಿಧಾನವನ್ನು ಹೊಂದಿದೆ. ಊಳಿಗಮಾನ್ಯ ವ್ಯವಸ್ಥೆಯ ಬದಲಾಗಿ ದೇಶದ ವೈವಿಧ್ಯ ಪರಂಪರೆಯನ್ನು ಬಿಂಬಿಸುವ, ಆದರೂ ಪ್ರಜಾಪ್ರಭುತ್ವದ ಆಧುನಿಕ ತತ್ವಗಳನ್ನು ಹೊಂದಿದೆ ನಮ್ಮ ಸಂವಿಧಾನ. ನಮ್ಮ ಸಂವಿಧಾನದಡಿ - ಹಲವು ಸಮಂಜಸವಾದ ನಿರ್ಬಂಧಗಳ ಹೊರತಾಗಿ - ಓರ್ವ ವ್ಯಕ್ತಿಗೆ ತನ್ನ ಮನಸ್ಸಿನಲ್ಲಿರುವುದನ್ನು ಹೇಳುವ, ಬರೆಯುವ ಹಕ್ಕನ್ನು ನೀಡಲಾಗಿದೆ" ಎಂದೇ ಪ್ರಾರಂಭವಾಗುವ ಈ ತೀರ್ಪಿನಲ್ಲಿನ ಮುಖ್ಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

"ಲೇಖಕ ಪೆರುಮಾಳ್ ಮುರುಗನ್ ಅವರ ವಿರುದ್ಧ ಎಂತಹ ವ್ಯವಸ್ಥಿತ ವಿರೋಧ ವ್ಯಕ್ತವಾಯಿತೆಂದರೆ ಅವರು ತಮ್ಮ ಪ್ರಾಣರಕ್ಷಣೆಗಾಗಿ ಪೊಲೀಸರ ನೆರವು ಪಡೆಯಬೇಕಾಯಿತು. ಜನರು ಲೇಖಕರ ಪುಸ್ತಕಗಳನ್ನು ಸುಟ್ಟು ಹಾಕಿದರು. ಅವರ ಭಾವಚಿತ್ರಕ್ಕೆ ಚಪ್ಪಲಿಗಳಿಂದ



ಹೊಡೆದರು. ಅವರ ಎಲ್ಲಾ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಒತ್ತಾಯಿಸಿದರಲ್ಲದೆ, ಅವರನ್ನು ಅಧ್ಯಾಪಕ ಕೆಲಸದಿಂದಲೂ ವಜಾ ಮಾಡಬೇಕೆಂದು ಒತ್ತಾಯ ಮಾಡಿದರು.

ಅವರ ವಿರೋಧಿಗಳ ಪ್ರಕಾರ ಅವರ ಕಾದಂಬರಿ ಅಶ್ಲೀಲವಾದದ್ದು. ಅದರಲ್ಲೂ ತಮಿಳಿನಲ್ಲಿ ಉಪಯೋಗಿಸಿರುವ ಭಾಷೆ ಒರಟಾಗಿದೆ. ಭಾಷೆ ಒರಟಾಗಿರುವುದೇ ತಪ್ಪೆ? ಕಾದಂಬರಿಯಲ್ಲಿರುವ ಪಾತ್ರಗಳು ಗ್ರಾಮೀಣ ಪ್ರದೇಶದ ವಾಸಿಗಳಾಗಿದ್ದು ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯದವರು. ಆದ್ದರಿಂದ ಅವರು ಆಡುವ ಭಾಷೆ ಗ್ರಾಮೀಣ ಭಾಷೆಯಾಗಿದ್ದು ಅದು ಒರಟಾಗಿರುತ್ತದೆ. ಸಿನಿಮಾಗಳಲ್ಲೂ ಪಾತ್ರಗಳು ತಮ್ಮ ಸುತ್ತಮುತ್ತಲಿನ ಪ್ರದೇಶದ ಆಡು ಭಾಷೆಯನ್ನೇ ಉಪಯೋಗಿಸುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಕಾದಂಬರಿಯಲ್ಲಿ ಬಳಸಿರುವ ಭಾಷೆಯ ವಿರುದ್ಧದ ತಕರಾರು ಸರಿಯಲ್ಲ.

ಈ ಕಾದಂಬರಿ ಹಲವಾರು ಪ್ರಶಸ್ತಿಗಳನ್ನು ಪಡೆದಿದೆ. ತಮಿಳು ಭಾಷೆಯಲ್ಲಿ ಅದು ಪ್ರಕಟಗೊಂಡಾಗ ಇಲ್ಲದಿದ್ದ ತಕರಾರು ಅದು ಸ್ಥಳೀಯರು ಓದದಿರುವ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಗೊಂಡಾಗ ಇದ್ದಕ್ಕಿದ್ದಂತೆ ಶುರುವಾಗಿದ್ದು ಅಚ್ಚರಿ ಮೂಡಿಸುತ್ತದೆ. ಇದರಿಂದ ಕಾದಂಬರಿಯ ವಿರುದ್ಧ ಪ್ರತಿಭಟಿಸಿದವರಲ್ಲಿ ಸ್ಥಳೀಯರಿಗಿಂತ ಹೊರಗಿನವರೇ ಇದ್ದರೆಂಬುದು ಸಾಬೀತಾಗುತ್ತದೆ. ಹಾಗೆ ನೋಡಿದರೆ, ಇಂತಹ ಕಿತಾಪತಿಗಳಿಂದಾಗಿ ಈ ಮೊದಲು ಈ ಕಾದಂಬರಿಗೆ ಸಿಕ್ಕಿದ್ದ ಪ್ರಚಾರ ಮತ್ತು ಓದುಗರಿಗಿಂತ ಈಗ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕಿದೆ ಎನ್ನಬಹುದು.


ಕಾದಂಬರಿಯನ್ನು ನಾವಿಬ್ಬರೂ ಓದಿದೆವು. ಒಬ್ಬರು ಅದನ್ನು ಮೂಲ ತಮಿಳಿನಲ್ಲೇ ಓದಿದರೆ ಇನ್ನೊಬ್ಬರು ಇಂಗ್ಲಿಷ್ ಅವೃತ್ತಿಯನ್ನು ಓದಿದೆವು. ಈ ಕಾದಂಬರಿ ತನ್ನ ಓದುಗರನ್ನು ಅಲ್ಲಾಡಿಸಿಬಿಡುತ್ತದೆ. ಆದರೆ ಅದರ ವಿರೋಧಿಗಳು ಹೇಳುವಂತೆ ಅಲ್ಲಾಡಿಸುವುದಿಲ್ಲ. ಈ ಕಾದಂಬರಿ ಹೇಗಿದೆ ಎಂದರೆ ಅದನ್ನು ಓದಿ ಮುಗಿಸುವತನಕ ಅದನ್ನು ಕೆಳಗೆ ಇಡಬೇಕು ಎಂದು ಅನ್ನಿಸುವುದೇ ಇಲ್ಲ. ಅದು ಅಷ್ಟು ಅದ್ಭುತವಾಗಿದೆ. ಕಾದಂಬರಿಯನ್ನು ಓದಿ ಮುಗಿಸಿದನಂತರ ಓದುಗನ ಮನಸ್ಸಿನಲ್ಲಿ ಉಳಿಯುವುದೇನು? ನಮಗಂತೂ ಇದು ಹೃದಯ ಹಿಂಡುವ ಕತೆ ಅನ್ನಿಸಿತು. ಮಕ್ಕಳಿಲ್ಲದಿದ್ದರೂ ತಮ್ಮ ಪಾಡಿಗೆ ನೆಮ್ಮದಿಯಿಂದ ವಾಸಿಸುತ್ತಿರುವ ಗಂಡಹೆಂಡಿರನ್ನು ಸಮಾಜ ಅವರ ಬಂಜೆತನಕ್ಕೆ ಕುಟುಕುವ ಸುತ್ತ ಕತೆಯನ್ನು ರಚಿಸಲಾಗಿದೆ. ಸಮಾಜದ ಈ ಕುಟುಕುತನದಿಂದ ಪಾರಾಗಲು ಅವರಿಬ್ಬರು ತಮ್ಮ ಕೈಯಲ್ಲಿ ಸಾಧ್ಯವಾದದ್ದನ್ನೆಲ್ಲ ಮಾಡುತ್ತಾರೆ. ದೇವಸ್ಥಾನಗಳಿಗೆ ಹೋಗುತ್ತಾರೆ, ದೂರದೂರದ ಜಾಗಗಳಿಗೆ ಪ್ರಯಾಣಿಸಿ ಪೂಜೆ ಸಲ್ಲಿಸುತ್ತಾರೆ. ಅಂತಹ ಹತಾಶೆಗೆ ಸಮಾಜ ಅವರನ್ನು ನೂಕುತ್ತದೆ. ಇದೇ ಕತೆಯ ಮೂಲ ತಿರುಳು ಆಗಿದೆ. ಆದ್ದರಿಂದ ಕತೆಯ ಮುಖ್ಯಾಂಶವೇ ತೇರು ಹಬ್ಬದ ಸಂದರ್ಭದಲ್ಲಿ ಜನರು ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಿದ್ದರು ಎಂದು ವಾದಿಸುವುದು ಸರಿಯಲ್ಲ.

ಒಂದು ಪುಸ್ತಕ ನಿಮಗೆ ಇಷ್ಟವಾಗದಿದ್ದರೆ ಅದನ್ನು ಮುಚ್ಚಿಡಿ. ಹಾಗೆ ಮಾಡುವ ಬದಲು ಅದನ್ನು ನಿಷೇಧಿಸುವುದು ಸರಿಯಾದ ಉತ್ತರವಲ್ಲ. ಈ ಕಾದಂಬರಿಯು ಪ್ರಸ್ತುತ ಶಿಷ್ಟಾಚಾರಕ್ಕೆ ವಿರುದ್ಧವಾಗಿದೆ ಎನ್ನುವುದು ಸರಿಯಲ್ಲ. ಎಲ್ಲದರಲ್ಲೂ ಅಶ್ಲೀಲತೆಯನ್ನೇ ಕಾಣುವವರ ದೃಷ್ಟಿಕೋನದಿಂದ ಇದನ್ನು ಅಳೆಯಲಾಗುವುದಿಲ್ಲ.

ವಿಕಸನಗೊಳ್ಳುತ್ತಿರುವ ನಮ್ಮ ಸಮಾಜದಲ್ಲಿ ಸಹಿಷ್ಣುತೆ ಕುಗ್ಗುತ್ತಿರುವುದು ಚಿಂತಾಜನಕವಾಗಿದೆ. ಯಾವುದೇ ಭಿನ್ನ ಅಭಿಪ್ರಾಯ ಮತ್ತು ಚಿಂತನೆ ವಿರುದ್ಧ ಈಗ ಬೆದರಿಕೆಗಳು ಮತ್ತು ಹಿಂಸಾತ್ಮಕ ನಡಾವಳಿ ಹೆಚ್ಚಾಗುತ್ತಿದೆ. ಯಾರೋ ಒಬ್ಬರು ಸಾಮಾಜಿಕ ಪದ್ಧತಿಗಳ ಬಗ್ಗೆ - ಅದು ಸತ್ಯವೋ ಅಥವಾ ಕಾಲ್ಪನಿಕವೋ ಆಗಿದ್ದರೂ- ಅದರಲ್ಲೂ ಮಕ್ಕಳಿಲ್ಲದ ದಂಪತಿಗಳ ಬಗ್ಗೆ ಬರೆದರೆ ಅದರಿಂದ ಭಾರತಕ್ಕೆ ಯಾವ ಅಪಾಯವೂ ಇಲ್ಲ. ಆದ್ದರಿಂದ ಇಂತಹ ವಿಚಾರಗಳಲ್ಲಿ ಹೆಚ್ಚಿನ ಸಹಿಷ್ಣುತೆಯನ್ನು ನಿರೀಕ್ಷಿಸಬೇಕಾಗುತ್ತದೆ.

ನಮ್ಮ ಸಮಾಜವು ಇಂದು ತನ್ನ ಸಾಹಿತ್ಯ ಮತ್ತು ಪರಂಪರೆಯನ್ನು ಅರಿಯುವ ಬದಲು ಬ್ರಿಟಿಷರ ವಿಕ್ಟೋರಿಯನ್ ಮನೋಭಾವವನ್ನೇ ಹೆಚ್ಚು ಮಾಡಿಕೊಂಡಿದ್ದಾರೆ. ನಮ್ಮ ಸಮಾಜವು ಲೈಂಗಿಕತೆಯನ್ನು ಕೆಟ್ಟದಾಗಿ ನೋಡದೆ ಒಂದು ನಾಗರಿಕತೆಯ ಮುಂದುವರಿಕೆಯ ಮುಖ್ಯ ಭಾಗವಾಗಿಯೇ ನೋಡಿದೆ. ಭಾರತೀಯ ಗ್ರಂಥಗಳಲ್ಲಿ, ಮಹಾಭಾರತವೂ ಸೇರಿದಂತೆ, ಮದುವೆ ಆಚೆಗಿನ ಲೈಂಗಿಕ ಸಂಬಂಧಗಳ ಪ್ರಸ್ತಾಪಗಳಿವೆ. ಹಾಗಾದರೆ, ಮಹಾಭಾರತ ಮತ್ತು ನಮ್ಮ ಇತರೆ ಸಾಹಿತ್ಯವು ಅಶ್ಲೀಲವಾಗಿವೆ ಎಂದು ಅವನ್ನೆಲ್ಲ ನಿಷೇಧಿಸಬೇಕೆ?

ಇಂತಹ ಸಮಸ್ಯೆಗಳು ಎದುರಾದಾಗ ಸರ್ಕಾರದ ಪ್ರತಿನಿಧಿಗಳು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಓರ್ವ ಪ್ರಜೆಯ ವಾಕ್ ಸ್ವಾತಂತ್ರ್ಯವನ್ನು ದಮನ ಮಾಡುವುದು ಸರಿಯಲ್ಲ. ಯಾರೋ ಕೆಲವರು ಗಲಭೆ ಮಾಡುತ್ತೇವೆ ಎಂದು ಬೆದರಿಸಿದ ಮಾತ್ರಕ್ಕೆ ಒಬ್ಬ ಲೇಖಕನ ಬಾಯಿ ಮುಚ್ಚಿಸುವುದು ತಪ್ಪು. ಇದು ಹೀಗೇ ಮುಂದುವರೆದರೆ 'ಕಟ್ಟೆ ಪಂಚಾಯತ್'ಗಳು ತಮ್ಮ ದುಷ್ಟ ತಲೆಗಳನ್ನು ಎತ್ತುತ್ತವೆ. ಪ್ರಜಾಪ್ರಭುತ್ವ ಎಂಬುದು ಬಹುಸಂಖ್ಯಾತರ ಭಾವನೆಗಳಿಗಿಂತ ವಿಸ್ತಾರವಾದ ನೈತಿಕತೆಯನ್ನು ಹೊಂದಿರುತ್ತದೆ. ನಿಜವಾದ ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತರ ಶಕ್ತಿಯ ಪ್ರಯೋಗ ಅಲ್ಪಸಂಖ್ಯಾತರ ಹಕ್ಕುಗಳನ್ನೂ ಗಣನೆಗೆ ತೆಗೆದುಕೊಳ್ಳುವ



ನಿರ್ಬಂಧದ ಮೇಲೆ ನಿಂತಿರುತ್ತದೆ. ಬಹುತ್ವವೇ ಪ್ರಜಾಪ್ರಭುತ್ವದ ಆತ್ಮ. ಸಮ್ಮತಿಸದಿರುವ ಹಕ್ಕೇ ಪ್ರಜಾಪ್ರಭುತ್ವದ ಮುದ್ರೆ. ನಿಜವಾದ ಪ್ರಜಾಪ್ರಭುತ್ವದಲ್ಲಿ ಸಮ್ಮತಿಸದಿರುವವನು ನೆಮ್ಮದಿಯಿಂದ ಬದುಕಬೇಕೇ ಹೊರತು ಯಾವಾಗ ಯಾರಿಂದ ತನ್ನ ಮೇಲೆ ದೈಹಿಕ, ಆರ್ಥಿಕ ಅಥವಾ ಸಾಮಾಜಿಕ ದಾಳಿ ನಡೆಯುತ್ತದೆ ಎಂಬ ಆತಂಕದಲ್ಲಲ್ಲ, ನಾವು ದ್ವೇಷಿಸುವ ಚಿಂತನೆಯೂ ಇಲ್ಲಿ ಅಭಿವ್ಯಕ್ತವಾಗುವ ಸ್ವತಂತ್ರ ವಾತಾವರಣ ಇರಬೇಕು. ಅಭಿವ್ಯಕ್ತಿಪಡಿಸಿದ ನಂತರ ಸ್ವಾತಂತ್ರ್ಯ ಇರುವುದಿಲ್ಲ ಎಂದಾದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಯಾವ ಅರ್ಥವೂ ಇರುವುದಿಲ್ಲ. ಪ್ರಜಾಪ್ರಭುತ್ವದ ವಾಸ್ತವತೆಯನ್ನು ಅರಿಯಲು ಇಲ್ಲಿ ಎಷ್ಟು ಸ್ವಾತಂತ್ರ್ಯ ಇದೆ ಎಂಬುದನ್ನು ನೋಡಬೇಕು.

ಯಾವುದೇ ಕಲೆ ಎಲ್ಲರಿಗೂ ಇಷ್ಟ ಆಗಬೇಕೆಂದೇನಿಲ್ಲ. ಎಲ್ಲರೂ ಅದನ್ನು ನೋಡಬೇಕೆಂದು ಯಾವ ಒತ್ತಡವೂ ಸಮಾಜದ ಮೇಲಿಲ್ಲ, ಅದನ್ನು ನೋಡಲು ಬಯಸುವವರು ಅದನ್ನು ನೋಡುತ್ತಾರೆ. ಒಂದು ಗುಂಪಿನ ಜನರಿಗೆ ಅದು ಇಷ್ಟವಾಗಲಿಲ್ಲ ಎಂದಮಾತ್ರಕ್ಕೆ ಅವರು ಲೇಖಕನನ್ನು, ಕಲಾವಿದನನ್ನು, ಸಿನಿಮಾ ನಿರ್ದೇಶಕನನ್ನು ಬೆದರಿಸುವುದು, ಹಾಗೆ ಬೆದರಿಸುವವರನ್ನು ಸುಮ್ಮನಾಗಿಸಲು ಸರ್ಕಾರದ ಅಧಿಕಾರಿಗಳು ಕಲಾವಿದರನ್ನು ತೆಪ್ಪಗಾಗಿಸುವುದು ನಮ್ಮಂತಹ ಪ್ರಜಾಪ್ರಭುತ್ವದಲ್ಲಿ ವಿಷಾದನೀಯ.


ಬೇರೆ ಮಾಧ್ಯಮಗಳು ಈಗ ಹೆಚ್ಚು ಲಾಭದಾಯಕವೂ, ಜನಪ್ರಿಯವೂ ಆಗಿದ್ದರೂ ಪುಸ್ತಕಗಳು ಇನ್ನೂ ಶಕ್ತಿಶಾಲಿ ಅಸ್ತ್ರಗಳಾಗಿಯೇ ಉಳಿದಿವೆ. ಸಾಹಿತ್ಯಾಭಿರುಚಿ ಬೇರೆ ಬೇರೆಯದ್ದಾಗಿರುತ್ತದೆ. ಒಬ್ಬರಿಗೆ ಇಷ್ಟವಾದದ್ದು ಇನ್ನೊಬ್ಬರಿಗೆ ಇಷ್ಟವಾಗದೇ ಇರಬಹುದು. ಆದರೂ ಲೇಖಕನಿಗೆ ತನಗೆ ಬೇಕಾದ್ದನ್ನು ಬರೆಯುವ ಹಕ್ಕಿದೆ. ಲೇಖಕ ಪೆರುಮಾಳ್ ಮುರುಗನ್ ಅವರು ಭೀತಿಯಿಂದ ಬದುಕಬೇಕಿಲ್ಲ. ಅವರು ಇನ್ನೂ ಹೆಚ್ಚು ಬರೆದು ತಮ್ಮ ಕಾಣಿಕೆಯನ್ನು ಸಾಹಿತ್ಯವಲಯಕ್ಕೆ ಕೊಡಬೇಕಿದೆ. ಕೆಲವರಿಗೆ ಅವರ ಶೈಲಿ ಮತ್ತು ಕಥಾವಸ್ತು ಇಷ್ಟವಾಗದಿದ್ದರೂ ಅವರು ಬರೆಯುವುದನ್ನು ನಿಲ್ಲಿಸಬಾರದು. ಇದೆಲ್ಲಕ್ಕೆ ಉತ್ತರ ಅವರು ಸ್ವತಃ 'ಲೇಖಕ ಪೆರುಮಾಳ್ ಮುರುಗನ್ ತೀರಿಕೊಂಡಿದ್ದಾರೆ' ಎಂದು ಘೋಷಿಸಿದ್ದಾರೆ ಎಂದು ವಾದಿಸುವುದು ಸರಿಯಲ್ಲ, ಯಾಕೆಂದರೆ ಅದು ಮುಕ್ತ ವಾತಾವರಣದಲ್ಲಿ ತೆಗೆದುಕೊಂಡ ನಿರ್ಧಾರವಲ್ಲ, ಬದಲಾಗಿ ಆ ಸಂದರ್ಭದಲ್ಲಿ ಸೃಷ್ಟಿಸಲಾಗಿದ್ದ ಒತ್ತಡದಿಂದ.

ಕಾಲ ಎಲ್ಲ ಗಾಯಗಳನ್ನೂ ಮಾಯ ಮಾಡುತ್ತವೆ. ಅದು ಪೆರುಮಾಳ್ ಮುರುಗನ್ ವಿಚಾರದಲ್ಲೂ ಆಗುತ್ತದೆ ಎಂದು ನಾವು ನಂಬಿದ್ದೇವೆ. ನಮ್ಮ ಈ ತೀರ್ಪು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಲು ನೆರವಾಗಲಿ ಎಂದು ಆಶಿಸುತ್ತೇವೆ. ಕೊನೆಯ ಮಾತು: 'ಲೇಖಕನು ಜೀವನಗೊಂಡು ಆತ ಯಾವುದರಲ್ಲಿ ಉತ್ತಮನೋ ಅದನ್ನೇ ಮಾಡಲಿ. ಬರೆಯಲಿ.'"

ಸಹಜವಾಗಿಯೇ ಈ ತೀರ್ಪಿನಿಂದ ಲೇಖಕ ಪೆರುಮಾಳ್ ಮುರುಗನ್ ಅವರಿಗೆ, ಅವರ ಪ್ರಕಾಶಕರಾದ ಕಣ್ಣನ್ ಸುಂದರಮ್ ಅವರಿಗೆ, ಸಾಹಿತ್ಯ ಪ್ರಿಯರಿಗೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬೆಂಬಲಿಸುವವರಿಗೆ ಸಂತೋಷವಾಗಿದೆ.

ಕೊನೆಯ ಮಾತು: ಪೆರುಮಾಳ್ ಮುರುಗನ್ ಅವರ 'ಮದೋರುಬಾಗನ್' ಕಾದಂಬರಿಯನ್ನು ಕೆ. ನಲ್ಲತಂಬಿ ಅವರು ಕನ್ನಡಕ್ಕೆ ಅನುವಾದಿಸಿದ್ದು ಅದನ್ನು ನಮ್ಮ ಲಂಕೇಶ್ ಪ್ರಕಾಶನ 'ಅರ್ಧನಾರೀಶ್ವರ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದೆ. ಇದನ್ನು ಇಲ್ಲಿಯತನಕ ಓದಿಲ್ಲದವರು ಓದಲೇಬೇಕು ಎಂದು ಕೋರಿಕೆ. ◆

ಮೈಸೂರು: ಭೂಗಳ್ಳ ಮರೀಗೌಡನ 'ಭೂಗತ' ಫಜೀತಿ


ಮರೀಗೌಡ

ಇಲ್ಲಿಗೆ ಸರಿಯಾಗಿ ಎರಡು ತಿಂಗಳ ಹಿಂದೆ (ಮೇ 11ರ ಸಂಚಿಕೆಯಲ್ಲಿ) 'ಪತ್ರಿಕೆ' ಅಂದಾಜಿಸಿದ್ದ ಅನಾಹುತ ಇವತ್ತು ಅಕ್ಷರಶಃ ದಿಟವಾಗಿದೆ. 'ಸಿದ್ದು ವರ್ಚಸ್ಸಿಗೆ ಮರೀಗೌಡನೇ ಕಪ್ಪುಚುಕ್ಕೆ' ಎಂಬ ವರದಿಯಲ್ಲಿ 'ಪತ್ರಿಕೆ' ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸೂಚ್ಯ ಎಚ್ಚರಿಕೆಯೊಂದನ್ನು ರವಾನಿಸಿತ್ತು. ಅದು ಸಿದ್ದರಾಮಯ್ಯನವರನ್ನು ತಲುಪಲಿಲ್ಲವೋ ಅಥವಾ ತಲುಪಿದರೂ ಸಿದ್ದು ನಿರ್ಲಕ್ಷ್ಯ ಮಾಡಿದರೋ ಗೊತ್ತಿಲ್ಲ, ಒಟ್ಟಿನಲ್ಲಿ ಇವತ್ತು ಆ ಮರೀಗೌಡ ಸಿದ್ದರಾಮಯ್ಯನ ವರ್ಚಸ್ಸನ್ನು ಮಕಾಡೆ ಮಲಗಿಸುತ್ತಿದ್ದಾನೆ. ಡಿಸಿ ಶಿಖಾ ಪ್ರಕರಣದಲ್ಲಿ ಅಪ್ಪಟ ವಿಲನ್ನಾಗಿ ವಿಜೃಂಭಿಸುತ್ತಿರೋದು ಇದೇ ಮರೀಗೌಡ!

ಜುಲೈ 5ರ ಭಾನುವಾರ ಸಂಜೆ ಸರ್ಕಾರಿ ಗೆಸ್ಟ್‌ಹೌಸ್‌ನಲ್ಲಿ ಡಿಸಿ ಶಿಖಾ ಮೇಡಮ್ ಮೇಲೆ ಆತ ಅರ್ಭಟಿಸಿದ ಪರಿ ಇದೆಯಲ್ಲ ಅದು ಯಾವ ರಾಯಲಸೀಮೆ ವಿಲನ್ ಅಬ್ಬರಕ್ಕಿಂತ ಕಮ್ಮಿ ಇರಲಿಲ್ಲ. ಇಫ್ತಾರ್ ಕೂಟದಲ್ಲಿ ಭಾಗವಹಿಸುವುದಕ್ಕೆಂದು ಸಿದ್ದರಾಮಯ್ಯ ಮೈಸೂರಿಗೆ ಆಗಮಿಸುವುದಿತ್ತು. ಸಹಜವಾಗಿಯೇ ಡಿಸಿ ಶಿಖಾ ಕೂಡಾ ಅಲ್ಲಿಗೆ ಬಂದಿದ್ದರು. ಸಿದ್ದು ತವರಿಗೆ ಬಂದಾಗಲೆಲ್ಲ ಅವರ ಅಜುಬಾಜಿನಲ್ಲೇ ಠಳಾಯಿಸುವ ಮರೀಗೌಡ ಕೂಡಾ ಅಲ್ಲಿದ್ದ. ಒಂದಷ್ಟು ಚೇಲಾಗಳೊಂದಿಗೆ ಸಿದ್ಧವಾಗೇ ಬಂದಿದ್ದ ಮರೀಗೌಡ, ಶಿಖಾರನ್ನು ನೋಡುತ್ತಿದ್ದಂತೆಯೇ ಎಗರಿಹೋಗಿದ್ದಾನೆ. "ನೀನ್ಯಾಕೆ ಇನ್ನೂ ತಹಸೀಲ್ದಾರ್ ನವೀನ್ ಜೋಸೆಫ್‌ನನ್ನು ರಿಲೀವ್ ಮಾಡಿಲ್ಲ?" ಅಂತೆಲ್ಲ ಅಧಿಕಾರಸ್ಥ ಧ್ವನಿಯಲ್ಲಿ ಆಕೆಯನ್ನು ಕೆಣಕಿದ್ದಾನೆ. ಅಂತಹ ಪ್ರಶ್ನೆ ಕೇಳುವ ಯಾವ ಹಕ್ಕೂ ಮರೀಗೌಡನಿಗಿಲ್ಲ. ಯಾಕೆಂದರೆ ಹೆಸರಿಗೆ ಕಾಂಗ್ರೆಸ್ ಕಾರ್ಯಕರ್ತ, ಜೊತೆಗೆ ತನ್ನನ್ನು ತಾನು ಸಿದ್ದು ಬಲಗೈ ಭಂಟ ಅಂತ ಕರೆದುಕೊಳ್ಳೋದನ್ನು ಬಿಟ್ಟರೆ ಈ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷನಿಗೆ ಸಣ್ಣದೊಂದು ಅಧಿಕಾರವೂ ಇಲ್ಲ. ಅದು ಗೊತ್ತಿದ್ದೇ ಶಿಖಾ "ನಿನಗೆ ಉತ್ತರ ಕೊಡಬೇಕಾದ ದರ್ದು ನನಗಿಲ್ಲ" ಎನ್ನುವ ಧಾಟಿಯಲ್ಲಿ ಕ್ಯಾರೇ ಅನ್ನದೇ ತನ್ನ ಪಾಡಿಗೆ ತಾನಿದ್ದು ಬಿಟ್ಟಿದ್ದಾರೆ.

ಮೈಸೂರಿನ ಸರ್ಕಾರಿ ಭೂಒತ್ತುವರಿದಾರರ ಪಟ್ಟದರಸನಂತಿರುವ ಮರೀಗೌಡನ ಅಂಡು ಉರಿದುಹೋದದ್ದೇ ಆಗ. ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆಯೇ ತನ್ನ ನಯವಂಚಕ ಧ್ವನಿಯಲ್ಲಿ ಶಿಖಾ ಮೇಡಮ್ಮರ ಮೇಲೆ ಆರೋಪಗಳ ಸುರಿಮಳೆಯನ್ನೇ ಸುರಿಸಿದ್ದಾನೆ. ಆಗಲೂ ಸಿದ್ದರಾಮಯ್ಯ ಈ ವಿಚಾರದಲ್ಲಿ ಹೆಚ್ಚೇನು ಹಸ್ತಕ್ಷೇಪ ಮಾಡಿಲ್ಲ, ಮರೀಗೌಡನ ಬುದ್ಧಿ ಗೊತ್ತಿದ್ದರಿಂದಲೋ ಏನೊ "ಸರಿ, ಆಮೇಲೆ ಮಾತಾಡೋಣ ಬಿಡು" ಅಂತ ಅವನಿಗೆ ಹೇಳಿದಷ್ಟೇ ಸರಳವಾಗಿ "ಅದೇನ್, ಸ್ವಲ್ಪ ನೋಡಮ್ಮ. ಲೀಗಲ್ ಆಗಿದ್ರೆ ಬಗೆಹರಿಸಿಕೊಡು" ಅಂತ ಡಿಸಿ ಶಿಖಾರಿಗೂ ಬಾಯ್ಮತಲ್ಲಿ ಹೇಳಿ ತಮ್ಮ ನಿಗದಿತ ಕಾರ್ಯಕ್ರಮದಲ್ಲಿ ಬಿಜಿಯಾಗಿದ್ದರು. ಆಗಲೂ ಮರೀಗೌಡನ ವಿಚಾರದಲ್ಲಿ ಡಿಸಿ ಮೇಡಮ್ಮು ಸಿಎಂ ಸಾಹೇಬರ ಜೊತೆ ಹೆಚ್ಚೇನು ಮಾತಿಗಿಳಿದಿರಲಿಲ್ಲ. ಯಾವಾಗ ಸಿಎಂ ಸಾಹೇಬರ ಸಾನಿಧ್ಯದಲ್ಲೂ ತನ್ನ ಅರ್ಭಟವೆಲ್ಲ 'ಮಕ್ಕಳಾಟ'ದಂತಾಯಿತೊ ಆಗ ಮತ್ತಷ್ಟು ಸಿಟ್ಟಿಗೆದ್ದ ಮರೀಗೌಡ ತನ್ನ ಪಟಾಲಮ್ಮಿನ ಸಮೇತ ಶಿಖಾ ಮೇಡಮ್ಮರ ಮೇಲೆ ಹರಿಹಾಯ್ದಿದ್ದ. ಆಕೆ ಒಬ್ಬ ಜಿಲ್ಲಾಧಿಕಾರಿ ಅನ್ನೋ ಕನಿಷ್ಠ ಕಾಮನ್‌ಸೆನ್ಸ್ ಕೂಡಾ ಇಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಶಿಖಾ ತನ್ನ ಕಾರಿನತ್ತ ಸಾಗಿದಾಗ ಅವರ ವಿರುದ್ಧ ಘೋಷಣೆ ಕೂಗುತ್ತ ಆಕೆಯ ಮೇಲೆ ಮುಗಿಬೀಳಲು ಮುಂದಾಗಿದ್ದ. ಮರೀಗೌಡನ ಆಟಾಟೋಪ ಹದ್ದುಮೀರುತ್ತಿರುವುದನ್ನು ಕಂಡ ಗನ್‌ಮ್ಯಾನ್, ಶಿಖಾರನ್ನು ಆ ಗುಂಪಿನಿಂದ ಬಚಾವು ಮಾಡಿ, ಸೇಫಾಗಿ ಕಾರಿನಲ್ಲಿ ಹತ್ತಿಸಿಕೊಂಡು ಅಲ್ಲಿಂದ ಹೊರಡಬೇಕಾಯ್ತು.

ಶಿಖಾ ಮೇಡಮ್ ಅಷ್ಟಕ್ಕೇ ಸುಮ್ಮನಾಗಲಿಲ್ಲ, ಸೀದಾ ಬಂದವರೇ ನಜರಾಬಾದ್ ಪೊಲೀಸ್ ಸ್ಟೇಷನ್‌ನಲ್ಲಿ ಮರೀಗೌಡನ ಮೇಲೆ ಕೇಸು ಜಡಿದರು. ಕಾನೂನುಬಾಹಿರವಾಗಿ ಗುಂಪು ಸೇರಿದ್ದಕ್ಕೆ ಐಪಿಸಿ ಸೆಕ್ಷನ್ 143, ದಾಂಧಲೆ ನಡೆಸಿದ್ದಕ್ಕೆ ಐಪಿಸಿ ಸೆಕ್ಷನ್ 147, ಉದ್ದೇಶಪೂರ್ವಕ ಅವಹೇಳನ ಮಾಡಿ ಸಾರ್ವಜನಿಕ ನೆಮ್ಮದಿಗೆ ಭಂಗ ತಂದಿದ್ದಕ್ಕೆ ಐಪಿಸಿ ಸೆಕ್ಷನ್ 504, ಸರ್ಕಾರಿ ಅಧಿಕಾರಿಯ ಕರ್ತವ್ಯನಿರ್ವಹಣೆಗೆ ಅಡ್ಡಿಪಡಿಸಿದ್ದಕ್ಕೆ ಐಪಿಸಿ ಸೆಕ್ಷನ್ 353 ಕ್ರಿಮಿನಲ್ ಕೇಸುಗಳು ಮರೀಗೌಡನನ್ನು ಅಮರಿಕೊಂಡಿವೆ. ಸಣ್ಣಪುಟ್ಟ ಅಧಿಕಾರಿಗಳನ್ನು ಬೆದರಿಸಿ, ಬೆವರಿಳಿಸಿ, ತನ್ನೆದುರು ನಡುಬಗ್ಗಿಸಿ ನಿಲ್ಲುವಂತೆ ಮಾಡಿಕೊಂಡಿದ್ದ ಅವನಿಗೆ ಶಿಖಾ ಮೇಡಮ್ ಇಂತಹದ್ದೊಂದು ಡೋಸ್ ಕೊಡಬಹುದೆನ್ನುವ ಸಣ್ಣ ಸುಳಿವೂ ಇರಲಿಲ್ಲ. ಪಕ್ಷದ ಟಿಕೆಟು ಸಿಗದಿದ್ದಾಗ ಒಂದಷ್ಟು ಚೇಲಾಗಳನ್ನು ಮುಂದಿಟ್ಟುಕೊಂಡು ಪಾರ್ಟಿ ಆಫೀಸಿನ ಮುಂದೆ ಧಿಕ್ಕಾರದ ದಾಂಧಲೆ ನಡೆಸುವ ತರಹವೇ ಎಗರಾಡಲು ಹೋಗಿ ಈಗ ತಲೆಮರೆಸಿಕೊಂಡು ಅಲೆದಾಡುವ ಗತಿ ತಂದಿಟ್ಟುಕೊಂಡಿದ್ದಾನೆ.

ಏನಿದು ರಾದ್ಧಾಂತ?

ಮರೀಗೌಡನಿಗೆ ಡಿಸಿ ಶಿಖಾ ಮೇಲೇಕೆ ಈ ಪರಿ ಸಿಟ್ಟು, ತಹಸೀಲ್ದಾರ್ ನವೀನ್ ಜೋಸೆಫ್ ಕಂಡರೆ ಯಾಕಿಷ್ಟು



ಜಿದ್ದು ಅಂತ ಕೆದಕುತ್ತಾ ಹೋದರೆ ಮರೀಗೌಡ ಸ್ಥಾಪಿಸಿಕೊಂಡಿರುವ ಅಕ್ರಮ ಭೂಮಾಫಿಯಾ ಜಗತ್ತು ಅನಾವರಣಗೊಳ್ಳುತ್ತಾ ಸಾಗುತ್ತದೆ. ಸಾಂಸ್ಕೃತಿಕ ನಗರಿ ಮೈಸೂರಿನ ಸರ್ಕಾರಿ ಜಮೀನುಗಳನ್ನು ನುಂಗುವುದಕ್ಕೆಂದೇ ಒಂದು ವ್ಯವಸ್ಥಿತ ಮಾಫಿಯಾ ಅಲ್ಲಿ ಮೈದಳೆದು ಮಲಗಿದೆ. ಆಲ್‌ಮೋಸ್ಟ್ ಎಲ್ಲಾ ಪೊಲಿಟಿಕಲ್ ಪುಢಾರಿಗಳೂ ಅದರಲ್ಲಿ ಭಾಗೀದಾರರು. ಅಂತಹ ಮಾಫಿಯಾಕ್ಕೆ ಮರೀಗೌಡನೇ ಕಿಂಗ್‌ಪಿನ್!

ಎಕರೆಗಟ್ಟಲೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡ ಭೂಗಳ್ಳರು ಅದನ್ನು ಸಕ್ರಮ ಮಾಡಿಸಿಕೊಳ್ಳಲು ಮೊರೆ ಹೋಗುವುದು ಇದೇ ಮರೀಗೌಡನ ಬಳಿ. ಸಿದ್ದರಾಮಯ್ಯ ಸಿಎಂ ಆದ ಮೇಲಂತೂ, ನಾನು ಸಿಎಂ ಬಲಗೈ ಭಂಟ ಅಂತೇಳಿಕೊಂಡು ಮರೀಗೌಡ ಈ ದಂಧೆಯನ್ನು ರಾಜಾರೋಷವಾಗಿ ನಡೆಸುತ್ತಿದ್ದಾನೆ. ಅವನ ಡೀಲಾದರೂ ತುಂಬಾ ಸಿಂಪಲ್. ಫಿಫ್ಟಿ-ಫಿಫ್ಟಿ ಲೆಕ್ಕ. ಅಂದರೆ, ಎಷ್ಟು ಎಕರೆ ಒತ್ತುವರಿ ಸರ್ಕಾರಿ ಜಮೀನನ್ನು ಸಕ್ರಮ ಮಾಡಿಸಿಕೊಡುತ್ತಾನೊ ಅದರಲ್ಲಿ ಅರ್ಧ ಜಮೀನನ್ನೋ ಅಥವಾ ಅಷ್ಟಕ್ಕೆ ಮಾರ್ಕೆಟ್ ರೇಟಿನಲ್ಲಿ ತಗುಲುವ ರೊಕ್ಕವನ್ನೋ ಮರೀಗೌಡನಿಗೆ ಕೊಟ್ಟುಬಿಟ್ಟರೆ ಮುಗಿಯಿತು. ಹೇಗೂ ಆ ಜಮೀನನ್ನು ಕಷ್ಟಪಟ್ಟು ದುಡಿದು ಸಂಪಾದನೆ ಮಾಡಿದ್ದೇನಲ್ಲ, ಒತ್ತುವರಿ ಮಾಡಿಕೊಂಡಿದ್ದು; ಕಳೆದುಕೊಳ್ಳೋದು ಏನಿದೆ? ಒಂದ್ವೇಳೆ ಮರೀಗೌಡನ ಡೀಲ್‌ಗೆ ಒಪ್ಪಿಕೊಳ್ಳದಿದ್ದರೆ ಸರ್ಕಾರ ಪೂರ್ತಿಯಾಗಿ ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಬಿಡಿಗಾಸೂ ಸಿಗೋದಿಲ್ಲ; ಅದರ ಬದಲು ಅರ್ಧವಾದರೂ ದಕ್ಕಲಿ ಬಿಡು ಅಂತ ಭೂಗಳ್ಳರು ಮರೀಗೌಡನಿಗೆ ಉಧೋ.. ಎಂದು ಬಿಡುತ್ತಾರೆ. ಹೀಗೆ ಮಾಡಿಯೇ ಇಡೀ ಮೈಸೂರಿನಲ್ಲಿ ನಂಬರ್ 1 ರೊಕ್ಕಸ್ಥನಾಗಿ ಮರೀಗೌಡ ಕೊಬ್ಬಿಹೋಗಿದ್ದಾನೆ. ಸಿದ್ದರಾಮಯ್ಯನ ಬೆದರುಬೊಂಬೆ ತೋರಿಸಿ ಅಧಿಕಾರಿಗಳನ್ನು ಎದುರಿಸುವುದು ಅವನಿಗೆ ನೀರು ಕುಡಿದಷ್ಟೇ ಸಲೀಸು. ಮಾಮೂಲಿ ಪೆಟ್ಟಿಗೆ ಬಗ್ಗದಿದ್ದರೆ ಡಿಸಿ ಶಿಖಾ ಮೇಲೆ ರೇಗಾಡಿದಂತೆ ಅರ್ಭಟಿಸಿ ಪಳಗಿಸುವುದೂ ಅವನಿಗೆ ಗೊತ್ತು. ಶಿಖಾ ಮೇಡಮ್ಮೇನೊ ಡಿಸಿ ಹುದ್ದೆಯಲ್ಲಿರೋರು ತಿರುಗಿಬಿದ್ದಿದ್ದಾರೆ, ಸಣ್ಣಪುಟ್ಟ ಕಂದಾಯ ಇಲಾಖೆ ಅಧಿಕಾರಿಗಳಿಗೆ ಅಂತ ಧೈರ್ಯ


ಜಿಲ್ಲಾಧಿಕಾರಿ ಶಿಖಾ

ಬರಬೇಕಲ್ಲ. ಹೆದರಿ ಇವನ ಮಾತು ಕೇಳಿಬಿಡುತ್ತಿದ್ದ

ಆದರೆ ಅವನ ಅಷ್ಟೂ ಲೆಕ್ಕಾಚಾರ ತಲೆಕೆಳಗಾದ ನವೀನ್ ಜೋಸೆಫ್ ಎಂಬ ಕಟ್ಟುನಿಟ್ಟಿನ ಅಧಿಕ ಮೈಸೂರು ತಹಸೀಲ್ದಾರಾಗಿ ಆಗಮಿಸಿದ ಮೇಲೆ. ಕೆಎ ಹುದ್ದೆಗೆ ಸೇರುವುದಕ್ಕೂ ಮುನ್ನ, ಪೊಲೀ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಅದಕ್ಕೂ ಮುನ್ನ, ಪತ್ರಕರ್ತನಾ ನವೀನ್ ಜೋಸೆಫ್‌ಗೆ ಮೈಸೂರಿನ ವಾತಾವರಣವೇ ತೀರಾ ಹೊಸದಲ್ಲ. ಯಾಕೆಂದರೆ ಆತ ಓದಿ ಮೈಸೂರಿನಲ್ಲಿ. ಪತ್ರಕರ್ತನಾಗಿ ಕೆಲಸ ಮಾಡಿದ ಮೈಸೂರಿನಲ್ಲೇ. ಹಾಗಾಗಿ ಮೈಸೂರಿಗಂಟಿರು ಮರೀಗೌಡನಂತಹ ಭೂಮಾಫಿಯಾದ ಕ್ಯಾನ್ಸರ್ ಗೆಡ್ಡೆ ಬಗ್ಗೆ ತುಂಬಾ ಆಳವಾಗಿಯೇ ತಿಳಿದುಕೊಂಡಿದ್ದ ಮೈಸೂರು ತಾಲ್ಲೂಕಿನ ತಹಸೀಲ್ದಾರ್ ಆಗಿ ಚಾಜ ತೆಗೆದುಕೊಳ್ಳುತ್ತಿದ್ದಂತೆಯೇ ಆತ ಮಾಡಿದ ಮೊದ ಕೆಲಸವೆಂದರೆ ನಕಾಶೆ ಇಟ್ಟುಕೊಂಡು ಎಲ್ಲೆಲ್ಲಿ ಸರ್ಕಾ ಜಮೀನು ಇದೆ ಮತ್ತು ಅದನ್ನು ಯಾರೆಲ್ಲ ಒತ್ತು ಮಾಡಿಟ್ಟುಕೊಂಡಿದ್ದಾರೆ ಅನ್ನೋದನ್ನು ಪತ್ತೆ ಮಾಡಿ ಹಾಗೆ ಪತ್ತೆ ಮಾಡಿದ ತಹಸೀಲ್ದಾರ್ ಸಾಹೇಬರು ಸುಮ್ಮ ಕೂರಲಿಲ್ಲ, ಸರ್ಕಾರಿ ಜಮೀನನ್ನು ಒತ್ತುವರಿ ಮ ಕೊಂಡವರ ಮೇಲೆ ಕೇಸ್ ಜಡಿದಿದ್ದಲ್ಲದೆ, ಸಕ್ರಮ ಮಾ ಕೊಳ್ಳಲು ಬಂದಿದ್ದ ಅಂತಹ ಭೂಗಳ್ಳರ ಅರ್ಜಿಗ ಕೊಕ್ಕೆ ಹಾಕಿ ಕುಳಿತರು.

ನೋ ಡೌಟ್. ಅಂತಹ ಹಲವಾರು ಕೇಸುಗ ಮರೀಗೌಡ ಅಥವಾ ಅವನ ಚೇಲಾಗಳೇ ಅಪರಾಧಿಗಳ ನಿಂತಿದ್ದರು. ಮರೀಗೌಡ, ತಹಸೀಲ್ದಾರ್ ನವೀನ್ ಜೋಸ

⇨ 0

ಶಿಖಾ ಎಂಬ ಸಿಂಹಿಣಿ!

ಮೈಸೂರು ಜಿಲ್ಲಾಧಿಕಾರಿ ಶಿಖಾ ಕೊಟ್ಟ ಏಟಿಗೆ ಕೇವಲ ಮರೀಗೌಡನಷ್ಟೇ ಅಲ್ಲ, ಇಡೀ ಜಿಲ್ಲೆಯ ಭೂಮಾಫಿಯಾವೇ ಅಲ್ಲಾಡಿಹೋಗಿದೆ. ಪೊಲಿಟಿಕಲ್ ಟೂಲ್‌ನಿಂದ ಅಧಿಕಾರಿಗಳನ್ನು ಪಳಗಿಸಬಹುದೆನ್ನುವ ಭ್ರಮೆಯಲ್ಲಿದ್ದವರಿಗೆಲ್ಲ ಆಕೆ ಚಳಿ ಬಿಡಿಸಿದ್ದಾಳೆ. ಇಷ್ಟುಸಾಕು ಶಿಖಾ ಅದೆಂತಹ ಗಟ್ಟಿಗಿತ್ತಿ ಅನ್ನೋದನ್ನು ಸಾಬೀತುಮಾಡಲು. ಮೂಲತಃ ಮಧ್ಯಪ್ರದೇಶದ ಸಾಗರ ಜಿಲ್ಲೆಯವರಾದ ಶಿಖಾರಲ್ಲಿ ಈ ಪರಿ ಗಟ್ಟಿತನ ರೂಪುಗೊಳ್ಳುವಲ್ಲಿ ಅವರ ತಂದೆ ಡಿ.ಚಂದ್ರಮೋಹನ್‌ರೇ ಕಾರಣ. ಈತ ಅಡಿಷನಲ್ ಡಿಜಿಪಿ ಹುದ್ದೆಯಲ್ಲಿದ್ದಂತವರು. ಅಪ್ಪನ ಖಾಕಿ ಖದರನ್ನು ನೋಡುತ್ತಲೇ ಬೆಳೆದ ಶಿಖಾರಲ್ಲಿ ಅಂಜುಬುರುಕುತನ ಕಾಣಿಸಲೇ ಇಲ್ಲ. ಇಂಧೋರ್, ಭೋಪಾಲ್, ಕಲ್ಕತ್ತಾಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ತನ್ನಮ್ಮನ ತವರುಮನೆ ತಿರುಚಿರಾಪಳ್ಳಿಯ ಎನ್‌ಐಟಿಯಲ್ಲಿ ಇಂಜಿನಿಯರಿಂಗ್ (ಇನ್‌ಸ್ಟ್ರುಮೆಂಟೇಷನ್) ಮುಗಿಸುವ ವೇಳೆಗಾಗಲೇ ಆಕೆಯಲ್ಲಿ ಬೇರೆಯದೇ ಬಯಕೆಗಳು ಮೊಳೆತಿದ್ದವು. 2004ನೇ ಸಾಲಿನ ಐಎಎಸ್ ಬ್ಯಾಚ್‌ನ ಅಧಿಕಾರಿಯಾಗಿ ನಾಗರಿಕ ಸೇವೆಗೆ ಪಾದಾರ್ಪಣೆ ಮಾಡಿದ ಶಿಖಾ ತನ್ನ ವೃತ್ತಿಯುದ್ದಕ್ಕೂ ಈ ಗಟ್ಟಿತನವನ್ನು ಕಾಯ್ದುಕೊಂಡೇ ಬಂದಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯತ್ ಸಿಇಒ ಆಗಿದ್ದಾಗ ಅಲ್ಲಿನ ರಾಜಕಾರಣಿಗಳ ವಿರೋಧದ ನಡುವೆಯೂ ಸುಮಾರು 450 ಕುಸ್ತಿಪಟುಗಳ ಅಕ್ರಮ ಪಿಂಚಣಿಯನ್ನು ರದ್ದು ಮಾಡುವ ದಿಟ್ಟತೆ ತೋರಿದ್ದರು.

ಆಕೆ ಕರ್ನಾಟಕ ಕೇಡರ್ ಸೇರಿಕೊಂಡ ಆರಂಭದ ದಿನದಲ್ಲಿ ಗದಗ್‌ನಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಎದೆಮೂಳೆಗೆ ಏಟು ಬಿದ್ದು ಆಸ್ಪತ್ರೆಯ ಹಾಸಿಗೆ ಹಿಡಿಯುವ ಸ್ಥಿತಿಗೆ ತಲುಪಿದ್ದರು. ಹೊಸ ಜಾಗ, ಗೊತ್ತಿಲ್ಲದ ಭಾಷೆ, ಸರ್ಕಾರಿ ಕೆಲಸದ ಒತ್ತಡಗಳ ನಡುವೆ


ಶಿಖಾ ಅಜಯ್ ದಂಪತಿಯ ಪ್ರಾಣಿಪ್ರೀತಿ


ಈ ಆಸ್ಪತ್ರೆವಾಸ, ನೋವು ಶಿಖಾರನ್ನು ಹೈರಾಣಾಗಿಸಿಬಿಡುತ್ತೆ ಅಂತಲೇ ಎಲ್ಲರೂ ಭಾವಿಸಿದ್ದ ಆದರೆ ಗದಗ ಜಿಲ್ಲಾ ಆಸ್ಪತ್ರೆಯ ಡಾಕ್ಟರುಗಳೇ ಅಚ್ಚರಿಪಡುವಂತೆ ಆಕೆ ಕೆಲವೇ ದಿನಗಳ ತನ್ನ ಆರೋಗ್ಯವನ್ನು ಚೇತರಿಸಿಕೊಂಡಿದ್ದಳು. ತಾನು ಹಾಸಿಗೆ ಹಿಡಿದಿದ್ದಾಗಲೂ ಡಾಕ್ ಸ್ಟೆರಿಲೈಜ್ ಮಾಡಿದ ಸಿರಿಂಜು ಬಳಸುತ್ತಿದ್ದಾರಾ, ಇಲ್ಲವಾ ಅಂತ ನಿಗಾ ವಹಿಸಿ ವೈ ಕಿವಿ ಹಿಂಡುತ್ತಿದ್ದುದನ್ನು ಅವರ ಪತಿ ಮಂಡ್ಯದ ಡಿಸಿ ಅಜಯ್ ನಾಗಭೂಷ ಇವತ್ತಿಗೂ ನೆನಪಿಸಿಕೊಳ್ತಾರೆ.

ಐಎಎಸ್ ಅಧಿಕಾರಿಯಾಗಿ ಬಿಜಿ ವರ್ಕ್ ಶೆಡ್ಯೂಲ್ ಹೊಕ್ಕ ನಂತರವೂ ಯೋ ಏರೋಬಿಕ್ಸ್, ಟ್ರೆಡ್‌ಮಿಲ್, ಬ್ಯಾಡ್ಮಿಂಟನ್‌ನಂತಹ ಹಳೆಯ ಅಭ್ಯಾಸಗಳನ್ನು ಪಾಲಿಸಿಕೊಂ ಬರುತ್ತಿರುವ ಶಿಖಾರಿಗೆ ಪ್ರಾಣಿ, ಪಕ್ಷಿಗಳೆಂದರೆ ಎಲ್ಲಿಲ್ಲದ ಅಕ್ಕರೆ. ಶಿಖಾರ ಕ್ವಾಟ ಹೊಕ್ಕರೆ ಬಾತುಕೋಳಿಗಳು, ಮೊಲಗಳು, ನಾಯಿ, ಬೆಕ್ಕು, ಗಿಣಿಯಂತಹ ಜೀವಸಂಕುಲ ನಿಮ್ಮನ್ನು ವೆಲ್‌ಕಂ ಮಾಡುತ್ತವೆ. ಶಿಖಾರಿಗೆ ಕುದುರೆ ಸವಾರಿಯೆಂದರೆ ತುಂಬಾ ಆಕೆ ಓದುತ್ತಿದ್ದಾಗಲೇ ಹಾರ್ಸ್ ರೈಡಿಂಗ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. ಧಾರವಾಡದಲ್ಲಿ ಪ್ರತಿ ಶನಿವಾರ, ಭಾನುವಾರ ಟ್ರೆಕ್ಕಿಂಗ್ ಅಂತ ಕಾಡು ಸುತ್ತುವುದು ಗಂಡ-ಹೆಂ ಹವ್ಯಾಸವಾಗಿತ್ತು. ಐಎಎಸ್ ತರಬೇತಿಯ ಭಾರತ ದರ್ಶನ ಕಾರ್ಯಕ್ರಮದಲ್ಲಿ ಒ ಅವರ ಇಡೀ ಬ್ಯಾಚ್ ಹೃಷಿಕೇಶ್‌ಗೆ ಭೇಟಿ ನೀಡಿತ್ತು. ಅಲ್ಲಿ ಐವತ್ತು ಅಡಿ ಎತ್ತರದಿ ನೀರಿಗೆ ಡೈವ್ ಮಾಡುವ ಒಂದು ಸ್ಪರ್ಧೆಯಿತ್ತು. ಹದಿನೈದು ಜನರ ತಂಡ ನಾಗಭೂಷಣ್ ಮತ್ತು ಶಿಖಾ ಕೂಡಾ ಇದ್ದರು. ಹೊರಗಡೆ ವಿಪರೀತ ಚಳಿ. ನಿ ತಣ್ಣಗೆ ಕೊರೆಯುತ್ತಿತ್ತು. ಅಂತದ್ದರಲ್ಲಿ ಐವತ್ತು ಅಡಿ ಎತ್ತರದಿಂದ ನೀರಿಗೆ ಧುಮುಕುವುದೆಂ ಸುಮ್ಮನೆ ಮಾತ? ಅಜಯ್ ನಾಗಭೂಷಣ್‌ಗೆ ಆಗಿನ್ನು ಈಜು ಬರುತ್ತಿರಲಿಲ್ಲವ ಆದರೆ ಇಡೀ ತಂಡದಲ್ಲಿ ಶಿಖಾರವರೇ ಮೊದಲು ಮುಂದೆಬಂದು ಮೇಲಿನಿ ನೀರಿನೊಳಕ್ಕೆ ಡೈವ್ ಮಾಡಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದರು. ಅದನ್ನು ನೋಡಿ ಅಜಯ್ ನಾಗಭೂಷಣ್ ಸಹಾ ಈಜು ಬರದಿದ್ದರೂ ನೀರಿಗೆ ಧುಮುಕುವ ಧೈ ಮಾಡಿದ್ದರಂತೆ. ಇದನ್ನು ಸ್ವತಃ ಅಜಯ್‌ರೇ ಹೇಳಿಕೊಂಡಿದ್ದಾರೆ. ಅಂದಹಾಗೆ, ಶಿ ಮತ್ತು ಅಜಯ್ ನಾಗಭೂಷಣ್ ಇಬ್ಬರೂ 2004 ನೇ ಐಎಎಸ್ ಬ್ಯಾಚ್‌ನವ ಆಗಿರುವುದರಿಂದ ಅವರಿಬ್ಬರದು ಲವ್ ಮ್ಯಾರೇಜ್ ಅಂತಲೇ ಬಹಳಷ್ಟು ಅಂದುಕೊಳ್ಳುತ್ತಾರೆ. ಆದರೆ ಅಸಲಿ ವಿಷಯ ಏನಪ್ಪಾ ಅಂದ್ರೆ, ತರಬೇತಿ ಸಮಯ ಸಿಕ್ಕಾಪಟ್ಟೆ ಜಗಳವಾಡುತ್ತಿದ್ದ ಇವರು ಗಂಡ-ಹೆಂಡಿರಾಗಲು ಹೇಳಿಮಾಡಿಸಿದ ಜೋ ಅಂತ ಯಾರೊಬ್ಬರೂ ಊಹಿಸಿರಲಿಲ್ಲ. ಶಿಖಾರ ತಂದೆ ಚಂದ್ರಮೋಹನ್ ತ ಮಗಳಿಗೆ ಗಂಡು ಹುಡುಕಲು ಪತ್ರಿಕೆಯೊಂದರ ಮ್ಯಾಟ್ರಿಮೋನಿಯಲ್ ಜಾಹೀರಾ ಕೊಟ್ಟ ನಂತರವಷ್ಟೇ ಇವರಿಬ್ಬರ ಸಂಬಂಧ ಕುದುರಿದ್ದು.

ಕರ್ನಾಟಕ ಕೇಡರ್ ಪ್ರವೇಶಿಸುವುದಕ್ಕೂ ಮುನ್ನ ನಕ್ಸಲ್‌ಪೀಡಿತ ಜೇಮ್‌ಶೆಡ್‌ಪುರ ಸಬ್-ಡಿವಿಜನ್ ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡಿದ ಅನುಭವ ಇರುವ ಶಿ ಮರೀಗೌಡನಂತಹ ಸಣ್ಣಪುಟ್ಟ ಪೊಲಿಟಿಕಲ್ ಪುಢಾರಿಗಳಿಗೆ ಹೆದರಿಕೊಳ್ಳುವುದುಂ

ಮಂಡ್ಯದಲ್ಲಿನ್ನು 'ಪವರ್' ಮಿನಿಸ್ಟರ್ ಡಿಕೆಶಿಯದ್ದೇ ಹವಾ






ರಾಜ್ಯ ಸಚಿವ ಸಂಪುಟದಿಂದ ಅಂಬರೀಶ್‌ರನ್ನು ಕಿತ್ತಾಕಿ ಸಿಎಂ ಸಿದ್ದರಾಮಯ್ಯ ಮಂಡ್ಯ ಜಿಲ್ಲೆಯ ಉಸ್ತುವಾರಿಯನ್ನು ಪವರ್ ಮಿನಿಸ್ಟರ್ ಡಿ.ಕೆ.ಶಿವಕುಮಾರ್‌ಗೆ ವಹಿಸುತ್ತಿದ್ದಂತೆ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.


ಇಂಧನ ಸಚಿವ ಶಿವಕುಮಾರ್ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಬಳಿಕ ಜುಲೈ 2ರಂದು ಮಂಡ್ಯಕ್ಕೆ ಭೇಟಿ ನೀಡಿದಾಗ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಮುಖಂಡರು ಉತ್ಸಾಹದಿಂದ ಗರಿಗರಿ ಬಟ್ಟೆ ಧರಿಸಿಕೊಂಡು ಶಿವಕುಮಾರ್‌ಗೆ ಅದ್ದೂರಿ ಸ್ವಾಗತ ನೀಡಿದ್ದರು. ಅಂಬಿಯನ್ನ ಕಿತ್ತು ಹಾಕಿದ್ದೇ ಸರಿ ಎನ್ನುವಂತೆ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಮುಖಂಡರು ಒಗ್ಗಟ್ಟಾಗಿ ಪೈಪೋಟಿಯೆಂಬಂತೆ ಡಿಕೆಶಿ ಪರ ಫ್ಲೆಕ್ಸ್, ಬ್ಯಾನರ್ ಹಾಕಿ ಸಿಹಿಹಂಚಿ, ಪಟಾಕಿಸಿ ಸಿಡಿಸಿ ಸಂಭ್ರಮದ ಕಡಲಲ್ಲಿ ತೇಲಿಬಿಟ್ಟರು. ಕಾಂಗ್ರೆಸ್ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ಡಿಕೆಶಿಗೆ ನೀಡಿದ ಸ್ವಾಗತ ಕಂಡ ಅಂಬಿ ಬೆಂಬಲಿಗರು ಹ್ಯಾಪು ಮೋರೆ ಹಾಕಿಕೊಂಡದ್ದನ್ನು ಕಂಡು ಸ್ಥಳೀಯ ಕಾಂಗ್ರೆಸ್ ನಾಯಕರು ಒಳಗೊಳಗೆ ಖುಷಿ ಪಟ್ಟರು. ಅಂಬಿಯನ್ನು ಸಂಪುಟದಿಂದ ಕಿತ್ತುಹಾಕಿ ಶಿವಕುಮಾರ್‌ರವರನ್ನು ತರುತ್ತಿದ್ದಂತೆಯೇ ಕಳೆದ ಮೂರು ವರ್ಷಗಳಿಂದ ಜಿಲ್ಲಾ ಕಾಂಗ್ರೆಸ್‌ಗೆ ಹಿಡಿದಿದ್ದ ಗ್ರಹಣ ಬಿಟ್ಟಂತಾಗಿದೆ. ಕಳೆದ ಮೂರು ವರ್ಷಗಳಿಂದ ವಸತಿ ಸಚಿವನಾಗಿ ರಾಜ್ಯದ ಬಡಜನತೆಗೆ ಸೂರು ಒದಗಿಸುವಲ್ಲಿ ವಿಫಲರಾದ ಅಂಬರೀಶ್ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇತ್ತು. ಜೆಡಿಎಸ್ ವರಿಷ್ಠರ ಜೊತೆ ಕುಚುಕು ಸಂಬಂಧ ಹೊಂದಿದ್ದ ಅಂಬರೀಶ್ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರತ್ತ ಕಣ್ಣೆತ್ತಿಯೂ ನೋಡಲಿಲ್ಲ. ಕಾರ್ಯಕರ್ತರ ದುಃಖ-ದುಮ್ಮಾನಗಳಿಗೆ ಸ್ಪಂದಿಸಲೂ ಇಲ್ಲ. ಅಂಬಿ ನಡೆಯಿಂದ ಜಿಲ್ಲಾ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಎಷ್ಟು ಬೇಸರಗೊಂಡಿದ್ದರೆಂದರೆ ಸಿದ್ದರಾಮಯ್ಯ ತಮ್ಮ ಸಂಪುಟದಿಂದ ಅಂಬಿಯನ್ನು ಕಿತ್ತು ಬಿಸಾಡಿದಾಗ ಜಿಲ್ಲೆಯ ಯಾವ ನಾಯಕನೂ, ಕಾರ್ಯಕರ್ತನೂ ಪ್ರತಿಭಟಿಸಲೇ ಇಲ್ಲ. ಅಂಬಿ ವಿರುದ್ಧ ಎಷ್ಟು ಅಸಮಾಧಾನವಿತ್ತು ಎಂದರೆ ಜಿಲ್ಲಾ ಕೇಂದ್ರದಲ್ಲಿ ಅಂಬಿ ಶಿಷ್ಯರು ಒಂದೆರಡು ಪ್ರತಿಭಟನೆಯ ಹೈಡ್ರಾಮ ನಡೆಸಿದ್ದನ್ನು ಬಿಟ್ಟರೆ ಜಿಲ್ಲೆಯ ಬೇರಾವ ತಾಲ್ಲೂಕುಗಳಲ್ಲಿಯೂ ಒಂದೇ ಒಂದು ಪ್ರತಿಭಟನೆ ಅಂಬಿ ಪರವಾಗಿ ನಡೆಯಲೇ ಇಲ್ಲ.

ಅಂಬಿಯನ್ನು ಸಚಿವ ಸಂಪುಟದಿಂದ ಕೈಬಿಡುವ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದ್ದಂತೆ ಅಂಬಿ ಬಲಗೈ ಭಂಟ ಅಮರಾವತಿ ಚಂದ್ರ, ಬೇಲೂರು ಸೋಮಶೇಖರ್ ನೇತೃತ್ವದಲ್ಲಿ ಒಂದು ನೂರು ಮಂದಿ ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರೂ ಕ್ಯಾರೇ ಎನ್ನದ ಸಿದ್ದರಾಮಯ್ಯ ಅಂಬಿಯನ್ನು ಸಂಪುಟದಿಂದ ಆಚೆಗಟ್ಟಿ ತಮ್ಮ ಸಚಿವ ಸಂಪುಟ ವಿಸ್ತರಿಸಿದರು. ಮಾರನೇ ದಿನ ಸಿ.ಎಂ. ದ್ಯಾವಪ್ಪ ಎನ್ನುವ ವ್ಯಕ್ತಿ ನೀರು ಮಿಕ್ಸ್ ಮಾಡಿದ ಡೀಸಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುವ ನಾಟಕ ಮಾಡಿದ. ಹಾಗೆಯೇ ಕನಕಮ್ಮ ಎಂಬ ಗ್ರಾ.ಪಂ. ಸದಸ್ಯೆಯೊಬ್ಬಳು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುವ ನಾಟಕವಾಡಿದಳು. ಬೆಂಕಿಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಇವರಿಬ್ಬರೂ ಮಂಡ್ಯದ ಸಂಜಯ ಸರ್ಕಲ್‌ಗೆ ಬಂದು ಮಾಧ್ಯಮಗಳ ಮುಂದೆಯೇ ನಾಟಕವಾಡಬೇಕಿತ್ತಾ? ಬೇರೆಲ್ಲೂ ಸ್ಥಳ ಸಿಗಲಿಲ್ಲವಾ? ಎಂದು ಮಂಡ್ಯದ ಜನ ಪ್ರಶ್ನೆ ಮಾಡುತ್ತಾ ಇದೆಲ್ಲಾ ದೊಡ್ಡ ಡ್ರಾಮಾ ಎಂದು ಸುಮ್ಮನಾಗಿಬಿಟ್ಟರು.

ಅಲ್ಲಿಗೆ ಅಂಬಿ ಕೃಪಾಪೋಷಿತ ನಾಟಕ ಮಂಡಳಿಯ ಡ್ರಾಮಾ ಒಂದೆರಡು ದಿನಗಳು ಕಳೆಯುವಷ್ಟರಲ್ಲಿಯೇ ಮಾಯವಾಗಿತ್ತು. ಅದಾದ ನಂತರ ಅಂಬರೀಶ್ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ತನ್ನ ಆಪ್ತನ ಮೂಲಕ ಹಂಗಾಮಿ ಸ್ಪೀಕರ್‌ಗೆ ಕಳುಹಿಸಿಕೊಟ್ಟು ಡ್ರಾಮ ಆರಂಭಿಸಿದರು. ಹಂಗಾಮಿ ಸ್ಪೀಕರ್ ಶಿವಶಂಕರರೆಡ್ಡಿ ಅಂಬಿಯೇ ಬಂದು ರಾಜೀನಾಮೆ ಸಲ್ಲಿಸಲಿ ಎಂದೇಳಿ ವಾಪಸ್ ಕಳಿಸಿಬಿಟ್ಟರು. ಆದಾದನಂತರ ನಾಯಕತ್ವ ಬದಲಾವಣೆ ಆಗಬೇಕು ಎಂದೆಲ್ಲಾ ಕಾಂಗ್ರೆಸ್‌ನ ಬಂಡಕೋರ ಮಾಜಿ ಸಚಿವ ಶ್ರೀನಿವಾಸ್ ಪ್ರಸಾದ್ ಜೊತೆ ಸೇರಿ ಮತ್ತೊಂದು ಡ್ರಾಮಾಗೆ ಮುಂದಾದರು. ಜೆಡಿಎಸ್, ಬಿಜೆಪಿ ನಾಯಕರು ಅಂಬಿ ಮನೆಗೆ ಎಡತಾಕಿ 'ನಮ್ಮ ಪಕ್ಷಕ್ಕೆ ಬನ್ನಿ ನಿಮಗೆ ರಾಜಮರ್ಯಾದೆ ಕೊಡ್ತೇವೆ' ಎಂದೆಲ್ಲಾ ಭರವಸೆ ನೀಡಿ ಬಂದರು. ಕೊನೆಗೆ ಹೈಕಮಾಂಡ್ ವರಿಷ್ಠರ ಮಾತಿಗೆ ಬೆಲೆಕೊಟ್ಟು "ಏಕಾಏಕಿ ನಾನೇ ರಾಜೀನಾಮೆ ಕೊಟ್ಟರೆ ಸರ್ವಾಧಿಕಾರಿತನ ಆಗುತ್ತೆ. ನನ್ನ ಬೆಂಬಲಿಗರ ಹಾಗೂ



ಅಂಬರೀಶ್ ಭಾವಚಿತ್ರವನ್ನು ಹರಿದು ಬಿಸಾಡಿರುವ ದೃಶ್ಯ



ಮತದಾರರ ಮುಂದೆ ಹೋಗಿ ನನ್ನ ನಿರ್ಧಾರ ಪ್ರಕಟಿಸುತ್ತೇನೆ" ಎಂದು ಅಂಬಿ ಹೇಳಿಕೆ ಕೊಟ್ಟಿದ್ದಾರೆ. ಈ ರೀತಿ ಅತ್ತು ಕರೆದು ತನ್ನನ್ನು ಸಂಪುಟಕ್ಕೆ ಸೇರಿಸಿಕೊಳ್ಳಿ ಎಂದು ಅಂಬಿ ದಮ್ಮಯ್ಯ ಗುಡ್ಡೆ ಹಾಕುವ ಬದಲು ಶಾಸಕನಾಗೇ ಮಂಡ್ಯ ಕ್ಷೇತ್ರದ ಅಭಿವೃದ್ಧಿ ಮಾಡಿ ರಾಜ್ಯ ಹಾಗೂ ಕೇಂದ್ರ ಕಾಂಗ್ರೆಸ್ ನಾಯಕರಿಗೆ ತೋರಿಸಲಿ ಎಂಬುದು ಕ್ಷೇತ್ರದ ಮತದಾರರ ಮನವಿಯಾಗಿದೆ.

ಅಮರಾವತಿ ಚಂದ್ರನೇ ಕಾರಣ

ಅಂಬಿ ಮಂಡ್ಯ ಕ್ಷೇತ್ರದ ಶಾಸಕನಾಗಿ ಸಿದ್ದು ಸಂಪುಟದಲ್ಲಿ ವಸತಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವನಾಗುತ್ತಿದ್ದಂತೆ ಜಿಲ್ಲೆಯ ಜನ ಸಂತಸದಿಂದ ಅಭಿವೃದ್ಧಿಯ ಕನಸು ಕಂಡಿದ್ದರು. ಆದರೆ ಕಳೆದ ಮೂರು ವರ್ಷಗಳಲ್ಲಿ ಅಂಬಿಯ ಶೂನ್ಯ ಸಾಧನೆ ಕಂಡ ಜನರು ಯಾವಾಗ ಕಿತ್ತುಹಾಕುತ್ತಾರೆಂದು ಕಾಯುವಂತಾಯಿತು. ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದವರೆಂದರೆ ಅಂಬಿ ಹಾಗೂ ಮಳವಳ್ಳಿಯ ಪಿ.ಎಂ. ನರೇಂದ್ರಸ್ವಾಮಿ ಇಬ್ಬರೆ. ಅಂಬಿ ಕಿತ್ತುಹಾಕಿದರೆ ಅತ್ಯುತ್ತಮವಾಗಿ ಪಕ್ಷ ಸಂಘಟಿಸಿರುವ ನರೇಂದ್ರಸ್ವಾಮಿಗೆ ಸಚಿವ ಸ್ಥಾನ ಕೊಟ್ಟರೆ ಜಿಲ್ಲೆಯ ಅಭಿವೃದ್ಧಿ ಮತ್ತು ಕಾಂಗ್ರೆಸ್ ಪಕ್ಷದ ಅಭಿವೃದ್ಧಿಯೂ ಆಗುತ್ತದೆ ಎಂದು ಕಾಂಗ್ರೆಸ್ಸಿಗರು ಮತ್ತು ಜಿಲ್ಲೆಯ ಜನ ಮಾತನಾಡಿಕೊಳ್ಳುತ್ತಿದ್ದರು. ಒಂದು ಮಟ್ಟಿಗೆ ಇದು ನಿಜವಾಗುತ್ತದೆನ್ನುವ ಆಸೆಯೂ ಇತ್ತು. ಆದರೆ ಕೊನೆ ಗಳಿಗೆಯಲ್ಲಿ ನಡೆದ ರಾಜಕೀಯ ಮೇಲಾಟಗಳಿಂದ ಕೆಲಸಗಾರ ನರೇಂದ್ರಸ್ವಾಮಿಗೆ ಸಚಿವ ಸ್ಥಾನ ಸಿಗಲೇ ಇಲ್ಲ.

ಕೊನೆಗೂ ಸಿದ್ದರಾಮಯ್ಯ ಅಂಬಿಯ ಉಡಾಫೆತನ ಮತ್ತು ವಸತಿ ಕ್ಷೇತ್ರದಲ್ಲಿ ನಿರೀಕ್ಷಿಸಿದಷ್ಟು ಕೆಲಸ ಮಾಡದ ಕಾರಣ ನೀಡಿ ಅಂಬಿಗೆ ಗೇಟ್‌ಪಾಸ್ ಕೊಟ್ಟೇ ಬಿಟ್ಟರು. ಅಂಬಿಯನ್ನು ಸಂಪುಟದಿಂದ ಹೊರಗಿಡಲು ಕಾಣಿಕೆ ಸಲ್ಲಿಸಿದವರಲ್ಲಿ ಮುಖ್ಯನಾದವನು ಅಮರಾವತಿ ಚಂದ್ರ. ಅಂಬಿಯನ್ನು ಸಂಪುಟದಿಂದ ಕಿತ್ತುಹಾಕಿದ್ದರಿಂದ ಹೆಚ್ಚು ಸಂಕಟಪಟ್ಟ ಏಕೈಕ ಜೀವಿ ಎಂದರೆ ಅಮರಾವತಿ ಚಂದ್ರ ಮಾತ್ರ. ಅಂಬಿ ಮಿನಿಸ್ಟರ್ ಆಗಿದ್ದರೂ ಜಿಲ್ಲೆಯಲ್ಲಿ ಡಿಫ್ಯಾಕ್ಟೋ ಮಿನಿಸ್ಟರ್ ನಂತೆ ಅಧಿಕಾರ ಚಲಾಯಿಸಿದ ಅಮರಾವತಿ ಚಂದ್ರ ಎಲ್ಲಾ ಪಾಲನ್ನು ತಾನೊಬ್ಬನೇ ಹೊಡೆದುಕೊಳ್ಳುತ್ತಿದ್ದ. ಇದನ್ನ ಕಂಡ ಅಂಬಿಯ ಶಿಷ್ಯರೇ ಲಬೋ ಲಬೋ ಎಂದು ಬಾಯಿಬಡಿದುಕೊಂಡು ಅಂಬಿಗೆ ಹೇಳಿದರೂ ಆತನಿಗೆ ಅದೇನು ಮೋಡಿ ಮಾಡಿದ್ದನೋ ಅಮರಾವತಿ ಚಂದ್ರ ಅಂಬಿ ಆತನ ವಿರುದ್ಧ ಚಕಾರವೆತ್ತಲೇ ಇಲ್ಲ. ಅಮರಾವತಿ ಚಂದ್ರನ ನುಂಗಾಟ ಕಂಡ ಅಂಬಿಯ ಬಹುತೇಕ ಬೆಂಬಲಿಗರೆಲ್ಲಾ ಬೇಸತ್ತು ಆತನ ಪಾಳೆಯದಿಂದ ಹಿಂದೆ ಸರಿದರು.

ಅಂಬಿಯನ್ನ ಸಂಪುಟದಿಂದ ಕೈಬಿಟ್ಟರೆ ಜಿಲ್ಲೆಯಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ ಎನ್ನುವ ಭೀತಿ ಹೈಕಮಾಂಡ್ ವರಿಷ್ಠರಲ್ಲಿತ್ತು. ಆದರೆ ಜಿಲ್ಲೆಯಲ್ಲಿ ಅಂಬಿಗಿರುವ ವರ್ಚಸ್ಸು ಪಾತಾಳಕ್ಕೆ ಕುಸಿದಿರುವ ಬಗ್ಗೆ ಸಿದ್ದರಾಮಯ್ಯನವರಿಗೆ ಗೊತ್ತಿದ್ದರಿಂದಲೇ ಅಂಬಿಯನ್ನು ಮುಲಾಜಿಲ್ಲದೆ ತಮ್ಮ ಸಂಪುಟದಿಂದ ಕಿತ್ತು ಬಿಸಾಡಿದರು. ದಾನಶೂರ ಕರ್ಣ, ಕಲಿಯುಗ ಕರ್ಣ ಎಂದೆಲ್ಲಾ ಅನಿಸಿಕೊಂಡಿದ್ದ ಅಂಬಿಯನ್ನು ಸಂಪುಟದಿಂದ ಕೈಬಿಟ್ಟಾಗ ಹತ್ತಾರು ಸಾವಿರ ಜನ ಸೇರಿ ಪ್ರತಿಭಟನೆ ಮಾಡುವಂತಹ ಸ್ಥಿತಿ ನಿರ್ಮಾಣವಾಗಬೇಕಿತ್ತು. ಅಂಬಿಗಿದ್ದ ತಾರಾ ವರ್ಚಸ್ಸು, ಜನಪ್ರಿಯತೆ ನೋಡಿದರೆ ಹತ್ತಾರು ಸಾವಿರ ಜನ ಸೇರುವುದು ಕಷ್ಟವೇನಿರಲಿಲ್ಲ. ಆದರೆ ಅಂಬಿ ಸಚಿವನಾಗಿ ಜಿಲ್ಲೆಗೆ ಮಾಡಿದ ಮೋಸಕ್ಕೆ ಹತ್ತು ಸಾವಿರವಿರಲಿ ನೂರು ಮಂದಿಯೂ ಸೇರಲಿಲ್ಲ. ಇದು ಕನ್ನಡ ಚಿತ್ರರಂಗದ ಹಿರಿಯ ನಟ ಅಂಬರೀಶ್‌ರ ಇತ್ತೀಚಿನ ಜನಪ್ರಿಯತೆ.

ಒಗ್ಗೂಡಿದ ಕಾಂಗ್ರೆಸ್ಸಿಗರು

ಒಕ್ಕಲಿಗರ ಭದ್ರಕೋಟೆ ಎಂದೇ ರಾಜಕೀಯದಲ್ಲೂ ಬಿಂಬಿತವಾಗಿರುವ ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ಓರ್ವ ಸಂಸದ ಮತ್ತು ನಾಲ್ಕು ಮಂದಿ ಶಾಸಕರಿದ್ದಾರೆ. ದೇವೇಗೌಡ ಹಾಗೂ ಕುಮಾರಸ್ವಾಮಿ ಕಂಡರೆ ಜಿಲ್ಲೆಯ ಒಕ್ಕಲಿಗರಿಗೆ ಅದೆಂತದೋ ಪ್ರೀತಿ. ಆ ಕಾರಣಕ್ಕೆ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷ ಕಾಂಗ್ರೆಸ್‌ಗಿಂತ ಸ್ವಲ್ಪ ಹೆಚ್ಚು ಮುಂದಿದೆ. ಒಕ್ಕಲಿಗ ಪಾಳೇಪಟ್ಟಿನ ಮಂಡ್ಯ ಜಿಲ್ಲೆಯ ಉಸ್ತುವಾರಿಯನ್ನು ಒಕ್ಕಲಿಗ ಸಮುದಾಯದ ಪವರ್ ಮಿನಿಸ್ಟರ್ ಡಿ.ಕೆ.ಶಿವಕುಮಾರ್‌ಗೆ ವಹಿಸುವುದೇ ಸರಿ ಎಂದು ಸಿಎಂ ಸಿದ್ದರಾಮಯ್ಯ ಅವರನ್ನೇ ಮಂಡ್ಯ ಅಖಾಡಕ್ಕೆ ಬಿಟ್ಟಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಧಿಕಾರ ಸಿಕ್ಕ ಬಳಿಕ ಜುಲೈ 2ರಂದು ಮಂಡ್ಯಕ್ಕೆ ಭೇಟಿ ನೀಡಿದ ಶಿವಕುಮಾರ್‌ಗೆ ಸಿಕ್ಕ ಅದ್ದೂರಿ ಸ್ವಾಗತಕಂಡು ಅಂಬಿಯ ಅಭಿಮಾನಿಗಳ ಹೊಟ್ಟೆಯಲ್ಲಿ ಗಂಜಲ ಸುರಿದಂತಾಗಿದೆ.

ಅಂಬಿ ಮೇಲಿದ್ದ ಸಿಟ್ಟಿನಿಂದಲೇ ಎಲ್ಲಾ ಕಾಂಗ್ರೆಸ್ಸಿಗರು ಒಂದುಗೂಡಿ ಡಿಕೆಶಿಗೆ ಜೈ ಎನ್ನಲು ಹಾಜರಾಗಿದ್ದರು. ಎಸ್.ಎಂ. ಕೃಷ್ಣ ಬಣ, ಅಂಬರೀಶ್ ಬಣ, ರಮ್ಯಾ ಬಣ ಎಂದೆಲ್ಲಾ ಗುರುತಿಸಿಕೊಂಡಿದ್ದ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಅಂದು ಡಿಕೆಶಿಗೆ ಸ್ವಾಗತ ನೀಡಲು ಬಂದಿದ್ದರು. ಅಂಬಿ ಮತ್ತವರ ಶಿಷ್ಯರ ಅಬ್ಬರದಲ್ಲಿ ಕಳೆದುಹೋಗಿದ್ದ ಕಾಂಗ್ರೆಸ್ ಕಾರ್ಯಕರ್ತರು ಕೂಡ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದರು. ಅವರೆಲ್ಲಾ ಸೇರಿ ಡಿ.ಕೆ.ಶಿಗೆ ಕೊಟ್ಟ ಸ್ವಾಗತ ಹೇಗಿತ್ತೆಂದರೆ ಮಂಡ್ಯ ಜಿಲ್ಲೆಯ ಇತಿಹಾಸದಲ್ಲಿ ಹೊರಗಿನ ನಾಯಕನೊಬ್ಬನಿಗೆ ಸಿಕ್ಕಂತಹ ಅದ್ದೂರಿ ಸ್ವಾಗತ ಇದೇ ಮೊದಲನೆಯದು.

ಡಿಕೆಶಿಗೆ ಅದ್ದೂರಿ ಸ್ವಾಗತ

ಇಂಧನ ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಿವಕುಮಾರ್‌ಗೆ ಮಂಡ್ಯದ ಗಡಿ ಭಾಗ ಮದ್ದೂರಿನ ನಿಡಘಟ್ಟದಿಂದಲೇ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು. ಹನಕೆರೆ ಬಳಿ ಕಾಂಗ್ರೆಸ್ ಮುಖಂಡರಾದ ಗಣಿಗ ರವಿಕುಮಾರ್ ಹಾಗೂ ಎಚ್.ಪಿ.ಮಹೇಶ್ ತಮ್ಮ ಅಸಂಖ್ಯಾತ ಅಭಿಮಾನಿಗಳು ಹಾಗೂ ಕಾರ್ಯಕರ್ತರೊಂದಿಗೆ ಶಿವಕುಮಾರ್‌ಗೆ ಭರ್ಜರಿ ಹೂವಿನ ಹಾರ ಹಾಕಿ ಸ್ವಾಗತಿಸಿದರು. ಮಂಡ್ಯ ಕ್ಷೇತ್ರದಿಂದ ಎಂಎಲ್‌ಎ ಆಗಲು ತುದಿಗಾಲಲ್ಲಿ ನಿಂತಿರುವ ಗಣಿಗ ರವಿಕುಮಾರ್ ಕಳೆದ ಚುನಾವಣೆಯಲ್ಲಿ ಅಂಬರೀಶ್ ಜೊತೆ ಗುರುತಿಸಿಕೊಂಡಿದ್ದರು. ಹಲವು ವರ್ಷಗಳಿಂದ ಸಮಾಜ ಸೇವೆಯನ್ನು ಮಂಡ್ಯ ಕ್ಷೇತ್ರದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಮಾಡಿ ಅಭಿಮಾನಿಗಳನ್ನು ಸಂಪಾದಿಸಿರುವ ಗಣಿಗ ರವಿಕುಮಾರ್ ಅಂಬರೀಶ್ ಗೆಲುವಿಗೆ ತನು-ಮನ-ಧನದಿಂದ ದುಡಿದಿದ್ದರು. ಆದರೆ ಅಂಬಿ ಗೆದ್ದೊಡನೆ ಅಮರಾವತಿ ಚಂದ್ರನ ಕೈವಶವಾಗಿ ಹೋದರು. ಅಂಬಿ ಚುನಾವಣೆಯಲ್ಲಿ ಆತನ ಪರ ಹಗಲಿರುಳು ದುಡಿದಿದ್ದ ಗಣಿಗ ರವಿಕುಮಾರ್‌ರಂತಹ ಹಲವು ಮುಖಂಡರು ಅಮರಾವತಿ ಚಂದ್ರನ ಆರ್ಭಟದ ಕಾರಣದಿಂದ ಅಂಬಿ ಪಾಳೆಯದಿಂದ ದೂರ ಸರಿದಿದ್ದರು. ಈಗ ಡಿ.ಕೆ.ಶಿವಕುಮಾರ್ ಮಂಡ್ಯದ ಉಸ್ತುವಾರಿ ವಹಿಸುತ್ತಿದ್ದಂತೆ ಗಣಿಗ ರವಿಕುಮಾರ್, ಎಚ್.ಪಿ.ಮಹೇಶ್ ತರಹದ ನಾಯಕರಿಗೆ ಸಮಾಧಾನವಾಗಿದೆ. ಅದಕ್ಕೆಂದೇ ಅವರೆಲ್ಲಾ ಸೇರಿ ಡಿ.ಕೆ.ಶಿವಕುಮಾರ್‌ಗೆ ಭರ್ಜರಿ ಸ್ವಾಗತವನ್ನೇ ನೀಡಿದ್ದಾರೆ. ಹನಕೆರೆ ಬಳಿ ಶಿವಕುಮಾರ್‌ರನ್ನು ಬರಮಾಡಿಕೊಂಡ ಗಣಿಗ ರವಿಕುಮಾರ್ 400ಕ್ಕೂ ಹೆಚ್ಚು ಬೈಕ್‌ಗಳ ಮೂಲಕ ಮಂಡ್ಯದ ಕಾಳಿಕಾಂಬ ಸಮುದಾಯಭವನಕ್ಕೆ ಮೆರವಣಿಗೆ ಮೂಲಕ ಕರೆತಂದರು. ಅದೇ ರೀತಿ ಅಂಬಿಯ ಮೇಲಿನ ಸಿಟ್ಟಿನ ಕಾರಣಕ್ಕೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶ್ರೀರಂಗಪಟ್ಟಣದ ಕಾಂಗ್ರೆಸ್ ಟಿಕೆಟ್ ವಂಚಿತ ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರು ಅತ್ಯಧಿಕ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿದ್ದರು.

ಮಂಡ್ಯದ ನಂದಾ ವೃತ್ತದಲ್ಲಿ ಬಿರಟೀಸಿಕೆಯ ಅಂಬಿ ಬೆಂಬಲಿಗರು ಅಂಬಿಯನ್ನು ಸಚಿವ ಸಂಪುಟದಿಂದ ಕೈ

⇨06

05⇦ ಮಂಡ್ಯ....

ಬಿಟ್ಟದ್ದು ತಪ್ಪು, ಅಂಬಿಗೆ ಮತ್ತೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಲು ನಿಂತಿದ್ದರು. ಶಿವಕುಮಾರ್‌ರನ್ನ ಮೆರವಣಿಗೆಯಲ್ಲಿ ಕರೆತಂದಾಗ ಅಂಬಿಯ ಭಾವಚಿತ್ರದೊಡನೆ ನಿಂತಿದ್ದ ಅಂಬಿಯ ಬೆಂಬಲಿಗರನ್ನು ಕಂಡೊಡನೆ ರವೀಂದ್ರ ಶ್ರೀಕಂಠಯ್ಯನ ಅಭಿಮಾನಿಗಳು ಅಂಬಿಯ ಭಾವಚಿತ್ರವನ್ನು ಹಿಡಿದು ನಿಂತಿದ್ದವರ ಕೈಯಿಂದ ಕಿತ್ತುಕೊಂಡು ಹರಿದು ಹಾಕಿ ಕಾಲಿನಿಂದ ತುಳಿದು ಆಕ್ರೋಶ ವ್ಯಕ್ತಪಡಿಸಿದರು. ವಿಚಿತ್ರವೆಂದರೆ, ಅಂಬಿ ಬೆಂಬಲಿಗರು ಅಂಬಿಗೆ ಸಚಿವ ಸ್ಥಾನ ನೀಡಿ ಎಂದು ಪ್ರತಿಭಟಿಸುತ್ತಿದ್ದರೆ ಅಮರಾವತಿ ಚಂದ್ರ ಶಿವಕುಮಾರ್‌ರೊಂದಿಗೆ ನಿಂತು ಪೋಜು ಕೊಡುತ್ತಿದ್ದ. ಅಲ್ಲದೆ ಡಿಕೆಶಿ ಸಭೆಯಲ್ಲಿ ಹ್ಯಾಪ್‌ಮೋರೆ ಹಾಕಿಕೊಂಡು ಆಕಾಶವೇ ತಲೆಯ ಮೇಲೆ ಬಿದ್ದಂತೆ ಕುಂತಿದ್ದ. ರವೀಂದ್ರ ಶ್ರೀಕಂಠಯ್ಯನ ಬೆಂಬಲಿಗರಂತೆಯೇ ಬಹುತೇಕ ಕಾಂಗ್ರೆಸ್ ಕಾರ್ಯಕರ್ತರಿಗೆ ಅಂಬಿ ಮೇಲೆ ಸಿಟ್ಟಿದೆ. ಆದರೆ ಅವರೆಲ್ಲಾ ಅದನ್ನು ತೋರ್ಪಡಿಸದೆ ಶಿವಕುಮಾರ್ ನಾಯಕತ್ವದಲ್ಲಿ ಒಗ್ಗೂಡಿದ್ದಾರೆ.

ಮಂಡ್ಯದಲ್ಲಿನ್ನು ಡಿಕೆಶಿಯದ್ದೇ ಹವಾ

'ನಾ ಬರೋಗಂಟ ಮಾತ್ರ ಬೇರೆಯವರ ಹವಾ... ನಾನ್ ಬಂದ್‌ಮೇಲೆ ನಂದೇ ಹವಾ' ಎನ್ನುವಂತೆ ಡಿ.ಕೆ.ಶಿವಕುಮಾರ್ ಭೇಟಿ ನೀಡಿದ ಮೊದಲನೇ ದಿನವೇ ಕಾಂಗ್ರೆಸ್ಸಿಗರಿಗೆ ಮತ್ತು ಅಧಿಕಾರಿಗಳಿಗೆ ತನ್ನ ಹಾದಿಯ ಬಗ್ಗೆ ಸ್ಪಷ್ಟ ಸೂಚನೆ ನೀಡಿದ್ದಾರೆ. ಕಾಳಿಕಾಂಭ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ "ನಾನು ಬಣ ರಾಜಕೀಯ ಮಾಡಲು ಬಂದಿಲ್ಲ, ನಾನು ಎಸ್.ಎಂ. ಕೃಷ್ಣ ಬಣ, ನಾನು ಅಂಬರೀಶ್ ಬಣ, ನಾನು ರಮ್ಯಾ ಬಣ ಎಂದೆಲ್ಲಾ ರಾಜಕೀಯ ಮಾಡಬೇಡಿ. ನಾನಿದನ್ನು ಸಹಿಸುವುದಿಲ್ಲ, ಜಿಲ್ಲೆಯಲ್ಲಿರುವುದು ಒಂದೇ ಬಣ ಅದು ಕಾಂಗ್ರೆಸ್ ಬಣ" ಎಂದು ಎಚ್ಚರಿಕೆ ನೀಡಿದ್ದಾರೆ.

"ನಾನು ಯಾರ ಚಾಡಿ ಮಾತನ್ನು ಕೇಳೋದಿಲ್ಲ, ಯಾವ ಮುಖಂಡರೂ ಚಾಡಿ ಹೇಳಲು ಬರಬೇಡಿ. ಪಕ್ಷದಲ್ಲಿ ಗುಂಪುಗಾರಿಕೆಗೆ ಅವಕಾಶ ನೀಡಲ್ಲ. 2018ರ ಚುನಾವಣೆಯಲ್ಲಿ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಬಾವುಟ ಹಾರಬೇಕೆಂಬುದು ನನ್ನ ಉದ್ದೇಶ. 30-40 ಜನ ಬಣ ರಾಜಕೀಯ ಮಾಡುತ್ತಾ ಇಡೀ ಜಿಲ್ಲೆಯ ಜನರು ಹಾಳಾಗುವುದಕ್ಕೆ ಕಾರಣರಾಗಬೇಡಿ" ಎಂದೆಲ್ಲಾ ಕಾಂಗ್ರೆಸ್ಸಿಗರ ಮುಂದೆ ಖಡಕ್ ಡೈಲಾಗ್ ಹೊಡೆದ ಶಿವಕುಮಾರ್ ಕೆಡಿಪಿ ಸಭೆಯಲ್ಲೂ ಅಧಿಕಾರಿಗಳ ಬೆವರಿಳಿಸುವ ಮೂಲಕ ಇನ್ನು ಮುಂದೆ ಮಂಡ್ಯದಲ್ಲಿ ನಂದೇ ಹವಾ ಎಂದು ಗರ್ಜಿಸಿದ್ದಾರೆ.

ಅಂಬರೀಶ್ ಸಚಿವರಾಗಿದ್ದಷ್ಟು ಕಾಲ ಜಿಲ್ಲೆಯ ಬಹುತೇಕ ಅಧಿಕಾರಿಗಳು ತಾವು ಆಡಿದ್ದೇ ಆಟ ಎಂಬಂತೆ ಚೆನ್ನಾಗಿ ದುಂಡಗಾಗಿದ್ದಾರೆ. ಅಂಬರೀಶ್ ಸಚಿವರಾದ ನಂತರ ಜಿಲ್ಲೆಯ ಅಭಿವೃದ್ಧಿ 10 ವರ್ಷಗಳಷ್ಟು ಹಿಂದಕ್ಕೆ ಹೋಗಿದೆ. ಅಂಬಿಯಂತೆ ಹಲವು ಅಧಿಕಾರಿಗಳು ಸೋಮಾರಿತನದಿಂದಲೇ ಕಾಲಕಳೆಯುತ್ತಿದ್ದರೆಂಬ ಮಾಹಿತಿ ತಿಳಿದ ಶಿವಕುಮಾರ್ ಕೆಡಿಪಿ ಸಭೆಯಲ್ಲಿ ಅಧಿಕಾರಿಗಳ ಬೆವರಿಳಿಯುವಂತೆ ಮಾಡಿದ್ದಾರೆ. "ನಿಮ್ಮ ಸೋಮಾರಿತನದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಡಿ. ಸರ್ಕಾರವೇ ಜನರ ಬಳಿಗೆ ಹೋಗುವ ಆಡಳಿತವನ್ನೇ ನಾನು ನಿರೀಕ್ಷೆ ಮಾಡುತ್ತೇನೆ. ಗ್ರಾಮ ಪಂಚಾಯತಿಯಿಂದ ಹಿಡಿದು ಎಲ್ಲಾ ಹಂತದ ಅಧಿಕಾರಿಗಳು ವಿಫಲವಾದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇನೆ" ಎಂದು ಎಚ್ಚರಿಕೆ ನೀಡಿದ್ದಾರೆ.

"ನಾನು ತೀರಾ ಕೆಳಹಂತದಿಂದ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ. ನನಗೆ ಎಲ್ಲಾ ಒಳಹೂರಣಗಳು ಚೆನ್ನಾಗಿ ಗೊತ್ತಿದೆ. ನನಗೆ ಅಂಕಿ-ಅಂಶಗಳನ್ನು ಮಾತ್ರ ನೀಡಿ ಸುಮ್ಮನಾಗುವ ಜಾಣತನ ತೋರಬೇಡಿ. ನರೇಗಾ ಯೋಜನೆ, ಕುಡಿಯುವ ನೀರು, ಪಡಿತರ ವ್ಯವಸ್ಥೆ ಹಿಂದುಳಿದ ವರ್ಗಗಳಿಗೆ ಸೌಲಭ್ಯ ಕಾಮಗಾರಿಯ ಗುಣಮಟ್ಟ ಕಾಪಾಡಿಕೊಳ್ಳಬೇಕು" ಎಂದೆಲ್ಲಾ ಮೊದಲ ಸಭೆಯಲ್ಲೇ ಅಧಿಕಾರಿಗಳಿಗೆ ಕರ್ತವ್ಯ ಮತ್ತು ಶಿಸ್ತಿನ ಪಾಠ ಹೇಳಿದ್ದಾರೆ. ಅಂಬಿಯಂತೆ ಕಾಟಾಚಾರಕ್ಕೆ ಸಭೆ ಮಾಡದೆ ಸಂಜೆ 6 ಗಂಟೆವರೆಗೂ ಸಭೆ ಮಾಡಿ ಮುಂದಿನ ಸಭೆಯಲ್ಲಿ ಎಲ್ಲರನ್ನು ಸಮರ್ಪಕವಾಗಿ ವಿಚಾರಿಸಿಕೊಳ್ಳುತ್ತೇನೆ ಎಂದು ಎಚ್ಚರಿಸಿ ಹೋಗಿದ್ದಾರೆ.

ಒಟ್ಟಿನಲ್ಲಿ ಪವರ್ ಮಿನಿಸ್ಟರ್ ಡಿ.ಕೆ.ಶಿವಕುಮಾರ್‌ರನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡುವ ಮೂಲಕ ಸಿದ್ದರಾಮಯ್ಯ ಅಂಬಿ ಮತ್ತು ಅವರ ಕುಚುಕು ಜೆಡಿಎಸ್ ಗೆಳೆಯರನ್ನು ಎದೆಕೊಟ್ಟು ಎದುರಿಸಲು ಮಂಡ್ಯ ಅಖಾಡಕ್ಕೆ ಬಿಟ್ಟಿದ್ದಾರೆ. ಈಗಾಗಲೇ ಮಂಡ್ಯದಲ್ಲಿ ಪವರ್ ಮಿನಿಸ್ಟರ್ ಡಿಕೆಶಿ ತನ್ನ ಪವರ್ ಏನೆಂಬುದನ್ನು ಅಂಬಿ ಬಣಕ್ಕೆ, ಅಧಿಕಾರಿಗಳಿಗೂ ತೋರಿಸಿ ಹೋಗಿದ್ದಾರೆ. ಇನ್ನು ಮುಂದೆ ಮಂಡ್ಯದಲ್ಲಿ ಡಿಕೆಶಿಯದ್ದೇ ಹವಾ ಎಂದು ಕಾಂಗ್ರೆಸ್ಸಿಗರು ಸಂಭ್ರಮಿಸುತ್ತಿದ್ದಾರೆ, ಮುಂದಿನ ಎರಡು ವರ್ಷ ಏನಾಗುವುದೋ ಎಂಬ ಕುತೂಹಲ ಮಂಡ್ಯ ಜನರಲ್ಲಿದೆ.

○ ವರದಿಗಾರ


04⇦ ಮೈಸೂರು

ಮೇಲೆ ನಖಶಿಖಾಂತ ಉರಿದುಹೋದದ್ದೇ ಆ ಕಾರಣಕ್ಕೆ. ಸಿಎಂ ಸಿದ್ದರಾಮಯ್ಯನ ಬೆದರುಬೊಂಬೆಯನ್ನಿಟ್ಟ ಅವನ ಮಾಮೂಲಿ ಪಟ್ಟಿಗೆ ನವೀನ್ ಜೋಸೆಫ್ ಬಗ್ಗಲಿಲ್ಲ, ಸರ್ಕಾರಿ ಭೂಒತ್ತುವರಿ ಕೇಸುಗಳನ್ನು ನಡೆಸುವುದೇ ಸೈ ಅಂತ ಪಟ್ಟುಹಿಡಿದು ಕೂತರು. ಆಗ ಕೊನೆಯದಾಗಿ ಮರೀಗೌಡ ಬಳಸಿದ್ದೇ ಟ್ರಾನ್ಸ್‌ಫರ್ ಅಸ್ತ್ರವನ್ನು. ಸಿಎಂ ಸಾಹೇಬರಿಗೆ ಅದೇನು ಕಿವಿ ಊದಿದನೋ ಏನೊ, ನಿಷ್ಠಾವಂತ ನವೀನ್ ಜೋಸೆಫ್‌ಗೆ ಪ್ರಮೋಷನ್ ಕೊಟ್ಟಂತೆ ಕೊಡಿಸಿ ಸೀದಾ ಯಾದಗಿರಿಗೆ ಎತ್ತಂಗಡಿ ಮಾಡಿಸಿದ್ದ. ಅಲ್ಲಿಗೆ ತನ್ನ ಹೆಗಲೇರಿದ್ದ ಶನಿಯನ್ನು ಎತ್ತಿ ಬಿಸಾಡಿದೆ ಅಂತ ನಿಟ್ಟುಸಿರು ಬಿಟ್ಟಿದ್ದ ಮರೀಗೌಡನಿಗೆ ಡಿಸಿ ಶಿಖಾ ಮೇಡಮ್ ತನ್ನ ಪಾಲಿನ ದೊಡ್ಡ ಕಂಟಕವಾಗಲಿದ್ದಾರೆ ಅನ್ನೋ ಸಣ್ಣ ಅಂದಾಜೂ ಇರಲಿಲ್ಲ.

ನಖ್ರೋ ಅಂದರು ಶಿಖಾ·


ಮರೀಗೌಡನ ಅಟ್ಟಹಾಸ, ಭೂಮಾಫಿಯಾದ ಆರ್ಭಟ, ಸರ್ಕಾರಿ ಜಮೀನನ್ನು ಲಪಟಾಯಿಸುವ ಕೂಳಬಾಕತನವನ್ನು ಗಮನಿಸುತ್ತಲೇ ಬಂದಿದ್ದ ಡಿಸಿ ಮೇಡಮ್ ಶಿಖಾರಿಗೂ ಎನಫ್ ಈಸ್ ಎನಫ್ ಅನ್ನಿಸಿರಬೇಕು, ಮರೀಗೌಡನಿಗೆ ಪಾಠ ಕಲಿಸಲು ಸಜ್ಜಾಗಿ ನಿಂತರು. ಮರೀಗೌಡನ ಮಾತು ಕೇಳಿಕೊಂಡು ಸರ್ಕಾರ ಸುಖಾಸುಮ್ಮನೆ ಯಾದಗಿರಿಗೆ ವರ್ಗಾವಣೆ ಮಾಡಿದ್ದ ನವೀನ್ ಜೋಸೆಫ್‌ರನ್ನು ತಹಸೀಲ್ದಾರ್ ಹುದ್ದೆಯಿಂದ ರಿಲೀವ್ ಮಾಡಲು ಆಕೆ ಸುತಾರಾಂ ಒಪ್ಪಲಿಲ್ಲ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಮೈಸೂರು ಜಿಲ್ಲೆಗೆ ಮಂಜೂರಾಗಿರುವುದು ಒಟ್ಟು ಏಳು ತಹಸೀಲ್ದಾರ್ ಹುದ್ದೆಗಳು. ಅವುಗಳಲ್ಲಿ ನಾಲ್ಕು ಹುದ್ದೆಗಳು ಖಾಲಿಬಿದ್ದಿವೆ. ಅಂದರೆ ಇಡೀ ಮೈಸೂರು ಜಿಲ್ಲೆಗೆ ಮೂವರೇ ತಹಸೀಲ್ದಾರರು! ಇಂತಹ ಸಂದರ್ಭದಲ್ಲಿ ಬದಲೀ ಅಧಿಕಾರಿಯ ನಿಯೋಜನೆಯಿಲ್ಲದೆ ನವೀನ್ ಜೋಸೆಫ್‌ರನ್ನೂ ಸೇವೆಯಿಂದ ರಿಲೀವ್ ಮಾಡಿದರೆ ಕೇವಲ ಇಬ್ಬರು ತಹಸೀಲ್ದಾರರನ್ನು ಇಟ್ಟುಕೊಂಡು ನಾನು ಜಿಲ್ಲೆಯ ಆಡಳಿತವನ್ನು ನಿಭಾಯಿಸುವುದು ಹೇಗೆ? ಅನ್ನೋದು ಶಿಖಾ ಮೇಡಮ್ಮರ ನ್ಯಾಯಸಮ್ಮತ ವಾದ. ಅಲ್ಲದೇ, ಕಂಟೆಂಪ್ಟ್ ಕೇಸೊಂದರಲ್ಲಿ ನವೀನ್ ಜೋಸೆಫ್ ನ್ಯಾಯಾಲಯದ ಮುಂದೆ ಹಾಜರಾಗಬೇಕಿದೆ. ಇಂತಹ ಸಂದರ್ಭದಲ್ಲಿ ಅವರನ್ನು ರಿಲೀವ್ ಮಾಡಲು ಸಾಧ್ಯವಿಲ್ಲ ಅಂತ ಶಿಖಾ ಮೇಡಮ್ ಹಠ ಹಿಡಿದಿದ್ದರು. ಕಡೇಪಕ್ಷ ನವೀನ್ ಜಾಗಕ್ಕೆ ಬದಲೀ


ಮಂಡ್ಯ ಡಿಸಿ ಅಜಯ್ ನಾಗಭೂಷಣ್


ತಹಶೀಲ್ದಾರ್ ನವೀನ್ ಜೋಸೆಫ್

ಅಧಿಕಾರಿಯನ್ನು ಪೋಸ್ಟ್ ಮಾಡದ ಹೊರತು ರಿಲೀವ್ ಸಾಧ್ಯವಿಲ್ಲ ಎನ್ನುವ ಅವರ ವಾದದಲ್ಲೂ ಹುರುಳಿತ್ತು.

ಆದರೆ ದರ್ಪಿಷ್ಟ ಮರೀಗೌಡನಿಗೆ ಇದೆಲ್ಲ ಅರ್ಥವಾಗಬೇಕಲ್ಲ, ಆದಷ್ಟುಬೇಗ ನವೀನ್ ಜೋಸೆಫ್ ಮೈಸೂರಿನಿಂದ ತೊಲಗಬೇಕು, ಆತ ತನ್ನ ಮೇಲೆ ಹೇರಿರುವ ಕೇಸುಗಳನ್ನೆಲ್ಲಾ ವಾಪಾಸ್ ತೆಗೆಸಿಕೊಂಡು, ಒತ್ತುವರಿಗಳನ್ನೆಲ್ಲ ಸಕ್ರಮ ಮಾಡಿಸಿಕೊಂಡು ಆನಂತರ ಯಾವನೋ ಒಬ್ಬ ತಹಸೀಲ್ದಾರನನ್ನು ಹಾಕಿಸಿಕೊಳ್ಳಬೇಕು ಅನ್ನೋದಷ್ಟೇ ಅವನ ಲೆಕ್ಕಾಚಾರವಾಗಿತ್ತು. ಶಿಖಾ ಮೇಡಮ್ ಸೆಟೆದು ನಿಂತದ್ದು ಅವನ ಲೆಕ್ಕಾಚಾರವನ್ನೇ ಬುಡಮೇಲು ಮಾಡಿತು. 'ಎಲಾ ಇವ್ವಾ, ನನ್ನ ಮಾತ್ನೇ ಕೇಳಲ್ವಾ' ಅನ್ನೋ ಪಕ್ಕಾ ಪೊಲಿಟಿಕಲ್ ಸ್ಟೈಲಿನಲ್ಲಿ ಆಕೆಯ ಮೇಲೆ ದಾಳಿ ಮಾಡಿದ್ದಾನೆ. ಸಿಎಂ ಸಿದ್ದರಾಮಯ್ಯನವರ 'ಇಫ್ತಾರ್' ಕೂಟದ ಕೆಲವೇ ಕ್ಷಣ[illegible] ಮುನ್ನ ನಡೆದ ಇಡೀ ಹೈಡ್ರಾಮಾದ ಹೂರಣವೇ ಇದು!


ಮರೀಗೌಡನ ಭೂಮಾಫಿಯಾದ ಒಂದು ಸ್ಯಾಂಪಲ್

ಸಿದ್ದುಗೆ ಮುಗಿಬಿದ್ದ ಅಪವಾದ

'ನಾವು ಕೇವಲ ಪ್ರಾಮಾಣಿಕರಾಗಿದ್ದರೆ ಮಾತ್ರ ಸಾಲದು, ಪ್ರಾಮಾಣಿಕರು ಅಂತ ಸಾಬೀತು ಮಾಡಿ ತೋರಿಸಬೇಕು' ಅನ್ನೋ ಮಾತು ಇವತ್ತು ಸಿಎಂ ಸಿದ್ದರಾಮಯ್ಯರಿಗೆ ಹೇಳಿ ಮಾಡಿಸಿದಂತಿದೆ. ಯಾಕೆಂದರೆ, ಡಿಸಿ ಶಿಖಾ ಪ್ರಕರಣದಲ್ಲಿ ಮರೀಗೌಡನಿಗೆ ಸುತ್ತಿಕೊಂಡಷ್ಟೇ ಅಪವಾದ ಸಿದ್ದರಾಮಯ್ಯರನ್ನೂ ಮೆತ್ತಿಕೊಳ್ಳುತ್ತಿದೆ. ಮೊದಲನೆಯದಾಗಿ, ಮರೀಗೌಡನ ದಗಾಕೋರತನ, ನಯವಂಚಕತೆ ಗೊತ್ತಿದ್ದೂ ಆತ ತನ್ನ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ತಿಳಿದಿದ್ದೂ ಯಾಕೆ ಅಂತವನನ್ನು ಹತ್ತಿರದಲ್ಲಿಟ್ಟುಕೊಂಡಿದ್ದಾರೆನ್ನುವುದೇ ಯಕ್ಷಪ್ರಶ್ನೆ. ಸಿದ್ದು ಸಾಮೀಪ್ಯವನ್ನೇ ಆತ ತನ್ನ ದಂಧೆಯ ಬಂಡವಾಳವಾಗಿಸಿಕೊಳ್ಳುತ್ತಿರೋದು ನಗ್ನಸತ್ಯ.

ಇನ್ನು ಸ್ವತಃ ಸಿದ್ದರಾಮಯ್ಯನವರೇ ಈ ಪ್ರಕರಣದಲ್ಲಿ ತನಿಖೆಯನ್ನು ಮಂದಗತಿಯಲ್ಲಿ ನಡೆಸುವಂತೆ ಪೊಲೀಸರಿಗೆ ತಾಕೀತು ಮಾಡಿದ್ದಾರೆ, ಅಲ್ಲದೇ ಡಿಸಿ ಶಿಖಾ ಅವರ ಗಂಡ ಮಂಡ್ಯದ ಡಿಸಿ ಅಜಯ್ ನಾಗಭೂಷಣ್‌ರ ಮೇಲೆ ಒತ್ತಡ ತಂದು ಮಾತುಕತೆಯ ಮೂಲಕ ಬಗೆಹರಿಸಿ ಕೇಸ್ ವಾಪಾಸ್ ತೆಗೆಸಿಕೊಳ್ಳುವಂತೆ ಸೂಚನೆ ನೀಡಿದ್ದಾರೆ ಅನ್ನೋ ತರಹೇವಾರಿ ಅಪವಾದಗಳನ್ನೂ ಸಿದ್ದು ಮೇಲೆ ಹೊರಿಸಲಾಗುತ್ತಿದೆ. ಡಿಕೆ ರವಿ ಆತ್ಮಹತ್ಯೆ ಪ್ರಕರಣವಿರಬಹುದು, ತೀರ್ಥಹಳ್ಳಿ ನಂದಿತಾ ಆತ್ಮಹತ್ಯೆ ಪ್ರಕರಣವಿರಬಹುದು, ಪೊಲೀಸ್ ಲಾಟರಿ ಪ್ರಕರಣವಿರಬಹುದು, ಕೊನೆಗೆ ಕಾಗೆಮರಿ ಕಾರಿನ ಮೇಲೆ ಕೂತ ಪ್ರಕರಣವೇ ಇರಬಹುದು, ಹೀಗೆ ಸಿದ್ದು ಸಿಎಂ ಗಾದಿಗೇರಿದ ದಿನದಿಂದಲೂ ನಡೆಯುವ ಪ್ರತಿಯೊಂದು ವಿದ್ಯಮಾನವನ್ನೂ ಸಿಎಂ ಸುತ್ತ ಹಗರಣವಾಗಿಸಿ ಬಿಂಬಿಸುವ ವ್ಯವಸ್ಥಿತ ಹುನ್ನಾರ ನಡೆದುಕೊಂಡೇ ಬಂದಿದೆ. ಇಂಥಾ ಸಂದರ್ಭದಲ್ಲಿ ಡಿಸಿ ಶಿಖಾ ಪ್ರಕರಣದಲ್ಲಿ ಮರೀಗೌಡನ ನಂಟಿನ ನೆಪಕ್ಕೆ ಸಿದ್ದು ಮೇಲೆ ಹೊರಿಸುತ್ತಿರುವ ಅಪವಾದಗಳನ್ನೂ ಅನುಮಾನಿಸದೆ ವಿಧಿ ಇಲ್ಲ. ಇಂಥಾ ಸಮಯದಲ್ಲಿ ಜನ ಮತ್ತು ಸಿದ್ದು ಆಪ್ತ ಬಳಗ ಬಯಸುವುದು ಒಂದೇ. ಬಾಯ್ಮಾತಿನ ಹೊರತಾಗಿ ಮರೀಗೌಡನ ರಾದ್ಧಾಂತದಲ್ಲಿ ತಮ್ಮದೇನೂ ಪಾತ್ರವಿಲ್ಲ ಅನ್ನೋದನ್ನು ಸಾಬೀತು ಮಾಡುವ ಒಂದಷ್ಟು ದಿಟ್ಟ ನಿರ್ಧಾರಗಳನ್ನಷ್ಟೇ ಸಿದ್ದರಾಮಯ್ಯನವರಿಂದ ಜನ ಬಯಸುತ್ತಿರೋದು. ಮರೀಗೌಡ ಎಂಥಾ ದಗಲ್ಬಾಜಿ ಅಂತ ಸಾಬೀತಾಗಿರುವಾಗ ಆದಷ್ಟು ಬೇಗ ಅವನನ್ನು ಬಂಧಿಸುವಂತೆ ಪೊಲೀಸರಿಗೆ ತಾಕೀತು ಮಾಡುವುದು ಅವುಗಳಲ್ಲಿ ಒಂದು.

ಪತ್ರಿಕೆಗೆ ಲಭ್ಯವಾದ ಮಾಹಿತಿಯ ಪ್ರಕಾರ ಈಗಾಗಲೇ ಮೂರು ವರ್ಷಗಳಿಂದ ಮೈಸೂರಿನ ಡಿಸಿಯಾಗಿರುವ ಶಿಖಾ ಅವರನ್ನು ವರ್ಗ ಮಾಡಿ ಆ ಜಾಗಕ್ಕೆ ಮಂಗಳೂರಿನ ಡಿಸಿ ಎ.ಬಿ.ಇಬ್ರಾಹಿಂರನ್ನು ತರಲು ಸಿದ್ಧತೆ ನಡೆಸಲಾಗುತ್ತಿದೆಯಂತೆ. ಮರೀಗೌಡನ ರಾದ್ಧಾಂತ ನಡೆಯುವುದಕ್ಕೂ ಮುನ್ನ ಈ ದಸರಾ ಆಚರಣೆಗಳೆಲ್ಲ ಮುಗಿದನಂತರ ಈ ವರ್ಗಾವರ್ಗಿ ನಡೆಸಲು ತೀರ್ಮಾನಿಸಲಾಗಿತ್ತಂತೆ. ಆದರೆ ಈಗ ಅದಕ್ಕೂ ಮೊದಲೇ ಶಿಖಾ ಜಾಗಕ್ಕೆ ಇಬ್ರಾಹಿಂರನ್ನು ತರಲು ವಿಧಾನಸೌಧದ ಮಟ್ಟದಲ್ಲಿ ಫೈಲುಗಳು ಕದಲಾಡುತ್ತಿರುವ ಸಂಗತಿ ಕೇಳಿಬರುತ್ತಿದೆ. ಈ ಹಂತದಲ್ಲಿ ಅಂಥಾ ಅನಾಹುತಕ್ಕೇನಾದರು ಸಿದ್ದು ಕೈಹಾಕಿದರೆ ತಮ್ಮ ವರ್ಚಸ್ಸಿಗೆ ಬಹುದೊಡ್ಡ ಡ್ಯಾಮೇಜ್ ಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ. ಯಾವುದಕ್ಕೂ ಮರೀಗೌಡನೆಂಬ ಧೂಮಕೇತುವನ್ನು ನಿವಾರಿಸಿಕೊಳ್ಳಲು ಸಿದ್ದು ಈಗಲಾದರೂ ಸಿದ್ಧವಾಗಬೇಕಿದೆ.

○ ಗಿರೀಶ್ ತಾಳಿಕಟ್ಟೆ

ಮರೀಗೌಡನ ಮಂಗಾಟಗಳು

ಮರೀಗೌಡ ತನ್ನ ರಾಜಕೀಯ ಹಾದಿಯನ್ನು ಶುರು ಮಾಡಿದ್ದೇ ಸಿದ್ದು ವಿರೋಧಿಯಾಗಿ. 1983ರಲ್ಲಿ ಸಿದ್ದು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ ಮರೀಗೌಡ ಹಗಲು ಕೊಟ್ಟು ದುಡಿದದ್ದು ಪ್ರತಿಸ್ಪರ್ಧಿ ಜಯದೇವರಾಜು ಅರಸು ಪರವಾಗಿ. ಶಾಸಕನಾಗಿ ಜಯದೇವರಾಜು ಅರಸು ಮಾಡಿಕೊಂಡ ಯಡವಟ್ಟುಗಳ ಕಾರಣಕ್ಕೆ ಆ ಚುನಾವಣೆಯಲ್ಲಿ ಅವರ ವಿರುದ್ಧ ಅಲೆ ಎದ್ದಿತ್ತು, ಹಾಗಾಗಿ ಸಿದ್ದು ಗೆದ್ದು ಶಾಸನಸಭೆ ಪ್ರವೇಶಿಸಿದರು.


1985ರ ಚುನಾವಣೆಯಲ್ಲೂ ಈತ ಕಾಂಗ್ರೆಸ್‌ನ ಕಡಕೊಳದ ರಂಗನಾಯಕ ಅವರ ಪರವಾಗಿಯೇ ಕೆಲಸ ಮಾಡಿದ್ದ. ಆಮೇಲೆ ನ್ಯಾಯಬೆಲೆ ಅಂಗಡಿಯ ಮೂಲಕ ಸಣ್ಣಗೆ ವ್ಯವಹಾರ ಶುರು ಮಾಡಿದ ಮರೀಗೌಡ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿ ಚುನಾಯಿತನಾದ. ಅಲ್ಲಿಂದಾಚೆಗೆ ದಿಢೀರನೆ ಸಿದ್ದರಾಮಯ್ಯನ ಪಾಳೆಯಕ್ಕೆ ಜಂಪ್ ಮಾಡಿ ನಿಧಾನಕ್ಕೆ ಸಿದ್ದು ಆಪ್ತ ವಲಯಕ್ಕೇ ಲಗ್ಗೆಯಿಟ್ಟ. ಸಿದ್ದರಾಮಯ್ಯನ ಕೃಪಕಟಾಕ್ಷದಿಂದಲೇ 2000ರಲ್ಲಿ ಜಿಲ್ಲಾ ಪಂಚಾಯತ್ ಸದಸ್ಯನಾಗಿ ಆಯ್ಕೆಯಾದ. ನಂತರ ಸಿದ್ದರಾಮಯ್ಯ ಎಬಿಪಿಜೆಡಿ ರಚಿಸಿದಾಗಲೂ ಅವರ ಹಿಂದೆಯೇ ಅಲೆದು ಮತ್ತೆ ಜಿಲ್ಲಾ ಪಂಚಾಯತಿ ಎಲೆಕ್ಷನ್‌ನಲ್ಲಿ ಗೆದ್ದು ಜಿ.ಪಂ. ಅಧ್ಯಕ್ಷನೇ ಆಗಿಬಿಟ್ಟ. 2013ರ ಚುನಾವಣೆಯಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡರ ಜೊತೆ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್‌ನ ಸತ್ಯನಾರಾಯಣರ ಸಣ್ಣ ಸೋಲಿಗೂ ಕಾರಣನಾದ ಎನ್ನುವ ವದಂತಿಗಳಿವೆ.

ನಿಷ್ಠಾವಂತ ಕಾರ್ಯಕರ್ತರು, ಬೆಂಬಲಿಗರನ್ನೇ ಸಿದ್ದುವಿಂದ ದೂರ ಮಾಡಿ ತಾನೊಬ್ಬನೇ ಲಾಭ ಮಾಡಿಕೊಳ್ಳಬೇಕೆಂಬುದು ಅವನ ಲೆಕ್ಕಾಚಾರ. ವರುಣಾ ಹಾಗೂ ಚಾಮುಂಡೇಶ್ವರಿ ಕ್ಷೇತ್ರಗಳಲ್ಲಿ ತಕ್ಕಮಟ್ಟಿನ ಜನಬೆಂಬಲ ಹೊಂದಿರುವ ಮತ್ತು ಜನಸ್ನೇಹಿ ನಾಯಕ ಅಂತ ಕರೆಸಿಕೊಳ್ಳುವ ಬೀರಿಹುಂಡಿ ಬಸವಣ್ಣ ಸಿದ್ದು ಸಂಗ ತೊರೆದು ಜೆಡಿಎಸ್ ಸೇರುವುದಕ್ಕೂ ಈ ಮರೀಗೌಡನೇ ಕಾರಣ. ಹಿಂದೊಮ್ಮೆ ಬೀರಿಹುಂಡಿ ಬಸವಣ್ಣ ಸಿದ್ದರಾಮಯ್ಯನ ಅಪ್ಪಟ ಬೆಂಬಲಿಗರಲ್ಲಿ ಒಬ್ಬರಾಗಿದ್ದರು. ಬಸವಣ್ಣನ ಜನಪ್ರಿಯತೆಯನ್ನು ಸಹಿಸದ ಈತ ತನ್ನ ಚಾಡಿ ಬುದ್ಧಿಯ ಮೂಲಕ ಅವರಿಬ್ಬರ ನಡುವೆ ತಂದಿಡುವ ಕೆಲಸ ಮಾಡಿದ್ದ. ಬೇಸತ್ತ ಬಸಣ್ಣ ಸಿದ್ದು ಪಾಳೆಯ ತೊರೆದು ಜೆಡಿಎಸ್‌ನ ಜಿ.ಟಿ.ದೇವೇಗೌಡರ ಪಟಾಲಮ್ಮು ಸೇರಿಕೊಂಡಿದ್ದಾರೆ.

ಇವತ್ತು ತನ್ನನ್ನು ತಾನು ಸಿದ್ದರಾಮಯ್ಯನ ಪರಮಾಪ್ತ ಅಂತ ಬಿಂಬಿಸಿಕೊಳ್ಳುತ್ತಿರುವ ಮರೀಗೌಡ, ಸಿದ್ದುಗೆ ನಿಷ್ಠೆ ತೋರಿದ್ದು ತುಂಬಾ ಕಮ್ಮಿ. ಈಗ್ಗೆ ಏಳೆಂಟು ವರ್ಷಗಳ ಹಿಂದೆ ಬಯಲಾಗಿದ್ದ ಸಿಡಿ ಅವಾಂತರವೇ ಅದಕ್ಕೆ ಸಾಕ್ಷಿ. ಗೆಳತಿಯೊಬ್ಬಳ ಮನೆಯಲ್ಲಿ ಕುಡಿದು ಟೈಟಾಗಿದ್ದ ಮರೀಗೌಡ 'ಸಿದ್ದರಾಮಯ್ಯ ನನ್ನನ್ನು ಎಂಎಲ್‌ಎ ಮಾಡಲಿಲ್ಲ' ಅಂತೆಲ್ಲಾ ಸಿದ್ದುವನ್ನು ವಾಚಾಮಗೋಚರ ನಿಂದಿಸಿದ್ದಲ್ಲದೆ ಕುಡಿದ ಮತ್ತಿನಲ್ಲೇ ಗೆಳತಿಯ ಕಪಾಳಕ್ಕೇ ಬಾರಿಸಿದ ದೃಶ್ಯಗಳು ಅದರಲ್ಲಿದ್ದವು. ಕೊನೆಗೆ ಅದೇ ಹೆಂಗುಸು ಮರೀಗೌಡ ತನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ ಅಂತ ಮೈಸೂರಿನ ವಿಜಯನಗರದಲ್ಲೂ ದೂರು ದಾಖಲಿಸಿದ್ದಳು. ದಿನಪತ್ರಿಕೆಗಳಲ್ಲಿ ಧಾರಾವಾಹಿಯೋಪಾದಿಯಲ್ಲಿ ಬಿತ್ತರಗೊಂಡ ಆ ಪುರಾಣ ಕಿವಿಗೆ ಬೀಳುತ್ತಿದ್ದಂತೆಯೆ ಸಿದ್ದು ಕೆಂಡಮಂಡಲವಾಗಿದ್ದರು. ಕೆಲಕಾಲ ಅಜ್ಞಾತವಾಸದಲ್ಲಿದ್ದು ತಲೆಮರೆಸಿಕೊಂಡ ಮರೀಗೌಡ, ವಿಷಯ ತಣ್ಣಗಾಗುತ್ತಿದ್ದಂತೆಯೇ ಆ ಹೆಂಗುಸನ್ನು ಪುಸಲಾಯಿಸಿ, ಅವತ್ತಿನ ಇನ್ಸ್‌ಪೆಕ್ಟರ್ ಅರುಣ್‌ಗೌಡನನ್ನು ಕುದುರಿಸಿಕೊಂಡು ಸೀ ರಿಪೋರ್ಟ್ ಬರೆಸಿ ಕೈ ತೊಳೆದುಕೊಂಡಿದ್ದ. ಇಷ್ಟೆಲ್ಲಾ ಆದರೂ ಸಿದ್ದರಾಮಯ್ಯ ಇನ್ನೂ ಈ ಮರೀಗೌಡನನ್ನು ಆಪ್ತ ಬಳಗದಲ್ಲೇ ಉಳಿಸಿಕೊಂಡಿರೋದು ಯಾಕೆಂಬುದೇ ಗೊತ್ತಾಗುತ್ತಿಲ್ಲ.

ಕಲ್ಲಪ್ಪನ ಬಲಿ ಪಡೆಯಿತೆ

ಬೆಟ್ಟಿಂಗ್ ದಂಧೆ-ಭಜರಂಗಿ ದೋಸ್ತಿ?




ಕಲ್ಲಪ್ಪ ಹಂಡಿಭಾಗ

ಬೆಟ್ಟಿಂಗ್ ದಂಧೆಗೆ, ಅಕ್ರಮ ಫೈನಾನ್ಸ್ ಕಸುಬಿಗೆ ಮತ್ತೊಂದು ಹೆಣ ಬಿದ್ದಿದೆ. ಈ ಬಾರಿ ಡಿವೈಎಸ್ಪಿಯಂತಹ ಪೊಲೀಸ್ ಅಧಿಕಾರಿಯೇ ಬಲಿಯಾಗಿರುವುದು ದುರಂತ. ಚಿಕ್ಕಮಗಳೂರು ಡಿವೈಎಸ್ಪಿ ಕಲ್ಲಪ್ಪ ಹಂಡಿಭಾಗ ನೇಣು ಬಿಗಿದುಕೊಳ್ಳುವ ಮುನ್ನ ತುಸು ತಾಳ್ಮೆಯಿಂದ ಆಲೋಚಿಸಿದ್ದರೆ ಇಷ್ಟೊತ್ತಿಗಾಗಲೇ ಅದೆಂತೆಂತಹ ರಹಸ್ಯಗಳು ಬಯಲಾಗುತ್ತಿದ್ದವೋ ಏನೊ, ಆದರೀಗ ಭಾರೀ ತಿಮಿಂಗಿಲಗಳು ಎಸ್ಕೇಪ್ ಆಗಲು ಅವರೇ ಅವಕಾಶ ಮಾಡಿಕೊಟ್ಟು ಹೋಗಿದ್ದಾರೆ; ಜೊತೆಗೆ ಕೈಹಿಡಿದ ಹೆಂಡತಿ, ಎರಡು ವರ್ಷದ ಕಂದನನ್ನೂ ಅನಾಥವಾಗಿಸಿದ್ದಾರೆ.


ಇಲಾಖೆಯ ಒಳಗಾಗಲಿ, ಸಾರ್ವಜನಿಕರ ನಡುವೆಯಾಗಲಿ ಒಳ್ಳೆಯ ಹೆಸರು ಸಂಪಾದಿಸಿಕೊಂಡಿದ್ದ ಕಲ್ಲಪ್ಪನನ್ನು ಹತ್ತಿರದಿಂದ ಬಲ್ಲವರ ಪ್ರಕಾರ ಆತ ಅಂತಹ ಕರಾಳ ಕಸುಬುಗಳಿಗೆ ಕೈಹಾಕುವ ಆಸಾಮಿಯೇ ಅಲ್ಲ. ಜನ ತಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಕಲ್ಲಪ್ಪ ಹಂಡಿಭಾಗ ಬಳಿ ಹೋದಾಗ ಸೌಜನ್ಯದಿಂದ ಸಮಸ್ಯೆ ಆಲಿಸಿ, ಪರಿಹಾರ ದೊರಕಿಸಿಕೊಡುತ್ತಿದ್ದರು. ಯಾವುದಾದರೂ ಗಲಾಟೆ, ದೊಂಬಿ, ದ್ವೇಷದಂತಹ ವಿಚಾರಗಳು ಠಾಣೆ ಮೆಟ್ಟಿಲತ್ತಿದರೆ ಎರಡೂ ಕಡೆಯವರನ್ನು ಕರೆಸಿ ರಾಜೀ ಮಾಡಿಸಿ, ಒಟ್ಟಿಗೆ ಬದುಕುವುದನ್ನು ಹೇಳುತ್ತಿದ್ದರು. ಅವರ ಮಾತು ಒಬ್ಬ ಶಿಕ್ಷಕ ವಿದ್ಯಾರ್ಥಿಗಳಿಗೆ ಬುದ್ಧಿವಾದ ಹೇಳಿದ ರೀತಿ ಇರುತ್ತಿತ್ತು. ಅಂತಹದೇ ಜನಸ್ನೇಹಿ ಮಧ್ಯಸ್ಥಿಕೆ ವಹಿಸಲುಹೋಗಿ ಕಲ್ಲಪ್ಪ ತನ್ನ ಜೀವವನ್ನೇ ಬಲಿಕೊಟ್ಟರಾ ಎಂಬ ಅನುಮಾನ ಈಗ ದಟ್ಟವಾಗುತ್ತಿದೆ. ಏಕೆಂದರೆ ಭಜರಂಗದಳದ ಲೋಕಲ್ ಲೀಡರ್ ಕಂ ವಿಶ್ವ ಹಿಂದೂ ಪರಿಷತ್‌ನ ಶಿವಮೊಗ್ಗ ವಿಭಾಗೀಯ ಸಂಚಾಲಕ ಪ್ರವೀಣ್ ಖಾಂಡ್ಯನ ಜೊತೆಗಿನ ದೋಸ್ತಿ ಇದಕ್ಕೆ ಇಂಬು ನೀಡುತ್ತದೆ. ಇಡೀ ಕಿಡ್ನಾಪ್ ಪ್ರಕರಣದಲ್ಲಿ ತೇಜಸ್ ಗೌಡನೆಂಬ ಬೆಟ್ಟಿಂಗ್ ಆಸಾಮಿಯ ಹೊರತಾಗಿ ಜೋರಾಗಿ ಕೇಳಿಬರುತ್ತಿರುವ ಹೆಸರೇ ಈ ಖಾಂಡ್ಯನದು.

ಕಿಡ್ನ್ಯಾಪ್ ಹೈಡ್ರಾಮಾ


ಜುಲೈ 4ರಂದು ಚಿಕ್ಕಮಗಳೂರಿನ ಬಸವನಹಳ್ಳಿ ಪೊಲೀಸ್ ಸ್ಟೇಷನ್‌ನಲ್ಲಿ ಒಂದು ಕೇಸು ದಾಖಲಾಗುತ್ತದೆ. ದೂರು ಕೊಟ್ಟವನು ತೇಜಸ್ ಗೌಡ ಎಂಬಾತ. ದೂರು ದಾಖಲಾದದ್ದು ಡಿವೈಎಸ್ಪಿ ಕಲ್ಲಪ್ಪ ಹಂಡಿಭಾಗ್ ವಿರುದ್ಧ. ಇಡೀ ದೂರಿನ ಸಾರಾಂಶ ಇಷ್ಟು. ಜೂನ್ 28ರಂದು ಪ್ರವೀಣ್ ಖಾಂಡ್ಯ ತನ್ನ ನಾಲ್ಕೈದು ಸಹಚರರೊಂದಿಗೆ ತೇಜಸ್ ಗೌಡನನ್ನು ಅಪಹರಿಸುತ್ತಾನೆ. ಹಾಗೆ ಕಿಡ್ನ್ಯಾಪ್ ಮಾಡಿದವರು ಅವನನ್ನು ಸೀದಾ ಬೆಂಗಳೂರಿಗೆ ಕರೆತಂದು ನಾಯಿಗೂಡೊಂದರಲ್ಲಿ ಬಚ್ಚಿಡುತ್ತಾರೆ. ವ್ಯವಹಾರವೊಂದರ ಸಲುವಾಗಿ ಕಲ್ಮನೆ ಚಿಟ್‌ಫಂಡ್‌ನ ನಟರಾಜ್ ಎಂಬಾತನಿಗೆ ತೇಜಸ್ ಕೊಡಬೇಕಿದ್ದ ಇಪ್ಪತ್ತೈದು ಲಕ್ಷ ರೂಪಾಯಿ ಕೊಡುವಂತೆ ಬೆದರಿಸುತ್ತಾರೆ. ಅವರ ಟಾರ್ಚರ್ ತಾಳದೆ ತೇಜಸ್ ಕೊನೆಗೆ ಹತ್ತು ಲಕ್ಷ ತಲುಪಿಸುವುದಾಗಿ ಒಪ್ಪುತ್ತಾನೆ. ಮೊದಲು ಹಣ ಬಂದ ಮೇಲಷ್ಟೆ ನಿನ್ನ ಬಿಡುಗಡೆ ಮಾಡುತ್ತೇವೆ ಎನ್ನುವ ಅವರು ಮನೆಯವರಿಂದ ಹಣ ತರಿಸುವಂತೆ ತೇಜಸ್‌ಗೆ ಬೆದರಿಕೆ ಹಾಕುತ್ತಾರೆ. ಆಗ ತನ್ನ



ಭಜರಂಗಿ ಪ್ರವೀಣ್




ತೇಜಸ್ ಗೌಡ




ನಟರಾಜ್

ಸ್ನೇಹಿತ 'ಶೋ ಆಫ್' ಗಾರ್ಮೆಂಟ್ಸ್ ಮಾಲೀಕ ಶಿವು ಅಲಿಯಾಸ್ ಶಿವದತ್ತನಿಂದ ಹಣ ತರಿಸಿಕೊಂಡು ಪವನ್ ಅಲಿಯಾಸ್ ಡಕ್ಕನ ಮೂಲಕ ತಲುಪಿಸಲು ತೇಜಸ್ ಒಪ್ಪಿಸಿಕೊಳ್ಳುತ್ತಾನೆ. ಹಣವನ್ನು ಯಾರಿಗೆ, ಹೇಗೆ ತಲುಪಿಸಬೇಕೆಂಬ ಪ್ರಶ್ನೆ ಉದ್ಭವವಾದಾಗ ಪ್ರವೀಣ್ ಖಾಂಡ್ಯ ತನ್ನ ಸ್ನೇಹಿತ ಡಿವೈಎಸ್ಪಿ ಕಲ್ಲಪ್ಪ ಹಂಡಿಭಾಗ್‌ಗೆ ಹಣ ತಲುಪಿಸುವಂತೆ ಹೇಳಿ ಆತನ ಅಫಿಶಿಯಲ್ ಫೋನ್ ನಂಬರನ್ನೂ ಕೊಡುತ್ತಾನೆ. ಇತ್ತ ಹಣ ತಲುಪಿಸುವುದಕ್ಕಾಗಿ ಕಲ್ಲಪ್ಪನಿಗೆ ಫೋನಾಯಿಸುವ ಪವನ್ ತಮ್ಮ ಇಡೀ ಮೊಬೈಲ್ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುತ್ತಾನೆ. ಎರಡು ದಿನಗಳ ತರುವಾಯ ಅಪಹರಣಕಾರರಿಂದ ಬಿಡುಗಡೆಯಾಗುವ ತೇಜಸ್ ಗೌಡ ತನ್ನ ಗೆಳೆಯ ರೆಕಾರ್ಡ್ ಮಾಡಿಟ್ಟುಕೊಂಡಿದ್ದ ಧ್ವನಿಮುದ್ರಿಕೆಯ ಆಧಾರದಲ್ಲಿ ಡಿವೈಎಸ್ಪಿ ಕಲ್ಲಪ್ಪನ ವಿರುದ್ಧ ಕಿಡ್ನ್ಯಾಪ್ ಕೇಸು ಜಡಿದ.



ಸಿ.ಟಿ. ರವಿ



ಎಸ್.ಪಿ. ಸಂತೋಷ್ ಬಾಬು

ಪೊಲೀಸಪ್ಪನೇ ಕಿಡ್ನ್ಯಾಪ್ ಕೇಸ್‌ನಲ್ಲಿ ಸಿಲುಕಿದ ಸುದ್ದಿ ಸಿಕ್ಕ ತಕ್ಷಣವೇ ಟಿಆರ್‌ಪಿ ಮಾಧ್ಯಮಗಳು 'ಬ್ರೇಕಿಂಗ್' ನ್ಯೂಸ್ ಬಿತ್ತರಿಸಲು ಶುರು ಮಾಡಿದವು. ಮೊಬೈಲ್ ಮುದ್ರಿಕೆಯಲ್ಲಿ ಕೇಳಿದ ಧ್ವನಿಯನ್ನಷ್ಟೇ ಆಧಾರವಾಗಿಟ್ಟುಕೊಂಡು ಕಲ್ಲಪ್ಪನನ್ನು ಆರೋಪಿಯ ಸ್ಥಾನದಲ್ಲಿಟ್ಟು ತೀರ್ಪನ್ನು ನೀಡಿಬಿಟ್ಟವು. ಪ್ರತ್ಯಕ್ಷವಾದರೂ ಪ್ರಾಮಾಣಿಸಿ ನೋಡು ಎನ್ನುವ ಸಿಂಪಲ್ ವೃತ್ತಿಧರ್ಮವನ್ನು ಯಾವೊಂದು ಮಾಧ್ಯಮವೂ ಪ್ರದರ್ಶಿಸದಿದ್ದುದು ದುರಂತ. ಅಂತಹ ಕೆಲಸವನ್ನೇನಾದರು ಮೀಡಿಯಾಗಳು ಮಾಡಿದ್ದರೆ ಬೆಟ್ಟಿಂಗ್-ಚಿಟ್‌ಫಂಡ್ ದಂಧೆಯ ಆಳಗಲ, ಕಲ್ಲಪ್ಪನ ಪರೋಪಕಾರಿ ಗುಣವನ್ನು ವ್ಯವಸ್ಥಿತವಾಗಿ ಬಳಸಿಕೊಂಡ ವಿಚ್ಛಿದ್ರ ಶಕ್ತಿಗಳ ವ್ಯೂಹ ಬಯಲಾಗುತ್ತಿತ್ತು.

ಇಡೀ ಪ್ರಕರಣದಲ್ಲಿ ಹರಿದಾಡುತ್ತಿರುವ ತೇಜಸ್ ಗೌಡ, ಕಲ್ಮನೆ ಚಿಟ್‌ಫಂಡ್‌ನ ನಟರಾಜ್, ಬಜರಂಗ ದಳದ ಪ್ರವೀಣ್ ಖಾಂಡ್ಯ ಇವರ್ಯಾರೂ ಸಾಚಾ ಆದ್ಮಿಗಳಲ್ಲ. ಈ ಹಿಂದೆ ಹಲವು ಪ್ರಕರಣಗಳಲ್ಲಿ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದಂತವರು. ಕೇಸರಿ ಶೂರ ಪ್ರವೀಣ್ ಖಾಂಡ್ಯಾನದ್ದಂತೂ ಡೀಲ್‌ನದ್ದೇ ಕಸುಬು. ಫೈನಾನ್ಸ್, ಸೈಟು ವ್ಯವಹಾರ, ಬೆಟ್ಟಿಂಗ್, ಜೂಜುಗಳಲ್ಲಿ ಹಣದ ಡೀಲ್‌ಗಳನ್ನು ಕುದುರಿಸಿಕೊಟ್ಟು ಇಂತಿಷ್ಟು ಪರ್ಸೆಂಟೇಜ್ ಅಂತ ಪಡೆಯುವುದೇ ಅವನ ಕಾಯಕ. ಪ್ರವೀಣ್‌ನ ವಿರುದ್ಧ ಪೊಲೀಸ್ ಇಲಾಖೆಯಲ್ಲಿ ಹಲವು ಪ್ರಕರಣ ದಾಖಲಾಗಿದ್ದು, ಗಡಿಪಾರು ಯತ್ನಗಳೂ ನಡೆದಿದ್ದವು.

ಚಟದಾಸನಾಗಿರುವ ತೇಜಸ್ ಗೌಡ ಕ್ರಿಕೆಟ್ ಬೆಟ್ಟಿಂಗ್ ಆಡಲೆಂದು ಕಲ್ಮನೆ ಚಿಟ್‌ಫಂಡ್‌ನ ನಟರಾಜನ ಬಳಿ 25 ಲಕ್ಷ ರೂಪಾಯಿ ಸಾಲ ಮಾಡಿದ್ದ, ಆನಂತರ ಕೊಡದೆ ಸತಾಯಿಸುತ್ತಿದ್ದ. ಆಗ ನಟರಾಜ್ ತನಗೆ ತೇಜಸ್‌ನಿಂದ ದುಡ್ಡು ವಸೂಲಿ ಮಾಡಿಕೊಡುವಂತೆ ಡೀಲ್ ರಾಜ ಪ್ರವೀಣ್ ಖಾಂಡ್ಯನ ಬಳಿ ಹೋಗಿದ್ದಾನೆ. ಬಡಪೆಟ್ಟಿಗೆ ಬಗ್ಗದ ತೇಜಸ್‌ನನ್ನು ಕಿಡ್ನ್ಯಾಪ್ ಮಾಡಿಯೇ ಕಾಸು ವಸೂಲಿ ಮಾಡಬೇಕೆಂಬ ತೀರ್ಮಾನಕ್ಕೆ ಬಂದ ಪ್ರವೀಣ ಅದಕ್ಕೆ ಸ್ಕೆಚ್ ಹಾಕಿದ. ಆದರೆ ದುರದೃಷ್ಟಕ್ಕೆ ಇವರು ಕಿಡ್ನ್ಯಾಪ್ ಮಾಡಬೇಕೆನ್ನುವ ಒಂದು ದಿನ ಮೊದಲು ಅಂದರೆ ಜೂನ್ 27ರಂದು ಜೂಜಾಡುತ್ತಿದ್ದಾಗ ತೇಜಸ್ ಗೌಡ ಪೊಲೀಸರಿಂದ ಅರೆಸ್ಟ್ ಆಗಿದ್ದ. ಆಗ ಇದೇ ಪ್ರವೀಣ ಮತ್ತು ನಟರಾಜ್ ಅವನಿಗೆ ಬೇಲ್ ಕೊಟ್ಟು ಹೊರತಂದು ಅಪಹರಿಸುವ ಹೈಡ್ರಾಮಾ ಸೃಷ್ಟಿಸಿದ್ದರು.

ಚಿಕ್ಕಮಗಳೂರಿನಲ್ಲಿ ಐ.ಪಿ.ಎಲ್. ಬೆಟ್ಟಿಂಗ್ ದಂಧೆ, ಇಸ್ಪೀಟ್ ದಂಧೆ ಮನೆಮನೆಗಳಲ್ಲಿ ನಡೆಯುತ್ತಿದೆ. ಬೆಟ್ಟಿಂಗ್ ದಂಧೆಯಲ್ಲಿ ಚಿಕ್ಕಮಗಳೂರಿನ ಪ್ರತಿಷ್ಠಿತ ಕುಟುಂಬದ ಯುವಕರ ಜೊತೆಗೆ ಕಾಫಿ ಬೆಳೆಗಾರರ ಮಕ್ಕಳು, ಬಜರಂಗದಳ, ವಿ.ಹೆಚ್.ಪಿ. ಕೆಲವು ಮುಖಂಡರುಗಳು ಹಾಗೂ ಕೆಲವು ಪಕ್ಷದ ನಾಯಕರುಗಳ ಮಕ್ಕಳು ಈ ದಂಧೆಯಲ್ಲಿ ಪಾಲುದಾರರಾಗಿದ್ದಾರೆ ಎನ್ನುವ ಸುದ್ದಿ ನಗರದ ಸುತ್ತ ಹರಿದಾಡುತ್ತಿದೆ. ಈ ವಿಷಯ ತಿಳಿದಿದ್ದರೂ ಪೊಲೀಸ್ ವರಿಷ್ಠಾಧಿಕಾರಿ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿಂದೆ ಇದ್ದ ಪೊಲೀಸ್ ವರಿಷ್ಠಾಧಿಕಾರಿ ಚಿಕ್ಕಮಗಳೂರಿನ ಎಲ್ಲಾ ಕ್ಲಬ್‌ಗಳನ್ನು ಮುಚ್ಚಿಸಿದ್ದರು. ಈಗ ಎಲ್ಲಾ ಮನೆಮನೆಯೂ ಕ್ಲಬ್‌ನಂತಾಗಿರುವುದು ಬೇಸರದ ಸಂಗತಿಯಾಗಿದೆ. ಐಪಿಎಲ್ ಕ್ರಿಕೆಟ್ ಸಂದರ್ಭದಲ್ಲಿ ಬೆಟ್ಟಿಂಗ್ ದಂಧೆಕೋರರು ಬಾಂಬೆಯ ಕಿಂಗ್‌ಪಿನ್‌ಗಳನ್ನು ಕರೆಸಿ ದಂಧೆ ನಡೆಸುತ್ತಿದ್ದರು ಎನ್ನುವ ವಿಷಯ ನಗರದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಈ ವಿಷಯದಲ್ಲಿ ಚುನಾಯಿತ ಪ್ರತಿನಿಧಿಗಳು ಕೂಡ ಪಾಲುದಾರರಿದ್ದಾರೆ ಎನ್ನುವ ಸುದ್ದಿಯೂ ಇದೆ. ಕೆಲವು ಪಕ್ಷದ ಮುಖಂಡರುಗಳು, ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳು ಇದ್ದಾರೆ ಎನ್ನುವ ಮಾತು ಗಲ್ಲಿಗಲ್ಲಿಗಳಲ್ಲಿ ಹರಿದಾಡುತ್ತಿದೆ.

ವ್ಯೂಹದಲ್ಲಿ ಸಿಕ್ಕಿಬಿದ್ದ ಕಲ್ಲಪ್ಪ

ಕಲ್ಲಪ್ಪ ಹಂಡಿಭಾಗ ಸಾರ್ವಜನಿಕರ ಜೊತೆ ಹಾಗೂ ಕೆಳವರ್ಗದವರು, ದಲಿತರು, ತುಳಿತಕ್ಕೊಳಪಟ್ಟವರ ಬಗ್ಗೆ, ಜಾತಿ ಭೇದ, ಮತ ಭೇದ, ಧರ್ಮ ಭೇದ ಮಾಡದೇ ಸಹಜವಾಗಿ ನಡೆಸಿಕೊಳ್ಳುತ್ತಿದ್ದರು. ಕಲ್ಲಪ್ಪ ಜಾತಿಭೇದ ಮಾಡಿದ, ಯಾವುದೇ ವ್ಯಕ್ತಿಯ ಹತ್ತಿರ ಹಣ ತೆಗೆದುಕೊಂಡಿರುವ ಸುದ್ದಿ ಇಲ್ಲಿಯವರೆಗೂ ಇಲ್ಲ. ಕರಗಡ ಚಳವಳಿಯಲ್ಲಿ ನೀರಿಗಾಗಿ ಕಾಲ್ನಡಿಗೆ ಜಾಥಾ ಬರುವಾಗ ದಾರಿಯುದ್ದಕ್ಕೂ ಕಲ್ಲಪ್ಪ ಹೋರಾಟಗಾರರ ಮತ್ತು ಅಧಿಕಾರಿಗಳ ಸಹಮತ ತೆಗೆದುಕೊಂಡು ವಿವೇಕದಿಂದ ವರ್ತಿಸಿದ್ದಲ್ಲದೇ ಅಲ್ಲಲ್ಲಿ ದಣಿದವರಿಗೆ ಕಾಫಿ, ಟೀ, ಬಿಸ್ಕೆಟ್, ನೀರು ನೀಡುತ್ತಿದ್ದರು. ಆ ಭಾಗದ ನೂರಾರು ಹಳ್ಳಿಯ ಜನರು ಈಗಲೂ ಆತನನ್ನು ಸ್ಮರಿಸಿಕೊಳ್ಳುತ್ತಾರೆ.

ಇಲ್ಲಿ ಕಲ್ಲಪ್ಪ ತನಗರಿವಿಲ್ಲದೆ ಖೂಳರ ವ್ಯೂಹಕ್ಕೆ ಬಲಿಯಾಗಿರುವ ಸಾಧ್ಯತೆಯೇ ದಟ್ಟವಾಗಿ ಕಂಡುಬರುತ್ತಿದೆ. ಒಬ್ಬ ಪೊಲೀಸ್ ಅಧಿಕಾರಿ ತನ್ನ ವ್ಯಾಪ್ತಿಯ ಸಂಘ, ಸಂಸ್ಥೆಗಳ ಜೊತೆ ಬೆರೆತು ಕೆಲಸ ಮಾಡಬೇಕಿರುತ್ತದೆ. ಅಂತಹ ಸಮಯಗಳಲ್ಲಿ ಅವುಗಳ ಸಂಘಟಕರ ಪರಿಚಯ ಸಹಜವಾಗಿರುತ್ತದೆ. ಅದೇರೀತಿ ಬಜರಂಗದಳದ ಪ್ರವೀಣ್ ಖಾಂಡ್ಯನ ಪರಿಚಯವೂ ಇತ್ತು, ಆ ಪರಿಚಯವೇ ಅನೇಕ ಸಮಸ್ಯೆಗಳಿಗೆ ಕಾರಣವಾಗಿರಬಹುದು.


ಕಲ್ಲಪ್ಪನ ಜನಸ್ನೇಹಿ ಗುಣದ ಬಗ್ಗೆ ತಿಳಿದುಕೊಂಡಿದ್ದ ಪ್ರವೀಣ್ ನಿಧಾನಕ್ಕೆ ಆತನ ಆತ್ಮೀಯತೆ ಗಳಿಸಿಕೊಂಡು ತನ್ನ ಕಸುಬುಗಳಿಗೆ ಬಳಸಿಕೊಳ್ಳುವ ಹುನ್ನಾರ ಹೆಣೆದಿದ್ದಾನೆ. ಸಾಮಾನ್ಯವಾಗಿ ಯಾವುದೇ ವ್ಯಾಜ್ಯ ಅಥವಾ ಹಣದ ವ್ಯವಹಾರಗಳು ತಮ್ಮ ಠಾಣೆಯ ಮೆಟ್ಟಿಲು ಹತ್ತಿದಾಗ ಎರಡೂ ಕಡೆಯವರನ್ನು ಕರೆಸಿ ಮಾತಾಡಿ, ಬುದ್ಧಿ ಹೇಳಿ ಸೆಟ್ಲ್ ಮಾಡಿ ಕಳಿಸುತ್ತಿದ್ದ ಕಲ್ಲಪ್ಪನ ವೀಕ್ನೆಸ್ ಹಿಡಿದ ಖಾಂಡ್ಯ ತನ್ನ ಕಿಡ್ನ್ಯಾಪ್ ಪ್ರಕರಣಕ್ಕೂ ಅದನ್ನೇ ಬಂಡವಾಳ ಮಾಡಿಕೊಂಡಿರುವ ಸಾಧ್ಯತೆಯೇ ಹೆಚ್ಚು. ಯಾಕೆಂದರೆ, ಈಗ ಬಹಿರಂಗವಾಗಿರುವ ಮೊಬೈಲ್ ಸಂಭಾಷಣೆಯಲ್ಲಿ 'ಅವ್ರು ಎಷ್ಟು ಹೇಳಿದಾರೆ? ಟೆನ್ ಅಂತ ಹೇಳ್ತಾಗಿತ್ತು, ನೋಡಿ ಅದನ್ನ ಸೆಟ್ಲ್ ಮಾಡ್ಕೊಳ್ಳಿ' ಅಂತ ಕಲ್ಲಪ್ಪ ಹೇಳಿರೋದು ದಾಖಲಾಗಿದೆ. ಅದು ಯಾವ ವಿಷಯಕ್ಕೆ ಸಂಬಂಧಿಸಿದ ಸೆಟ್ಲ್‌ಮೆಂಟ್ ಅನ್ನೋದು ಗೊತ್ತಿಲ್ಲದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಯಾಕೆಂದರೆ ಮೊದಲೇ ಹೇಳಿದಂತೆ, ತನ್ನ ಕಚೇರಿಗೆ ಬರುತ್ತಿದ್ದ ಇಂತಹ ದೂರುಗಳನ್ನು ಹೀಗೆಯೇ ರಾಜಿ ಮೂಲಕ ಬಗೆಹರಿಸುತ್ತಿದ್ದ ಕಲ್ಲಪ್ಪ ಅದೇ ಧಾಟಿಯಲ್ಲಿ ಮಾತನಾಡಿರುವಂತಿದೆ. ಬಹುಶಃ ಪ್ರವೀಣ್ ಖಾಂಡ್ಯ ಯಾವುದೋ ಸಾಲದ ವ್ಯವಹಾರ ಬಗೆಹರಿಸಿಕೊಳ್ಳಲು ನಿಮ್ಮ ನೆರವು ಬೇಕಿದ್ದು, ಪೊಲೀಸರಾದರೆ ನಂಬಿಕೆ ಇರುತ್ತೆ ಅದ್ಕೆ ನಿಮ್ಮ ಬಳಿ ಹಣ ಕೊಟ್ಟುಹೋಗಲು ಹೇಳಿರುತ್ತೇನೆ, ಸಹಕರಿಸಿ ಅಂತ ಕಲ್ಲಪ್ಪನನ್ನು ಕೇಳಿಕೊಂಡಿರಬಹುದು. ಇಂತಹ ಕೃತ್ರಿಮ ವ್ಯೂಹಗಳ ಅರಿವಿಲ್ಲದ ಕಲ್ಲಪ್ಪ ಸ್ನೇಹಕ್ಕೆ ಕಟ್ಟುಬಿದ್ದು ಒಪ್ಪಿಕೊಂಡಿರಲೂಬಹುದು. ಇಡೀ ಸಂಭಾಷಣೆಯನ್ನು ಕೇಳಿಸಿಕೊಂಡ ನಂತರ ಕಲ್ಲಪ್ಪನಿಗೆ ಇಷ್ಟು ರಿಯಾಯಿತಿಯಂತೂ ಸಿಗಲೇಬೇಕು. ಆದರೆ ಮೀಡಿಯಾಗಳು ಅಂತಹ ರಿಯಾಯಿತಿಯ ಗೋಜಿಗೇ ಹೋಗದೆ ಏಕದಮ್ ತೀರ್ಪು ಬರೆದದ್ದು ಒಂದು ಸತ್ಯವನ್ನೇ ಕತ್ತುಹಿಸುಕಿ ಸಾಯಿಸಿದಂತಾಗಿದೆ.

ಎಸ್‌ಪಿ ಮೇಲೆ ಗುಮಾನಿ

ಕಲ್ಲಪ್ಪನ ಪ್ರಕರಣದಲ್ಲಿ ಚಿಕ್ಕಮಗಳೂರಿನ ಪೊಲೀಸ್ ಎಸ್‌ಪಿ ಸಂತೋಷ್ ಬಾಬು ಸುತ್ತಲೂ ಅನುಮಾನ ದಟ್ಟಗೊಳ್ಳುತ್ತಿದೆ. ಈ ಮೊದಲು ಚಿಕ್ಕಮಗಳೂರಿನಲ್ಲಿ ಬೆಟ್ಟಿಂಗ್, ಜೂಜಾಟ, ಫೈನಾನ್ಸ್ ದಂಧೆಗಳು ಈ ಪರಿ ಪತರುಗುಟ್ಟುತ್ತಿರಲಿಲ್ಲ, ಆದರೆ ಸಂತೋಷ್ ಬಾಬು ಜಿಲ್ಲೆಗೆ ಬಂದಮೇಲೆ ಅವುಗಳ ಹಾವಳಿ ಜಾಸ್ತಿಯಾಗುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಕಲ್ಲಪ್ಪ ಹಂಡಿಭಾಗ್ ಇಂತವುಗಳಿಗೆ ಮಣೆ ಹಾಕುತ್ತಿರಲಿಲ್ಲ, ಜೂಜು ಅಡ್ಡೆಗಳನ್ನು ನಿಷ್ಠೆಯಿಂದ ಮಟ್ಟ ಹಾಕುತ್ತಿದ್ದರು. ಈ ವಿಚಾರದಲ್ಲಿ ಪೊಲೀಸ್ ವರಿಷ್ಠಾಧಿಕಾರಿಗೂ, ಇವರಿಗೂ ಆಗಾಗ್ಗೆ ಮನಸ್ತಾಪಗಳು ನಡೆದಿದ್ದವು. ಈ ನಿಟ್ಟಿನಲ್ಲಿ ನೋಡಿದಾಗ ಕಲ್ಲಪ್ಪನ ಮಾವ ಸಿದ್ದರಾಯಪ್ಪ ಟೋಣ್ಣಿಯೇ ದೂರಿರುವಂತೆ ಎಸ್ಪಿ ಸಂತೋಷ್ ಬಾಬುವಿನ ಕಿರುಕುಳವೇ ಕಲ್ಲಪ್ಪನ ಆತ್ಮಹತ್ಯೆಗೆ ಕಾರಣ ಅನ್ನೋ ಆರೋಪವನ್ನು ತಳ್ಳಿಹಾಕಲಿಕ್ಕಾಗುವುದಿಲ್ಲ. ಸಿದ್ದರಾಯಪ್ಪ ಹೇಳುವಂತೆ "ನೀನು ಹಿಂದೆ ಮೇಷ್ಟ್ರಾಗಿದ್ದವನು. ನನ್ನೆದುರಿಗೆ ಕುಳಿತುಕೊಳ್ಳಲು ನಿನಗೆ ಯೋಗ್ಯತೆಯಿಲ್ಲ, ಸುಳ್ಳು ಕೇಸು ಹಾಕಿಸಿ ನಿನ್ನ ಮೇಲೆ ಕ್ರಮ ಕೈಗೊಳ್ತೀನೆ" ಅಂತ ಎಸ್‌ಪಿ ಧಮಕಿ ಹಾಕುತ್ತಿದ್ದರು ಅನ್ನೋದು ಎಷ್ಟು ಸತ್ಯವೋ, ಸುಳ್ಳೋ ಗೊತ್ತಿಲ್ಲ, ಆದರೆ ತನ್ನ ವಿರುದ್ಧ ಪ್ರಕರಣ ದಾಖಲಾದ ನಂತರ ಭೂಗತನಾಗಿದ್ದಾನೆ ಅಂತ ಪುಕಾರು ಹಬ್ಬಿಸಿದ್ದ ಕಲ್ಲಪ್ಪ ಹಂಡಿಭಾಗ್ ತನ್ನ ಮಾವನ ಮನೆ ಮುರಗೋಡಿಗೆ ಹೋಗುವುದಕ್ಕಿಂತ ಹಿಂದಿನ ದಿನ ಎಸ್‌ಪಿ ಕಚೇರಿಯಲ್ಲೇ ಬಹಳ ಹೊತ್ತು ಇದ್ದರು ಎನ್ನುವ ಸುದ್ದಿ ಪೊಲೀಸ್ ಇಲಾಖೆಯೊಳಗೇ ಹರಿದಾಡುತ್ತಿದೆ. ಈ ಸಂದರ್ಭದಲ್ಲಿ ಎಸ್ಪಿ ಸಂತೋಷ್ ಬಾಬು ಕಲ್ಲಪ್ಪನೊಂದಿಗೆ ಅನುಚಿತವಾಗಿ ವರ್ತಿಸಿದ್ದಲ್ಲದೇ ಮಾತಿನ ಭರಾಟೆಯ ಒಂದು ಹಂತದಲ್ಲಿ 'ನಿನಗೆ ಗುಂಡಿಕ್ಕಿ ಕೊಲ್ಲಬೇಕು' ಅಂತ ರೇಗಾಡಿದ್ದನ್ನು ಎಸ್‌ಪಿ ಕಚೇರಿಯ ಸಿಬ್ಬಂದಿಗಳು ಕೇಳಿಸಿಕೊಂಡಿದ್ದಾರೆ. ಕಲ್ಲಪ್ಪ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಿಳಿದ ತಕ್ಷಣ ಎಸ್‌ಪಿ ತಮ್ಮ ಕಚೇರಿ ಹೊಕ್ಕವರು ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ, ತುಂಬಾ ದಿಗ್ಭ್ರಾಂತರಾಗಿದ್ದರು, ಪೊಲೀಸ್ ಸಿಬ್ಬಂದಿಗಳನ್ನಲ್ಲದೆ ಬೇರೆ ಯಾರನ್ನೂ ಒಳಬಿಡದಂತೆ ತಾಕೀತು ಮಾಡಿದ್ದರು ಅಂತ ಮಾಧ್ಯಮಗಳಲ್ಲಿ ವರದಿಯಾಗಿದೆ. ಬಹುಶಃ ತಾನು ಮಾಡಿದ ಪ್ರಮಾದ, ಅವಾಂತರಕ್ಕೆ ಹೆದರಿ ಎಸ್‌ಪಿ ಆ ಥರ ನಡೆದುಕೊಂಡರೆ ಎಂಬ ಗುಮಾನಿ ಬಾರದಿರದು.


ಇಲ್ಲಿ ಇನ್ನೂ ಒಂದು ಇಂಟರೆಸ್ಟಿಂಗ್ ಸಂಗತಿಯಿದೆ. ಡಿ.ಕೆ. ರವಿಯವರ ಸಾವು, ಅನುಪಮ ಶೆಣೈ ವಿಚಾರಗಳಂತ ರಾಜ್ಯದ ಬೇರೆಬೇರೆ ಕಡೆ ನಡೆದ ಪ್ರಕರಣಗಳಲ್ಲಿ ಚಿಕ್ಕಮಗಳೂರಿನ ಶಾಸಕ ಸಿ.ಟಿ. ರವಿ ಸರ್ಕಾರದ ವಿರುದ್ಧ ಉದ್ದುದ್ದ ಭಾಷಣ ಬಿಗಿಯುತ್ತಾ ಮೀಡಿಯಾಗಳ ಮುಂದೆ ಫೋಜು ಕೊಡುತ್ತಿದ್ದ. ಆದರೆ ತನ್ನ ಸ್ವಂತ ಚಿಕ್ಕಮಗಳೂರಿನಲ್ಲೇ ಈ ಪರಿ ಅವಾಂತರವಾದರೂ ಇಲ್ಲಿಯವರೆಗೆ ಸರಿಯಾಗಿ ಪ್ರತಿಕ್ರಿಯಿಸುವ ಗೋಜಿಗೇ ಹೋಗಿಲ್ಲ, ನೆಪಕ್ಕೆಂಬಂತೆ ಹೇಳಿಕೆ ಕೊಡುವುದು ಬಿಟ್ಟು ಎಂದಿನ ರವಿ ವಿಜೃಂಭಿಸುತ್ತಿಲ್ಲ, ಏಕೆಂದರೆ ಸರಿಯಾದ ತನಿಖೆ ನಡೆದರೆ ತಮ್ಮವರೇ ಈ ಬಲೆಯೊಳಗೆ ಭದ್ರವಾಗಿ ಸಿಕ್ಕಿಬೀಳುತ್ತಾರೆ ಅನ್ನೋ ಭೀತಿ ಇರಬಹುದೇನೊ. ಒಟ್ಟಿನಲ್ಲಿ ಈ ಬೆಟ್ಟಿಂಗ್ ಭೂತಕ್ಕೆ ಇನ್ನೂ ಎಷ್ಟು ಜನ ಬಲಿಯಾಗಬೇಕೊ ಏನೊ....

ವರದಿಗಾರ




ಕಲ್ಲಪ್ಪ ಆತ್ಮಹತ್ಯೆ ಮಾಡಿಕೊಂಡ ಮುರಗೋಡು ಮನೆ

ಕೊಡಗು: ತಾವೇ ತೋಡಿದ ಗುಂಡಿಗೆ ಬಿದ್ದ ಚೆಡ್ಡಿಗಳ


ನಾಚಪ್ಪ

ಕೊಡಗು ಜಿಲ್ಲೆಯಲ್ಲಿ ಬಿಜೆಪಿ ವಾಸ್ತವವಾಗಿ ಗಟ್ಟಿಯಾಗಿಯೇನೂ ಇಲ್ಲ, ಹಲವು ತಂತ್ರಗಾರಿಕೆಗಳ ಮೂಲಕ ಕಳೆದ ಕೆಲವು ವರ್ಷಗಳಿಂದ ತನ್ನ ಸ್ಥಾನವನ್ನು ಭದ್ರವಾಗಿರಿಸಿಕೊಳ್ಳುತ್ತಾ ಬಂದಿದೆ. ಬಿಜೆಪಿಯ ಇಂತಹ ತಂತ್ರಗಾರಿಕೆಗೆ ಪ್ರತಿತಂತ್ರಗಾರಿಕೆ ಮಾಡುವ ಶಕ್ತಿ ಮತ್ತು ಇಂಗಿತ ಕಾಂಗ್ರೆಸಿನಲ್ಲಿ ಇಲ್ಲ. ಇದರ ಪರಿಣಾಮವಾಗಿ ಇಂತಹ ಕುತಂತ್ರಗಳು ಕೊಡಗಿನಲ್ಲಿ ಯಶಸ್ಸು ಕಾಣುತ್ತಿದೆ.



ಶಾಂತಿಯಿಂದ ಇದ್ದ ಕೊಡಗಿನಲ್ಲಿ ಅಶಾಂತಿಯ ಬೀಜವನ್ನು ಬಿತ್ತಿ ಈಗ ಕೈ ಕೈ ಹಿಸುಕಿಕೊಳ್ಳುತ್ತಿರುವ ಪರಿಸ್ಥಿತಿ ಬಿಜೆಪಿ ಹಾಗೂ ಸಂಘ ಪರಿವಾರಕ್ಕೆ ಕೊಡಗಿನಲ್ಲಿ ಆಗಿದೆ ಎಂದು ಖಡಾಖಂಡಿತವಾಗಿ ಹೇಳಬಹುದು. ಕೊಡಗು ಶಾಂತಿ, ಸೌಹಾರ್ದತೆಯ ಜಿಲ್ಲೆಯಾಗಿತ್ತು. ಆದರೆ ನೆರೆಯ ದಕ್ಷಿಣ ಕನ್ನಡದ ಪ್ರಯೋಗಗಳು ಹಲವು ಬಾರಿ ಸಂಘ ಪರಿವಾರದಿಂದ ಕೊಡಗಿನಲ್ಲಿ ಆಗಿ, ಕೊಡಗನ್ನೂ ಸಂಘ ಪರಿವಾರದ ಪ್ರಯೋಗಾಲಯವಾಗಿಸುವ ಚಟುವಟಿಕೆ ನಿಧಾನವಾಗಿಯಾದರೂ ನಿರಂತರವಾಗಿ ನಡೆಯುತ್ತಿದೆ. ಇದು ಬರೀಗಣ್ಣಿಗೆ ಕಾಣುವ ವಿಚಾರವಲ್ಲ, ಸೂಕ್ಷ್ಮವಾಗಿ ಇದನ್ನು ಗಮನಿಸಿದರೆ ಮಾತ್ರ ಈ ವಿಚಾರ ತಿಳಿಯುತ್ತದೆ.

ಬಾಬಾಬುಡನ್‌ಗಿರಿ ಹೇಗೆ ಸಿ.ಟಿ.ರವಿಯನ್ನು ಶಾಸಕನ್ನಾಗಿಸಿತ್ತೋ, ಅದೇ ರೀತಿ ಪಾಕಿಸ್ತಾನ ಧ್ವಜಾ ಪ್ರಕರಣ ಮತ್ತು ಪಾಲೂರು ದೇವಾಲಯ ಧ್ವಂಸ ಪ್ರಕರಣ ಅಪ್ಪಚ್ಚು ರಂಜನ್ ಹಾಗೂ ಕೆ.ಜಿ. ಬೋಪಯ್ಯನವರನ್ನು ಶಾಸಕರನ್ನಾಗಿಸಿತ್ತು. ಈಗಲೂ ಇವರು ಶಾಸಕರಾಗಿಯೇ ಮುಂದುವರೆದಿದ್ದಾರೆ. ಆದರೆ ಬಿಜೆಪಿಯ ಒಳಜಗಳ ಮತ್ತು ಸಂಘ ಪರಿವಾರದ ಅವಕೃಪೆಗೆ ಈ ಶಾಸಕರುಗಳು ಒಳಗಾಗಿರುವುದರಿಂದ ಮತ್ತೆ ಇಂತಹ ಪ್ರಯೋಗಗಳಿಗೆ ಕೊಡಗು ಜಿಲ್ಲೆ ಅಣಿಯಾಗುತ್ತಿದೆ ಮತ್ತು ಬಲಿಯಾಗುತ್ತಿದೆ. ಮುಗ್ಧ ಜನರನ್ನು ಹಾದಿ ತಪ್ಪಿಸುವ ಕೆಲಸ ವ್ಯವಸ್ಥಿತವಾಗಿ ಆಗುತ್ತಿದೆ. ಇದನ್ನು ಹಲವರು ಹಲವು ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದರೂ, ಇದರ ಹಿಂದೆ ಇರುವಂತಹ ಷಡ್ಯಂತ್ರ ಬಿಜೆಪಿಯು ಕುಗ್ಗುತ್ತಿರುವ ಜನಪ್ರಿಯತೆಯನ್ನು ಊಹಿಸಿಕೊಳ್ಳುವ ಯತ್ನ ಹಾಗೂ ಹಾಲಿ ಜನಪ್ರತಿನಿಧಿಗಳ ಬಗ್ಗೆ ಅಸಮಾಧಾನ ಪಕ್ಷದವರಿಂದಲೇ ಆಗಿ, ಮುಂದಿನ ಚುನಾವಣೆಯ ವೇಳೆಗೆ ಅಭ್ಯರ್ಥಿಗಳ ಬದಲಾವಣೆ ಎನ್ನುವುದು ಖಚಿತ.

ದುರಂತವೆಂದರೆ ಇದರ ಲಾಭವನ್ನು ಪಡೆದುಕೊಳ್ಳಲು ಜಿಲ್ಲೆಯಲ್ಲಿರುವ ಏಕೈಕ ಪಕ್ಷವಾದ ಕಾಂಗ್ರೆಸ್ ನಿರ್ಜೀವ ಅಥವ ನಿರ್ವೀರ್ಯ ಆಗಿರುವುದು. ರಂಜಾನ್ ತಿಂಗಳು ಬರುತ್ತಿದ್ದಂತೆ ಕೊಡಗಿನಲ್ಲಿ ಒಂದಲ್ಲ ಒಂದು ರೀತಿಯ ಕೋಮು ಪ್ರಚೋದನೆಯ ಘಟನೆಗಳು ನಡೆಯುತ್ತಲೇ ಇರುತ್ತದೆ. ಕಳೆದ ಸಾಲಿನಲ್ಲಿ ಮಕ್ಕಂದೂರು ಗ್ರಾಮದಲ್ಲಿ ಸುಬ್ರಹ್ಮಣ್ಯ ದೇವಾಲಯವನ್ನು ಕೆಡವಲಾಗಿದೆ ಎಂದು ಖಾಸಗಿ ಜಾಗದಲ್ಲಿ ಇದ್ದಂತಹ ಖಾಸಗಿ ಗುಡಿಯ ಬಗ್ಗೆ ಖ್ಯಾತೆ ತೆಗೆದಿದ್ದರು. ಅಲ್ಲಿನ ನಿವಾಸಿ ತಾನು ಜಾಗ ಮಾರುವಾಗ ತಾನೇ ಸ್ವತಃ ಗುಡಿಯನ್ನು ತೆರವುಗೊಳಿಸಿ, ಅದನ್ನು ಲಿಖಿತವಾಗಿ ಪೊಲೀಸ್ ಹಾಗೂ ಕಂದಾಯ ಇಲಾಖೆಗೆ ತಿಳಿಸಿ, ಅಲ್ಲಿದ್ದ ಸಾಮಗ್ರಿಗಳನ್ನು ಪಳನಿಗೆ ಒಪ್ಪಿಸಿ, ಜಾಗ ಮಾರಾಟ ಮಾಡಿದ್ದರು. ಖರೀದಿದಾರರು ಮುಸಲ್ಮಾನರು ಎಂಬ ಕಾರಣಕ್ಕೆ ಈ ವಿವಾದವನ್ನು ಸೃಷ್ಟಿಸಲಾಗಿತ್ತು. ಜೊತೆಗೆ ಇದಕ್ಕಾಗಿ ರಂಜಾನ್ ತಿಂಗಳನ್ನೇ ಆಯ್ಕೆ ಮಾಡಲಾಗಿತ್ತು. ಜಿಲ್ಲಾಡಳಿತ ಇಲ್ಲಿ ದೇವಾಲಯ ನಿರ್ಮಾಣಕ್ಕೆ ಬದಲಿ ಜಾಗ ನೀಡುವ ಬಗ್ಗೆ ಪ್ರಸ್ತಾಪಿಸಿದ ನಂತರ, ಈ ವಿಚಾರವೇ ಈಗ ಸತ್ತುಹೋಗಿದೆ. ಸುಬ್ರಹ್ಮಣ್ಯ ದೇವಾಲಯದ ವಿಚಾರ ಈಗ ಇಲ್ಲ.

ಈಗ ಹುಟ್ಟಿಕೊಂಡದ್ದು ಟಿಪ್ಪು ಜನ್ಮ ದಿನಾಚರಣೆ ಹಾಗೂ ಟಿಪ್ಪು ಕೊಡವ ಜನಾಂಗದವರನ್ನು ಕೊಂದಿದ್ದಾನೆ ಎಂದು ಹೇಳಿ, ಕೊಡಗಿನ ಸಂಘಟನೆಯೊಂದಾದ, ಒಂದು ಕಾಲದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಅದಕ್ಕೆ ಸಾಕಷ್ಟು ಮನ್ನಣೆ ಸಿಗದಿದ್ದಾಗ, ವರ್ಷಕ್ಕೊಂದು ಹೊಸ ಯೋಜನೆಯನ್ನು ರೂಪಿಸುತ್ತಾ ಬರುತ್ತಿರುವ ಎನ್.ಯು. ನಾಚಪ್ಪನವರ ಸಿಎನ್‌ಸಿ ಸಂಘಟನೆ. ಸಾಕಷ್ಟು ವೇಷಗಳನ್ನು ಹಾಕಿ, ಯಶ ಕಾಣದಿದ್ದಾಗ ಹೊಸದಾಗಿ ನಾಚಪ್ಪಗೆ ಹೊಳೆದದ್ದು ದೇವಟ್‌ಪರಂಬು ಎಂಬ ವಿಚಾರ. ದೇವಟ್‌ಪರಂಬು ಎಂದರೆ ದೇವರ ಅಥವ ದೇವಾಲಯದ ಮೈದಾನ ಎಂಬುದಾಗಿದೆ. ಭಾಗಮಂಡಲದ ಭಗಂಡೇಶ್ವರ ದೇವಾಲಯ ಮುಂಭಾಗದಲ್ಲಿ ಸಣ್ಣದೊಂದು ಮೈದಾನವಿದೆ. ವಾಸ್ತವದಲ್ಲಿ ಅದು ದೇವಟ್‌ಪರಂಬು ಆಗಿರಬೇಕು. ಅಲ್ಲಿ ಕಲ್ಲಿನ ಆನೆಯ ವಿಗ್ರಹ ಭಗ್ನವಾಗಿದ್ದು ಅದು ಟಿಪ್ಪುವಿನ ಯುದ್ಧದಿಂದ ಆದಂತಹ ಭಗ್ನ ಎಂದು ಇತಿಹಾಸ ಹೇಳುತ್ತದೆ. ಹಾಗಾಗಿ ಒಂದು ವೇಳೆ ಯುದ್ಧ ನಡೆದಿದ್ದರೆ, ಅಲ್ಲೇ ಯುದ್ಧ ನಡೆದಿರಬೇಕು.


ಕೊಡಗು ಜಿಲ್ಲೆಯಲ್ಲಿ ಬಿಜೆಪಿ ವಾಸ್ತವವಾಗಿ ಗಟ್ಟಿಯಾಗಿಯೇನೂ ಇಲ್ಲ, ಇಂತಹ ಹಲವು ತಂತ್ರಗಾರಿಕೆಗಳ ಮೂಲಕ ಕಳೆದ ಕೆಲವು ವರ್ಷಗಳಿಂದ ತನ್ನ ಸ್ಥಾನವನ್ನು ಭದ್ರವಾಗಿರಿಸಿಕೊಳ್ಳುತ್ತಾ ಬಂದಿದೆ. ಬಿಜೆಪಿಯ ಇಂತಹ ತಂತ್ರಗಾರಿಕೆಗೆ ಪ್ರತಿತಂತ್ರಗಾರಿಕೆ ಮಾಡುವ ಶಕ್ತಿ ಮತ್ತು ಇಂಗಿತ ಕಾಂಗ್ರೆಸಿನಲ್ಲಿ ಇಲ್ಲ. ಇದರ ಪರಿಣಾಮವಾಗಿ ಇಂತಹ ಕುತಂತ್ರಗಳು ಕೊಡಗಿನಲ್ಲಿ ಯಶಸ್ಸು ಕಾಣುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿಎನ್‌ಸಿ ಸಂಘಟನೆಯನ್ನು ಬಿಜೆಪಿ ಬಹಿರಂಗವಾಗಿಯೇ ಬಳಸಿಕೊಂಡಿತ್ತು. ಈ ಸಂಘಟನೆಯ ವ್ಯಕ್ತಿಯೊಬ್ಬನನ್ನು ಸಿಡಿದೇಳುವಂತೆ ಮಾಡಿ, ಕಾಂಗ್ರೆಸಿಗರು ಮತ್ತು ಡೋಂಗಿ ಪರಿಸರವಾದಿಗಳು ಒಟ್ಟಾಗಿ ಸೇರಿ, ಯುಕೋ ಎಂಬ ಸಂಘಟನೆಯನ್ನು ಹುಟ್ಟು ಹಾಕಲು ಶಕ್ತರಾದರು. ಇದಕ್ಕೆ ಸಿಎನ್‌ಸಿಯಿಂದ ಹೊರಬಂದ ಮಂಜು ಎಂಬ ವ್ಯಕ್ತಿಯನ್ನು ಮುಖ್ಯಸ್ಥನನ್ನಾಗಿಸಿದರು. ಎಷ್ಟೇ ಪ್ರಯತ್ನಪಟ್ಟರೂ ಡೋಂಗಿ ಪರಿಸರವಾದಿಗಳಿಗೂ, ಯುಕೋ ಸಂಘಟನೆಗೂ ಕಾಂಗ್ರೆಸನ್ನು ಗೆಲ್ಲಿಸಲು ಸಾಧ್ಯವಾಗಲಿಲ್ಲ. ಬಿಜೆಪಿಗೆ ನಾಚಪ್ಪ ಮತ್ತು ಸಿಎನ್‌ಸಿ ಸಂಘಟನೆಯ ಋಣ ತೀರಿಸುವ ಜವಾಬ್ದಾರಿ ಇತ್ತು. ಹಾಗಾಗಿ ದೇವಟ್‌ಪರಂಬು ವಿವಾದಕ್ಕೆ ಕಿಚ್ಚು ಹತ್ತಿಸುವ ಕಾರ್ಯಕ್ಕೆ ಬಿಜೆಪಿ ಕೈಹಾಕಿತು.

ದೇವಟ್‌ಪರಂಬು ವಿವಾದ ಏನು?

ಕೊಡಗು ಜಿಲ್ಲೆಯಲ್ಲಿ ಮಳೆಗಾಲದಲ್ಲಿಯೂ ಬಿಸಿಯಾದ ವಾತಾವರಣವನ್ನು ಸೃಷ್ಟಿಸಿರುವ ಮತ್ತು ಹೊರ ಜಿಲ್ಲೆಗಳಿಗೆ ಈ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ ಇರುವಂತಹ ವಿವಾದ ದೇವಟ್‌ಪರಂಬು ಎಂಬ ವಿವಾದವಾಗಿದೆ. ಕೊಡಗಿನ ಶೇ. 95 ಜನರು ಕೇಳದೆ ಇದ್ದಂತಹ ಹೆಸರು ದೇವಟ್‌ಪರಂಬು. ಕೊಡವರು ಕೂಡ ಶೇ. 95ರಷ್ಟು ಈ ಹೆಸರನ್ನು ಈ ಹಿಂದೆ ಕೇಳಿರಲಿಲ್ಲ. ಆದರೆ ಈಗ ಪ್ರತಿನಿತ್ಯ ಇದು ಪ್ರತಿಧ್ವನಿಸುತ್ತಿದೆ.

ಕಳೆದ ನವೆಂಬರ್ 10ರಂದು ಕರ್ನಾಟಕ ರಾಜ್ಯ ಸರಕಾರವು ಟಿಪ್ಪು ಜನ್ಮ ದಿನಾಚರಣೆಯನ್ನು ಅಧಿಕೃತವಾಗಿ ಸರಕಾರದ ವತಿಯಿಂದ ಆಚರಿಸಬೇಕೆಂದು ಆದೇಶ ಹೊರಡಿಸಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿದವರು ಕೊಡಗಿನ ಬಿಜೆಪಿ ಶಾಸಕರುಗಳಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್ ಹಾಗೂ ಸಂಸದ ಪ್ರತಾಪ ಸಿಂಹ. ಇವರು ಮೂವರು ಒಟ್ಟಾಗಿ ಸೇರಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಟಿಪ್ಪು ಜನ್ಮ ದಿನಾಚರಣೆಯನ್ನು ಕೊಡಗಿನಲ್ಲಿ ಯಾವುದೇ ಕಾರಣಕ್ಕೂ ನಡೆಸಲು ಬಿಡುವುದಿಲ್ಲ ಎಂದು ಹೇಳಿ, ಕೊಡಗು ಬಂದ್‌ಗೆ ಕರೆ ನೀಡಿದ್ದಲ್ಲದೆ, ಕರಾಳ ದಿನ ಆಚರಣೆಗೂ ಕರೆ ನೀಡಿದ್ದರು. ಕಾಂಗ್ರೆಸ್ ಪಕ್ಷ ಅಧಿಕಾರರೂಢ ಪಕ್ಷವಾಗಿದ್ದರೂ, ಜಿಲ್ಲೆಯ ಕಾಂಗ್ರೆಸ್ ನಾಯಕತ್ವವನ್ನು ವಹಿಸಿಕೊಂಡಿರುವವರು ಮತ್ತು ಮುಂಚೂಣಿಯಲ್ಲಿ ಇರುವವರು ಕಮಲ ಕಾಂಗ್ರೆಸಿಗರಾದ ಕಾರಣ ಅವರು ಪರೋಕ್ಷವಾಗಿ ಬಿಜೆಪಿಯ ಜೊತೆಯಲ್ಲಿ ಕೈಜೋಡಿಸಿದ್ದರು. ಇದರಿಂದಾಗಿ ಕೊಡಗು ಜಿಲ್ಲೆಯಲ್ಲಿ ಗಲಭೆಗಳು ಉಂಟಾಗಿ, ವಿಶ್ವ ಹಿಂದೂ ಪರಿಷತ್ತಿನ ಕುಟ್ಟಪ್ಪ ಜನಜಂಗುಳಿಯಲ್ಲಿ ಬಿದ್ದು ಸತ್ತರೆ, ಅದಕ್ಕೆ ಪ್ರತೀಕಾರವಾಗಿ ಶಾಹುಲ್ ಹಮೀದ್ ಎಂಬ ಅಮಾಯಕ ಗುಂಡೇಟಿಗೆ ಬಲಿಯಾಗಿದ್ದ. ಕೊಡಗು ಬಹುತೇಕ ಹೊತ್ತಿ ಉರಿದಿತ್ತು. ಇದರಿಂದಾಗಿ ಕಂಡುಬಂದ ಅಂಶವೇನೆಂದರೆ, ವಿಧ್ವಂಸಕ ಕೃತ್ಯಗಳನ್ನು ಎಸಗಲು ಶತ್ರುಗಳು ಕೂಡ ಒಂದಾಗುತ್ತಾರೆ ಎಂಬುದಾಗಿದೆ. ಪ್ರತಾಪ ಸಿಂಹ ಮತ್ತು ಬೋಪಯ್ಯನವರ ಸಂಬಂಧ ಹಾವು ಮುಂಗುಸಿಯಂತಹದ್ದು. ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರ ವಿರೋಧಿ ಸಿದ್ಧಾಂತಗಳನ್ನು ಕಾಗದದಲ್ಲಿ ಇಟ್ಟುಕೊಂಡಿರುವಂತಹ ಪಕ್ಷಗಳು. ಇವರೆಲ್ಲರೂ ಒಂದಾಗಿದ್ದು ವಿಧ್ವಂಸಕ ಕೃತ್ಯಕ್ಕೆ.

ಇದಕ್ಕೂ ಮುನ್ನ ಸಿಎನ್‌ಸಿಯ ನಾಚಪ್ಪ ತನ್ನ ಹಿಂದಿನ ವರ್ಷದ ಯೋಜನೆ ಸಫಲವಾಗದಿದ್ದಾಗ ಹಾಗೂ ಬಿತ್ತಿದ ಬೀಜ ಫಸಲು ಕೊಡದಿದ್ದಾಗ, ದೇವಟ್‌ಪರಂಬು ಎಂಬ ಹೊಸ ಒಂದು ಕಾರ್ಯಕ್ರಮವನ್ನು ರೂಪಿಸಿದರು. ಟಿಪ್ಪು ಸುಲ್ತಾನ್ ದೇವಟ್‌ಪರಂಬು ಎಂಬ ಪ್ರದೇಶದಲ್ಲಿ 60,000 ಕೊಡವರನ್ನು ಹತ್ಯೆಗೈದಿದ್ದು, ಅದಕ್ಕಾಗಿ ಅಲ್ಲಿ ಒಂದು ಸ್ಮಾರಕವನ್ನು ತಾನು ನಿರ್ಮಿಸುತ್ತಿದ್ದೇನೆ ಎಂದು ಹೇಳಿಕೊಂಡು,



ಸಣ್ಣಪುಲಿಕೋಟು ಎಂಬ ಪ್ರದೇಶದಲ್ಲಿ ಒಂದು ಪು[illegible] ಕಲ್ಲನ್ನು ಸ್ಥಾಪಿಸಿದರು. ಅಲ್ಲಿ ಎಡೆ ಇಡುವ ಕಾರ್ಯಕ್ರಮವ[illegible] ಒಂದೆರಡು ಬಾರಿ ನಡೆಸಲಾಯಿತು. ಆ ಭಾಗದಲ್ಲಿ ಹೆಚ್ಚ[illegible] ಸಂಖ್ಯೆಯಲ್ಲಿ ಮುಸ್ಲಿಮರೇ ವಾಸಿಸುತ್ತಿದ್ದು ಅಲ್ಲಿ ಮುಸ್ಲಿಮರ[illegible] ವರ್ಜ್ಯವಾದ ಹಂದಿ ಮಾಂಸ ಮತ್ತು ಮದ್ಯವನ್ನು ಎ[illegible] ಇಡಲು ಬಳಸುತ್ತಿದದ್ದು ಅಲ್ಲಿಯ ಜನರಿಗೆ ಸಹಿಸಲಾಗ[illegible] ವಿಚಾರವಾಗಿತ್ತು. ಹಾಗಾಗಿ ಅವರಲ್ಲಿದ್ದ ಕೆಲವು ಬುದ್ಧಿವಂತರ[illegible] ನಾಚಪ್ಪನನ್ನು ಭೇಟಿಯಾಗಿ, ಈಗ ಕಲ್ಲು ನೆಟ್ಟಿರುವ ಜಾ[illegible] ದೇವಟ್‌ಪರಂಬು ಅಲ್ಲ, ಅದು ಬೇರೆಯೇ ಪ್ರದೇಶ ಎಂ[illegible] ಹೇಳಿ, ಅಲ್ಲಿಂದ ಸುಮಾರು 6 ಕಿ.ಮೀ. ದೂರದ[illegible] ಮೀಸಲು ಅರಣ್ಯ ಪ್ರದೇಶವೊಂದರಲ್ಲಿ ಸಮತಟ್ಟ[illegible] ಜಾಗವೊಂದನ್ನು ಆತನಿಗೆ ತೋರಿಸಿದರು. ಜನರ[illegible] ಇಲ್ಲದಿದ್ದಂತಹ ಈ ಪ್ರದೇಶ ಮತ್ತು ಭಾಗಮಂಡಲ[illegible] ಸುಮಾರು 8 ಕಿ.ಮೀ. ದೂರದಲ್ಲಿ ಇದ್ದಂತಹ ಈ ಪ್ರದೇಶ[illegible] ತನ್ನ ಕಾರ್ಯಕ್ಕೆ ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂ[illegible] ನಾಚಪ್ಪ ಅಲ್ಲಿ ಮತ್ತೊಂದು ಕಲ್ಲನ್ನು ಸ್ಥಾಪಿಸಿದ. ಇದ[illegible] ವಿವಾದಕ್ಕೆ ಕಾರಣವಾಯಿತು.


ಮೀಸಲು ಅರಣ್ಯದಲ್ಲಿ ಸ್ಮಾರಕ

ಹೊಸದಾಗಿ ಯಾವ ಪ್ರದೇಶದಲ್ಲಿ ಸ್ಮಾರ[illegible] ನಿರ್ಮಿಸಲಾಯಿತೋ ಅದು ವಿವಾದಕ್ಕೆ ಕಾರಣವಾಯಿತ[illegible] ಒಂದು ಕಡೆ ಅದು ಮೀಸಲು ಅರಣ್ಯವಾಗಿದ್ದರೆ ಮತ್ತೊಂದ[illegible] ಕಡೆ ಆ ಪ್ರದೇಶ ಕೊಡಗಿನ ಅರೆಭಾಷೆ ಗೌಡ ಜನಾಂಗದವ[illegible] ವಾಸಿಸುತ್ತಿದ್ದ ಪ್ರದೇಶವಾಗಿತ್ತು. ಅರೆಭಾಷೆ ಗೌಡರಲ್ಲಿ ಹಲವ[illegible] ಅಲ್ಲಿ ಸ್ಮಾರಕ ನಿರ್ಮಿಸಬಾರದು ಎಂದು ಹೇಳಿದ[illegible] ಮತ್ತೊಂದು ಕಡೆ ಯುದ್ಧದಲ್ಲಿ ಕೇವಲ ಕೊಡ[illegible] ಜನಾಂಗದವರು ಮಾತ್ರ ಸತ್ತಿಲ್ಲ, ಅಲ್ಲಿ ಗೌಡ ಜನಾಂಗದವ[illegible] ಕೂಡ ಸತ್ತಿದ್ದಾರೆ ಮತ್ತು ಟಿಪ್ಪುವಿನಿಂದ ಮತಾಂತರ[illegible] ಒಳಗಾಗಿದ್ದಾರೆ ಎಂಬ ಹೇಳಿಕೆಗಳನ್ನು ನೀಡಲು ತೊಡಗಿದರ[illegible] ಈ ಮಧ್ಯೆ ಮನೋಜ್ ಎಂಬ ವ್ಯಕ್ತಿ ಆ ಜಾಗ[illegible] ಸಂಬಂಧಪಟ್ಟ ದಾಖಲೆಯನ್ನು ಸಂಗ್ರಹಿಸಿ, ಆ ಪ್ರದೇಶ[illegible] 'ಕಣಿಯಂಗೋಟು' ಎಂಬ ಪ್ರದೇಶವೇ ವಿನಹ[illegible] ದೇವಟ್‌ಪರಂಬು ಅಲ್ಲ ಎಂದು ದಾಖಲೆಗಳ ಸಹಿ[illegible] ಬಹಿರಂಗಪಡಿಸಿದರು. ಹಾಗಾಗಿ ವಿವಾದ ಪರಾಕಾಷ್ಠೆ[illegible] ತಲುಪಿತ್ತು.

ಈ ಮಧ್ಯೆ ಕೊಡಗಿನಲ್ಲಿ ಇಂತಹ ವಿವಾದಗಳು ಎದ್ದಾ[illegible]

ಕೊಚ್ಚೆಯಲ್ಲಿ ಮೀನು ಹಿಡಿಯುವ ಕಾಂಗ್ರೆಸ್ ನಾಯಕರು

ಕೊಡಗಿನಲ್ಲಿ ಕಾಂಗ್ರೆಸಿಗೆ ಸ್ಥಳೀಯವಾಗಿ ರೂಪಗೊಂಡ ನಾಯಕರ ಕೊರತೆ ಇದೆ. ಹಾಗಾಗಿ ಆಗಾಗ ಮೇಲಿನಿಂದ ನಾಯಕರು ಧುಮುಕುತ್ತಾರೆ. ಈಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಎಂ.ಆರ್.ಸೀತಾರಾಂ ಎಂಬ ವ್ಯಕ್ತಿ ನೇಮಕಗೊಳ್ಳುತ್ತಲೇ, ಬೆಂಗಳೂರಿನಿಂದಲೇ ಕೊಡಗು ಮೂಲದ ಕೆ.ಈ. ಹರೀಶ್ ಬೋಪಣ್ಣ ಎಂಬ ವ್ಯಕ್ತಿ ಕಾಂಗ್ರೆಸ್ ನಾಯಕ ಎಂದು ಹೇಳಿಕೊಂಡು ಜಿಲ್ಲೆಗೆ ವಕ್ಕರಿಸಿದ್ದಾರೆ. ಇದೇ ಸಾಲಿನಲ್ಲಿ ಇರುವಂತಹ ಮತ್ತೊಬ್ಬ ವ್ಯಕ್ತಿ ಬ್ರಿಜೇಶ್ ಕಾಳಪ್ಪ. ಈತ ಕೊಡವ ಎನ್ನುವುದನ್ನು ಬಿಟ್ಟರೆ ಬೇರೇನೂ ವಿಶೇಷವಿಲ್ಲ. ಕಾಂಗ್ರೆಸಿನ ವಕ್ತಾರ ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎಂದು ಹೇಳಿಕೊಂಡು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಮೇಲೆ ಕಣ್ಣಿಟ್ಟಿರುವ ಬ್ರಿಜೇಶ್ ಕಾಳಪ್ಪ, ದೇವಟ್‌ಪರಂಬುನಲ್ಲಿ ಸ್ಮಾರಕ ಆಗಲೇಬೇಕು ಎಂಬ ಹೇಳಿಕೆಯನ್ನು ನೀಡಿದ್ದಾರೆ. ಸೋನಿಯಾ ಗಾಂಧಿಯವರ ಬಳಿ ನಾಚಪ್ಪನನ್ನು ಕರೆದುಕೊಂಡು ಹೋದ ಕೀರ್ತಿ ಬ್ರಿಜೇಶ್ ಕಾಳಪ್ಪನದು. ರಾಷ್ಟ್ರಪತಿಗಳ ಬಳಿಗೆ ಕರೆದುಕೊಂಡು ಹೋದ ಕೀರ್ತಿ ಅಡಗೂರು ವಿಶ್ವನಾಥರದ್ದು.


ಎ.ಕೆ. ಸುಬ್ಬಯ್ಯ

ಈ ಪ್ರಶ್ನೆಗಳಿಗೆ ಉತ್ತರಿಸಿ

ಕೊಡಗು ಸೌಹಾರ್ದ ವೇದಿಕೆಯ ಮುಖ್ಯಸ್ಥರಾದ ಎ.ಕೆ. ಸುಬ್ಬಯ್ಯನವರು ಕೆಲವೊಂದು ಪ್ರಶ್ನೆಗಳನ್ನು ದೇವಟ್‌ಪರಂಬುನಲ್ಲಿ ಸ್ಮಾರಕ ನಿರ್ಮಿಸಬೇಕು ಎನ್ನುವವರಿಗೆ ಹಾಕಿದ್ದಾರೆ.

1) ದೇವಟ್‌ಪರಂಬುನಲ್ಲಿ ಯುದ್ಧ ನಡೆದಿದೆ ಎನ್ನುವುದಕ್ಕೆ ದಾಖಲೆಯನ್ನು ಒದಗಿ[illegible]


2) ಈಗ ನೀವು ನೆಟ್ಟಿರುವ ಸ್ಮಾರಕ ಕಲ್ಲು ದೇವಟ್‌ಪರಂಬು ಎನ್ನುವ ಪ್ರದೇ[illegible] ಎನ್ನುವುದಕ್ಕೆ ದಾಖಲೆಯನ್ನು ಒದಗಿಸಿ.

3) ಒಂದೊಮ್ಮೆ ಇಲ್ಲಿ ಯುದ್ಧ ನಡೆದಿದ್ದರೆ ಕೇವಲ ಕೊಡ[illegible] ಜನಾಂಗದವರು ಮಾತ್ರ ಹತ್ಯೆಯಾಗಿದ್ದರು ಎಂಬುದಕ್ಕೆ ದಾಖ[illegible] ನೀಡಿ.

4) ಕೊಡವ ಜನಾಂಗದವರು ಎಡೆ ಇಡುವ ಪದ್ಧ[illegible] ಸಾಮೂಹಿಕವಾಗಿ ಇಲ್ಲ, ಒಂದೊಂದು ಕುಟುಂಬಕ್ಕೆ ಒಬ್ಬ ಕಾರ[illegible] ಪುರುಷ ಎಂಬುದು ಇದೆ. ಇದು ಇಲ್ಲ ಎಂದಾದರೆ ಸ್ಪಷ್ಟಪಡಿ[illegible]

5) ಟಿಪ್ಪು ನರಹತ್ಯೆಗೈದಾಗ ಸಾವಿರಾರು ಮಂದಿ ಇದ್ದರ[illegible] ಮತ್ತು ರಕ್ತದ ಕೋಡಿ ಕಾವೇರಿ ನದಿಯಲ್ಲಿ ಹರಿಯಿತು. ಕೆಲ[illegible] ದಿನಗಳ ಕಾಲ ಕಾವೇರಿ ನೀರು ಕೆಂಪಾಗಿತ್ತು ಎನ್ನುವುದ[illegible] ಆಧಾರಗಳನ್ನು ನೀಡಿ.

ಹೀಗೆ ಕೆಲವು ಸ್ಪಷ್ಟವಾದ ಉತ್ತರಿಸಲು ಸಾಧ್ಯವಿಲ್ಲದ ಪ್ರಶ್ನೆಗಳ[illegible] ಎ.ಕೆ.ಸುಬ್ಬಯ್ಯ ಸವಾಲಿನ ರೂಪದಲ್ಲಿ ಕೊಡಗು ಸೌಹಾರ್ದ[illegible] ವೇದಿಕೆಯಿಂದ ಬಹಿರಂಗವಾಗಿ ಹಾಕಿರುವಾಗ, ಈಗ ಸಂ[illegible] ಪರಿವಾರದ ಹಿನ್ನೆಲೆ ಗಾಯನದೊಂದಿಗೆ ಸಿಎನ್‌ಸಿಯು ಎ.ಕೆ. ಸುಬ್ಬಯ್ಯನವರನ್ನು ಗಡಿಪಾರ[illegible] ಮಾಡಬೇಕು ಎಂದು ಹೇಳಿಕೊಂಡು ನಗೆಪಾಟಲಿಗೆ ಒಳಗಾಗಿದ್ದಾರೆ.



ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸುವ ಎ.ಕೆ. ಸುಬ್ಬಯ್ಯ, ಕೆಲವೊಂದು ಕೃತಿಗಳನ್ನು ಆಧರಿಸಿ, ದೇವಟ್‌ಪರಂಬು ಎಂಬ ಪ್ರದೇಶದಲ್ಲಿ ಯುದ್ಧವೇ ನಡೆದಿಲ್ಲ, ಚರಿತ್ರೆಯ ಪ್ರಕಾರ ದೇವಟ್‌ಪರಂಬುವಿಗೆ ಉಪಾಯವಾಗಿ ಕೊಡವರನ್ನು ಕರೆಸಿ, ಅವರನ್ನು ಸುತ್ತುವರೆದು ಬಂಧಿಸಿ ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋಗಿ ಮತಾಂತರ ಮಾಡಲಾಗಿದೆ. ಇಲ್ಲಿ ಯುದ್ಧ ನಡೆದಿದೆ ಎಂಬುದಕ್ಕೆ ಯಾವುದೇ ದಾಖಲೆಗಳು ಇಲ್ಲದಿರುವಾಗ, ಸ್ಮಾರಕಗಳ ನಿರ್ಮಾಣ ಏಕೆ ಎಂದು ಪ್ರಶ್ನಿಸಿದರು. ಅಲ್ಲದೆ ಅರಣ್ಯ ಇಲಾಖೆಯ ಹೊಣೆಗೇಡಿತನವನ್ನು ಜರೆದರು. ಒಂದುವೇಳೆ ಯುದ್ಧವೇ ನಡೆದಿದ್ದು, ಕೊಡವರು ಹತ್ಯೆಗೀಡಾಗಿದ್ದಾರೆ ಎಂದಾದರೆ ಅಲ್ಲಿ ನಿರ್ಮಿಸಬೇಕಾಗಿದ್ದು ಸಮಾಧಿಯೇ ವಿನಹ, ಸ್ಮಾರಕವಲ್ಲ ಎಂದು ಅವರು ಹೇಳಿದರು. ಇದು ಬಿಜೆಪಿ ಮತ್ತು ಸಂಘ ಪರಿವಾರದ ಷಡ್ಯಂತ್ರವಾಗಿದೆ. ಕೊಡವ ಜನಾಂಗದವರು ಎಂದೂ ಕೂಡ ಕೋಮುವಾದಿಗಳಲ್ಲ, ಅವರು ಸಂದರ್ಭಕ್ಕೆ ತಕ್ಕಂತೆ ಬಿಜೆಪಿಯ ಮತದಾರರಾಗಿದ್ದಾರೆಯೇ ವಿನಹ, ಕೋಮುವಾದಿಗಳಾಗಿ ಪರಿವರ್ತನೆಯಾಗಿಲ್ಲ. ಅವರನ್ನು ಕಾಯಂ ಆಗಿ ಕೋಮುವಾದಿಗಳನ್ನಾಗಿಸಿ, ಕೊಡಗು ಜಿಲ್ಲೆಯಲ್ಲಿ ಕೊಡವ ಮತ ಬ್ಯಾಂಕ್‌ನ್ನು ಕಾಯಂ ಆಗಿ ಬಿಜೆಪಿಯ ಪರವಾಗಿ ಇರಿಸಿಕೊಳ್ಳುವುದು ಬಿಜೆಪಿಯ ಮತ್ತು ಸಂಘ ಪರಿವಾರದ ಷಡ್ಯಂತ್ರ ಎಂದು ಈ ಸಂಪೂರ್ಣ ಘಟನೆಯನ್ನು ಎ.ಕೆ. ಸುಬ್ಬಯ್ಯ ತನ್ನ ದೀರ್ಘ ಅನುಭವ ಮತ್ತು ಹಿಂದಿನ ಬಿಜೆಪಿಯ ಒಡನಾಟದ ಹಿನ್ನೆಲೆಯಲ್ಲಿ ಬಿಚ್ಚಿಟ್ಟರು.

ಇದಾದ ಕೆಲವು ದಿನಗಳಲ್ಲಿ ನಾಚಪ್ಪ ನೆಟ್ಟಿದ್ದ ಕಲ್ಲು ಉರುಳಿ ಬಿದ್ದಿತ್ತು. ಇದಕ್ಕೆ ಕಾರಣ ಯಾರು ಎಂಬುದು ಇಂದಿಗೂ ತಿಳಿದಿಲ್ಲ. ಅರಣ್ಯ ಇಲಾಖೆ ನಿಯಮದ ಪ್ರಕಾರ ಆ ಕಲ್ಲನ್ನು ನೆಟ್ಟಿರುವವರ ವಿರುದ್ಧ ಕ್ರಮ ತೆಗೆದುಕೊಂಡು, ಕಲ್ಲನ್ನು ವಶಪಡಿಸಿಕೊಳ್ಳಬೇಕಾಗಿತ್ತು. ಆದರೆ ಕೊಡಗಿನಲ್ಲಿ ಕಾಂಗ್ರೆಸನ್ನು ಮುಕ್ತಗೊಳಿಸಲು ಗುತ್ತಿಗೆ ಪಡೆದಿರುವ ಕೆಲವು ಕಾಂಗ್ರೆಸಿಗರು ಆಗ ಉಸ್ತುವಾರಿ ಸಚಿವರಾಗಿದ್ದ ದಿನೇಶ್ ಗುಂಡೂರಾವ್‌ರವರ ಬಳಿಗೆ ತೆರಳಿ "ಯಾವುದೇ ಕ್ರಮ ತೆಗೆದುಕೊಳ್ಳದಂತೆ ಅರಣ್ಯ ಇಲಾಖೆಗೆ ಸೂಚಿಸಬೇಕು. ಇಲ್ಲದಿದ್ದರೆ ಕೊಡವ ಜನಾಂಗದವರು ಸಿಟ್ಟಿಗೆದ್ದು ಕಾಂಗ್ರೆಸಿಗೆ ಇದರಿಂದ ಭಾರೀ ನಷ್ಟವಾಗಲಿದೆ" ಎಂದು ಕಿವಿ ಊದಿದರು. ಇದರ ಪರಿಣಾಮ ಅರಣ್ಯ ಇಲಾಖೆ ಹಲವು ತಿಂಗಳು ಕಳೆದರೂ ಆ ಕಲ್ಲನ್ನು ವಶಪಡಿಸಿಕೊಳ್ಳಲು ಮೀನಾ-ಮೇಷ ಎಣಿಸುತ್ತಿದೆ.

ಕಲ್ಲು ಕೆಡವಿದವರ ಮೇಲೆ ಕ್ರಮಕ್ಕೆ ಆಗ್ರಹ

ತಮಾಷೆ ಎಂದರೆ ಮೀಸಲು ಅರಣ್ಯದಲ್ಲಿ ಅಕ್ರಮವಾಗಿ ಕಲ್ಲು ನೆಟ್ಟವರು ತಾವು ಅಕ್ರಮ ಎಸಗಿದ್ದೇವೆ ಎಂಬುದನ್ನು ಹೇಳದೆ, ಯಾರು ಕಲ್ಲು ಕೆಡವಿದ್ದಾರೋ ಅವರ ಮೇಲೆ ಕ್ರಮಕೈಗೊಳ್ಳಬೇಕು ಮತ್ತು ಆ ಸ್ಮಾರಕವನ್ನು ಅಲ್ಲಿಯೇ ಮತ್ತೆ ಸ್ಥಾಪಿಸಬೇಕು ಎಂದು ಹೇಳಿಕೆಗಳನ್ನು ನೀಡಿದರಲ್ಲದೆ, ಆ ಸ್ಮಾರಕ ಕೆಡವಲು ಆ ಭಾಗದ ಅರೆಭಾಷೆ ಗೌಡರೇ ಕಾರಣ ಎನ್ನುವ ರೀತಿಯಲ್ಲಿ ಹೇಳಿದರು. ಇವರ ಬೆಂಬಲಕ್ಕೆ ಕೊಡಗಿನ ಹಲವಾರು ಸಂಘಟನೆಗಳು ಮತ್ತು ಕೊಡವ ಸಮಾಜಗಳು ನಿಂತವು. ಅವರೆಲ್ಲರೂ ಅರೆಭಾಷೆ ಗೌಡ ಜನಾಂಗದ ವಿರುದ್ಧ ನಿರಂತರವಾಗಿ ಹೇಳಿಕೆಗಳನ್ನು ನೀಡಲು ತೊಡಗಿದರು. ಅರೆಭಾಷೆ ಗೌಡ ಜನಾಂಗದ ಗುಡ್ಡೆಮನೆ ಅಪ್ಪಯ್ಯಗೌಡ ಎಂಬ ಗಲ್ಲಿಗೇರಿಸಲ್ಪಟ್ಟ ಸ್ವಾತಂತ್ರ್ಯ ಹೋರಾಟಗಾರನನ್ನು ದರೋಡೆಕೋರ ಎಂದು ಜರೆದರಲ್ಲದೆ, ಅವರ ಸ್ಮಾರಕವನ್ನು ತೆರವುಗೊಳಿಸಬೇಕು ಎಂಬ ಹೇಳಿಕೆಯನ್ನು ನೀಡುತ್ತಾ ಬಂದರು.

ಈ ಹೇಳಿಕೆಗಳು ಅರೆಭಾಷೆ ಗೌಡ ಜನಾಂಗದ ಪ್ರಮುಖರನ್ನು ಕೆರಳಿಸಿತು. ಅವರು ಮೊದಲ ಬಾರಿಗೆ ಇದಕ್ಕೆ ಪ್ರತಿಕ್ರಿಯೆಯಾಗಿ ಭಾಗಮಂಡಲದಲ್ಲಿ ಬಹಿರಂಗ ಸಭೆಯೊಂದನ್ನು ನಡೆಸಿದರು. ಅಲ್ಲಿ ನಾಚಪ್ಪನ ಷಡ್ಯಂತ್ರವನ್ನು ಟೀಕಿಸಲಾಯಿತು. ಇದಕ್ಕೆ ಪ್ರತಿಯಾಗಿ ಕೊಡವ ಸಂಘಟನೆಗಳು ಅದೇ ಭಾಗಮಂಡಲದಲ್ಲಿ ಮಾನವ ಸರಪಳಿ ಮತ್ತು ಬಹಿರಂಗಸಭೆಯನ್ನು ನಡೆಸಿದವು. ಆ ಸಭೆಯಲ್ಲಿ ಇತಿಹಾಸವನ್ನು ಸೃಷ್ಟಿಸುವ ಮತ್ತು ತಿರುಚುವ ಕಾರ್ಯವನ್ನು ನಾಚಪ್ಪ ಹಾಗೂ ಹೊಸದಾಗಿ ಇತಿಹಾಸವನ್ನು ಬರೆಯುವ ಗುತ್ತಿಗೆಯನ್ನು ಪಡೆದಿರುವ ಅಡ್ಡಂಡ ಕಾರ್ಯಪ್ಪ ಮಾಡಿದರು. ಇದನ್ನು ಪ್ರತಿಭಟಿಸಿ ಆ ಭಾಗದ ನಾಲ್ಕು ಗ್ರಾಮಗಳಲ್ಲಿ ಅಂದು ಬಂದ್ ಏರ್ಪಡಿಸಲಾಯಿತು. ಇದಾದನಂತರ ಸವಾಲು, ಪ್ರತಿಸವಾಲು, ಹೇಳಿಕೆ, ಪ್ರತಿಹೇಳಿಕೆಗಳು ಆರಂಭವಾದವು.


ಸಂಘ ಪರಿವಾರಕ್ಕೆ ನುಂಗಲಾರದ ತುತ್ತು

ಕೊಡವ ಜನಾಂಗದವರು ಬಿಜೆಪಿಯ ಮತದಾರರಾಗಿದ್ದರೆ, ಅರೆಭಾಷೆ ಗೌಡ ಜನಾಂಗದಲ್ಲಿ ಬಹುತೇಕರು ಬಿಜೆಪಿಯ ಮತದಾರರು ಮಾತ್ರವಲ್ಲ ಸಂಘ ಪರಿವಾರದ ಜೊತೆಯಲ್ಲಿ ಗುರುತಿಸಿಕೊಂಡವರೂ ಆಗಿದ್ದರು. ನಾಚಪ್ಪ ಸ್ಮಾರಕ ನಿರ್ಮಿಸಲು ಹೊರಟ ವೇಳೆಯಲ್ಲಿ ಏನೂ ಆಗದವರ ರೀತಿಯಲ್ಲಿ ನೀರೆರೆದು ಪೋಷಿಸಿ ಅಂದ ನೋಡುತ್ತಾ ಫಸಲು ಪಡೆಯುವ ಚಿಂತನೆಯಲ್ಲಿದ್ದ ಸಂಘ ಪರಿವಾರ ಮತ್ತು ಬಿಜೆಪಿಗೆ, ಕೊಡವ ಮತ್ತು ಅರೆಭಾಷೆ ಗೌಡ ಜನಾಂಗದವರು ಪರಸ್ಪರ ಎದುರಾಳಿಗಳಾಗಿ ನಿಂತದ್ದು ನುಂಗಲಾರದ ತುತ್ತಾಯಿತು. ತಾವೇ ತೋಡಿದ ಗುಂಡಿಗೆ ಬಿದ್ದರು.


ಅರೆಭಾಷೆ ಗೌಡ ಜನಾಂಗದವರ ಪರವಾಗಿ ಯಾರೂ ಇಲ್ಲ ಎನ್ನುವಂತಹ ವೇಳೆಯಲ್ಲಿ, ಕೊಡಗಿನಲ್ಲಿ ಪ್ರಜ್ಞಾವಂತ ಕೊಡವರು ಸೇರಿದಂತೆ, ಅರೆಭಾಷೆ ಗೌಡರು, 24 ಕೊಡವ ಭಾಷೆಗಳನ್ನಾಡುವ ಮೂಲನಿವಾಸಿಗಳು ಮತ್ತು ಇತರ ಜನಾಂಗದವರು ಇದನ್ನು ಪ್ರತಿಭಟಿಸುವುದಕ್ಕಾಗಿ ಸಭೆ ನಡೆಸಿ, ಕೊಡಗು ಸೌಹಾರ್ದ ವೇದಿಕೆ ಎಂಬುದನ್ನು ರಚಿಸಿಕೊಂಡರು. ಈ ವೇದಿಕೆಗೆ ಎ.ಕೆ. ಸುಬ್ಬಯ್ಯನವರನ್ನು ಗೌರವ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಈ ಬೆಳವಣಿಗೆಯನ್ನು ಬಿಜೆಪಿ ಮತ್ತು ಸಂಘ ಪರಿವಾರ ಎದುರು ನೋಡಿರಲಿಲ್ಲ. ತಮ್ಮ ಮತ ಬ್ಯಾಂಕ್ ಆದ ಅರೆಭಾಷೆ ಗೌಡ ಜನಾಂಗ ತಮ್ಮಿಂದ ದೂರ ಸರಿಯುತ್ತಿರುವುದು ಸಂಘ ಪರಿವಾರಕ್ಕೆ ಜೀರ್ಣಿಸಿಕೊಳ್ಳಲು ಸಾಧ್ಯವಾಗದ ವಿಚಾರವಾಗಿತ್ತು. ಜೊತೆಗೆ ಆ ಜನಾಂಗದವರು ಸಂಘ ಪರಿವಾರವನ್ನು ನಖಶಿಖಾ ಎಂದು ವಿರೋಧಿಸುತ್ತಿರುವ ಎ.ಕೆ. ಸುಬ್ಬಯ್ಯನವರನ್ನು ತಮ್ಮ ನಾಯಕರೆಂದು ಹೇಳಿದ್ದು, ಅವರು ಕನಸುಮನಸ್ಸಿನಲ್ಲಿಯೂ ಎಣಿಸಿಕೊಳ್ಳದ ವಿಚಾರವಾಗಿತ್ತು. ಏಕೆಂದರೆ ಸುಬ್ಬಯ್ಯನವರಿಗೆ ಸಂಘ ಪರಿವಾರದ ಎಲ್ಲಾ ಪಟ್ಟುಗಳು ಚೆನ್ನಾಗಿಯೇ ತಿಳಿದಿರುವುದರಿಂದ ತಮ್ಮ ಷಡ್ಯಂತ್ರಗಳನ್ನು ಸುಬ್ಬಯ್ಯನವರು ನುಚ್ಚುನೂರು ಮಾಡುತ್ತಾರೆ ಎಂಬ ಭಯ ಅವರನ್ನು ಕಾಡಲು ತೊಡಗಿತು.

ಸಂಘ ಪರಿವಾರದ ಅಸಲಿಯತ್ತು ಬಯಲು

ಸಂಘ ಪರಿವಾರದ ಜಗದೀಶ ಕಾರಂತ ಮತ್ತು ವನವಾಸಿ



ಸಂಘಟನೆಯ ಜಿಲ್ಲಾ ಮುಖ್ಯಸ್ಥರಾದ ಚೆಕ್ಕೇರ ಮನುರವರಿಗೂ, ವಿರಾಜಪೇಟೆಯ ಶಾಸಕ ಕೆ.ಜಿ.ಬೋಪಯ್ಯನವರಿಗೂ ಎಣ್ಣೆ-ಸೀಗೆಕಾಯಿ ಸಂಬಂಧ. ಕೊಡಗಿನ ಹೊರಗೆ ಕೆ.ಜಿ.ಬೋಪಯ್ಯ ಎಂದರೆ ಕೊಡವ ಜನಾಂಗಕ್ಕೆ ಸೇರಿದ ವ್ಯಕ್ತಿ ಎಂಬ ಭಾವನೆ ಇದೆ. ಆದರೆ ಅವರು ಅರೆಭಾಷೆ ಗೌಡ ಜನಾಂಗಕ್ಕೆ ಸೇರಿದವರು. ಹಾಗಾಗಿ ಕೊಡವರು ಗಣನೀಯವಾಗಿ ಹೆಚ್ಚಿನ ಸಂಖ್ಯೆಯಲ್ಲಿರುವ ವಿರಾಜಪೇಟೆ ತಾಲೂಕಿನ ಪ್ರಾತಿನಿಧ್ಯವನ್ನು ಅರೆಭಾಷೆ ಗೌಡ ಜನಾಂಗದವರು ವಹಿಸಿರುವುದರ ಬಗ್ಗೆ ಬಿಜೆಪಿಯ ಕೊಡವರಿಗೆ ಅಸಮಾಧಾನ. ಮತ್ತೊಂದು ಕಡೆ ಸಂಸದ ಪ್ರತಾಪ ಸಿಂಹನಿಗೂ ಬೋಪಯ್ಯರನ್ನು ಕಂಡರೆ ಅಷ್ಟಕಷ್ಟೆ. (ಆರಂಭದಲ್ಲಿ ದೇವಟ್‌ಪರಂಬುನಲ್ಲಿ ಸ್ಮಾರಕ ಆಗಲೇಬೇಕು ಹಾಗೂ ತಾನು ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುತ್ತೇನೆ ಎಂದು ಬಹಿರಂಗವಾಗಿ ಹೇಳಿಕೆ ನೀಡಿದ್ದ ಪ್ರತಾಪ ಸಿಂಹ, 'ಯಾವಾಗ ತಮ್ಮ ಮತ ಬ್ಯಾಂಕ್ ಆದ ಅರೆಭಾಷೆ ಗೌಡ ಜನಾಂಗದವರು ವಿರೋಧಿಸಲು ತೊಡಗಿದರೋ, ಕೂಡಲೇ ತನ್ನ ಪ್ಲೇಟ್ ಬದಲಿಸಿ, ದೇವಟ್‌ಪರಂಬುನಲ್ಲಿ ಸ್ಮಾರಕ ನಿರ್ಮಾಣವಾಗಬೇಕು. ಆದರೆ ಈಗ ಸ್ಮಾರಕ ಸ್ಥಾಪಿಸಲಾಗಿರುವ ಜಾಗ ದೇವಟ್‌ಪರಂಬು ಎಂದು ಹೇಳಲು ಸಾಧ್ಯವಿಲ್ಲ ಎಂದು ಹೇಳಿದರು.) ಹಾಗಾಗಿ ಮುಂದಿನ ಚುನಾವಣೆಯ ವೇಳೆಗೆ ಹೊಸ ಮುಖವನ್ನು ವಿರಾಜಪೇಟೆ ಕ್ಷೇತ್ರಕ್ಕೆ ಸಿದ್ಧಪಡಿಸಬೇಕು ಎಂಬ ಹುನ್ನಾರ ಸಂಘ ಪರಿವಾರದ್ದು. ಬೋಪಯ್ಯನವರ ಸ್ಥಿತಿ ಏನೆಂದರೆ, ತಾನು ಅರೆಭಾಷೆ ಗೌಡ ಎಂದು ಹೇಳಿಕೊಂಡು, ಕೊಡವರು ತನ್ನನ್ನು ನಂಬುತ್ತಿಲ್ಲವಾದ ಕಾರಣ, ಅವರನ್ನು ಮೆಚ್ಚಿಸಲು, ಅವರನ್ನು ಹೆಚ್ಚು ಓಲೈಸಲು ಪ್ರಯತ್ನಿಸಿದರು. ಆದರೆ ಬಿಜೆಪಿಯ ಕೊಡವರು ಅವರನ್ನು ನಂಬಲಿಲ್ಲ. ಅತ್ತ ಅರೆಭಾಷೆ ಗೌಡರು ಬೋಪಯ್ಯ ಕೊಡವರಿಗೆ ಹೆಚ್ಚು ಅನುಕೂಲ ಮಾಡಿಕೊಡುತ್ತಿದ್ದಾರೆ ಎಂದು ಅವರೂ ಕೂಡ ಬಹುತೇಕ ಕೈಬಿಟ್ಟಿದ್ದಾರೆ. ಇದರ ಲಾಭವನ್ನು ಪಡೆಯಬೇಕು ಎಂದುಕೊಂಡು ಬಿಜೆಪಿಯಲ್ಲಿ ಬೋಪಯ್ಯನವರನ್ನು ವಿರೋಧಿಸುತ್ತಾ ಮುಂದಿನ ಚುನಾವಣೆಯ ವೇಳೆಗೆ ತಾನು ಬಿಜೆಪಿಯ ಅಭ್ಯರ್ಥಿ ಆಗಬೇಕು ಎಂದು ಪ್ರಯತ್ನಿಸುತ್ತಿರುವ ಮಾಚಿಮಾಡ ರವೀಂದ್ರ ಸೇರಿಕೊಂಡು ಭಾಗಮಂಡಲದಲ್ಲಿ ಜನಾಭಿಪ್ರಾಯ ಸಂಗ್ರಹ ಎಂಬ ಹೊಸ ನಾಟಕವೊಂದನ್ನು ಆರಂಭಿಸಿದರು. ದೇವಟ್‌ಪರಂಬುನಲ್ಲಿ ಕೊಡವರ ಸ್ಮಾರಕವೂ ಬೇಡ, ಗೌಡ ಜನಾಂಗದ ಸ್ಮಾರಕವೂ ಬೇಡ, ಅಲ್ಲಿ ಹಿಂದೂ ಸ್ಮಾರಕ ಮಾಡುವ ಎನ್ನುವ ಹೊಸ ಒಂದು ಪ್ಲೇಟನ್ನು ಹಾಕಿದರು. ಇದಕ್ಕೆ ಅರೆಭಾಷೆ ಗೌಡ ಜನಾಂಗದವರು ಸೊಪ್ಪು ಹಾಕಲಿಲ್ಲ. ಅವರು ಸಂಘ ಪರಿವಾರ ಮತ್ತು ಬಿಜೆಪಿಯನ್ನು ತ್ಯಾಗ ಮಾಡಲು ಸಿದ್ಧರಿದ್ದರೇ ವಿನಃ, ತಮ್ಮ ಸ್ವಂತಿಕೆಯನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ.



ಇದಕ್ಕೆ ಮೂಲಕಾರಣ ಏನು ಎಂದರೆ ತಲಕಾವೇರಿಯಲ್ಲಿ 'ತಕ್ಕಾಮೆ'ಯ ವಿಚಾರದಲ್ಲಿ ಕೊಡವರ ಮತ್ತು ಅರೆಭಾಷೆ ಗೌಡ ಜನಾಂಗದ ನಡುವೆ ಈಗ ವಿವಾದ ಆರಂಭವಾಗಿದೆ. 'ತಕ್ಕಾಮೆ' ಎಂದರೆ ಅಲ್ಲಿಯ ಅಧಿಪತ್ಯ ಅಥವ ಮುಖ್ಯಸ್ಥರ ಸ್ಥಾನ. ಇದು ತಲತಲಾಂತರದಿಂದ ಅರೆಭಾಷೆ ಗೌಡ ಜನಾಂಗದ ಕೋಡಿ ಕುಟುಂಬಸ್ಥರ ವಶದಲ್ಲಿ ಇದೆ. ಕಾವೇರಿ ಸಂಕ್ರಮಣದ ವೇಳೆಯಲ್ಲಿ 'ತಕ್ಕಾಮೆ' ಇರುವ ಕುಟುಂಬಕ್ಕೆ ವಿಶೇಷವಾದ ಗೌರವವಿದೆ. ಅವರು ಭಂಡಾರ ಮತ್ತು ಆಭರಣಗಳನ್ನು ಹೊತ್ತು ತರುವುದು ಸೇರಿದಂತೆ ಹಲವಾರು ವಿಶೇಷ ಕಾರ್ಯಗಳಿಗೆ ಭಾಜನರಾಗುತ್ತಾರೆ. ಕಾವೇರಿ ಸಂಕ್ರಮಣದ ವೇಳೆಯಲ್ಲಿ ಭಾಗಮಂಡಲದಲ್ಲಿ ಬಳ್ಳಡ್ಕ ಕುಟುಂಬಸ್ಥರು 'ತಕ್ಕಾಮೆ'ಗಳಾಗಿ ದೇವಾಲಯದಲ್ಲಿ ಇರುತ್ತಾರೆ. ಆ ಸಂದರ್ಭದಲ್ಲಿ ಅವರು ಅಲ್ಲಿಯೇ ಇರಬೇಕು. ಚಿನ್ನಾಭರಣಗಳ ಜವಾಬ್ದಾರಿಯನ್ನು ಅವರಿಗೇ ವಹಿಸಬೇಕು. ಅದೇರೀತಿ ತಲಕಾವೇರಿಯಲ್ಲಿ ಕೋಡಿ ಕುಟುಂಬಸ್ಥರು ಒಂದು ತಿಂಗಳ ಕಾಲ ಜವಾಬ್ದಾರಿ ವಹಿಸಬೇಕು. ಅಲ್ಲಿಯೇ ವಾಸಿಸಬೇಕು. ವಿಶೇಷವಾದ ಗೌರವಕ್ಕೆ ಈ ಸಂದರ್ಭದಲ್ಲಿ ಈ ಎರಡೂ ಕುಟುಂಬಗಳು ಪಾತ್ರರಾಗುತ್ತಾರೆ. ವಿಶೇಷವಾದ ಅಧಿಕಾರ ಏನೂ ಇಲ್ಲದಿದ್ದರೂ, ಗೌರವದ ಸ್ಥಾನ ಇದಾಗಿದೆ. ಆದರೆ ನಾಚಪ್ಪ ಕೆಲವು ಸಮಯದಿಂದ ಒಂದೆರಡು ಕೊಡವ ಕುಟುಂಬಗಳನ್ನು ಮುಂದಿಟ್ಟುಕೊಂಡು 'ತಕ್ಕಾಮೆ' ಪಡೆಯಲು ಯತ್ನಿಸುತ್ತಿದ್ದಾರೆ. ಈ ಹುನ್ನಾರ ಅರೆಭಾಷೆ ಗೌಡ ಜನಾಂಗದವರಿಗೆ ತಿಳಿದಿದ್ದು, ಅವರು ಇದನ್ನು ಪ್ರತಿಷ್ಠೆಯಾಗಿಸಿಕೊಂಡು, ಯಾವುದೇ ಕಾರಣಕ್ಕೂ ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ಬಿಡುವುದಿಲ್ಲ ಎಂದು ಹೇಳುತ್ತಿದ್ದಾರೆ.

ಹಾಗಾಗಿ ಸಂಘ ಪರಿವಾರದ 'ಹಿಂದೂ ಸ್ಮಾರಕ' ಎನ್ನುವ ವಿಚಾರಕ್ಕೆ ಹಿನ್ನಡೆಯಾಗಿದೆ. ಟಿಪ್ಪುವಿನ ಹೆಸರಿನಲ್ಲಿ ಹಿಂದೂ ಸ್ಮಾರಕವೊಂದನ್ನು ಕೊಡಗಿನಲ್ಲಿ ಸ್ಥಾಪಿಸಿದರೆ ತಮ್ಮ ಉದ್ದೇಶ ಈಡೇರಿದಂತೆ ಎಂದು ಭಾವಿಸಿದ ಸಂಘ ಪರಿವಾರದ ಹುನ್ನಾರಗಳು ಬಹಿರಂಗಗೊಂಡಿದೆ ಮತ್ತು ಅವರು ಇದರಲ್ಲಿ ವಿಫಲರಾಗಿದ್ದಾರೆ.

ಮೊದಲ ಯತ್ನದಲ್ಲಿ ವಿಫಲರಾದ ನಂತರ ಮತ್ತೆ ಶಾಸಕರುಗಳಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಹಾಗೂ ಸುನಿಲ್ ಸುಬ್ರಮ್ಮಣಿಯವರು ಮೊದಲ ಯತ್ನ ತಮಗೆ ತಿಳಿದಿಲ್ಲ ಎನ್ನುವ ರೀತಿಯಲ್ಲಿ ಹೊಸದಾಗಿ ತಾವು



ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿಕೊಂಡು, ಕೊಡವ ಸಮಾಜದ ಮುಖ್ಯಸ್ಥರು ಹಾಗೂ ಗೌಡ ಸಮಾಜದ ಮುಖ್ಯಸ್ಥರನ್ನು ಸೇರಿಸಿ, ಸೌಹಾರ್ದಯುತವಾಗಿ ಬಗೆಹರಿಸುವ ಸಭೆಯನ್ನು ಆಯೋಜಿಸಿದ್ದರು. ಅರೆಭಾಷೆ ಗೌಡ ಜನಾಂಗದವರೂ ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿಕೊಂಡಿರುವ ಎ.ಕೆ. ಸುಬ್ಬಯ್ಯನವರ ನೇತೃತ್ವದ ಕೊಡಗು ಸೌಹಾರ್ದ ವೇದಿಕೆ ಎಂಬುದು ತಮ್ಮ ಗಮನದಲ್ಲಿಯೇ ಇಲ್ಲ ಎನ್ನುವ ರೀತಿಯಲ್ಲಿ ಸಭೆಯನ್ನು ಆಯೋಜಿಸಿದ್ದರು. ಈ ಸಭೆಗೆ ಅರೆಭಾಷೆ ಗೌಡ ಸಮಾಜದ ಮುಖ್ಯಸ್ಥರನ್ನು ಸ್ವತಃ ಕೆ.ಜಿ. ಬೋಪಯ್ಯ ಆಹ್ವಾನಿಸಿದಾಗ, ಅರೆಭಾಷೆ ಗೌಡ ಜನಾಂಗದವರು ತಾವು ಸೌಹಾರ್ದ ವೇದಿಕೆಯಲ್ಲಿ ಗುರುತಿಸಿಕೊಂಡಿದ್ದೇವೆ ಮತ್ತು ಸಭೆ ನಡೆಸುವುದಾದರೆ ಎ.ಕೆ. ಸುಬ್ಬಯ್ಯ ಹಾಗೂ ಅರೆಭಾಷೆ ಗೌಡ ಜನಾಂಗದ ಪ್ರಮುಖರಾದ ಕೆ.ಆರ್.ವಿದ್ಯಾಧರರವರನ್ನೂ ಒಳಗೊಂಡಂತೆ ಎಲ್ಲರನ್ನೂ ಆಹ್ವಾನಿಸಬೇಕು ಎಂದು ತಿಳಿಸಿದಾಗ, ಈ ಇಬ್ಬರು ತಾವು ಆಯೋಜಿಸಿರುವ ಸಭೆಯಲ್ಲಿ ಭಾಗವಹಿಸುವುದು ಬೇಡ ಎಂದು ಬೋಪಯ್ಯ ಹೇಳಿದ್ದಾರೆ. ಕಾರಣ ಎ.ಕೆ. ಸುಬ್ಬಯ್ಯ ಹಾಗೂ ವಿದ್ಯಾಧರ ಇತಿಹಾಸವನ್ನು ಅಧ್ಯಯನ ಮಾಡಿರುವವರಾಗಿದ್ದು, ಅವರ ಮುಂದೆ ತಮ್ಮ ಪೊಳ್ಳುತನ ನಿಲ್ಲುವುದಿಲ್ಲ ಎಂಬುದು ಅವರಿಗೆ ತಿಳಿದಿದೆ. ಸಂಘ ಪರಿವಾರದ ಷಡ್ಯಂತ್ರಗಳನ್ನು ಅವರು ನುಚ್ಚುನೂರು ಮಾಡುತ್ತಾರೆ ಎಂಬುದು ಕೂಡ ಅವರಿಗೆ ತಿಳಿದಿದೆ. ಹಾಗಾಗಿ ಅವರಿಬ್ಬರ ಉಪಸ್ಥಿತಿಗೆ ವಿರೋಧಿಸಿದ್ದಾರೆ.

ಆದರೆ ತಮ್ಮ ನಿಲುವನ್ನು ಸಭೆಯಲ್ಲಿ ತಿಳಿಸಬೇಕು ಎಂದು ಅರೆಭಾಷೆ ಗೌಡ ಜನಾಂಗದ ಕೆಲವು ಪ್ರಮುಖರು ತೆರಳಿದ್ದಾರೆ. ಸಭೆಗೆ ಕೊಡವ ಜನಾಂಗದ ಮುಖ್ಯಸ್ಥರು ಎಂದು ಹೇಳಿಕೊಂಡು ಇದ್ದವರೆಲ್ಲರೂ ಬಿಜೆಪಿಯ ಮತ್ತು ಸಂಘ ಪರಿವಾರದ ಹಿನ್ನೆಲೆ ಇದ್ದವರೇ ಆಗಿದ್ದರು. ಇದರ ಜೊತೆಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಜಿಲ್ಲೆಯ ಮುಖಂಡ ಹಾಗೂ ಜಿಲ್ಲೆಯಲ್ಲಿ ಹಲವಾರು ಗೊಂದಲ ಮತ್ತು ಅವಾಂತರಗಳಿಗೆ ಕಾರಣಕರ್ತರಾದ ಚಿ.ನಾ.ಸೋಮೇಶ ಮತ್ತು ಯಾವುದೇ ಸಭೆಗೂ ಆಹ್ವಾನವಿಲ್ಲದೆ ತೆರಳುವ ಅಡ್ಡಂಡ ಕಾರ್ಯಪ್ಪ ಕೂಡ ಇದ್ದರು. ಒಂದು ಕಡೆ ನಾವು ಸ್ಮಾರಕ ನಿರ್ಮಿಸಿದರೆ ನಿಮಗೇನು ಎಂದು ಅಡ್ಡಂಡ ಕಾರ್ಯಪ್ಪ ಸವಾಲು ಹಾಕಿದರೆ, ಮತ್ತೊಂದು ಕಡೆ ಚಿ.ನಾ. ಸೋಮೇಶ ಇಲ್ಲಿ ಹಿಂದೂ ಸ್ಮಾರಕವನ್ನು ನಿರ್ಮಿಸಬೇಕು ಎಂದು ಹೇಳುವ ಮೂಲಕ ತಮ್ಮ ಕಾರ್ಯಕ್ರಮ ಏನು ಎಂಬುದನ್ನು ಬಹಿರಂಗಪಡಿಸಿದರು. ಅಲ್ಲಿಗೆ ಅರೆಭಾಷೆ ಗೌಡ ಜನಾಂಗದ ಮುಖ್ಯಸ್ಥರಿಗೆ ಶಾಸಕ ಕೆ.ಜಿ. ಬೋಪಯ್ಯನವರ ಮೇಲೆ ಇದ್ದಂತಹ ಕಿಂಚಿತ್ತೂ ಗೌರವ ಮತ್ತು ವಿಶ್ವಾಸ ಮಾಯವಾಗಿತ್ತು. ಈ ಎಲ್ಲಾ ಸಮಸ್ಯೆಗಳ ಹಿಂದೆ ಬಿಜೆಪಿಯವರ ಷಡ್ಯಂತ್ರವಿದೆ ಎಂದು ಹೇಳಿಕೊಂಡು ಅವರು ಸಭೆಯಿಂದ ಹೊರ ನಡೆದರು. ಗಮನಿಸಬೇಕಾದ ಅಂಶವೇನೆಂದರೆ ಸಂಧಾನಸಭೆ ಎಂದು ಕರೆದ ಸಭೆಯಲ್ಲಿ ಈ ಎಲ್ಲಾ ವಿಚಾರಗಳಿಗೆ ಕಾರಣರಾದ ಸಿಎನ್‌ಸಿಯ ನಾಚಪ್ಪ ಭಾಗವಹಿಸಲೇ ಇಲ್ಲ ಹಾಗೂ ಕೆಡವಿದ ಸ್ಮಾರಕವನ್ನು ಪುನರ್‌ಸ್ಥಾಪಿಸಬೇಕು ಮತ್ತು ಕೆಡವಿದ ವ್ಯಕ್ತಿಗಳನ್ನು ಪತ್ತೆಹಚ್ಚಿ ಅವರನ್ನು ಬಂಧಿಸಬೇಕು, ಅಲ್ಲಿಯವರೆಗೆ ಯಾವುದೇ ಮಾತುಕತೆಗೆ ತಾನು ಸಿದ್ಧನಿಲ್ಲ ಎಂದು ನಾಚಪ್ಪ ಮತ್ತು ಹಿಂಬಾಲಕರು ಘೋಷಿಸಿದ್ದರು.

ಕೊಡವ ಸಮಾಜಗಳು ಕೂಡ ಇದೇ ನಿಲುವನ್ನು ತಾಳಿರುವುದರಿಂದ ಈ ಸಮಸ್ಯೆ ಬಗೆಹರಿಯುವುದು ಸುಲಭದ ವಿಚಾರವಾಗಿ ಉಳಿದಿಲ್ಲ. ಆದರೆ ಇದರಿಂದಾಗಿ ಬಿಜೆಪಿಯ ಎರಡು ಪ್ರಮುಖ ಮತ ಬ್ಯಾಂಕುಗಳು ಒಡೆದು ಛಿದ್ರವಾಗಿದೆ. ಅವರ ಷಡ್ಯಂತ್ರಗಳು ಏನು ಎಂಬುದು ಕಟ್ಟರ್ ಬೆಂಬಲಿಗರಿಗೂ ಅರ್ಥವಾಗಿದೆ. ದುರಂತವೆಂದರೆ ಇದರ ಲಾಭವನ್ನು ಪಡೆಯಲು ಕಾಂಗ್ರೆಸಿಗೆ ಶಕ್ತಿಯೂ ಇಲ್ಲ, ಮನಸ್ಸೂ ಇಲ್ಲ. ಒಂದು ಕಡೆ ಬಿಜೆಪಿಯ ಖಳನಾಯಕರ ಹಾವಳಿ ಮತ್ತೊಂದು ಕಡೆ ಕಾಂಗ್ರೆಸ್‌ಗೆ ನಾಯಕರಿಲ್ಲದ ಕೊರತೆ.

○ ಬಿ.ಎನ್. ಮನುಶೆಣೈ



ದುನಿಯಾ ವಿಜಿ ಮತ್ತೆ ಮದುವೆ ರಂಪಾಟ



ಫೋಟೋನೇ ಒಂದೇ. ಆದರೆ ಯಾರಿಗೆ ಶುಭಾಶಯ ಕೋರುವುದು ಮತ್ತಾರಿಗೆ ಕ್ಷಮೆ ಅಥವಾ ವಿಷಾದ ವ್ಯಕ್ತಪಡಿಸಬೇಕೆಂಬುದೇ ಕನ್‌ಫ್ಯೂಸು?

ಹಾಗೊಮ್ಮೆ ದುನಿಯಾ ವಿಜಿಗೋ ಆತನ ನೂತನ ಪತ್ನಿ ಕೀರ್ತಿಗೌಡರಿಗೋ ಹ್ಯಾಪಿ ಮ್ಯಾರೀಡ್ ಲೈಫ್, ದಾಂಪತ್ಯ ಚಿರಾಯುವಾಗಲಿ ಎಂದೇ ಹಾರೈಸುವುದಾದರೆ; ನಾಗರತ್ನ ಮತ್ತಾಕೆಯ ಮೂವರು ಮಕ್ಕಳ ಪಾಲಿಗದು ವಿಷಾದವಾಗಿ ಪರಿಣಮಿಸುತ್ತದೆ. ಏಕೆಂದರೆ ನಾಗರತ್ನ ವಿಜಿಯ ಪತ್ನಿ ಮತ್ತು ಆತನ ಮೂರು ಮಕ್ಕಳ ತಾಯಿ. ಆಕೆಯದು ನಿಜಕ್ಕೂ ಬಿಡುಗಡೆಯಾ? ತನ್ನ ಪತ್ನಿಗೆ ಕೈತುಂಬಾ ಪರಿಹಾರ ಕೊಟ್ಟೇ ವಿಜಿ ಕೀರ್ತಿಗೌಡ ಎಂಬ ಮಾಡೆಲ್ ಬೆಡಗಿಯ ಕೈಹಿಡಿದನಾ ಮತ್ತು ತನ್ನ ಮೂರೂ ಮಕ್ಕಳ ಭವಿಷ್ಯಕ್ಕಾಗುವಷ್ಟು ವ್ಯವಸ್ಥೆ ಮಾಡಿಯೇ ವಿಜಿ ತನ್ನ ಲೇಟೆಸ್ಟ್ ಮದುವೆಯನ್ನು ಘೋಷಿಸಿದ್ದಾನಾ?

ಒಂದೆಡೆ ದರ್ಶನ್‌ನ ಕೌಟುಂಬಿಕ ರಂಪ, ಮತ್ತೊಂದೆಡೆ ಸುದೀಪ್‌ನ ಸಂಸಾರ ತಾಪತ್ರಯಗಳ ನಡುವೆಯೇ ಹಗ್ಗಜಗ್ಗಾಟದಂತೆ ಕೇಳಿಬರುತ್ತಿದ್ದದು ದುನಿಯಾ ವಿಜಯ ಫ್ಯಾಮಿಲಿ ಪ್ರಾಬ್ಲಂ. ಇಲ್ಲ ನಾನು ನಾಗರತ್ನಳ ಕೈಬಿಡಲ್ಲ, ಇವಳೇ ನನ್ನ ಪ್ರಾಣ ಎಂದೆಲ್ಲಾ ಹಾಡಿಹೊಗಳಿದ ವಿಜಿ ಇಲ್ಲಿಗೆ ವರ್ಷದ ಹಿಂದೆಯೇ ಟೀವಿಯವರನ್ನೆಲ್ಲ ಕರೆಸಿಕೊಂಡು ಅಜ್ಞಾತವಾಸಿಯಾಗಿದ್ದ ನಾಗರತ್ನರನ್ನು ಅಪ್ಪಿದ್ದೇನು ಮುದ್ದಾಡಿದ್ದೇನು?

ಸಾಕ್ಷಾತ್ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕರೆದು ಆ ಹೆಣ್ಣುಮಗಳ ಕೈ ಬಿಡಬೇಡ ಅಂತ ಹೇಳವ್ರೆ. ಮುಖ್ಯಮಂತ್ರಿಗಳೇ ಹೇಳಿದ ಮೇಲೆ ನಾನಿವಳ ಕೈಬಿಡ್ತೀನಾ? ಎಂದಿದ್ದೇ ತನ್ನ ನೊಂದ ಪತ್ನಿಯನ್ನು ತಬ್ಬಿಕೊಂಡಿದ್ದ ದುನಿಯಾ ವಿಜಿಗೆ ಇನ್ನಾದರೂ ಒಳ್ಳೇದಾಯ್ತಲ್ಲ ಎಂದಿದ್ದೇ ಟೀವಿಗಳೆಲ್ಲ ಹಾಡಿಹೊಗಳಿದ್ದೇ ಹೊಗಳಿದ್ದು. ಈಗ ನೋಡಿದರೆ ಅದಕ್ಕೆ ಉಲ್ಟಾಪಲ್ಟಾ ಸುದ್ದಿ. 'ಏವನ್ ಕನ್ನಡ ಸಿನಿಮಾ ಎಕ್ಸ್‌ಕ್ಲೂಸಿವ್' ಎಂಬ ವೆಬ್‌ಸೈಟೊಂದು ದುನಿಯಾ ವಿಜಿಯ ಹೊಸ ಮದುವೆಯ 'ಬ್ರೇಕಿಂಗ್ ನ್ಯೂಸ್' ಪಟಾಕಿ ಸಿಡಿಸಿದೆ. ಕೀರ್ತಿಗೌಡ ಎಂಬ ಚಂದುಳ್ಳಿ ಚೆಲುವೆಯ ಜೊತೆ ವಿಜಿಯ ರೋಮಾನ್ಸ್‌ನ ಒಂದು ಫೋಟೋ. ಇಬ್ಬರೂ ದೈತ್ಯ ಗುಲಾಬಿ ಹಾರವೊಂದರಲ್ಲಿ ಬಂಧಿತರಾಗಿ ನಗುತ್ತಿರುವ ಮತ್ತೊಂದು ಫೋಟೋ. ಮತ್ತೊಂದರ ತಾರ್ಕಿಕ ಪ್ರತಿಫಲವೆಂಬಂತೆ ಕೀರ್ತಿಗೌಡ ಮತ್ತು ವಿಜಿ ಸೇರಿಕೊಂಡು ಪುಟ್ಟ ಮಗುವೊಂದನ್ನು ಮುದ್ದಾಡುತ್ತಿರುವ ಮಗದೊಂದು ಫೋಟೋ....!

ಏವನ್ ಕನ್ನಡ ಸಿನಿಮಾ ಎಕ್ಸ್‌ಕ್ಲೂಸಿವ್‌ನ ಉದ್ದೇಶ ಮತ್ತು ವಿಶ್ವಾಸಾರ್ಹತೆಯನ್ನು ಪ್ರಶ್ನಿಸದೇ ಅದರ ಫೋಟೋಗಳ ಸತ್ಯಾಸತ್ಯತೆಯನ್ನೇ ನೋಡುವುದಾದರೆ ಫೋಟೋಗಳಲ್ಲಾಗಲಿ ಅದರ ಪಾತ್ರಗಳಲ್ಲಾಗಲಿ ಕೃತಕತೆಯಿಲ್ಲ, ಮದುವೆಗೂ ಮುನ್ನ ಕೀರ್ತಿಗೌಡರ ಗೆಟಪ್ಪಿಗೂ ಮಗುವಾದ ನಂತರದ ಅವರ ಸೌಂದರ್ಯಕ್ಕೂ ಇರುವ ವ್ಯತ್ಯಾಸವೇ ಮಗುವಿನ ತಂದೆತಾಯಿಗಳ ರುಜುವಾತು ಕಲ್ಪಿಸುತ್ತದೆ. ಇದರರ್ಥ No doubt ವಿಜಿ ಮತ್ತು ಕೀರ್ತಿಗೌಡ ಮದುವೆಯಾಗಿದ್ದಾರೆ!

ಅದೇನು ಗ್ರಹಚಾರವೋ ದುನಿಯಾ ವಿಜಯ್ ಸ್ಟಾರ್‌ವ್ಯಾಲ್ಯೂ ಏರುತ್ತಿದ್ದಂತೆಯೇ ಆತನ ಪ್ರೇಮಸಲ್ಲಾಪಗಳೂ ಚಿತ್ರವಿಚಿತ್ರವಾಗಿ ತೂರಾಡುತ್ತಲೇ ಬಂದವು. ಅಷ್ಟಕ್ಕೂ ನಾಗರತ್ನ ವಿಜಯ್ ಸದ್ಯದ ಅಧಿಕೃತ ಪತ್ನಿಯಾದರೂ ಆತ ಸಿನಿಮಾಕ್ಕೆ ಬರುವ ಮೊದಲೇ ಸಮೀಪದ ಸಂಬಂಧಿಯೊಬ್ಬಳನ್ನು ಮದುವೆಯಾಗಿದ್ದನಂತೆ. ಅದೇನಾಯಿತೋ ಆಕೆಗೆ ವಿಚ್ಛೇದನ ನೀಡಿ ನಾಗರತ್ನಳನ್ನು ಕೈಹಿಡಿದ. ಆಕೆಗೆ ಮೂರು ಮಕ್ಕಳು ಬೇರೆ. ಮೊದಲನೆಯವಳು ಮೋನಿಕಾ, ಎರಡನೇ ಮಗು ಮೋನಿಷಾ ಮತ್ತು ಮೂರನೆಯವನು ಸಾಮ್ರಾಟ್.

2014ರ ಆರಂಭದಲ್ಲಿ ವಿಜಿಯ ಇಮೇಜ್ ಉತ್ತುಂಗಕ್ಕೇರಿತ್ತಲ್ಲ, ಅದೇ ಹೊತ್ತಿಗೆ ಪತ್ನಿ ನಾಗರತ್ನಳ ಬೊಬ್ಬೆ. ನನ್ನ ಗಂಡ ಶುಭಾ ಪೂಂಜಾಳನ್ನು ಮದುವೆಯಾಗಿದ್ದಾನೆ. ಮನೆಗೆ ಬರುತ್ತಿಲ್ಲ, ಪ್ರಶ್ನಿಸಿದರೆ ಹಿಂಸೆ ಕೊಡುತ್ತಾನೆ...!

ಆ ಹೊತ್ತಿಗೆ ವಿಜಿ-ಪೂಂಜಾ ಜೋಡಿಯ ಹಂಗಾಮಾ ಬೇರೆ. ಕತ್ರಿಗುಪ್ಪೆಯ ರಶ್ಮಿ ಕಲಾಭವನದ ಹಿಂದೆ ಭರ್ಜರಿಯಾಗೇ ಮನೆ ಕಟ್ಟಿಸಿದ್ದ ವಿಜಿ ಅದನ್ನು ತನ್ನ ಪತ್ನಿ ಹೆಸರಿಗೇ ಮಾಡಿದ್ದ. ಮೂರು ಮಕ್ಕಳ ಜೊತೆ ಪತ್ನಿಯೂ ಅದೇ ಮನೆಯಲ್ಲಿದ್ದರೂ ವಿಜಿ ತನ್ನ ತಂದೆತಾಯಂದಿರನ್ನು ಬನಶಂಕರಿಯಲ್ಲಿ ಟೈಗರ್ ಪ್ರಭಾಕರ್ ಮನೆ ಪಕ್ಕದ ಇನ್ನೊಂದು ಮನೆಯಲ್ಲಿಟ್ಟಿದ್ದ. ತನ್ನ ತಂದೆತಾಯಿಗಳಿಗೆ ನಾಗರತ್ನ ಹಿಂಸೆ ಕೊಡ್ತಾಳೆ ಅದಕ್ಕೇ ನಾನು ಹೆಂಡ್ತಿ ಬಿಡ್ತೀನಿ ಎಂದು ವಿಜಯ್ ಕಾರಣ ಕೊಟ್ಟು ಫ್ಯಾಮಿಲಿ ಕೋರ್ಟ್ ಮೆಟ್ಟಿಲನ್ನೂ ಹತ್ತಿದ್ದ. ಯಾವತ್ತು ಕೋರ್ಟು ತಿಂಗಳಿಗೆ 30 ಸಾವಿರವನ್ನು ಪತ್ನಿಗೆ ತಾತ್ಕಾಲಿಕ ಜೀವನಾಂಶವಾಗಿ ನೀಡಬೇಕೆಂದು ಮಧ್ಯಂತರ ಆದೇಶ ಹೊರಡಿಸಿತೋ ವಿಜಿ ಮೆತ್ತಗಾದ.

ಅದೇನಾಯಿತೋ ಈ ಎಲ್ಲಾ ರಾದ್ಧಾಂತಗಳ ತಲೆಬಿಸಿಯೇ ಬೇಡ ಎಂದ ಶುಭಾ ಪೂಂಜಾ ಪಕ್ಕ ಮಂಗಳೂರು ವರಸೆಯಲ್ಲೇ ವಿಜಿಯಿಂದ ದೂರಾದಳು. ಹಾಗಂತ ಫ್ಯಾಮಿಲಿಯಾದರೂ ಸರಿಹೋಗಬೇಕಲ್ಲವೆ? ಇದಕ್ಕೆ ತಾಪತ್ರಯ ಕಾದಿತ್ತು. ಅದು ಜಯಮ್ಮನ ಮಗ ಹೀರೋಯಿನ್ ಭಾರತಿ. ಶುಭಾ ಪೂಂಜಾ ಕೈಕೊಟ್ಟ ನಂತರ ಜಯಮ್ಮನ ಮಗ ಹೀರೋಯಿನ್ ಡಾ. ಭಾರತಿಯನ್ನು ವಿಜಿ ಮದುವೆಯಾಗುತ್ತಾನೆಂದೋ ಅಥವಾ ಮದುವೆ ಮುಗಿದೇಹೋಯಿತೆಂದೋ ಅದ್ಯಾರು ಪುಕಾರಿಟ್ಟರೋ ಗೊತ್ತಿಲ್ಲ, ಪತ್ನಿ ನಾಗರತ್ನ ಮಾತ್ರ ಇದನ್ನೇ ಸತ್ಯವೆಂದು ನಂಬಿಬಿಟ್ಟಳು. ಆಕೆಗೊಬ್ಬ ತಮ್ಮನಿದ್ದ. ಆತ ತನ್ನ ಒಂದಿಷ್ಟು ಗೆಳೆಯರನ್ನು ರೆಡಿ ಮಾಡಿದ್ದೇ ಶೂಟಿಂಗ್ ಮುಗಿದ ಮೇಲೆ ವಿಜಿ ಎಲ್ಲಿಗೆ ಹೋಗುತ್ತಾನೆ, ಎಲ್ಲಿ ರಾತ್ರಿ ಕಳೆಯುತ್ತಾನೆಂದು ಗೂಢಚಾರಿಕೆ ಮಾಡಿಸಿದ್ದೇ ಮಾಡಿಸಿದ್ದು!



ವಿಜಿ ಮೊದಲ ಪತ್ನಿ ನಾಗರತ್ನ ಮತ್ತು ಮಕ್ಕಳ ಜೊತೆ

ಸತತ ಆರು ತಿಂಗಳ ಪತ್ತೇದಾರಿಯ ನಂತರ ನಾಗರತ್ನ ತಮ್ಮ ಮತ್ತಾತನ ಹುಡುಗರು ಪತ್ತೆ ಹಚ್ಚಿದ್ದು ಮೈಸೂರು ರಸ್ತೆಯ ನೈಸ್ ರಿಂಗ್‌ರೋಡ್ ಪಕ್ಕದ ಐಷಾರಾಮಿ ಫ್ಲಾಟ್ ಒಂದನ್ನು. ಶೂಟಿಂಗ್ ಮುಗಿದದ್ದೇ ಯಾವ್ಯಾವುದೋ ಕಾರನ್ನೇರಿ ಇನ್ನೆಲ್ಲಿಗೋ ಬರುತ್ತಿದ್ದ ವಿಜಿ ತನ್ನ ಪತ್ನಿಯ ಕಡೆಯವರೇನಾದರೂ ಫಾಲೋ ಮಾಡುತ್ತಿದ್ದಾರಾ ಎಂದು ಕಣ್ಣಿಡಲು ಮೂರ್‍ನಾಲ್ಕು ಮಂದಿ ಶಿಷ್ಯರನ್ನಿಟ್ಟಿದ್ದ. ಅವರು ಬೈಕುಗಳಲ್ಲಿ ವಿಜಿ ಹೋಗುತ್ತಿದ್ದ ಕಾರಿನ ಹಿಂದೆ ಮೊದಲು ನಿಗದಿಯಾಗಿದ್ದ ಸ್ಥಳದ ತನಕ ಹಿಂಬಾಲಿಸುತ್ತಿದ್ದರು. ಯಾರೂ ಹಿಂಬಾಲಿಸುತ್ತಿಲ್ಲ ಎಂದು ಗೊತ್ತಾಗಿದ್ದೇ ಶೂಟಿಂಗ್‌ನಿಂದ ಬಂದಿದ್ದ ಕಾರನ್ನು ಬಿಟ್ಟು ವಿಜಿ ಮತ್ತೊಂದು ಕಾರಿನಲ್ಲಿ ನಾಪತ್ತೆಯಾಗುತ್ತಿದ್ದ. ಕೆಲವೊಮ್ಮೆ ಶೂಟಿಂಗ್ ಸ್ಥಳದಿಂದ ತನ್ನ ನೈಸ್‌ರಸ್ತೆ ಅಪಾರ್ಟ್‌ಮೆಂಟ್ ಸೇರಿಕೊಳ್ಳುವ ಮು[illegible] ಮೂರ್‍ನಾಲ್ಕು ಕಾರುಗಳನ್ನು ಬದಲಿಸುತ್ತಿದ್ದ.

ತನ್ನ ಪತಿ ನೈಸ್‌ರೋಡ್ ಅಪಾರ್ಟ್‌ಮೆಂಟಿನಲ್ಲಿ ನಿಗೂಢ ಸಂಸಾರ ಶುರುವಿಟ್ಟಿರುವುದು ಜಯಮ್ಮನ ಮ[illegible] ಹೀರೋಯಿನ್ ಡಾ. ಭಾರತಿಯ ಜೊತೆಗೇ ಎಂದು ಲೆ[illegible] ಹಾಕಿದ್ದ ನಾಗರತ್ನ ಮತ್ತಾಕೆಯ ತಮ್ಮನಿಗೆ ಅದು ಹೀರೋಯಿನ್ ಭಾರತಿಯಲ್ಲ ಮತ್ತೊಬ್ಬಳು ಹೀರೋಯಿನ್ ಕೀರ್ತಿಗೌಡ ಎಂಬ ವಾಸ್ತವ ಹೇಗೆ ತಾನೇ ಗೊತ್ತಾಗಲು ಸಾಧ್ಯ?

ಈ ಮಧ್ಯೆ ಕೌಟುಂಬಿಕ ನ್ಯಾಯಾಲಯ ಬೇರೆ ಪತ್ನಿಗೆ ಮಾಸಿಕ 30 ಸಾವಿರ ಕೊಡಬೇಕೆಂದು ಆದೇಶಿಸಿತ್ತು. ಅದೇ ಹೊತ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಬುಲಾವ್ ಬಂದಿತ್ತು. ಹೊಸಕೆರೆಹಳ್ಳಿಯ ಕಾಂಗ್ರೆಸ್ ನಾಯಕರೊಬ್ಬರು ನಾಗರತ್ನರನ್ನು ಮುಖ್ಯಮಂತ್ರಿ ಬ[illegible] ಕರೆದೊಯ್ದು 'ಇವರೂ ಕುರುಬರೇ ನೀವೊಂದು ಮಾತು ಹೇಳಿದರೆ ಆತ ಸರಿಹೋದಾನು' ಎಂದಿದ್ದ[illegible] ಅನುಕಂಪದಿಂದಲೇ ಸಿದ್ದು ದುನಿಯಾ ವಿಜಿಯನ್ನು ಕರೆಸಿಕೊಂಡಿದ್ದರು. ಮುಖ್ಯಮಂತ್ರಿ ನಿವಾಸದಲ್ಲಿ ಗಂಡಹೆಂಡಿರಿಬ್ಬರನ್ನೂ ಕೂರಿಸಿ ಸಿದ್ದು ವಿಜಿಗೆ ಬು[illegible] ಹೇಳಿದ್ದಾಯ್ತು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಅ[illegible] ಪರಿಹಾರವೂ ತಪ್ಪಿತ್ತು, ಇತ್ತ ಹಾಕಿದ ಕೇಸೂ ಬಿತ್ತು ಎಂಬಂತೆ ವಿಜಿ ಏನೋ ಪಶ್ಚಾತ್ತಾಪವಾದಂತೆ ಇಲ್ಲ ಇನ್ನುಮುಂದೆ ಚೆನ್ನಾಗಿ ನೋಡ್ಕೋತೀನಿ ಎಂದುಬಿಟ್ಟ. ಟೀವಿಗಳನ್ನೆಲ್ಲ ಕರೆಸಿದ್ದೇ 'ಮುಖ್ಯಮಂತ್ರಿಗಳು ಹೇಳವ್ರೆ ಅವರೂ ನಮ್ಮ ಜಾತಿಯವ್ರೆ. ಅವರೇ ಹೇಳಿದ ಮೇಲೆ ಬಿಡ್ತೀನಾ? ಇನ್ನು ಮುಂದೆ ಚೆನ್ನಾಗಿ ನೋಡ್ಕಂತೀನಿ.' ಎಂದುಬಿಟ್ಟ.

ಪಾಪ, ಪತ್ನಿಗೇನು ಗೊತ್ತು ಮುಂದೈತೆ ಮಾರಿಹಬ್ಬ ಅಂತ? ಗಂಡ ಸರಿಹೋದ ಅಂತಲೇ ನಂಬಿಕೊಂಡಳು. ಕತ್ರಿಗುಪ್ಪೆಯ 'ದುನಿಯಾ ರಣ' ಮನೆಯಲ್ಲೇ ತಾಯಿ ಮತ್ತು ಮೂರೂ ಮಕ್ಕಳು ಇರುವಂತಾಯ್ತಾದರೂ ದುನಿಯಾ ವಿಜಿ ಅಲ್ಲಿಗೆ ಬರುತ್ತಿದ್ದದ್ದು ಅಪರೂಪಕ್ಕೊಮ್ಮೆ. ಬಂದು ಮಕ್ಕಳನ್ನು ಮಾತಾಡಿಸಿಕೊಂಡು ಹೆಚ್ಚೆಂದರೆ ಗಂಟೆಯೋ ಎರಡು ಗಂಟೆಯೋ ಕಳೆದು ನಾಪತ್ತೆಯಾಗುತ್ತಿದ್ದ. ಪತ್ನಿಯ ಮನವೊಲಿಸಿ ಹಾಕಿದ್ದ ಕೇಸನ್ನೂ ಹಿಂತೆಗೆಸಿದ. ಕನಿಷ್ಠ ಮಕ್ಕಳ ಮದುವೆಗಾದರೂ ಅನುಕೂಲವಾಗಲೆಂದು ಬಂದಷ್ಟು ಬರಲಿ ಎಂದುಕೊಂಡೆ ಕಾಲ ನೂಕುತ್ತಿದ್ದ ಪತ್ನಿ ನಾಗರತ್ನಳಿಗೆ ಕೀರ್ತಿಗೌಡ ಎಂಬ ಹೊಸ 'ಸವತಿ'ಯೊಬ್ಬಳು ಅವತಾರವಾಗಿದ್ದು ಗೊತ್ತೇ ಆಗಲಿಲ್ಲ!

ವಿಜಿ ಅಷ್ಟೆಲ್ಲಾ ಜಾಗ್ರತೆ ವಹಿಸಿ, ಮೂರ್‍ನಾಲ್ಕು ಕಾರುಗಳನ್ನು ಬದಲಿಸಿ ನೈಸ್‌ರಸ್ತೆಯ ಅಪಾರ್ಟ್‌ಮೆಂಟ್ ಸೇರಿಕೊಳ್ಳಲು ಕಾರಣವಾಗಿದ್ದು ಕೀರ್ತಿ ಪಟಾದಿ ಅಲಿಯಾಸ್ ಕೀರ್ತಿಗೌಡ ಎಂಬ ಚಂದುಳ್ಳಿ ಮಾಡೆಲ್. ಅದೆಲ್ಲಿ ಪ್ರೀತಿ ಚಿಗುರಿತೋ ಅದೇನು ಗಳಿಗೆ ಕೂಡಿತೋ ಗೊತ್ತಿಲ್ಲ ಕೀರ್ತಿಗೌಡ ವಿಜಿಯ ಬಾಳಿಗೆ ಎಂಟ್ರಿ ಕೊಟ್ಟಿದ್ದಳು. ಆ 2016ರ ಸೌತ್ ಇಂಡಿಯನ್, ಬ್ಯೂಟಿ ಕ್ವೀನ್, ಕಲರ್ಸ್ ಕನ್ನಡ ವಾಹಿನಿಯಲ್ಲಿ ಕಾಮಿಡಿ ಗಣೇಶ್ ನಡೆಸುತ್ತಿದ್ದ 'ಸೂಪರ್ ಮಿನಿಟ್' ಎಂಬ ರಿಯಾಲಿಟಿ ಶೋನಲ್ಲೂ ಮಿಂಚಿದ್ದ ಕೀರ್ತಿಗೌಡ ಬೆಂಗಳೂರಿನ ಶೇಷಾದ್ರಿಪುರದ ವಾಸಿ. ತಂದೆ ಸರ್ಕಾರದ ಯಾವುದೋ ಇಲಾಖೆಯ ಅಧಿಕಾರಿಯಂತೆ. ಶೇಷಾದ್ರಿಪುರಂ ಕಾಲೇಜಿನಲ್ಲೇ ತನ್ನ ಡಿ[illegible]

ರಾಜಿ ಮಾಡಿಸಿದ್ದು ದರ್ಶನ್ ಮತ್ತು ವರ್ತೂರು ಪ್ರಕಾಶ್?

ವಿಜಿ ತನ್ನ ಆಪ್ತ ಪತ್ರಕರ್ತರೊಬ್ಬರ ಬಳಿ ಬಾಯಿಬಿಟ್ಟಂತೆ, ಪತ್ನಿ ನಾಗರತ್ನ ಮತ್ತು ಮೂರು ಮಕ್ಕಳ ಭವಿಷ್ಯಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿದ ನಂತರವೇ ಹೊಸ ಮದುವೆಯನ್ನು ಬಹಿರಂಗಪಡಿಸಿದ್ದಾನೆ. ಆ ಪ್ರಕಾರ ತನ್ನ ಬನಶಂಕರಿಯ ಮನೆ 'ದುನಿಯಾ ರಣ'ವನ್ನು ಪತ್ನಿಗೇ ಬಿಟ್ಟುಕೊಟ್ಟಿದ್ದಾನೆ. ಅಲ್ಲದೆ ಮೂರು ಮಕ್ಕಳ ಹೆಸರಿಗೆ ತಲಾ ಒಂದು ಕೋಟಿಯಂತೆ ಫಿಕ್ಸೆಡ್ ಡಿಪಾಸಿಟ್ ಕೂಡ ಮಾಡಿದ್ದಾನೆ. ಇದಲ್ಲದೆ ಪತ್ನಿ ನಾಗರತ್ನರ ಹೆಸರಿಗೆ ಎರಡು ಕೋಟಿಯಷ್ಟು ಠೇವಣಿಯಿಟ್ಟು ಅದರ ಮಾಸಿಕ ಬಡ್ಡಿಯನ್ನು ಜೀವನ ನಿರ್ವಹಣೆಗೆಂದು ನಿಗದಿಪಡಿಸಿದ್ದಾನೆ. ಜೊತೆಗೆ ಇಬ್ಬರು ಹೆಣ್ಣುಮಕ್ಕಳು ಅವರ ವಿದ್ಯಾಭ್ಯಾಸ ಮತ್ತು ಮದುವೆಯ ಹೊಣೆಯನ್ನೂ ತಾನೇ ಹೊತ್ತುಕೊಂಡಿದ್ದಾನೆ. ಮಗನ ಎಲಾ ಖರ್ಚು ವೆಚ್ಚವನ್ನೂ ಭರಿಸುವ ಒಪ್ಪಂದಕ್ಕೆ ಬಂದನಂತರವೇ ಪತ್ನಿ ಕೀರ್ತಿ ಜೊತೆ ಸಂಸಾರಕ್ಕೆ ಅನುಮತಿಸಿದಳಂತೆ.




ವರ್ತೂರು ಪ್ರಕಾಶ್



ದರ್ಶನ್

ಆದರೆ ಗಾಂಧಿನಗರದ ನಿರ್ಮಾಪಕರೊಬ್ಬರು ಬೇರೆಯದೇ ಹಕೀಕತ್ತೊಂದನ್ನು ಬಿಚ್ಚಿಡುತ್ತಾರೆ. ಅದು ದರ್ಶನ್‌ನ ಕೈಚಳಕವಂತೆ. ಇಲ್ಲಿಗೆ ಆರು ತಿಂಗಳ ಹಿಂದೆ ಪತ್ನಿ-ಪತ್ನಿಯರಿಬ್ಬರನ್ನೂ ಕೂರಿಸಿ ದರ್ಶನ್ ರಾಜಿ ಸಂಧಾನ ನಡೆಸಿದ್ದರ ಫಲವೇ ಈ ಒಪ್ಪಂದವಂತೆ. ಆ ಪ್ರಕಾರ ನಾಗರತ್ನ ವಿಚ್ಛೇದನಕ್ಕೆ ಒಪ್ಪಿಕೊಂಡರಾ ಅಥವಾ ಕೀರ್ತಿಗೌಡರ ಜೊತೆಗಿನ ಸಂಬಂಧವನ್ನು ಪ್ರಶ್ನಿಸಲಾರೆ ಎಂದು ಬರೆದುಕೊಟ್ಟರಾ ಗೊತ್ತಿಲ್ಲ. ತನ್ನ ಪತ್ನಿ ಮಕ್ಕಳು ಸಂಬಂಧಿಕರೆಲ್ಲರನ್ನೂ ಒಪ್ಪಿಸಿದ ನಂತರವೇ ವಿಜಿ ಹೊಸ ಸಂಬಂಧವನ್ನು ಬಹಿರಂಗಪಡಿಸಿರಬೇಕು. ನಾಗರತ್ನ ಕುಟುಂಬದ ಸಂಬಂಧಿ ಕೋಲಾರದ ವಕೀಲರೊಬ್ಬರು ಪತಿ-ಪತ್ನಿ ನಡುವೆ ಲಿಖಿತ ಒಪ್ಪಂದವನ್ನು ಕುದುರಿಸಿದರೆಂಬುದು ಒಂದು ಸುದ್ದಿ. ದುನಿಯಾ ವಿಜಿಯ ಪರವಾಗಿ ಕಾಂಗ್ರೆಸ್ ಶಾಸಕ ವರ್ತೂರು ಪ್ರಕಾಶ್ ಆಸಕ್ತಿ ವಹಿಸಿ ಸಾಂಸಾರಿಕ ತಾಪತ್ರಯವನ್ನು ತಣಿಸಿದರೆಂಬುದೂ ಮತ್ತೊಂದು ಸುದ್ದಿ.

ಇವೆಲ್ಲವೂ ಕೇವಲ ವದಂತಿಯೇ ಹೊರತು ಅಸಲೀ ಮರ್ಮವೇನಿದ್ದರೂ ಕಾಲನ ಮೂಲಕವೇ ನಿರ್ಧರಿಸಲ್ಪಟ್ಟರೂ ಅಚ್ಚರಿಯಿಲ್ಲ, ಕಾದು ನೋಡಬೇಕಷ್ಟೇ.



...ಗಿಸಿ ಮಾಡೆಲಿಂಗ್‌ಗೆ ಧುಮುಕಿದ ಕೀರ್ತಿ ಮೊದಲ ...ಗೆ ಹೀರೋಯಿನ್ನಾಗಿದ್ದು ಜಿಗರ್ ಥಂಡಾದ ಹೀರೋ ...ಕುಲ್ ಜೊತೆಯಲ್ಲಿ, 'ನನ್ನುಸಿರೇ' ಎಂಬ ಚಿತ್ರದಲ್ಲಿ. ... ನಂತರ 'ಜಾಲಿ ಡೇಸ್' ಎಂಬ ಚಿತ್ರದ ನಾಲ್ವರು ...ರೋಯಿನ್‌ಗಳ ಪೈಕಿ ಕೀರ್ತಿಯೂ ಒಬ್ಬಳಾಗಿ ...ಸಿದಳು. ಆದಾದ ನಂತರ 'ಪ್ರೀತಿ ನೀ ಶಾಶ್ವತನಾ' ...ಬ ಹೇಳಹೆಸರಿಲ್ಲದ ಚಿತ್ರಕ್ಕೆ ಹೀರೋಯಿನ್ನಾದಳು. ...ವುದು ಬರಕತ್ತಾಗಲಿಲ್ಲ, ಹೇಳಿಕೊಳ್ಳುವಂತಹ ಬ್ರೇಕ್ ...ಡ ಸಿಗಲಿಲ್ಲ. ಆಕೆಯ ಪಾಲಿಗೆ ಕೊನೆಯ ಮತ್ತು ...ನೀಯ ಚಾನ್ಸ್ ಅಂತ ಸಿಕ್ಕಿದ್ದು ಸುದೀಪ್‌ನ 'ಜಸ್ಟ್ ...ತ್‌ಮಾತಲ್ಲಿ' ಅದು ಎರಡನೇ ಹೀರೋಯಿನ್ನಾಗಿ. ...ರ್ಯಾ ಅದರ ಮೊದಲನೇ ಹೀರೋಯಿನ್. ಇತ್ತ ...ಡೆಲಿಂಗೂ ಕೈಹಿಡಿಯಲಿಲ್ಲ ಅತ್ತ ಸಿನಿಮಾ ಬದುಕು ...ರಕತ್ತಾಗಲಿಲ್ಲ ಎಂಬಂಥ ದುರ್ಭಿಕ್ಷ ಪರಿಸ್ಥಿತಿಯಲ್ಲಿ ವಿಜಿ ...ಟ್ರ ಕೊಟ್ಟನೆ?

... ಒಂದು ಮೂಲದ ಪ್ರಕಾರ ಈಕೆಯನ್ನು ವಿಜಿಗೆ ...ತ್ತಿಸಿದವನು 'ಜಯಮ್ಮನ ಮಗ' ಪ್ರೊಡ್ಯೂಸರ್ ರಮೇಶ್. ...ನ್ನ ಮುಂದಿನ ಯಾವುದಾದರೂ ಚಿತ್ರಕ್ಕೆ ...ರೋಯಿನ್ನಾಗಿಸುವಂತೆ ಕೀರ್ತಿ ವಿಜಿಗೆ ದುಂಬಾಲು ...ದ್ದಿದ್ದಳೆಂಬುದು ಗಾಂಧಿನಗರದ ಮಂದಿಯ ಮಾತು. ...ನೆಗದು ಸಾಂಸಾರಿಕ ತಾಪತ್ರಯವಾಗಿ ಆ ಮೂಲಕ ...ಜಿಯ ಬಾಳಿಗೆ ಇನ್ನೇನೋ ಆಗಿ ಪರಿಣಮಿಸಿದೆ. ಅದೆಲ್ಲಿ ...ದುವೆಯಾದರು, ಮಾಡಿಸಿದ್ದು ಯಾರು ಏನು ಕತೆ ...ನೋಂದು ಸ್ಪಷ್ಟವಿಲ್ಲ ಅಥವಾ ಗಂಧರ್ವವಿಧಿಯ ...ವಾಹವೇ ಗೊತ್ತಿಲ್ಲ. 2014ರ ನವೆಂಬರ್‌ನಿಂದಲೇ ಕೀರ್ತಿ ...ತ್ತು ವಿಜಿ ಒಟ್ಟೊಟ್ಟಿಗೆ ವಾಸಿಸಲಾರಂಭಿಸಿದ್ದಂತೂ ಪಕ್ಕಾ. ...ಷ್ಟು ದಿನಗಳ ಕಾಲ ನಿಗೂಢವಾಗೇ ಇದ್ದ ಸಂಸಾರ ...ಭ್ರಮ ಈಗ ಏಕಾಏಕಿ ಸುದ್ದಿಯಾಗಿದ್ದಾದರೂ ಏಕೆಂಬುದೇ ...ರ್ಥವಾಗುತ್ತಿಲ್ಲ.

ಬಹುಶಃ ಕೀರ್ತಿಗೌಡರೇ ಇದನ್ನು ಲೀಕ್ ...ಮಾಡಿರಬಹುದೆ? ಏಕೆಂದರೆ ಈ ಬಗ್ಗೆ ವಿಜಿ ...ಯಿಬಿಡುತ್ತಿಲ್ಲ, ಪತ್ನಿ ನಾಗರತ್ನ ಕೂಡ ತಮ್ಮ ಫೋನ್ ...ಚ್ ಆಫ್ ಮಾಡಿಕೊಂಡು ಅಜ್ಞಾತವಾಸಕ್ಕೆ ಬಿದ್ದಂತಿದೆ. ...ಲ್ಲಾ ಬಿಟ್ಟು ಯಾವುದೋ ವೆಬ್‌ಸೈಟೊಂದು ವಿಜಿ-...ರ್ತಿ ಸಲ್ಲಾಪದ ಫೋಟೋಗಳನ್ನು ಪ್ರಕಟಿಸಿದ್ದರ ಹಿಂದಿರುವ ...ದ್ದೇಶವಾದರೂ ಏನು? ಇದ್ಯಾವುದೂ ಒಮ್ಮೆಗೇ ತೆಗೆದ ...ಫೋಟೋಗಳಲ್ಲ. ಮೊದಲ ಫೋಟೋ ಕೀರ್ತಿ ...ಮಾಡೆಲ್ಲಾಗಿದ್ದಾಗ ತೆಗೆದಂತಿದೆ. ಎರಡನೆಯದು ಮನೆಯಲ್ಲಿ ...ದೇ ಹಾರದೊಳಕ್ಕೆ ಇಬ್ಬರೂ ಬಂಧಿತರಾಗಿದ್ದು. ಮೂರನೇ ...ಫೋಟೋ ಮಗುವನ್ನು ಆಡಿಸುತ್ತಿರುವಾಗಿನದ್ದು. ಅಂದರೆ ...ದೋ ವಿಜಿಯೇ ಸ್ಯಾಂಪಲ್ಲಿಗೆ ಅಂತ ಬಿಟ್ಟನೆ? ಅಥವಾ ...ರ್ತಿ ಮುಂಜಾಗರೂಕತಾ ಕ್ರಮವಾಗಿ ಲೀಕ್ ...ಮಾಡಿರಬಹುದೆ?

...ದುವೆ ತಪ್ಪೇನಿಲ್ಲ, ತನಗಿಷ್ಟವಾದವರನ್ನು ...ತೆಗೂಡುವ ಎಲ್ಲಾ ಸ್ವಾತಂತ್ರ್ಯವೂ ವಿಜಿಗಿದೆ. ಹಾಗಂತ ... ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡುವಷ್ಟು ...ರಿಯೂ ವಿಜಿಯಲ್ಲ, ಯಾರ್‍ಯಾರ ಹೊಟ್ಟೆಬರದಲ್ಲಿ ಏನೇನು ...ರೆದಿದೆಯೊ? ತನ್ನ ಪತ್ನಿಗೆ ಕಾನೂನುಬದ್ಧವಾಗೇ ವಿಚ್ಛೇದನ ...ತ್ತು ಮೂರು ಮಕ್ಕಳ ಭವಿಷ್ಯಕ್ಕೂ ವ್ಯವಸ್ಥೆ ಕಲ್ಪಿಸಿ ...ಕೊಂಡಿದ್ದರೂ ತನ್ನ ಹೊಸ ಸಾಂಸಾರಿಕ ಸಾಹಸಕ್ಕೆ ...ಮುಟ್ಟಿದ್ದೇ ಆಗಿದ್ದರೆ ಅದರಲ್ಲಿ ತಪ್ಪೇನಿದೆ?

ಗಂಡು ಹೆಣ್ಣಿನ ನಡುವಿನ ಯಾವ ಸಂಬಂಧವನ್ನೂ ...ಷ್ಟು ಕಾಲ ಮುಚ್ಚಿಡಲು ಸಾಧ್ಯವೇ ಇಲ್ಲ, ಹಾಗಿದ್ದ ...ದಲ್ಲಿ ಅದನ್ನು ಧೈರ್ಯವಾಗೇ ಹೇಳಿಕೊಳ್ಳಲು ...ಬೇಕು?

ರಾ. ಸೋಮನಾಥ್

ಅಂಬಣ್ಣಾ, ಈ ಹಗರಣ ನಿಜವೇನಣ್ಣಾ?

ಥೂತ್ತೇರಿ

ಯಾಹು



ಮೈಸೂರಿನ ಯದುವೀರ್ ಮತ್ತು ತ್ರಿಷಿಕಾ ಮದುವೆ ಮಾಜಿ ಅರಮನೆಯಲ್ಲಿ ಜರುಗಿತು. ಅರಮನೆಯ ಮದುವೆ ಇಷ್ಟು ಗಂಭೀರವಾಗಿ ಜರುಗುತ್ತದೆಂದು ಗೊತ್ತೇ ಇರಲಿಲ್ಲ. ಆದರೇನು ನಮ್ಮ ಪಬ್ಲಿಕ್ ಟಿವಿಯ ಕಡ್ಡಿ ರಂಗನ ಕಾಮೆಂಟ್ರಿ ಕೇಳುತ್ತಿದ್ದರೆ ನಾವೇನು ಪ್ರಜಾಪ್ರಭುತ್ವದಲ್ಲಿದ್ದೇವೊ ಅಥವ ಇನ್ನೂ ಅರಸೊತ್ತಿಗೆಯಲ್ಲಿದ್ದೇವೊ ಎಂದು ಕನ್‌ಫ್ಯೂಜಾಗತೊಡಗಿತು. ಅದೇನು ಪುರೋಹಿತರು, ಅದೇನು ನಾಮಗಳು, ಅದೇನು ಹಾರಗಳು, ಅವರ ಫ್ಯಾನ್ಸಿ ಡ್ರೆಸ್ ನೋಡಲು ಎರಡು ಕಣ್ಣೂ ಸಾಲದಾಗಿದ್ದವು. ಅದಕ್ಕೇ ಇರಬೇಕು ಕಡ್ಡಿ ರಂಗ ರಂಗುರಂಗಾಗಿ ಅರಮನೆ ಮದುವೆ ವರ್ಣಿಸುತ್ತಿದ್ದುದು. ಎಷ್ಟೇ ಆಗಲಿ ರಾಜರುಗಳನ್ನು ಆಶ್ರಯಿಸಿ, ಸದಾ ಯಜ್ಞ ಯಾಗ ಮಾಡಿಸುತ್ತ, ಕಲ್ಪಿತ ಪುರಾಣಗಳನ್ನು ಬೋಧಿಸುತ್ತ, ಶ್ರಮ ವಿರೋಧಿ ಜೀವವಿರೋಧಿಗಳಾಗಿ ಬದುಕುತ್ತ ಮನುಧರ್ಮ ಹೊಸದವರ ಸಂತತಿಯವರಲ್ಲವೆ. ಅಂಥವರಿಗೆಲ್ಲಾ ಯದುವೀರನ ಮದುವೆ ಶ್ರೀರಾಮಚಂದ್ರನ ಮದುವೆಯಂತೆ ಕಂಡಿದೆಯಂತಲ್ಲಾ, ಥೂತ್ತೇರಿ!

* * *

ಬಿಜೆಪಿ ಪಾಲಿಗೆ ಶಿವಮೊಗ್ಗದ ಹಕ್ಕಬುಕ್ಕರಂತಿದ್ದ ಯಡ್ಡಿ ಮತ್ತು ಈಶ್ವರಿ ಪ್ರಮುಖಗಳು ಇದ್ದಕ್ಕಿದ್ದಂತೆ ಎಣ್ಣೆಗಡಿಗೆಗಳಾಗಿವೆಯಲ್ಲ, ಕಾರಣ ಕೇಳಿದರೆ ಯಡಿಯೂರಪ್ಪ ನೇಮಿಸಿದ ಕೆಜೆಪಿ ಲೀಡರುಗಳ ಲೀಸ್ಟು ಕೊಡುವ ಈಶ್ವರಿ ಪಟಾಲಂ ಮತ್ತೆ ರಾಜ್ಯದಲ್ಲಿ ಬಿಜೆಪಿ ಮತ್ತು ಕೆಜೆಪಿ ತುಕಡಿಗಳ ಸಮರದ ಮುನ್ಸೂಚನೆ ಕೊಡುತ್ತಿವೆಯಲ್ಲ. ತಾನು ಈ ರಾಜ್ಯದ ಬಗ್ಗೆ ಮಹಾ ಕಾಳಜಿಯುಳ್ಳ ಮನುಷ್ಯನೆಂದು ತೋರಿಸಿಕೊಳ್ಳುವ ಸೋಗಿನಲ್ಲಿ ಈಶ್ವರಿ ಮಹದೇವಪ್ಪನ ಮಗ ಮರಳು ಮುಕ್ಕಿದ ಸುದ್ದಿಯನ್ನೇ ದೊಡ್ಡದು ಮಾಡಿಕೊಂಡು ಮಹದೇವಪ್ಪನಿಂದ ಮಾನ ಮರ್ಯಾದೆಯಿಲ್ಲದ ಹುಚ್ಚು ನಾಯಿ ಎಂದು ಬೈಸಿಕೊಂಡರಲ್ಲಾ. ಇದನ್ನು ಕೇಳಿದ ಯಡ್ಡಿ ಶೋಭಾ ಪಡೆ ತುಂಗಾ ಕಾಲುವೆ ನವೀಕರಣದ ಕರ್ಮಕಾಂಡ ಮರೆತ ಈಶ್ವರಪ್ಪನಿಗೆ ಮಹದೇವಪ್ಪ ಸರಿಯಾಗಿ ಹೇಳಿದ್ದಾನೆಂದು ಕೇಕೆ ಹಾಕಿ ನಕ್ಕರಂತಲ್ಲಾ, ಥೂತ್ತೇರಿ!!

* * *

ಸಿದ್ದರಾಮಯ್ಯನ ಸಂಪುಟದಿಂದ ಎಸೆಯಲ್ಪಟ್ಟವರ ಪೈಕಿ ಮೂವರು ದಕ್ಷ, ಪ್ರಾಮಾಣಿಕ, ಆರೋಗ್ಯವಂತರ ಪೈಕಿ ಖಮರುಲ್ ಕರಗಿಹೋದರೆ, ಶ್ರೀನಿವಾಸ್ ಪ್ರಸಾದ್ ಭೀಕರ ಅವಮಾನಕ್ಕೆ ತುತ್ತಾದವರಂತೆ ಬಾಯಿಗೆ ಬಂದದ್ದನ್ನೆಲ್ಲಾ ವದರುತ್ತಿರಲಾಗಿ, ಅತ್ತ ಅಂಬರೀಶಣ್ಣನೂ ಒಂದು ಆಟ ತೋರುಸ್ತಿನಿ ಎಂದು ಅವಾಜ್ ಹಾಕಿದ್ದು ಈಗ ಹಳೆ ಮಾತು. ಇನ್ನೇನು ಅಧಿಕೃತ ರಾಜೀನಾಮೆ ಪತ್ರ ಸ್ಪೀಕರ್ ಕೈಸೇರುತ್ತದೆಂದು ಮಂಡ್ಯದಲ್ಲಿ ರಸ್ತೆ ತಡೆ, ಸೀಮೆಎಣ್ಣೆ ಡೀಸೆಲ್ ಅವಾಂತರ ಮಾಡಿದ ಹೈದರೆಲ್ಲಾ ಕಾಯುತ್ತಿರಬೇಕಾದರೆ ಅಂಬಣ್ಣ ಸೂಟು ಬೂಟುಧಾರಿಯಾಗಿ ಗಂಭೀರವಾಗಿ ನಡೆದ ಯದುವೀರ್ ಮದುವೆಯಲ್ಲಿ ಕಾಣಿಸಿಕೊಂಡರಲ್ಲಾ. ಅಂತೂ ಹಳೆಯದನ್ನು ಮರೆತಂತೆ ಕಂಡ ಅಂಬಣ್ಣನನ್ನು ಮಾತನಾಡಿಸಬೇಕೆನಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಜಾಣ ಜಾಣ ಮೈಸೂರ್ ಜಾಣ... ಮಂಡ್ಯದ ಕೋಣ...."

"ಹಲೋ?"

"ನಮಸ್ಕಾರ ಕಣಣ್ಣ, ನಾನು ಯಾಹು."

"ಏನೇಳೊ?"

"ಚನ್ನಾಗಿದ್ದಿಯೇನಣ್ಣ?"

"ಫೋನ್ ಮಾಡಿದ್ಯಾಕೆ ಹೇಳಲೈ!"

"ಸಿದ್ದರಾಮಯ್ಯ ನಿನ್ನನ್ನೇ ತಗಿಯೋ ಧೈರ್ಯ ಮಾಡಿದನಲ್ಲಣ್ಣಾ?"

"ಅದಾಯ್ತಲ್ಲ ಬುಡು."

"ಚಾಮುಂಡೇಶ್ವರಿ ಚುನಾವಣೇಲಿ ಎಷ್ಟು ಓಡಾಡಿದಣ್ಣ ನಿನ್ನ ಭಾಷಣ ಕೇಳೀದೋರ್‍ಯಲ್ಲ ಓಟಾಕಿದ್ರು."

"ಅದವುನು ತಿಳಕಬೇಕಿತ್ತು."

"ಅವುನು ಗೆದ್ದ 275 ಓಟು ನಿನ್ನವೆ ಕಣಣ್ಣ."

"ಹೆಚ್ಚು ಕಮ್ಮಿ ಅರ್ಧ ಓಟು ನನ್ನವೆಯ."

"ಹೌದು. ಇನ್ನರ್ಧ ಕಾಂಗ್ರೆಸ್ಸಿನವು. ಆದ್ರು ಇಂತ ಅವುಮಾನ ಮಾಡೋ ಧೈರ್ಯ ಯಂಗ ಬಂತು?"

"ಧೈರ್ಯಲ್ಲ ಕೇಡುಗಾಲ."

"ಏನೇ ಆಗ್ಲಿ, ನೀನು ಶ್ರೀನಿವಾಸ್ ಪ್ರಸಾದನ್ನ ಹೊಗಳಬಾರದಿತ್ತು ಕಣಣ್ಣ."

"ಯಾಕಲೈ?"

"ಸರಿಲ್ಲ ಕಣಣ್ಣ ಅವುನು. ಕಾಯ್ಲೆ ಮನ್ಸ. ಕೈಲಾಗದೆಯಿದ್ರು ರೆವಿನ್ಯೂ ಖಾತೆ ತಗಂಡ. ಮಲನಾಡ ಕಡೆ ರೈತರಿಗೆ ಒಂದೇ ಒಂದು ಹಕ್ಕುಪತ್ರನೂ ಕೊಡ್ಲಾಗಲಿಲ್ಲ. ಇನ್ನ ಯರಡೋರ್ಸ್ ಅಂಗೇಯಿದ್ದು ಹೋಯಿತ್ತಿದ್ದ."

"ಸರಿ. ಕೇಳಿ ಒಪ್ಪಿಗೆ ಪಡದಲವೇನೂ ರಾಜೀನಾಮೆ ತಗಳದು. ನನ್ನ ಕೇಳಿದ್ರೆ ಬಿಸಾಕ್ತಿದ್ದೆ."

"ಆದೇನೊ ನಿಜ ಕಣಣ್ಣ ಅಂತ ಕೇಂದ್ರದ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಬರದು ಕಾವೇರಿ ಹೋರಾಟಕ್ಕೆ ಬಂದಿದ್ದೆ ನೀನು."

"ಮತ್ತೆ? ಅದು ಗೊತ್ತಿದ್ದೂ ತೆಗಿತನೆ ಅಂದ್ರೆ?"

"ಆಗ ನೀನು ಕಾವೇರಿ ಇಶ್ಯೂಗೆ ರಾಜೀನಾಮೆ ಕೊಟ್ರೂ ಚುನಾವಣೇಲಿ ಸೋತಲ್ಲಣ್ಣ?"

"ಹಳೆ ಸುದ್ದಿ ತಗಂಡೇನು ಮಾಡ್ತಿ? ಬುಡು."

"ಹಳೆ ಸುದ್ದಿಲೊಂದು ತಕರಾರು ಹುಟ್ಟಿಗಂಡದೆ ಕಣಣ್ಣ."

"ಏನ್ಲಾ ಅದು?"

"ಕೇಂದ್ರದ ಮಂತ್ರಿಗಿರಿಗೆ ರಾಜೀನಾಮೆ ಬಿಸಾಕಿದ ನೀನು ರಾಜ್ಯ ಮಂತ್ರಿಗಿರಿಗೆ ಯಾಕಿಷ್ಟು ಗಲಾಟೆ ಮಾಡಿದೆ ಅಂತ?"

"ಅವಮಾನ ಆಗೊವತ್ಗೆ ಮಾಡಿದೆ."

"ನಿನ್ನ ತಗದದ್ರಲ್ಲಿ ಒಂದು ದೊಡ್ಡ ಹಗರಣನೆ ಇದಿಯಲ್ಲಣ್ಣ."

"ಏನಗರಣ?"

"ನೀನು ಮಂತ್ರಿಯಾದೇಟಗೆ ಸ್ವಜಾತಿ ಜನ ಮುತ್ಕಂಡ್ರು. ಈ ಪೈಕಿ ನಾಗಣ್ಣ, ಪುಟ್ಟಸ್ವಾಮಿ, ಲಕ್ಷ್ಮಿಕಾಂತ ಅನ್ನೋ ಖದೀಮರು ಸೇರಿಕೊಂಡು ನಿನ್ನ ಮುಂದೆ ಫಾರಿನ್ ವಿಸ್ಕಿ ಬಾಟಲಿಟ್ಟು, ನಾಕು ಸಾವಿರ ಕೋಟಿ ಹಗರಣ ಮಾಡಿದ್ದರಂತೆ."

"ಯಾವ ಬೋಳಿಮಗನ್ನ ಅಂಗಂದೋನು?"

"ನಿನ್ನ ಖಾತೆಲಿದ್ದ ಅಧಿಕಾರಿಗಳೇ ಹೇಳ್ತಾ ಅವ್ರೆ. ಕರ್ನಾಟಕ ಗೃಹ ಮಂಡಳಿ, ಅಮ್ಯಾಲೆ ಸ್ಲಂ ಬೋರ್ಡು, ರಾಜೀವಗಾಂಧಿ ವಸತಿ ನಿಗಮ, ಇದರಲ್ಲೆಲ್ಲ ಹಣ ಲಪಟಾಯಿಸಿ ನಿನಿಗೊಂದಿಷ್ಟು ಕಮಿಷನ್ ತಳ್ಳಿ ನಿನ್ನ ಈ ಸ್ಥಿತಿಗೆ ನೂಕಿದ್ದರಂತೆ."

"ಮೆಟ್ಟನಲ್ಲಿ ಒಡಿತಿನಿ ಅಂಗಂದ್ರೆ."

"ಮೆಟ್ಟೇನು ಕೀಳಲ್ಲ ಬುಡಣ್ಣ, ಮೆಟ್ಟು ಕೀಳು ಅನ್ನದಾದ್ರೆ ಕಾಲು ಕೀಳು. ಕಾಲು ಕೀಳು ಅನ್ನದಾದ್ರೆ ನೀನು ನೆಡಿಲೇಬಾರ್ದು. ವಿಷಯ ಅದಲ್ಲ, ಪ್ರಾಮಾಣಿಕತೆ ಬಗ್ಗೆ ಮಾತಾಡೊ ನೀನು ಕಮೀಷನ್ ವಿಷಯದಲ್ಲಿ ಏನೇಳ್ತಿ?"

"ಕಮಿಷನ್ನು ಇಲ್ಲ ಯಂತದೂ ಇಲ್ಲ ಫೋನಿಡು."

"ದೇವರಾಣೆ ನೀನು ಸ್ವಜಾತಿ ಜನಗಳಿಂದ್ಲೆ ಹಿಂಗಾದೆ ಕಣಣ್ಣ, ಚೀಫ್ ಇಂಜಿನಿಯರ್ ಟಿ. ಬಿಸ್ಲೇಗೌಡನ್ನ ತಂದು ಸ್ಲಂ ಬೋರ್ಡು ಎಂಡಿ ಮಾಡಿದೆ. ಅವನೇ ನಿನ್ನ ಖಾತೆನ ಈ ಸ್ಥಿತಿಗೆ ತಂದವುನೆ. ಯಾಕಂದ್ರೆ ಪರಸಂಟೇಜ್ ರೂವಾರಿನೆ ಅವುನಂತೆ."

"ಬಿಸ್ಲೇಗೌಡ ಏನು ಅಂತ ನನಗೊತ್ತು, ನೀನೇನೇಳದು?"

"ಬಿಸ್ಲೇಗೌಡ ನನಿಗೆ ಗೊತ್ತು ಅಂತ್ಲೆ ಮೋಸ ಹೋಗಿದ್ದಿಯಲ್ಲಣ್ಣ."

"ಏನು ಮೋಸ ಹೋಗಿದ್ದಿನೊ?"

"ನೋಡಣ್ಣ, ಎಸ್ಸೆಂ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಒಂದು ಲಕ್ಷ ಮನೆ ಕೊಟ್ರು. ಅದು ಜಾಸ್ತಿ ಸುದ್ದಿಯಾಗಲಿಲ್ಲ. ನೀನು ಇದುವರಿಗೂ ಯಾರಿಗೂ ಒಂದು ಮನೆ ಕೊಡಕ್ಕಾಗಿಲ್ಲ. ಕಮಿಷನ್ ಕೊಟ್ಟು ಹಣ ಹ್ವಡದೋರಿಗೆ ಮನೆ ಕಟ್ಟಿಕೊಟ್ಟು ಸರ್ಕಾರಕ್ಕೆ ಒಳ್ಳೆ ಹೆಸರ ತರಬೇಕು ಅನ್ನೊ ಮನಸಿಲ್ಲ. ಅವುರ್‍ಯಲ್ಲ ಬಂಗ್ಲೆ ವಳಗಿರೋರು. ಈ ಸರ್ಕಾರದ ನಂತ್ರ ಬರೋ ಸರ್ಕಾರದೊಳಿಕೂ ಸೇರಿಕತ್ತರೆ. ನಿನ್ನ ದುರಂತ ಏನಂದ್ರೆ ಯಾರಿಗೂ ಒಂದು ಮನೆ ಕೊಡಕ್ಕಾಗದೆ ಮನಿಗೋಯಿತ್ತಿದ್ದೆ. ಸಿದ್ದರಾಮಯ್ಯ ನಿನ್ನ ಖಾತೆ ಕಿತಗಂಡು ಮರಿಯಾದಿ ಉಳಿಸ್ಯವುನೆ."


"!?"

"ನೋಡಣ್ಣ ನೀನು ಖಾತೆ ವಯಿಸಿಗಂಡು ಮೂರೊರ್ಷ ಆಯ್ತು. ಒಂದು ನಿವೇಶನ ಕೊಡಕ್ಕಾಗಿಲ್ಲ. ಒಂದು ಮನೆ ಕೊಟ್ಟಿಲ್ಲ. ಇದರಿಂದ ನೂರಾರು ಕೋಟಿ ನಷ್ಟ ಆಗ್ಯದೆ. ವಸತಿ ಖಾತೆ ತುಂಬಾ ರಿಸ್ಕಿನ ಖಾತೆ. ನೀನು ಮನೆ ಕಟ್ಟಕ್ಕೆ ಶುರು ಮಾಡಿದಾಗಿಂದ ಅದು ಮುಗಿಯೋವರಿಗೂ ಎಷ್ಟು ರಿಸ್ಕ್ ತಗತಿಯೋ, ಅಂಗೇ ವಸತಿ ಇಲಾಖೆನೂ ತಗೋಬೇಕಿತ್ತು. ಜೂಜು, ಮೋಜು, ಕುಡಿತ ಇದ್ದೋರು ಮಂತ್ರಿಯಾಗಬಾರ್ದು. ಅದರಲ್ಲೂ ಸಿನಿಮಾ ನಟರು ಮಂತ್ರಿಯಾಗಬಾರ್ದು. ಅವುರ್‍ಯಾವಾಗ್ಲು ಜನಗಳಿಂದ ಮರಿಯಾಗಿದ್ದು ತನ್ನ ನಟನೆ ಬಗ್ಗೆ ಯೋಚನೆ ಮಾಡ್ತ ಜನಪ್ರಿಯತೆ ಕಾಪಾಡಿಕೊಬೇಕು. ನಿನಿಗೆ ಮಂತ್ರಿ ಆಗ್ಲೇ ಬೇಕು ಅನ್ನೊ ದುರಾಸೆ ಇದ್ರೆ, ಯಾವುದಾರ ಕ್ಯಲಸಕ್ಕೆ ಬಾರದ ಖಾತೆ ತಗಂಡು ಆರಾಮಾಗಿರಬಹುದಿತ್ತು. ಅದೂ ಬ್ಯಾಡ, ಪಟೇಲ್ರು ಅನಂತನಾಗ್‌ನಿಗೆ ಖಾತೆ ಇಲ್ಲದ ಮಂತ್ರಿಗಿರಿ ಕೊಟ್ಟಿದ್ರು. ಅಂಗೆ ನೀನೂ ಪವರ್‌ಲೆಸ್ ಖಾತೆ ತಗೊಬಹುದಿತ್ತು, ಇಲ್ಲ ಸಿನಿಮಾದ್ದೆ ಒಂದು ಖಾತೆ ಸೃಷ್ಟಿ ಮಾಡಿಕೊಂಡು ಮಂತ್ರಿಯಾಗಬಹುದಿತ್ತು. ನಿನ್ನ ಕೆಪಾಸಿಟಿ ನೋಡಿ. ಸಿದ್ದರಾಮಯ್ಯ ಬೇರೆ ಖಾತೆ ಕೊಡಕ್ಕೆ ಬಂದ್ರು. ಆದ್ರೆ ನಿನ್ನ ಖಾತೆಯಿಂದ ನೂರಾರು ಕೋಟಿ ಹಣ ಮಾಡಿರೊ ಖದೀಮರ ಮಾತ ಕೇಳಿ, ವಸತಿ ಖಾತೆ ತಗಂಡು ನೀನು ಯಾರಿಗೂ ಮನೆ ಕೊಡಕ್ಕಾಗಲಿಲ್ಲ, ಒಳ್ಳೆ ಹೆಸರನೂ ಗಳಸಕ್ಕಾಗಲಿಲ್ಲ, ಇದ್ಯಾವುದೂ ಗೊತ್ತಿಲ್ಲದ ಕೆಲವು ಕಚಡಾ ಪತ್ರಕರ್ತರು ನಿನ್ನನ್ನ ಈ ಸರ್ಕಾರದ ವಿರುದ್ಧ ಎತ್ತಿ ಕಟ್ಟಿದ್ರು. ಅಂಗೆ ನೋಡಿದ್ರೆ ಸಿದ್ದರಾಮಯ್ಯ ನಿನಗೆ ಏನೂ ಅನ್ಯಾಯ ಮಾಡಿಲ್ಲ. ಅದರ ಬದ್ಲು ನೀನೇ ನಂಬಿಕೆ ಉಳಿಸಿಗಳ್ಳಿಲ್ಲ. ನೀನು ಚಾಮುಂಡೇಶ್ವರೀಲಿ ಮಾಡಿದ ಸಹಾಯಕ್ಕೆ ಮೂರೊರ್ಷ ಮಂತ್ರಿ ಮಾಡಿದ್ರು. ಉಸಾರಿಲ್ಲಾಗ ಕೋಟ್ಯಾಂತರ ಆಸ್ಪತ್ರೆ ಫೀಜು ಕಟ್ಟಿದ್ರು. ಇಷ್ಟಲ್ಲ ಋಣಭಾರ ಮುಗದವೆ. ಇದನ್ನೆಲ್ಲ ಜೆ.ಪಿ. ನಗರದ ಮನೆ ಮಾಡಿಮ್ಯಾಲೆ ಕುತಗಂಡು ಯೋಚನೆ ಮಾಡಿ ಫುನು ಕ್ವಳಕಿಲುದು ಬಾರಣ್ಣ, ನಾವೆಲ್ಲ ಕ್ಯಳಗಡೆ ಕಾಯ್ತಾಯಿರತಿವಿ. ಆಯ್ತಾ? ಆಯ್ತೇ?"

"ಫೋನಿಡೂ ಲವುಡೆ ಬಾಲ್!"

"ಥೂತ್ತೇರಿ!!!"

ಕಟ್ಟುವ ಕ್ರಿಯೆಯಲ್ಲಿಯೇ ಹೋರಾಟದ ಬೀಜಗಳಿ



ಸಾಮಾಜಿಕ ಅಸಮಾನತೆಗಳ ವಿರುದ್ಧದ ಹೋರಾಟಗಳನ್ನು ಹತ್ತಿಕ್ಕಲು ಪ್ರಭುತ್ವ ಅನೇಕ ಬಗೆಯ ತಂತ್ರಗಳನ್ನು ಹೆಣೆಯುತ್ತಿರುತ್ತದೆ. ಹೋರಾಟದ ಬಲ ಹೆಚ್ಚಾದಂತೆ ಪ್ರಭುತ್ವದ ದಮನಕಾರಿ ನೀತಿಯೂ ಬದಲಾಗುತ್ತದೆ. ಕಿಡಿ ಕಿಚ್ಚಾಗಿ, ಜ್ವಾಲೆಯಾಗಿ ಹಬ್ಬಲಿದೆ ಎನ್ನುವದು ಮನದಟ್ಟಾಗುತ್ತಿರುವಂತೆ ಪ್ರಭುತ್ವ ತನ್ನ ಅಧಿಕಾರ ಮತ್ತು ಸತ್ತೆಯನ್ನು ಬಲಪ್ರಯೋಗದ ಮೂಲಕ ಹೇರತೊಡಗುತ್ತದೆ. ಈ ಬಗೆಯ ಒತ್ತಡದ ನಡುವೆಯೂ ಕೆಲವರು ಹೋರಾಟದಿಂದ ಹಿಂದೆ ಸರಿಯುವುದಿಲ್ಲ, ಅಂಥವರು ಮಾತ್ರ ಚರಿತ್ರೆಯ ಭಾಗವಾಗುತ್ತಾರೆ. ಪ್ರಭುತ್ವದ ದಬ್ಬಾಳಿಕೆಯ ವಿರುದ್ಧ ಸೆಣಸಲಾಗದವರು, ಹತಾಶರಾದವರು ಮತ್ತು ಸೋತುಹೋದವರು ಆ ಬಗೆಯ ಹೋರಾಟದ ಬೀಜಗಳನ್ನು ಬಿತ್ತುವ ಮೂಲಕ ಅದರ ನಿರಂತರತೆಗೆ ಕಾರಣರಾಗುವವರು.

ಈ ವರ್ಷದ ಆರಂಭದಲ್ಲಿ ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಹತ್ತಾರು ದಲಿತ ವಿದ್ಯಾರ್ಥಿಗಳು ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯ ಅಡಿಯಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ನಡೆಸಲಾದ ಹೋರಾಟದಲ್ಲಿ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ ರೋಹಿತ್ ವೇಮುಲ ಎನ್ನುವವರು ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಆ ಹೋರಾಟವನ್ನು ಮುಂದುವರೆಸಲು ಪ್ರೇರಣೆಯಾದನೋ ಇಲ್ಲವೇ ಆ ಹೋರಾಟದಿಂದ ಹಿಂದೆ ಸರಿಯಲು ಸೂಚನೆ ನೀಡಿದನೋ ಎನ್ನುವದು ಚರ್ಚೆಗೆ ಗ್ರಾಸವಾಗಿರುವ ವಿಷಯ.

ರೋಹಿತ್ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ. ವಿಜ್ಞಾನದ ಲೇಖಕನಾಗಬೇಕೆಂದು ಕಾರ್ಲ್ ಸೇಗನ್‌ನನ್ನು ಆಳವಾಗಿ ಅಧ್ಯಯನ ಮಾಡಿದಾತ. ಬಾಲ್ಯದಿಂದಲೂ ಅಪಾರ ಕಷ್ಟಗಳನ್ನು ಅನುಭವಿಸಿ, ಜಾತಿಯ ಕಹಿ ಅನುಭವಗಳನ್ನು ಉಂಡು ಬೆಳೆದ ರೋಹಿತ್ ವೇಮುಲ ಅಂಬೇಡ್ಕರ್, ಜ್ಯೋತಿಬಾ ಫುಲೆ, ಪೆರಿಯಾರ್‌ರಂಥಾ ಕ್ರಾಂತಿಕಾರಿಗಳನ್ನು ಆಳವಾಗಿ ಅಧ್ಯಯನ ಮಾಡಿದವನು. ಸ್ವಾಭಿಮಾನದ ಬಗೆಗಿನ ಅಂಬೇಡ್ಕರ್ ಅವರ ವಿಚಾರಗಳನ್ನು ಮತ್ತೆಮತ್ತೆ ಪ್ರತಿಪಾದಿಸುವವನು. ರೋಹಿತ್ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯನ್ನು ಸೇರುವ ಮೊದಲು ಬೇರೆ ಬೇರೆ ಎಡಪಂಥೀಯ ನಿಲುವಿನ ಸಂಘಟನೆಗಳಲ್ಲಿ ಕೆಲಸ ಮಾಡಿದವನು.

ಈ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆ ಹುಟ್ಟಿದ್ದು 1994 ರಲ್ಲಿ ಅಲ್ಲಿಂದ ಅದರ ಬೆಳವಣಿಗೆ ಆರಂಭವಾಯಿತು. ಮೊದಮೊದಲು ಕೇವಲ ವಿದ್ಯಾರ್ಥಿ ಸಂಘಟನೆಯಾಗಿ ಗುರುತಿಸಿಕೊಂಡ ಎ.ಎಸ್.ಎ. ಕ್ರಮೇಣವಾಗಿ ರಾಜಕೀಯ ಸಂಘಟನೆಯಾಗಿ ಬೆಳೆಯತೊಡಗಿದ ನಂತರವೇ ಅದರ ಶಕ್ತಿಯ ಅರಿವಾಗತೊಡಗಿತು. ವಿಶ್ವವಿದ್ಯಾಲಯಗಳಲ್ಲಿ ಈ ಸಂಘಟನೆಯ ಮೂಲಕ ಅನೇಕ ವಿದ್ಯಾರ್ಥಿ ಪ್ರತಿನಿಧಿಗಳು ಆಯ್ಕೆಯಾಗತೊಡಗಿದರು. ಅಲ್ಲಿಂದ ಆರಂಭವಾದ ಅದರ ರಾಜಕೀಯ ಬೆಳವಣಿಗೆ ಬಲಪಂಥೀಯರನ್ನು ಪರೋಕ್ಷವಾಗಿ ಕಾಡತೊಡಗಿತು.

ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ದಲಿತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎನ್ನುವ ಧ್ವನಿಯೆತ್ತಿ ಹೋರಾಟಕ್ಕಿಳಿದ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆ ಕೇಂದ್ರೀಯ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ 'ವಲಿವೇಡಾ' ಎನ್ನುವ ಹೆಸರಿನ ಟೆಂಟ್ ಒಂದನ್ನು ಹಾಕಿಕೊಂಡು ಹೋರಾಟ ಆರಂಭಿಸಿದರು. ಇವರಲ್ಲಿ ರೋಹಿತ್ ವೇಮುಲಾ ಒಳಗೊಂಡು ಐವರು ವಿದ್ಯಾರ್ಥಿಗಳು ಹಾಸ್ಟೆಲ್‌ನಿಂದ ಉಚ್ಚಾಟನೆಯಾದವರು. ಅವರೆಲ್ಲಾ ಬಹುತೇಕವಾಗಿ ಸಂಶೋಧನಾ ವಿದ್ಯಾರ್ಥಿಗಳು. ಅಂಬೇಡ್ಕರ್ ಮತ್ತು ಸಾವಿತ್ರಿಬಾಯಿ ಫುಲೆಯವರ ಭಾವಚಿತ್ರಗಳನ್ನು ವಲಿವೇಡಾದಲ್ಲಿಟ್ಟು ಹೋರಾಟ ಮುಂದುವರೆಸಿದರು. ಈ ಹೋರಾಟದ ಅತಿ ಮುಖ್ಯವಾದ ಹಿನ್ನೆಲೆ ಸಾಮಾಜಿಕ ನ್ಯಾಯ. ರೋಹಿತ್ ಮಿಕ್ಕ ವಿದ್ಯಾರ್ಥಿಗಳಂತಲ್ಲ, ಇಡೀ ಬದುಕನ್ನೇ ಹೋರಾಟ ಮಾಡಿಕೊಂಡು ಬದುಕಿದವನು. ಬಾಲ್ಯದಿಂದಲೂ ಅಪಾರ ಪ್ರಮಾಣದ ಸಂಕಷ್ಟಗಳನ್ನು ಅನುಭವಿಸಿ, ಕುಡುಕ ತಂದೆಯ ಕಿರಿಕಿರಿಯನ್ನು ಅನುಭವಿಸುತ್ತಲೇ ಶಿಕ್ಷಣ ಪಡೆದವನು. ಸಾಕಷ್ಟು ಓದಿಕೊಂಡ ರೋಹಿತ್ ವಲಿವೇಡಾ ಎನ್ನುವ ಟೆಂಟ್‌ನಲ್ಲೂ ಜಯರಾಜು ಗೊಡಿಶಾಲಾ ರಚಿಸಿದ 'ಎವರೋ ಈ ಬಿಡ್ಡಲೋ' ಎನ್ನುವ ಹಾಡನ್ನು ಹಾಡುತ್ತಿದ್ದರು. ತೆಲುಗು ಸಾಹಿತ್ಯದಲ್ಲಿ ಮೊಟ್ಟ ಮೊದಲ ಕವಿ; ಸಾಹಿತಿ ಗುರ್ರಂ ಜೆಸುವಾ ಎಂದು ಗುರುತಿಸಿದ್ದ ರೋಹಿತ್ ಸಾವಿತ್ರಿಬಾಯಿ ಫುಲೆಯ ಮಾತುಗಳಿಂದ ಸಾಕಷ್ಟು ಪ್ರೇರಿತನಾಗಿದ್ದ. ಅಂಬೇಡ್ಕರ್‌ನನ್ನು ಸಾಕಷ್ಟು ಓದಿಕೊಂಡಿದ್ದ ರೋಹಿತ್ ಯಾಕೆ ಹೀಗೆ ಆತ್ಮಹತ್ಯೆಯಂಥಾ ತೀರ್ಮಾನ ತೆಗೆದುಕೊಂಡ ಎನ್ನುವುದು ಅನೇಕರನ್ನು ಕಾಡುವುದಿದೆ. ರೋಹಿತ್ ಅತ್ಯಂತ ಹರಿತ ಮತ್ತು ಕ್ರಾಂತಿಕಾರಿ ಆಲೋಚನೆಗಳನ್ನು ಪ್ರತಿಪಾದಿಸುವವನು, ಹೋರಾಟದಲ್ಲಿ ಅಪಾರವಾದ ನಂಬುಗೆಯನ್ನು ಉಳಿಸಿಕೊಂಡವನು. ತನ್ನ ಜೊತೆಗಿರುವವರಿಗೆ ಹೋರಾಟದ ಹಾದಿಯನ್ನು ಹಾಕಿಕೊಡುವವನು. ಆತ ತಾವು ಹೋರಾಡುವ ಸ್ಥಳಕ್ಕೆ ವಲಿವೇಡಾ ಎಂದು ಹೆಸರಿಟ್ಟಿರುವುದೂ ಒಂದು ಔಚಿತ್ಯವೇ.. ಅಮೆರಿಕದಲ್ಲಿ ಹಿಂದೆ ಕಪ್ಪು ಜನರನ್ನು ಅತ್ಯಂತ ನಿಕೃಷ್ಟವಾಗಿ ಕಾಣಲಾಗುತ್ತಿತ್ತು, ಆಗ ಅವರು ಊರ ಹೊರಗಡೆಯೇ ಪ್ರತ್ಯೇಕವಾಗಿಯೇ ಉಳಿಯಬೇಕು. ಹಾಗೆ ಉಳಿದವರನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ 'ಗೆಟ್ಟೊ ಸಮುದಾಯ'ಗಳೆಂದು ಕರೆಯಲಾಗುತ್ತಿತ್ತು. ವಲಿವೇಡಾ ಎನ್ನುವ ಹೆಸರು ಆ ಗೆಟ್ಟೊ ಸಮುದಾಯಗಳಿಗಿಂತಲೂ ತೀರಾ ಭಿನ್ನವಾದುದಲ್ಲ.

ರೋಹಿತ್ ಹೋರಾಟ ಆತ್ಮಹತ್ಯೆಯ ಮೂಲಕ ಮುಂದುವರೆಯದೇ ಆತ ಬದುಕಿ ಉಳಿಯುವ ಮೂಲಕ ಮುಂದುವರೆಯಬೇಕಿತ್ತು ಎನ್ನುವ ಮಾತುಗಳೂ ಇವೆ. ಆತ ಬದುಕಿರುವಾಗ ಆತನ ಹೋರಾಟದ ಬಗ್ಗೆ ಏನನ್ನೂ ಪ್ರತಿಕ್ರಿಯಿಸದವರ ಮಾತುಗಳಿವು ಎನ್ನುವ ಆಪಾದನೆಗಳೂ ಇವೆ. ರೋಹಿತ್ ತನ್ನ ಹೋರಾಟಕ್ಕೆ ಬೆಂಬಲವಾಗಿ ಅಪಾರ ಪ್ರಮಾಣದ ಬೆಂಬಲ ದೊರೆಯಬಹುದು, ಸ್ಥಳೀಯ ಪ್ರಗತಿಪರರು ತಮ್ಮೊಂದಿಗೆ ನಿಲ್ಲಬಹುದು ಎನ್ನುವ ಲೆಕ್ಕಾಚಾರಗಳು ಕೈಗೂಡದಂತಹ ಸ್ಥಿತಿ ನಿರ್ಮಾಣಗೊಂಡಾಗ ರೋಹಿತ್ ಮತ್ತವನ ಗೆಳೆಯರಿಗೆ ಎಲ್ಲೋ ಒಂದೆಡೆ ಅಪಾರ ಪ್ರಮಾಣದ ನಿರಾಶೆ ಕಾಡತೊಡಗಿತು. ಒಂದು ಬಗೆಯ ಹತಾಶೆಯ ಭಾವನೆ ಆವರಿಸತೊಡಗಿತು, ರೋಹಿತ್‌ಗೆ ಅದಾಗಲೇ ಕಳೆದ ಹತ್ತು ತಿಂಗಳುಗಳಿಂದ ಬರಬೇಕಿದ್ದ ಶಿಷ್ಯವೇತನದ ಹಣವೂ ಬಂದಿರಲಿಲ್ಲ, ಸಾಕಷ್ಟು ಸಾಲವನ್ನು ಮಾಡಿದ್ದ, ಆ ಸಾಲಬಾಧೆಯ ಬಗ್ಗೆಯೂ ಆತ ತನ್ನ ಡೆತ್‌ನೋಟ್‌ನಲ್ಲಿ ಬರೆದುಕೊಂಡಿರುವದಿದೆ. ಹಾಸ್ಟೆಲ್‌ನಿಂದ ಹೊರಹಾಕಿರುವದು ಕೂಡಾ ಆತನನ್ನು ಇನ್ನಷ್ಟು ಜರ್ಜರಿತನನ್ನಾಗಿಸಿತ್ತು. ಹೀಗೆ ಎಲ್ಲವೂ ಖಾಲಿ ಖಾಲಿ ಎನ್ನುವ ಸ್ಥಿತಿಯಲ್ಲಿ ಅವನ ಮನಸು ಹೆಪ್ಪು ಗಟ್ಟಿದಂತಾಗಿರುವದಂತೂ ಹೌದು. ಆತನ ಗೆಳೆಯನ ಕ್ಷಮೆ



ಕೋರಿ ಅವನ ರೂಮಲ್ಲಿ ಆತ ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು. ಹಾಗೆ ಅತ ಆತ್ಮಹತ್ಯೆ ಮಾಡಿಕೊಳ್ಳುವಾಗ ಆತ ಬರೆದಿಟ್ಟ ಡೆತ್‌ನೋಟ್ ಅವನ ಪ್ರಬುದ್ಧತೆ ಮತ್ತು ಜ್ಞಾನವನ್ನು ಒರೆಗೆ ಹಚ್ಚುವಂತಿತ್ತು. ಆ ಪತ್ರದಲ್ಲಿ ಆತ ಕೇವಲ ತನ್ನ ಕನಸು ಮತ್ತು ಹಂಬಲವನ್ನು ಕುರಿತು ಬರೆದಿರುವದಿತ್ತೇ ಹೊರತು ಯಾರನ್ನೂ ಆರೋಪಿಸಿ, ತನ್ನ ಸಾವಿಗೆ ಇಂಥವರೇ ಕಾರಣ ಎಂದು ಬರೆದು ಸಣ್ಣತನವನ್ನು ಪ್ರದರ್ಶನ ಮಾಡದೇ ತನ್ನನ್ನು ಇಷ್ಟ ಪಡದವರ ಮಾನಸಿಕ ನೆಮ್ಮದಿಗೂ ಧಕ್ಕೆ ಬಾರದಿರಲಿ ಎನ್ನುವ ಆಶಯದೊಂದಿಗೆ ಆತ ನಿರ್ಗಮಿಸಿದ. ರೋಹಿತ್ ಖಂಡಿತ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿತ್ವವಲ್ಲ, ಗೆಳೆಯರ ನಡುವೆ ತಾನು ಹಸಿರು ಬಣ್ಣದ ಚೆಕ್ಸ್ ಶರ್ಟ್‌ನಲ್ಲಿ ತಮಿಳು ಚಿತ್ರರಂಗದ ನಾಯಕ ನಟನಂತೆ ಕಾಣುವದಿಲ್ಲವೆ..? ಎಂದು ಕೇಳುವ, ತಮಾಷೆ ಮಾಡುವ ರೋಹಿತ್ ಬದುಕು ಹೀಗೆ ವ್ಯವಸ್ಥೆಯ ಕುತಂತ್ರಕ್ಕೆ ಬಲಿಯಾಗಬೇಕಾಗಿ ಬಂದುದು ದೊಡ್ಡ ದುರಂತ.


ರೋಹಿತ್ ವೇಮುಲ ಮತ್ತವನ ಗೆಳೆಯರ ಹೋರಾಟದಲ್ಲಿ ಚಿಂತಕ ಮಾರ್ಕ್ಸ್ ಗುರುತಿಸಿರುವ ಮೂರು ಪ್ರಮುಖ ತತ್ವಗಳನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಯಾವುದೇ ಒಂದು ಹೋರಾಟ ಯಶಸ್ವಿಯಾಗಲು ಅಲ್ಲಿ ಅತಿಮುಖ್ಯವಾಗಿ ಮೂರು ಸಂಗತಿಗಳು ಅಡಕವಾಗಿರಬೇಕು ಎಂದು ಮಾರ್ಕ್ಸ್ ಹೇಳುತ್ತಾನೆ. ಒಂದನೆಯದು ಸೈದ್ಧಾಂತಿಕ ಹೋರಾಟ, ಎರಡನೆಯದು ರಾಜಕೀಯ ಹೋರಾಟ ಮತ್ತು ಮೂರನೆಯದು ಆರ್ಥಿಕ ಹೋರಾಟ. ಈ ಮೂರು ಸಂಗತಿಗಳಲ್ಲಿ ಸಮನ್ವಯವನ್ನು ಕಾಪಾಡಿಕೊಂಡಾಗ ಮಾತ್ರ ಆ ಹೋರಾಟ ಗೆಲ್ಲುತ್ತದೆ ಎನ್ನುತ್ತಾರೆ. ಈ ರೋಹಿತ್ ಮತ್ತವನ ಗೆಳೆಯರ ಹೋರಾಟದಲ್ಲಿ ಸೈದ್ಧಾಂತಿಕ ಹೆ... ಸಾಕಷ್ಟು ಗಟ್ಟಿಯಾಗಿತ್ತು ಆದರೆ ರಾಜಕೀಯ ಹೆ... ಮತ್ತು ಆರ್ಥಿಕ ಹೋರಾಟಕ್ಕೆ ಪರೋಕ್ಷವಾಗಿ ... ಪೆಟ್ಟು ನೀಡಿತು. ಹಾಸ್ಟೆಲ್‌ನಿಂದ ಹೊರಹಾಕುವ ... ಅವರಿಗೆ ದೊರೆಯುವ ಸ್ಕಾಲರ್‌ಶಿಪ್ ನಿಯಮ... ನೀಡದೇ ರಾಜಕೀಯ ಹೋರಾಟ ಮತ್ತು ... ಹೋರಾಟದ ಬುಡವನ್ನು ಅಲ್ಲಾಡಿಸುವ ... ಮಾಡಲಾಯಿತು. ಇದರ ಪರಿಣಾಮವೇ ರೋ... ನಿರಾಶಾಭಾವ ಬೆಳೆಸಿಕೊಳ್ಳಲು ಕಾರಣವಾ... ಸಮಾಜಶಾಸ್ತ್ರೀಯ ಅನೇಕ ಸಿದ್ಧಾಂತಗಳಲ್ಲಿ ಫ್ರಾನ್ಸ್... ಚಿಂತಕ ಡರ್ಖಿಹೀಮ್ ಬೆಳೆಸಿದ ಆತ್ಮಹತ್ಯೆ ಸಿದ್ಧಾ... ಒಂದು. ಆತ ಮೂರು ಪ್ರಕಾರಗಳಲ್ಲಿ ಆತ್ಮಹತ್ಯೆ... ಕುರಿತು ಮಾತನಾಡುತ್ತಾನೆ. ಮೊದಲನೆಯದು ಸ್ವಯ... ಆತ್ಮಹತ್ಯೆ, ಎರಡನೆಯದು ಅಹಂಭಾವ ಪ್ರೇರಿತ ಆ... ಮೂರನೆಯದು ನಿಯಮರಾಹಿತ್ಯತೆಯ ಆ... ರೋಹಿತ್ ವೇಮುಲನನ್ನು ಆವರಿಸಿದ್ದುದು ನಿಯಮ... ಆತ್ಮಹತ್ಯೆಯ ಸ್ಥಿತಿ. ಅಂದರೆ ಒಟ್ಟು ವ್ಯವಸ್ಥೆ ... ಸಾಮಾಜಿಕ ನಿಯಂತ್ರಣ ಕುಸಿದು ಯಾವುದೇ ನಿಯ... ಕೆಲಸಕ್ಕೆ ಬಾರದಿರುವ ಸ್ಥಿತಿಯನ್ನು ನಿಯಮರಾಹಿ... ಸ್ಥಿತಿಯೆಂದು ಕರೆಯಲಾಗುತ್ತದೆ. ಒಟ್ಟಾರೆ ವ್ಯಕ್ತಿಯೊ... ಬೇರು ಕಳಚಿದ ಭಾವನೆ ತೀವ್ರವಾಗಿ ಕಾಡತೊಡ... ಆತ ಆತ್ಮಹತ್ಯೆಯೆಡೆಗೆ ಮನಸು ಮಾಡುವುದಿದೆ. ... ವ್ಯವಸ್ಥೆ ಕುಸಿದು ಯಾರಿಗೆ ಯಾರೂ ಇಲ್ಲ ಎನ್ನುವ ... ಮತ್ತೆ ಮತ್ತೆ ಮನದಟ್ಟಾಗತೊಡಗಿದರೆ ವ್ಯಕ್ತಿ ಆತ್ಮ... ಶರಣಾಗುತ್ತಾನೆ. ಇಲ್ಲಿ ರೋಹಿತ್ ಆತ್ಮಹತ್ಯೆಯನ್ನು ... ಸಿದ್ಧಾಂತದ ಅಡಿಯಲ್ಲಿ ವಿಶ್ಲೇಷಣೆ ಮಾಡು... ತಾರ್ಕಿಕವಲ್ಲವಾದರೂ ಆತ ಆತ್ಮಹತ್ಯೆ ಮಾಡಿಕೊಂಡ ... ವಾಸ್ತವವನ್ನೂ ಒಪ್ಪಿಕೊಳ್ಳದ ಮನಃಸ್ಥಿತಿಯ ನಡು... ಬಗೆಯ ಸಿದ್ಧಾಂತಗಳ ಮೂಲಕ ಗ್ರಹಿಸುವ... ಸಮಾಧಾನಕರವಷ್ಟೆ.. ವೇಮುಲ ನಂತರವೂ ವ... ಟೆಂಟ್ ಮತ್ತು ಹೋರಾಟ ಮುಂದುವರೆಯುವ... ಖಚಿತ. ಆ ಬಗ್ಗೆ ಅದಾಗಲೇ ವೇಮುಲ ಜೊತೆಗಿರು... ಕಟ್ಟೇ ಕಟ್ಟುವೆವು ಎನ್ನುವ ಮೂಲಕ ಹೋರಾಟದ ... ಕುರುಹುಗಳನ್ನು ಕುರಿತು ಮಾತನಾಡಿರುವದಿದೆ. ... ರೋಹಿತ್ ನಂತರವೂ ಕಟ್ಟುವ ಕ್ರಿಯೆ ನಿರಂತ... ಮುಂದುವರೆಯುತ್ತದೆ. ಹೋರಾಟದ ಜೀವಂತಿಕೆ ಇ... ಈ ಬಗೆಯ ಕಟ್ಟುವಿಕೆಯಲ್ಲಿ ಎನ್ನುವದಂತೂ ಸ...

○ಡಾ.ಎಸ್.ಬಿ.ಜೋ...

ಪ್ರೊ. ಮಹೇಶ್‌ಚಂದ್ರ ಗುರು ಅವರ ಅಮಾನತು ತೆರವುಗೊಳ್ಳಲ್ಪಡ...

ಶ್ರೀರಾಮನ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ವಿಚಾರವಾದಿ ವಾಗ್ಮಿ ಪ್ರೊ.ಮಹೇಶ್‌ಚಂದ್ರ ಗುರು ಅವರ ಬಂಧನ ಪ್ರಕರಣ, ತತ್ಸಂಬಂಧ ಅಮಾನತು ಕಲಬುರ್ಗಿಯವರ ಹತ್ಯೆಯ ನಂತರ ಕರ್ನಾಟಕ ವೈಚಾರಿಕತೆಯ ಲೋಕದಲ್ಲಿ ಮತ್ತೊಂದು ದುರಂತಮಯ ಘಟನೆಯಾಗಿ ದಾಖಲಾಗುತ್ತದೆ. ಪ್ರೊ.ಗುರುರವರೇ ಆಗಲೀ ಮತ್ಯಾರೇ ಆಗಲೀ ಗಂಭೀರ ಪ್ರಕರಣಗಳಲ್ಲಿ ಬಂಧನಕ್ಕೊಳಗಾದರೆ ಖಂಡಿತ ಯಾರೂ ಕೂಡ ಅದರ ಬಗ್ಗೆ ಚಕಾರ ಎತ್ತುವುದಿಲ್ಲ, ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ದಾರಿಯಲ್ಲಿ ಬಂಧನಕ್ಕೊಳಗಾದ ಈ ಘಟನೆ ಅಂತಹ ಹಾದಿಯಲ್ಲಿರುವ ಎಲ್ಲರನ್ನೂ ಅಕ್ಷರಶಃ ತಡೆದು ನಿಲ್ಲಿಸುತ್ತದೆ, ಒಂದು ಹೆಜ್ಜೆ ಸರಿಸುತ್ತದೆ.

ಅಂದಹಾಗೆ ಭಾರತೀಯ ಸಮಾಜದಲ್ಲಿ, ಅದರ ಭಿನ್ನ ಭೇದದ ಧಾರ್ಮಿಕ ನೆಲೆಯಲ್ಲಿ ಅಂತಹ ಭಿನ್ನಭೇದದ ರೂಪವಾಗಿ ಮೂಲಗಳಾಗಿ ದೇವರುಗಳೆಂದು ಪ್ರತಿಷ್ಠಾಪಿತ ಪುರಾಣದ ವ್ಯಕ್ತಿಗಳು ಇರುವುದಂತೂ ಅಕ್ಷರಶಃ ಸುಳ್ಳಲ್ಲ, ಇಂತಹ ಭಿನ್ನಭೇದದ ಬಿಡುಗಡೆಗಾಗಿ ಅವಿರತವಾಗಿ ಹೋರಾಡಿದ ಅಂಬೇಡ್ಕರ್‌ರವರು ಕೂಡ ಇಂತಹ



ಪುರಾಣದ ವ್ಯಕ್ತಿಗಳು, ಅದೆರ ಸಿದ್ಧಾಂತಗಳು, ಅದರ ಗ್ರಂಥಗಳು, ನಂಬಿಕೆಗಳು ಇತ್ಯಾದಿಗಳನ್ನು ತಮ್ಮ 'ಹಿಂದೂ ಧರ್ಮದ ತತ್ವಜ್ಞಾನ', 'ಹಿಂದೂಧರ್ಮದ ಒಗಟುಗಳು', 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ' ಕೃತಿಗಳಲ್ಲಿ ಸಾಕ್ಷಿಸಮೇತ ಬಿಡಿಸಿಟ್ಟುಹೋಗಿದ್ದಾರೆ. ಆ ಮೂಲಕ ಸತ್ಯ ಕಂಡುಕೊಂಡು ಅಂತಹ ಸತ್ಯದ ಆಧಾರದ ಮೇಲೆ ಶೋಷಿತರ ಬಿಡುಗಡೆಗೆ ಶ್ರಮಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರೊ. ಮಹೇಶ್‌ಚಂದ್ರಗುರುರವರಿರಬಹುದು ಅಥವಾ ಅದೇ ಧಾಟಿಯಲ್ಲಿ ವಿಚಾರಮಂಡಿಸುವ ಪ್ರೊ.ಕೆ.ಎಸ್. ಭಗವಾನರಿರಬಹುದು ಮಂಡನೆಯ ಹಾದಿಯಲ್ಲಿ ತುಸು ಆಕ್ರೋಶವನ್ನು ಹೊರತು ಪಡಿಸಿದರೆ ಅಂಬೇಡ್ಕರರ ಅದೇ ವೈಚಾರಿಕ ಹಾದಿಯಲ್ಲಿ ಅಕ್ಷರಶಃ ಸಾಗುತ್ತಿದ್ದಾರೆ. ಆಶ್ಚರ್ಯವೆಂದರೆ ಇಂತಹ ವೈಚಾರಿಕ ಚಟುವಟಿಕೆಗಳಿಗೆ 'ಧಾರ್ಮಿಕ ನಿಂದನೆ' ಎಂಬ ಆರೋಪ ಬೆನ್ನತ್ತುತ್ತಿರುವುದು! ಈ ನಿಟ್ಟಿನಲ್ಲಿ ಧಾರ್ಮಿಕ ನಿಂದನೆಯನ್ನು ಕೂಡ ನಿಕಷಕ್ಕೊಳಪಡಿಸಬೇಕಾಗುತ್ತದೆ ಮತ್ತು ಅಂತಹ ನಿಕಷದಲ್ಲಿ ಅಸ್ಪೃಶ್ಯತೆ, ಜಾತಿ ತಾರತಮ್ಯ, ನಿಜವಾದ ಧಾರ್ಮಿಕನಿಂದನೆಯಾಗುತ್ತದೆ. ಯಾಕೆಂದರೆ ಧರ್ಮವೆಂದರೆ ನ್ಯಾಯಪರತೆ ಎಂದರ್ಥ. ಈ ದಿಸೆಯಲ್ಲಿ ಅಸ್ಪೃಶ್ಯತಾಚರಣೆ ಮತ್ತು ಜಾತಿತಾರತಮ್ಯ ಅದ್ಹೇಗೆ ಧರ್ಮವಾಗುತ್ತದೆ? ಅದು ಕೂಡ ಧಾರ್ಮಿಕ ನಿಂದನೆಯೇ ಆಗುತ್ತದೆ ತಾನೆ? ವಾಸ್ತವವೆಂದರೆ ಶೂದ್ರ ಶಂಭೂಕನಿಗೆ ವಿದ್ಯೆ ನಿರಾಕರಿಸಿ ಕೊಂದ ಶ್ರೀರಾಮ ಕೂಡ ಇಲ್ಲಿ ತಾರತಮ್ಯ ನಡೆಸಿದ್ದಾನೆ, ಧಾರ್ಮಿಕ ನಿಂದನೆ ಎಸಗಿದ್ದಾನೆ. ಆದರೆ ಸಮಾಜ ... ಗಮನಿಸುವುದಿಲ್ಲ! ಬದಲಿಗೆ ಅದೇ ಶ್ರೀರಾಮನ ... ಇಂತಹ ತಾರತಮ್ಯವನ್ನು ನಿಷೇಧಿಸುವ ಅ... ಸಂವಿಧಾನದ ಕಾನೂನುಗಳ ಅಡಿಯಲ್ಲಿ ... ಪ್ರಶ್ನಿಸುವವರನ್ನು ಜೈಲಿಗೆ ಅಟ್ಟುತ್ತದೆ. ದುಃ... ವಿಷಯವೆಂದರೆ ಇದೇ.

ಈ ಸಂದರ್ಭದಲ್ಲಿ ಒಂದು ವಿಷಯ. ಜೈ... ಪ್ರೊ.ಮಹೇಶ್‌ಚಂದ್ರ ಗುರುರವರು ಬಿಡುಗಡೆಗೆ... ಅದಾಗಲೇ ಒಂದು ವಾರ ಕಳೆದಿದೆ. ನಿಯಮದ ... ಪ್ರೊಫೆಸರ್‌ರವರ ಅಮಾನತನ್ನು ತತ್‌ಕ್ಷಣ... ತೆರವುಗೊಳಿಸಬೇಕಿದೆ. ವಿಶ್ವವಿದ್ಯಾನಿಲಯವೆಂಬದು ... ಸ್ವಾತಂತ್ರ್ಯ ಎತ್ತಿಹಿಡಿಯುವ ಸಂಶೋಧನಾ ಸಂಸ್ಥೆ ಆ ... ಮೈಸೂರು ವಿಶ್ವವಿದ್ಯಾನಿಲಯ ಪ್ರೊ.ಗುರು... ಅಮಾನತನ್ನು ರದ್ದುಗೊಳಿಸುವ ಮೂಲಕ ... ಸ್ವಾತಂತ್ರ್ಯವನ್ನು ಎತ್ತಿಹಿಡಿಯಬೇಕಿದೆ. ... ಪ್ರೊ.ಮಹೇಶ್‌ಚಂದ್ರ ಗುರುರವರ ಅಮಾನತು ರ... ವೈಚಾರಿಕತೆಗೆ, ವೈಜ್ಞಾನಿಕತೆಗೆ ಸಮಾಜ ನೈತಿಕ ... ನೀಡಲಿ ಎಂಬುದೇ ಸದ್ಯದ ಕಳಕಳಿ.

○ರಘೋತ್ತಮ ಹೊ...

ಪಂಚಾಯುತಿ ವ್ಯವಸ್ಥೆಯ ದುರ್ಬಲೀಕರಣ ಪ್ರಜಾಪ್ರಭುತ್ವದ ಶವಪೆಟ್ಟಿಗೆಗೆ ಮತ್ತೊಂದು ಮೊಳೆ

ಪಂಚಾಯತಿ ರಾಜ್ಯ ಸಚಿವಾಲಯವನ್ನು ಶಾಶ್ವತವಾಗಿ ...ಚ್ಚಿ ಅದನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯದ ...ಗಿನ ಇಲಾಖೆಯಾಗಿ ಪರಿವರ್ತಿಸಲು ಹೊರಟಿರುವ ...ದಿ ಸರ್ಕಾರ ಅಂತಿಮವಾಗಿ ಮಾಡಹೊರಟಿರುವುದು ...ಪ್ರಭುತ್ವದ ಶವಯಾತ್ರೆಯನ್ನು. ಸರ್ಕಾರದ ಈ ಹೆಜ್ಜೆಯ ...ದೆಯೂ ಆರೆಸ್ಸೆಸ್ ಸಿದ್ಧಾಂತ ಕೆಲಸ ಮಾಡಿರುವ ಕುರಿತು ...ವ ಸಂಶಯವೂ ಇರಬೇಕಾಗಿಲ್ಲ. 1925ರಲ್ಲಿ ರಾಷ್ಟ್ರೀಯ ...ಯಂಸೇವಕ ಸಂಘವನ್ನು ಸ್ಥಾಪಿಸಿದ ಹೆಡ್ಗೆವಾರ್, ಮೂಂಜೆ ...ಂತಾದವರು ಅಂದು ಇಟಲಿ, ಜರ್ಮನಿಗಳಲ್ಲಿ ಉಚ್ಛ್ರಾಯ ...ಯಲ್ಲಿದ್ದ ಫ್ಯಾಸಿಸ್ಟ್ ಸಿದ್ಧಾಂತದಿಂದ ವಿಶೇಷವಾಗಿ ...ಭಾವಿತರಾಗಿದ್ದವರು. ಮೂಂಜೆಯಂತೂ ಖುದ್ದು ...ಸೋಲಿನಿಯನ್ನು ಭೇಟಿಯಾಗಿ, ಅಲ್ಲಿನ ಫ್ಯಾಸಿಸ್ಟ್ ...ಭುತ್ವದ ನಾನಾ ಕುಟಿಲ ಕಾರ್ಯತಂತ್ರಗಳನ್ನು ...ಭ್ಯಸಿಸಿದಾತ. ಆ ಜ್ಞಾನವನ್ನೆಲ್ಲ ಬಳಸಿಕೊಂಡ ಆರೆಸ್ಸೆಸ್ ...ರು ವರ್ಷಗಳೊಳಗಾಗಿ ಭಾರತವನ್ನೊಂದು ಹಿಂದೂ ...ಷ್ಟ್ರ ಅರ್ಥಾತ್ ಸರ್ವಾಧಿಕಾರಿ ಫ್ಯಾಸಿಸ್ಟ್ ಪ್ರಭುತ್ವವಾಗಿ ...ರ್ಪಡಿಸುವ ಶಪಥ ಮಾಡಿದೆ. ಆ ಕ್ಷಣದಿಂದಲೇ ...ು ತನ್ನ ಕಾರ್ಯಾಚರಣೆಯನ್ನು ವ್ಯವಸ್ಥಿತವಾದ ರೀತಿಯಲ್ಲಿ ...ರಂಭ ಮಾಡಿದೆ. ಗಾಂಧೀಜಿಯ ಅಹಿಂಸಾತ್ಮಕ ಸ್ವಾತಂತ್ರ್ಯ ...ವಳಿಯಲ್ಲಿ ಅಪ್ಪಿತಪ್ಪಿಯಾದರೂ ಭಾಗವಹಿಸದೆ ತನ್ನದೇ ...ಯರ್ಾಚರಣೆಯನ್ನು ಮುಂದುವರಿಸಿದೆ. ...ತಂತ್ರ್ಯಾನಂತರದಲ್ಲಿ ಸಂಘದ ಚಟುವಟಿಕೆಗಳು ಇನ್ನಷ್ಟು ...ರುಕುಗೊಂಡಿವೆ. ದೇಶದ ಶಾಸಕಾಂಗ, ಕಾರ್ಯಾಂಗ, ...ಯಾಂಗ, ಗುಪ್ತಚರ ಇಲಾಖೆ, ಪೊಲೀಸ್ ವ್ಯವಸ್ಥೆ ...ಾಧ್ಯಮ ಮತ್ತು ವಿವಿಧ ಸಾಮಾಜಿಕ, ಸಾಂಸತಿಕ, ...ಂವಿಧಾನಿಕ ಸಂಸ್ಥೆಗಳೊಳಗೆ ಸಂಘಪರಿವಾರಿಗರನ್ನು ...ರಿಸುವ ಕೆಲಸ ಪ್ರಾರಂಭವಾಗಿದೆ. ಮುಂದೆ ವಾಜಪೇಯಿ ...ತೃತ್ವದ ಜನತಾ ಸರ್ಕಾರದ ಕಾಲದಲ್ಲಿ ಶಿಕ್ಷಣ ವ್ಯವಸ್ಥೆ ...ರಿದಂತೆ ಕೆಲವೊಂದು ಪ್ರಮುಖ ಕ್ಷೇತ್ರಗಳನ್ನು ...ಸರೀಕರಣಗೊಳಿಸುವ ಯತ್ನಗಳು ಭಾಗಶಃ ...ಶಸ್ವಿಯಾಗಿವೆ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ...ಧಿಕಾರದಲ್ಲಿದ್ದಾಗಲೂ ಆರೆಸ್ಸೆಸ್‌ನ ಗುಪ್ತ ...ಯರ್ಾಚರಣೆಗಳು ಮುಂದುವರಿದಿರುವುದು ...ಪರ್ಯಾಸವಷ್ಟೆ ಅಲ್ಲ ದೊಡ್ಡ ದುರಂತವೂ ಹೌದು. ...ದೊ ತಿಳಿಯದೆಯೊ ಅದು ಮಾಡಿರುವ ಈ ತಪ್ಪು ...ಕ್ಷಮ್ಯವಾದುದು. ಆರೆಸ್ಸೆಸ್ ಈ ಹೊತ್ತು ಜೊಂಡಿನಂತೆ ...ೀ ದೇಶವನ್ನು ವ್ಯಾಪಿಸಿರುವುದಕ್ಕೆ ಕಾಂಗ್ರೆಸ್ ಸರಕಾರಗಳ ...ದ್ದೇಶಪೂರ್ವಕ ಅಥವಾ ಅನುದ್ದೇಶಪೂರ್ವಕ ಅಸಡ್ಡೆಯೇ ...ಂದು ಮುಖ್ಯ ಕಾರಣ ಎನ್ನಬಹುದು.

2014ರಲ್ಲಿ ಕೇಂದ್ರದಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ...ದ ನಂತರದಲ್ಲಂತೂ ಪ್ರಜಾಪ್ರಭುತ್ವದ ಬುಡಕ್ಕೆ ಬೀಳುವ ...ಹಾರಗಳ ಸಂಖ್ಯೆ ಹಾಗೂ ರಭಸ ಎರಡರಲ್ಲೂ ತೀವ್ರ ...ರಿಕೆಯಾಗಿದೆ. ಪರಿವಾರದ ವತಿಯಿಂದ ಪ್ರತಿದಿನವೆಂಬಂತೆ ...ಡೆಯುತ್ತಿರುವ ಕ್ಷಿಪಣಿ ವೇಗದ ಕಾರ್ಯಾಚರಣೆಗಳಿಂದ ...ಗತಿಪರ ವಲಯಗಳು ತತ್ತರಿಸಿಹೋಗಿವೆ. ಕಳೆದೆರಡು ...ರ್ಷಗಳ ಅವಧಿಯಲ್ಲಿ ಈಗಾಗಲೆ ಪ್ರಮುಖ ಸಾಂಸ್ಕೃತಿಕ, ...ಕ್ಷಣಿಕ, ಸಂಶೋಧನಾ ಸಂಸ್ಥೆಗಳ ಮುಖ್ಯಸ್ಥರ ಸ್ಥಾನಗಳು ...ಂದೂತ್ವವಾದಿಗಳ ಪಾಲಾಗಿವೆ; ಭಿನ್ನಾಭಿಪ್ರಾಯಗಳಿಗೆ ...ಂದೆರಡೂ ಇರದಷ್ಟು ಅಸಹಿಷ್ಣುತೆ ತೋರಲಾಗುತ್ತಿದೆ; ...ೇಷವಾಗಿ ಪ್ರಗತಿಪರರ ವಾಕ್‌ಸ್ವಾತಂತ್ರ್ಯ ಮೊಟಕುಗೊಳ್ಳುತ್ತ ...ರುತ್ತಿದೆ; ಇದೇ ವೇಳೆ ಹಿಂದೂತ್ವವಾದಿಗಳ ಎಗ್ಗಿಲ್ಲದ ...ಷಪೂರಿತ, ಭಯೋತ್ಪಾದಕ ಹೇಳಿಕೆಗಳ ಸಮೀಪ ಯಾವ ...ಸಾರ್ ಕತ್ತರಿಯೂ ಸುಳಿಯುತ್ತಿಲ್ಲ; ಮೋದಿ ಸರ್ಕಾರವನ್ನು ...ಕಿಸುವವರು ದೇಶಪ್ರೇಮಿಗಳಲ್ಲ ಎಂದಾಗಿದೆ. ಟ್ವಿಟರ್, ...ಸ್‌ಬುಕ್‌ಗಳಲ್ಲಿ ಮೋದಿಯನ್ನು ಟೀಕಿಸಿದ ಕನಿಷ್ಠ 18 ...ನರನ್ನು ಬಂಧಿಸಿ ವಿಚಾರಣೆಗೊಳಪಡಿಸಲಾಗಿದೆ; ...ಪಂಥೀಯ, ಅಂಬೇಡ್ಕರ್‌ವಾದಿ ವಿದ್ಯಾರ್ಥಿ ಚಳವಳಿಗಳ ...ಲೆ ಕಾಕದೃಷ್ಟಿ ಬೀರಲಾಗಿದೆ; ಭಾರತ್ ಮಾತಾ ಕಿ ಜೈ ...ನ್ನದವರಿಗೆ ದೇಶವಿರೋಧಿ ಎಂಬ ಹಣೆಪಟ್ಟಿ ...ಚ್ಚಲಾಗುತ್ತಿದೆ; ಪರಿಸರವಾದಿ ಮತ್ತು ಅಲ್ಪಸಂಖ್ಯಾತ ಪರ ...ಸ್‌ಜಿವೊಗಳ ಕೊರಳು ಕುಯ್ಯಲಾಗುತ್ತಿದೆ; ದಲಿತ, ...ದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್, ...ಸ್ಟೆಲ್ ಸೌಕರ್ಯಗಳಲ್ಲಿ ಭಾರಿ ಕಡಿತವಾಗಿದೆ; ...ವಾಸಿಗಳ ಅರಣ್ಯಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ; ...ಗೂ ಕಾರ್ಯಕ್ರಮಗಳಿಗಾಗಿ ಮೀಸಲಿಡುವ ಅನುದಾನದ ...ತ್ತ ತುಂಬಾ ಕಡಿಮೆಯಾಗಿದೆ; ದುರಂತವೆಂದರೆ ...ಪ್ರಭುತ್ವದ ಕೊನೆಯ ಆಸರೆಯಾದ ನ್ಯಾಯಾಂಗದ ...ಯೂ ಕೆಡಲಾರಂಭಿಸಿದಂತೆ ತೋರುತ್ತಿದೆ. ಇತ್ತೀಚಿನ ...ಗಳಲ್ಲಿ ಕೆಲವೊಂದು ನ್ಯಾಯಾಧೀಶರು ತಮ್ಮ ...ಪೂರ್ವಗ್ರಹ, ಒಲವು ಮತ್ತು ನಿಲುವುಗಳನ್ನು ...ರ್ವಜನಿಕವಾಗಿ ಪ್ರಕಟಿಸತೊಡಗಿದ್ದಾರೆ. ಇಂದಿರಾ ...ಂಧಿಯನ್ನು ಕುರ್ಚಿಯಿಂದ ಕೆಳಗಿಳಿಸಿದ ಖ್ಯಾತಿಯ ಅಲಹಾಬಾದ್ ಹೈಕೋರ್ಟಿನ ಘನ ನ್ಯಾಯಾಧೀಶರೊಬ್ಬರು ಇತ್ತೀಚೆಗೆ ಒಡೆಯನಿಗೆ ಸ್ವಾಮಿನಿಷ್ಠೆ ತೋರ್ಪಡಿಸುವ ಊಳಿಗದವನ ಹಾಗೆ ಮೋದಿಯ ಕಾಲು ಮುಟ್ಟಿ ನಮಸ್ಕರಿಸಿದ ಘಟನೆ ನಡೆದಿದೆ; ಖುದ್ದು ನಮ್ಮದೆ ರಾಜ್ಯದ ಹೈಕೋರ್ಟಿನ ಸನ್ಮಾನ್ಯ ಮುಖ್ಯನ್ಯಾಯಮೂರ್ತಿಯವರು ವಿಹಿಂಪದ ಪೇಜಾವರ ಸ್ವಾಮಿ ಕೈಯಿಂದ ಅದೆಂಥದೊ ಪ್ರಶಸ್ತಿ ಸ್ವೀಕರಿಸುತ್ತ ರಾಮಮಂದಿರ ಸ್ಥಾಪನೆ ಆಗಬೇಕೆಂದು ಬಹಿರಂಗ ಸಭೆಯಲ್ಲಿ ಕರೆಕೊಟ್ಟ ವಿದ್ಯಮಾನವೂ ಜರುಗಿದೆ...... ಇಂತಹ ನೂರಾರು ಘಟನೆಗಳ ಸಾಲಿಗೆ ಇತ್ತೀಚಿನ ಸೇರ್ಪಡೆಯೆಂದರೆ ಪಂಚಾಯತಿ ರಾಜ್ಯ ವ್ಯವಸ್ಥೆಯ ದುರ್ಬಲೀಕರಣ.

ಮೋದಿ ಸರ್ಕಾರವೀಗ ಪಂಚಾಯುತಿ ರಾಜ್ಯ ಸಚಿವಾಲಯವನ್ನು ಶಾಶ್ವತವಾಗಿ ಮುಚ್ಚಲು ಸಕಲ ಸಿದ್ಧತೆಗಳನ್ನು ಪ್ರಾರಂಭಿಸಿದೆ. ಸಚಿವಾಲಯವನ್ನು ಬಂದ್ ಮಾಡಿ ಅದನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕೈಕೆಳಗಿನ ಒಂದು ಮಾಮೂಲಿ ಇಲಾಖೆಯಾಗಿ ಪರಿವರ್ತಿಸುವ ದುರಾಲೋಚನೆ ಆದರದಾಗಿದೆ. ಅದಕ್ಕೆ ಮುನ್ನ ಅದನ್ನು ಅಪ್ರಸ್ತುತವಾಗಿಸುವ ಯೋಜನೆಯ ಭಾಗವಾಗಿ ಬಜೆಟ್ ಅನುದಾನಕ್ಕೆ ದೊಡ್ಡ ಕತ್ತರಿ ಪ್ರಯೋಗ ಆಗಿದೆ. ಕಳೆದ ವರ್ಷದ ಬಜೆಟ್‌ನಲ್ಲಿ ಪಂಚಾಯತಿ ವ್ಯವಸ್ಥೆಗೆಂದಿರುವ ಅನುದಾನವನ್ನು 7000 ಕೋಟಿ ರೂಪಾಯಿಗಳಿಂದ 96 ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ! ಇಲ್ಲಿಯ ತನಕ ಪಂಚಾಯತಿಗಳಿಗೆ ಸಾಕಷ್ಟು ಸಂಪನ್ಮೂಲ ದೊರೆಯುತ್ತಿದ್ದ ಕಾರಣ ಹತ್ತುಹಲವು ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿದೆ. ಆದರೂ ಮಾಡಬೇಕಾದ್ದು ಬೆಟ್ಟದಷ್ಟಿದೆ. ಚಿಕ್ಕದೊಂದು ನಿದರ್ಶನವನ್ನು ಕೊಡುವುದಾದರೆ ದೇಶಾದ್ಯಂತ ಸುಮಾರು 58,000 ಪಂಚಾಯತಿಗಳಿಗೆ ಇದುವರೆಗೂ ಸ್ವಂತ ಕಚೇರಿ ಎಂಬುದೆ ಇಲ್ಲ. ಮೋದಿ ಸರ್ಕಾರ ಮಾಡಿರುವ ಬೃಹತ್ತಾದ ಕಡಿತದಿಂದಾಗಿ ಸಚಿವಾಲಯವನ್ನು ಉಪವಾಸ ಕೆಡವಿದಂತಾಗಿದೆ. ಅದೂ ಸಾಲದೆಂಬಂತೆ ಕೇಂದ್ರದಿಂದ ರಾಜ್ಯಗಳಿಗೆ ನಿಧಿ ವರ್ಗಾವಣೆಯ ವಿಷಯದಲ್ಲಿಯೂ ವಿಳಂಬ ಧೋರಣೆ ಶುರುವಾಗಿದೆ. ಸ್ವಾಭಾವಿಕವಾಗಿ ಹಣದ ಕೊರತೆ ಎದುರಿಸಲಾರಂಭಿಸಿರುವ ಪಂಚಾಯತಿಗಳು 'ಸ್ವಚ್ಛ ಭಾರತ ಕೋಶ್' ಮತ್ತಿತರ ಯಾವುದೆ ಕಾಮಗಾರಿಗಳನ್ನು ಎತ್ತಿಕೊಳ್ಳಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (**Backward Regions Grants Fund**) ಮತ್ತು ರಾಜೀವ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನ (**Rajiv Gandhi Panchayat Sashaktikaran Abhiyan**) ಎಂಬ ಎರಡು ಮುಖ್ಯ ಕಾರ್ಯಕ್ರಮಗಳಿಗೆ ಎಳ್ಳುನೀರು ಬಿಡಲಾಗಿದೆ. ಈ ವರ್ಷ 'ರಾಜೀವ ಗಾಂಧಿ ಪಂಚಾಯತ್ ಸಶಕ್ತಿಕರಣ ಅಭಿಯಾನ'ದ ಹೆಸರು ಬದಲಾಯಿಸಿ 'ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ' (**Rashtriya Gram Swaraj Abhiyan**) ಎಂದು ಮರುನಾಮಕರಣ ಮಾಡಿದ ನಂತರವೆ ರೂ. 655 ಕೋಟಿ ಬಿಡುಗಡೆಯಾಗಿದೆ!

ಪಂಚಾಯುತಿ ರಾಜ್ಯ ವ್ಯವಸ್ಥೆಯನ್ನು ಸಂಸತ್ತಿನ ಅನುಮೋದನೆ ಪಡೆದೇ ಜಾರಿಗೆ ತರಲಾಗಿದೆ. ಇದಕ್ಕೆ ಸಂಬಂಧಿಸಿದ ಸಂವಿಧಾನದ 73ನೆ ತಿದ್ದುಪಡಿಯನ್ನು 1992ರ ಡಿಸೆಂಬರ್‌ನಲ್ಲಿ ಹೆಚ್ಚುಕಡಿಮೆ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಅದನ್ನು ಜಾರಿಗೊಳಿಸುವುದು ಕೇಂದ್ರ ಮತ್ತು ರಾಜ್ಯ ಸರಕಾರಗಳ ಜಂಟಿ ಜವಾಬ್ದಾರಿಯಾಗಿದೆ. ಪಂಚಾಯತ್ ರಾಜ್ಯ ಸಚಿವಾಲಯದ ಚಟುವಟಿಕೆಗಳೆಂದರೆ: ಪ್ರಗತಿ ಪರಿಶೀಲನೆ, ಶೈಕ್ಷಣಿಕ ಕ್ಷೇತ್ರದ ತಜ್ಞರು ಮತ್ತು ಎನ್‌ಜಿಒಗಳನ್ನು ಒಟ್ಟು ಸೇರಿಸುವುದು, ಚುನಾಯಿತ ಸದಸ್ಯರ ಪ್ರತಿಕ್ರಿಯೆ ಪಡೆಯುವುದು, ಅವರು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು, ಮಹಿಳಾ ಪ್ರತಿನಿಧಿಗಳು, ದಲಿತರು, ಆದಿವಾಸಿಗಳ ವಿಶೇಷ ಹಿತಾಸಕ್ತಿಗಳ ಮೇಲುಸ್ತುವಾರಿ ನಡೆಸುವುದು, ದಾಖಲೆ ಇರಿಸುವುದು, ತಜ್ಞರಿಂದ ಅಧ್ಯಯನಗಳನ್ನು ನಡೆಸುವುದು, ವಾರ್ಷಿಕ ವರದಿಗಳನ್ನು ತಯಾರಿಸುವುದು ಇತ್ಯಾದಿ.


ಇನ್ನು ಪಂಚಾಯುತಿಗಳಿಗೆ ಬಂದರೆ ಸಂವಿಧಾನವು ಪಂಚಾಯತಿಗಳ ಹೆಗಲಿಗೆ ಬಹಳಷ್ಟು ಹೊಣೆಗಾರಿಕೆಗಳನ್ನು ವಹಿಸಿದೆ: ಕೃಷಿ, ಹೈನುಗಾರಿಕೆ, ಜಾನುವಾರು ಸಾಕಣೆ, ಮೀನುಗಾರಿಕೆ, ಸಣ್ಣ ನೀರಾವರಿ, ಸಾಮಾಜಿಕ ಮತ್ತು ಕೃಷಿ ಅರಣ್ಯಗಳು, ಲಘು ಅರಣ್ಯ ಉತ್ಪತ್ತಿ, ನೈರ್ಮಲ್ಯ, ಖಾದಿ ಗ್ರಾಮೋದ್ಯೋಗ, ಆಹಾರವಸ್ತುಗಳ ಸಂಸ್ಕರಣೆಯಂತಹ ಚಿಕ್ಕ ಉದ್ದಿಮೆಗಳು, ಕುಟುಂಬ ಕಲ್ಯಾಣ, ಆರೋಗ್ಯ ಸೇವೆ, ಸಮಗ್ರ ಶಿಶು ಅಭಿವೃದ್ಧಿ, ಶಿಕ್ಷಣ, ಲೈಬ್ರರಿ, ಸಾಂಸ್ಕೃತಿಕ ಚಟುವಟಿಕೆಗಳು, ದುರ್ಬಲ ವರ್ಗಗಳ, ದಲಿತರ, ಆದಿವಾಸಿಗಳ ಕಲ್ಯಾಣ, ಸಾರ್ವಜನಿಕ ಆಹಾರಧಾನ್ಯ ವಿತರಣಾ ವ್ಯವಸ್ಥೆ ಇತ್ಯಾದಿ ಇತ್ಯಾದಿ.

ಇಷ್ಟೆಲ್ಲಾ ಜವಾಬ್ದಾರಿಗಳಿರುವ ಸಚಿವಾಲಯವನ್ನು ಮುಚ್ಚಿ ಇಲಾಖೆಯಾಗಿ ಪರಿವರ್ತಿಸಿ ಗ್ರಾಮೀಣಾಭಿವೃದ್ಧಿ ಸಚಿವಾಲಯದೊಂದಿಗೆ ವಿಲೀನಗೊಳಿಸುವುದೆಂದರೆ ಅದು ಸಂವಿಧಾನಕ್ಕೆ ಬಗೆಯುವ ಘೋರ ಅಪಚಾರ. ಪಂಚಾಯತಿಗಳೆಂದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಯೋಜನೆಗಳನ್ನು ಅನುಷ್ಠಾನಗೊಳಿಸಲೆಂದು ಸ್ಥಾಪಿಸಿರುವ ಸಂಸ್ಥೆಗಳಲ್ಲ, ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿ ಗ್ರಾಮ ಮತ್ತು ಸ್ಥಳೀಯ ಮಟ್ಟಗಳಲ್ಲಿ ಜನ ತಾವೇ ಸ್ವತಂತ್ರ ಆಡಳಿತ ನಡೆಸುವಂತಾಗಬೇಕು ಎನ್ನುವ ಇರಾದೆಯಿಂದ ಪಂಚಾಯತ್ ರಾಜ್ಯ ವ್ಯವಸ್ಥೆ ರೂಪು ತಾಳಿದೆ. ಹೀಗೆ ಒಂದು ಮೌನ ಕ್ರಾಂತಿಯನ್ನು ಸಾಧಿಸುವ ದಿಕ್ಕಿನಲ್ಲಿ ಕಳೆದ ಸುಮಾರು 25 ವರ್ಷಗಳ ಅವಧಿಯಲ್ಲಿ ಕೆಲವು ಹೆಜ್ಜೆಗಳನ್ನು ಇರಿಸಲಾಗಿದೆ. ಹೀಗಿರುವಾಗ ಪ್ರತ್ಯೇಕ ಸಚಿವಾಲಯವೆ ಇಲ್ಲವಾದಲ್ಲಿ ಇದುವರೆಗೆ ಮಾಡಿರುವ ಸಾಧನೆಗಳೆಲ್ಲ ನೀರಲ್ಲಿ ಮಾಡಿದ ಹೋಮದಂತಾಗಲಿದೆ. ಸ್ಥಳೀಯ ಸ್ವಯಮಾಡಳಿತದ ಪ್ರಜಾಸತ್ತಾತ್ಮಕ ಚೌಕಟ್ಟು ತೆಳುಗೊಳ್ಳುತ್ತಾ ಸಾಗಿ ಕಣ್ಮರೆಯಾಗುವ ದಿನಗಳು ದೂರವಿಲ್ಲ.

ಆಡಳಿತದಲ್ಲಿ ಹಂತಹಂತವಾಗಿ ವಿಕೇಂದ್ರೀಕರಣ ಮಾಡಿ ಪಂಚಾಯತಿಗಳ ಸಬಲೀಕರಣ ಮಾಡುವ ನಿಟ್ಟಿನಲ್ಲಿ ಹಲವಾರು ರಾಜ್ಯಗಳು ಪ್ರಗತಿ ತೋರಲಾರಂಭಿಸಿದರೆ ಅತ್ತ ಗುಜರಾತ್ ಮಾತ್ರ ಏನೂ ಮಾಡಿಲ್ಲ. ಗುಜರಾತ್‌ನಲ್ಲಿ ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದ ಸಂದರ್ಭದಲ್ಲಿ ನರೇಂದ್ರ ಮೋದಿಯೆ ರಾಜ್ಯದ ಮುಖ್ಯಮಂತ್ರಿ ಆಗಿದ್ದ. ಧರ್ಮಾಧಾರಿತ ಸರ್ವಾಧಿಕಾರ ವ್ಯವಸ್ಥೆಯಾದ ಹಿಂದೂ ರಾಷ್ಟ್ರವನ್ನು ಸ್ಥಾಪಿಸಲು ಕಂಕಣಬದ್ಧನಾಗಿರುವ ಮೋದಿಗೆ ಸಹಜವಾಗಿ ಗ್ರಾಮಮಟ್ಟದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ರೂಪುಗೊಳ್ಳುವುದು ಬೇಕಿರಲಿಲ್ಲ. ಹೀಗಾಗಿ ಗುಜರಾತ್‌ನಲ್ಲಿ ಪಂಚಾಯತ್ ವ್ಯವಸ್ಥೆ ಕೇವಲ ನಾಮಮಾತ್ರಕ್ಕಷ್ಟೆ ಇತ್ತು ಹೊರತು ಅವುಗಳಿಗೆ ನೈಜ ಅಧಿಕಾರ ಇರಲೇ ಇಲ್ಲ. ವಾಸ್ತವವಾಗಿ ಚುನಾವಣೆ ಇಲ್ಲದೆ ಅಸ್ತಿತ್ವಕ್ಕೆ ಬಂದ ಪಂಚಾಯತಿಗಳಿಗೆ ವಿವಿಧ ನಾನಾ ವಿಧದಲ್ಲಿ ಪ್ರೋತ್ಸಾಹ ನೀಡಲಾಯಿತು. ಆದುದರಿಂದಲೆ ಕೇಂದ್ರ ಸಚಿವರು ಪ್ರಗತಿ ಪರಿಶೀಲನೆಗೋಸ್ಕರ ಗುಜರಾತಿಗೆ ಭೇಟಿ ನೀಡಬಯಸಿದಾಗ ಅನುಮತಿ ನಿರಾಕರಿಸಲಾಯಿತು. ಬಿಜೆಪಿ ಆಡಳಿತದ ಹರಿಯಾಣಾ ಮತ್ತು ರಾಜಸ್ಥಾನಗಳಲ್ಲಿ ಇನ್ನೊಂದು ವಿಧದ ಹುನ್ನಾರ ನಡೆಯುತ್ತಿದೆ. ಅಲ್ಲಿ ಇತ್ತೀಚೆಗೆ ಕನಿಷ್ಠ ವಿದ್ಯಾರ್ಹತೆ ನಿಯಮ ಜಾರಿಗೊಳಿಸುವ ಮೂಲಕ ದಲಿತ, ಆದಿವಾಸಿ, ಬಡ ಉಮೇದುವಾರರನ್ನು ಪಂಚಾಯತ್ ಚುನಾವಣೆಗಳಿಂದ ಹೊರಗುಳಿಯುವಂತೆ ಮಾಡಲಾಗಿದೆ. ಮೊನ್ನೆಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಮಾಳ – ಸೂರಂಟಿ ಸಂಪರ್ಕ ರಸ್ತೆ ಮತ್ತು ಸೇತುವೆಯನ್ನು ಸ್ಥಳೀಯ ಬಿಜೆಪಿ ಶಾಸಕ ಅಲ್ಲಿನ ಗ್ರಾಮ ಪಂಚಾಯತ್‌ನ ಗಮನಕ್ಕೆ ತಾರದೆ ಉದ್ಘಾಟಿಸಿದ ಘಟನೆಯೂ ಇದೇ ಸಾಲಿಗೆ ಸೇರುತ್ತದೆ.

ಈ ಕ್ರಮಗಳೆಲ್ಲವೂ ಸಂಘ ಪರಿವಾರದ ಕಾರ್ಯಸೂಚಿಯ ಪ್ರಧಾನ ಅಂಶವಾದ ಹಿಂದೂ ರಾಷ್ಟ್ರ ಸ್ಥಾಪನೆಯ ಕಾರ್ಯಕ್ರಮದ ಭಾಗವೆ ಆಗಿವೆ. ಯಾರೇನೇ ಹೇಳಲಿ, 2014ರ ಮೇ ನಂತರದ ವಿದ್ಯಮಾನಗಳನ್ನು ಗಮನವಿಟ್ಟು ನೋಡಿದಾಗ ಒಟ್ಟಾರೆಯಾಗಿ ಅವೆಲ್ಲವೂ ಹಿಂದೂ ರಾಷ್ಟ್ರ ಎಂಬ ಒಂದೇ ಗುರಿಯ ಕಡೆಗೆ ಮುಖ ಮಾಡಿರುವುದು ಸ್ಫಟಿಕದಷ್ಟು ಸ್ಫುಟವಿದೆ. ಆ ಗುರಿಸಾಧನೆಯ ನಿಟ್ಟಿನಲ್ಲಿ ಭಾರತದ ಪ್ರಜಾತಾಂತ್ರಿಕ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನೆಲ್ಲಾ ಒಂದೊಂದಾಗಿ ದುರ್ಬಲಗೊಳಿಸುತ್ತಾ ಬರಲಾಗುತ್ತಿದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಭಾರತದ ಪ್ರಜಾತಾಂತ್ರಿಕ, ಗಣತಂತ್ರ ವ್ಯವಸ್ಥೆಯನ್ನು ಬುಡಮೇಲುಗೊಳಿಸಿ, ಶವಪೆಟ್ಟಿಗೆಯೊಳಗೆ ತುಂಬಿಸಿ, ಆಳದಲ್ಲಿ ಹೂಳಲು ಭರದ ಸಿದ್ಧತೆ ನಡೆದಿದೆ.

(ಆಧಾರ: 30.6.2016ರ ದ ಹಿಂದೂನಲ್ಲಿ ಮಣಿ ಶಂಕರ್ ಐಯರ್‌ರ ಲೇಖನ ಮತ್ತು ಇತರ ವರದಿಗಳು)





ಜಗತ್ಪ್ರಸಿದ್ಧ ಮೂಗು ಕತೆ

ಇದೊಂದು ವಿಸ್ಮಯದ ಸುದ್ದಿ, ತತ್ತ್ವಜ್ಞಾನಿ ಹಾಗೂ ಬುದ್ಧಿಜೀವಿಗಳ ನಡುವೆ ಬಿಸಿಬಿಸಿ ಚರ್ಚೆ, ಕೂದಲು ಸೀಳುವ ತರ್ಕ, ವಾಗ್ವಾದ. ಆ ಮೂಗು ಕುರಿತಂತೆ ನಡೆಯಿತು. ಅದು ಶೀಘ್ರವೇ ವಿಶ್ವವ್ಯಾಪಿ ಪ್ರಶಂಸೆಯನ್ನು ಗಳಿಸಿಕೊಂಡಿತು.

ಆ ಮೂಗು ಕುರಿತ ನೈಜಕಥೆಯನ್ನು ನಾನಿಲ್ಲಿ ದಾಖಲಿಸುವೆ. ನಮ್ಮ ಕಥಾನಾಯಕ ಇಪ್ಪತ್ತನಾಲ್ಕು ವರುಷಗಳಿಗೆ ಕಾಲಿಡುತ್ತಿದ್ದಂತೆ ಈ ಮೂಗಿನ ಚರಿತ್ರೆ ಪ್ರಾರಂಭಗೊಂಡಿತು. ಈ ಇಪ್ಪತ್ತನಾಲ್ಕು ವರುಷ ಕುರಿತಂತೆ ಏನು ವಿಶೇಷ ಇರಬಹುದೆಂದು ನನಗೂ ಕುತೂಹಲ ಕೆರಳಿದೆ. ಏನೇ ಇರಲಿ ಒಂದಂತೂ ಗ್ಯಾರಂಟಿ. ಚರಿತ್ರೆಯ ದಾಖಲೆಯ ಪುಟಗಳನ್ನು ನೋಡುವ ಧಾರಾಳತನ ನಿಮಗಿದ್ದರೆ, ಆಗ ನಿಮಗೆ ಉದಾತ್ತ ವ್ಯಕ್ತಿಗಳಲ್ಲಿ ಇಪ್ಪತ್ತನಾಲ್ಕನೇ ವಯಸ್ಸಿಗೆ ಏನೋ ಒಂದು ಮಹತ್ವದ ಸಂಗತಿಯನ್ನು ಅರಿಯುವಿರಿ ಎಂಬ ಖಾತ್ರಿ ನನಗೆ ಇದೆ. ಸ್ಪಷ್ಟವೆನಿಸಿದ ಈ ಸಂಗತಿಯನ್ನು ಚರಿತ್ರೆಯ ವಿದ್ಯಾರ್ಥಿಗಳ ನೆನಪಿಗೆ ನಾನು ತಂದದ್ದಕ್ಕೆ ಅವರಿಗೆ ಸಿಟ್ಟು ಬಂದಿರಬಹುದು.

ನಮ್ಮ ಕಥಾನಾಯಕನಾದರೋ ಬಡ ಬಾಣಸಿಗ, ಹೇಳಿಕೊಳ್ಳುವಂತಹ ಬುದ್ಧಿವಂತನೇನಲ್ಲ, ಅಂಗೂಟ ಚಾಪ್ ಅನ್ನುವರಲ್ಲ ಅಂತಹವನು! ಓದು, ಬರಹ ಬಾರದವನು. ಅಡುಗೆಮನೆಯೇ ಅವನ ಪ್ರಪಂಚ. ಅದರ ಬಾಹ್ಯದಾಚೆ ನಡೆವ ಯಾವ ಘಟನೆಗಳಿಗೂ ಅವನು ಮಂಡೆ ಬಿಸಿ ಮಾಡಿಕೊಂಡವನಲ್ಲ, ಅವನಾದರೂ ಏಕೆ ಬಿಸಿಮಾಡಿಕೊಳ್ಳಬೇಕು? ಅವನ ದಿನಚರಿ ಎಂದರೆ ಅಡುಗೆ ಮಾಡುವುದು, ಗಡದ್ದಾಗಿ ಉಣ್ಣುವುದು, ಬೆರಳು ತುಂಬ ನಶ್ಯ ಮೂಗಿಗೇರಿಸುವುದು, ಕುಂಭಕರ್ಣನಂತೆ ನಿದ್ರೆಗೆ ಜಾರುವುದು, ಪುನಃ ಎಚ್ಚರಗೊಂಡು ಅಡುಗೆ ತಯಾರಿಕೆಯಲ್ಲಿ ತೊಡಗುವುದು.

ಈ ಚಾಚಿದ ಮೂಗಿನವನಿಗೆ ದಿನಗಳ, ಮಾಸಗಳ ಹೆಸರಾಗಲಿ ತಿಳಿಯದು. ಅವನ ಕೂಲಿ ಅವನ ತಾಯಿ ಕೈಗೆ ಹೋಗುತ್ತಿತ್ತು, ಆ ವೃದ್ಧೆ ಮಗನಿಗೆ ನಶ್ಯ ತಂದುಕೊಡುತ್ತಿತ್ತು, ಹೀಗೆಯೇ ಅವನು ತನ್ನ ಇಪ್ಪತ್ತನಾಲ್ಕನೇ ವಯಸ್ಸಿನವರೆಗೂ ಯಾವುದೇ ಗೋಜುಗೊಂದಲಗಳಿಗೆ ತಲೆಕೆಡಿಸಿಕೊಳ್ಳದೆ ಆರಾಮವಾಗಿದ್ದ, ತದನಂತರ, ಅದು ಘಟಿಸೇಬಿಟ್ಟಿತು!

ಪ್ರಾಯಶಃ ಅದರಲ್ಲಿ ಅಸಾಮಾನ್ಯವೆನಿಸಿದ್ದು ಏನೂ ಇರಲಿಲ್ಲ, ಅಚಾನಕ್, ಅವನ ಮೂಗು ಉದ್ದನಾಗಿ ಬೆಳೆಯಲಾರಂಭಿಸಿತು– ಬಾಯಿಯಿಂದಾಚೆಗೆ, ದವಡೆಯಿಂದ ಕೆಳಗಿಳಿದುಬಿಡೋದೆ ಕ್ಷಣಮಾತ್ರದಲ್ಲಿ!

ಅವನ ಮೂಗು ದಿನೇದಿನೇ ಬೆಳೆಯುತ್ತಲೇ ಹೋಯಿತು. ತಿಂಗಳೊಳಗೆ ಅದರ ತುದಿ ಅವನ ಸೊಂಟದವರೆಗೂ ಚಾಚಿತು! ಬಹಳ ದಿನ ಬಚ್ಚಿಡಲಾಗದ್ದು ಇಂತಹದ್ದನ್ನೆಲ್ಲ, ಆದರೆ ಆತನನ್ನು ಅದು ಕಸಿವಿಸಿಗೆ ತಳ್ಳಿತೆ? ಒಂದಿಷ್ಟೂ ಇಲ್ಲ! ಎಲ್ಲರ ಮೂಗಿನಂತೆಯೇ ಅದು ತನ್ನ ಕರ್ತವ್ಯಗಳನ್ನು: ಉಸಿರಾಡುವುದು, ನಶ್ಯ ಸೇವಿಸುವುದು, ವಾಸನೆ ಪತ್ತೆಹಚ್ಚುವುದು, ಎಲ್ಲವೂ ಪಕ್ಕಾ, ಚಾಚೂತಪ್ಪದೆ ಮಾಡಿತು.

ನಿಸ್ಸಂದೇಹವಾಗಿ, ಚರಿತ್ರೆಯ ದಾಖಲೆಗಳಲ್ಲಿ ಅಂತಹ ಮೂಗುಗಳ ಘಟನೆ ದಾಖಲಾಗಿರುತ್ತದೆ– ಅಪರೂಪದ ಪ್ರಕರಣ, ಇದೊಂದು ನಾಸಿಕದ ಪಥಭ್ರಂಶ. ಮತ್ತೊಂದು ಬಗೆಯ ವಿಚಿತ್ರ ಮೂಗುಗಳಲ್ಲಿ ಇದು ಒಂದು ಅಂತ ನೀವು ಅಂದುಕೊಂಡಿರಬಹುದು? ನೀವು ಏನೇ ಸವಾಲು ಹಾಕಿ ಅದು ಆಗಲ್ಲ, ಈ ಮೂಗಿನ ಕಾರಣದಿಂದ ನಮ್ಮ ಬಡಪಾಯಿ ಹೀರೋ ಪಾಪ! ತನ್ನ ಕೆಲಸಕ್ಕೆ ಕತ್ತರಿ ತಂದುಕೊಂಡ!

ಏಕೆ?

ಅವನ ಪುನರ್ ನೇಮಕಾತಿ ಕುರಿತಂತೆ ಹೋರಾಟ ಮಾಡಲು ಯಾವುದೇ ಯೂನಿಯನ್‌ಗಳು ಇರಲಿಲ್ಲ, ಅವನ ಮೇಲೆ ಎಸಗಿದ ಭಾರಿ ಅನ್ಯಾಯದ ವಿರುದ್ಧ ಎಲ್ಲ ರಾಜಕೀಯ ಪಕ್ಷಗಳು ಕುರುಡಾಗಿದ್ದವು.

ಅವನನ್ನು ಏತಕ್ಕೆ ಕೆಲಸದಿಂದ ವಜಾಗೊಳಿಸಿದರು?

ತಾನು ಮಾನವೀಯತೆಯುಳ್ಳವನೆಂದು ಅಥವಾ ಜನೋಪಕಾರಿ ಎಂದು ಕರೆದುಕೊಳ್ಳುವ ಯಾವನೇ ಆಗಲಿ ಈ ಪ್ರಶ್ನೆ ಎತ್ತಲಿಲ್ಲ,

ನಮ್ಮ ಸಂಸ್ಕೃತಿಯ ನಾಯಕರು ಎಲ್ಲಿದ್ದರು ಈ ಉದ್ದನೆ ಮೂಗಿನವ ಬೀದಿಗೆ ಬಿದ್ದಾಗ?

ಪಾಪ! ಬಡಪಾಯಿ!


ಅವನಿಗೆ ಗೊತ್ತಿತ್ತು, ತನ್ನನ್ನು ಏತಕ್ಕೆ ಕೆಲಸದಿಂದ ವಜಾಗೊಳಿಸಿದರೆಂದು. ಇವನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದ ಸಂಸಾರಕ್ಕೆ ನೆಮ್ಮದಿ ಗಗನಕುಸುಮವಾಯಿತು. ಯಾವಾಗ ಇವನ ಮೂಗು ಬೆಳೆಯಲು ಪ್ರಾರಂಭಿಸಿತೋ ಆಗಿನಿಂದ. ಅವನ ಮೂಗನ್ನೊಮ್ಮೆ ಕಣ್ತುಂಬಿಕೊಳ್ಳಲು ಜನಜಂಗುಳಿಯೇ ಅವನ ಮನೆ ಮುಂದೆ ಜಮಾಯಿಸಿತು. ಒಬ್ಬರು, ಇಬ್ಬರು ಫೋಟೋಗ್ರಾಫರ್ಸ್, ಟಿ.ವಿ. ಸಿಬ್ಬಂದಿ, ವರದಿಗಾರರು... ಹೀಗೆ ಮಾನವ ಸಾಗರದ ಬೋರ್ಗರೆತವೇ ಆ ಮನೆಯನ್ನು ಮುತ್ತಿಗೆ ಹಾಕುವವರಂತೆ ಮುತ್ತಿದರು. ಹಲವು ಸಲ ಆ ಮನೆಗೆ ಕನ್ನ ಹಾಕಲಾಯಿತು. ಆ ಮನೆಯಿಂದ ಓರ್ವ ತರುಣಿಯ ಅಪಹರಣದ ಯತ್ನವೂ ನಡೆಯಬೇಕೆ!

ಆದರೆ ಕೆಲಸದಿಂದ ವಜಾಗೊಂಡ ಬಡಪಾಯಿ ಭಟ್ಟನಿಗೆ ತನ್ನ ಮೂಗು ಶಾಶ್ವತ ಖ್ಯಾತಿಯನ್ನು ಗಳಿಸಿಕೊಂಡಿದೆ ಎಂದು ಖಾತ್ರಿಯಾಯಿತು ಮುರುಕಲು ಗುಡಿಸಲಿನಲ್ಲಿ ಕೊಳೆಯುತ್ತಿರಬೇಕಾದರೆ.

ಅವನ ಮೂಗು ನೋಡಲು ಸಮೀಪದವರೇ ಅಲ್ಲ ಬಹು ದೂರದೂರುಗಳಿಂದಲೂ ಜನ ಬರಲಾರಂಭಿಸಿದರು. ಅದನ್ನು ನೋಡಿ ಅಚ್ಚರಿಗೊಂಡರು. ಕೆಲವರಂತೂ ಅದನ್ನು ಮುಟ್ಟುವ ಸಾಹಸವನ್ನು ಮಾಡಿದರು. ಆದರೆ ಯಾರೂ ಮುಟ್ಟಲಿಲ್ಲ, ಅವನಿಗೆ ಇಂಪಾಗಿರುವಂತ ಪ್ರಶ್ನೆಗಳನ್ನಾದರೂ ಅವೇ: ಏಕೆ ಸೊರಗಿದ್ದೀಯಾ? ಊಟವಾಯಿತೆ? ಯಾರಾದರೂ ಕೇಳಬಹುದಿತ್ತು, ಅದೂ ಕೇಳಲಿಲ್ಲ,

ನಶ್ಯ ಖರೀದಿಸಲು ಮನೆಯಲ್ಲಿ ಒಂದು ಬಿಡಿಗಾಸು ಸಹ ಇಲ್ಲ, ಮೃಗಾಲಯದೊಳಗಿನ ಹಸಿದ ಪ್ರಾಣಿಯಂತೆ ಎಷ್ಟು ದಿನ ಬದುಕಿರಬಲ್ಲ? ಅವನೂ ಕೂಡ ಮನುಷ್ಯ ಜೀವಿಯೇ, ಬುದ್ಧಿವಂತನಲ್ಲದಿರಬಹುದು. ಕಟ್ಟಕಡೆಗೆ ಅವನು ತನ್ನ ತಾಯಿಗೆ ಕಟ್ಟುನಿಟ್ಟಿನ ಸೂಚನೆ ಕೊಟ್ಟ. "ಅವರಿಗೆ ಹೋಗಿ ಅಂತ, ಅವರ ಮುಖದ ಮೇಲೆ ಹೊಡೆದಂಗೆ ಹೇಳಮ್ಮ" ಎಂದ.

ಅವನ ವೃದ್ಧ ತಾಯಿ ಚಾಕಚಕ್ಯತೆಯಿಂದ ಕುತೂಹಲಭರಿತ ವೀಕ್ಷಕರನ್ನು ಚದುರುವಂತೆ ಮಾಡಿ ಮುಂಬಾಗಿಲನ್ನು ಮುಚ್ಚಿದಳು. ಈ ಕಾರ್ಯ ಅವನ ಬಾಳ್ವೆಯಲ್ಲಿ ಒಂದು ಅನಿರೀಕ್ಷಿತ



ಪರಿಣಾಮವನ್ನುಂಟುಮಾಡಿತು. ಆ ವೃದ್ಧ ತಾಯಿ ಮತ್ತವಳ ಖ್ಯಾತಿವಂತ ಮಗನ ಮೇಲೆ ಅದೃಷ್ಟ ಖುಲಾಯಿಸಿತು. ಸಾವಿರಾರು ವೀಕ್ಷಕರು, ಅವರ ತಣಿಸಲಾಗದ ಕುತೂಹಲ, ಅವನ ಮೂಗಿನ ದರ್ಶನ ಪಡೆಯಲೋಸುಗ, ಈಗ ಹಣ ನೀಡಲು ಮುಂದಾದರು. ಮಂದಬುದ್ಧಿಯ ಜನಗಳಿಂದ ಹೆಚ್ಚು ಇನ್ನೇನು ತಾನೇ ಬಯಸಲಾದೀತು? ನಿಸ್ಸಂದೇಹವಾಗಿ, ಕೆಲವು ಶುದ್ಧಾಂತಃಕರಣದ ಬುದ್ಧಿಜೀವಿಗಳ ಸಮೂಹ ಹಾಗೂ ತತ್ತ್ವಜ್ಞಾನಿಗಳು ಈ ಬಹಿರಂಗ ದಗಾಕೋರತನಕ್ಕೆ ವಿರುದ್ಧವಾಗಿ ತಮ್ಮ ದನಿ ಎತ್ತಿದರು. ಅವರ ಪ್ರತಿಭಟನೆ ನಿರ್ಗಲ್ಲ ಮೇಲೆ ಮಳೆ ಸುರಿದಂತೆ ಆಯಿತು. ಸರ್ಕಾರವೂ ಅವನ ಮೇಲೆ (ಉದ್ದನೆ ಮೂಗಿನವ) ಯಾವ ಕ್ರಮವನ್ನು ಜರುಗಿಸಲಿಲ್ಲ, ಸರ್ಕಾರದ ಈ ದಿವ್ಯ ನಿರ್ಲಕ್ಷ್ಯ ಹಾಗೂ ಬೇಜವಾಬುದಾರಿತನವನ್ನು ಕಂಡು ವ್ಯಗ್ರರಾದ ಬುದ್ಧಿಜೀವಿಗಳು, ತತ್ತ್ವಜ್ಞಾನಿಗಳು, ಸಮಾಜದ ನಾನಾ ಛಾಯೆಯ ವಿಧ್ವಂಸಕಧಾರಿಗಳು ಸರ್ಕಾರವನ್ನು ಬುಡಮೇಲು ಮಾಡುವವರೊಂದಿಗೆ ಕೈ ಜೋಡಿಸಿದರು.

ಅವನ ಮೂಗಿನಿಂದ ಬರುವ ಆದಾಯ ಉಕ್ಕೇರಿತು. ಈ ದೀರ್ಘ ಕಥೆಯನ್ನು ಸಂಕ್ಷೇಪಗೊಳಿಸುತ್ತೇನೆ. ಕೇವಲ ಆರೇ ವರುಷಗಳ ಹಿಂದೆ ಒಂದು ದಿನದ ಊಟಕ್ಕೂ ಪರದಾಡುತ್ತಿದ್ದವನು ಕೋಟ್ಯಾಧಿಪತಿಯಾದ. ಅಲ್ಲದೆ, ಸಿನಿಮಾಗಳಲ್ಲಿ ನಟಿಸಿದ. 'ದೊ ಹ್ಯೂಮನ್ ಸಬ್‌ಮರೀನ್' ಟೆಕ್ನಿಕಲರ್ ಸಿನಿಮಾ ಲಕ್ಷಾಂತರ ವೀಕ್ಷಕರನ್ನು ಆಕರ್ಷಿಸಿತು. ಇವನ ಕುರಿತು ಆರು ಮಂದಿ ಪ್ರಖ್ಯಾತ ಕವಿಗಳು ಮೆಚ್ಚುನುಡಿಯನ್ನು ಬರೆದರು. ಒಂದು ಡಜನ್ ಜೀವನ ಚರಿತ್ರೆಗಳು ಪ್ರಕಟಗೊಂಡವು. ಹಣ, ಖ್ಯಾತಿ ಒಟ್ಟೊಟ್ಟಿಗೆ ಬೆಂಬತ್ತಿ ಬಂದವು ಲೇಖಕರಿಗೂ ಕೂಡ.

ಅವನ ಮನೆ ಈಗ ಎಲ್ಲರಿಗೂ ತೆರೆದ ದಿಡ್ಡಿ ಬಾಗಿಲು. ಯಾರೂ ಬೇಕಾದರೂ ಕೇಳಿ ಊಟ ಮಾಡಬಹುದಿತ್ತು, ಒಂಚೂರು ನಶ್ಯ ಪಡೆಯಬಹುದಿತ್ತು.

ಈ ವೇಳೆಗೆ ಅವನಿಗೆ ಇಬ್ಬರು ಕಾರ್ಯದರ್ಶಿಗಳಿದ್ದರು. ಅವರೀರ್ವರೂ ಅನುಪಮ ಸುಂದರಿಯರು ಅಷ್ಟೆ ಅಲ್ಲ ಉತ್ತಮ ಶಿಕ್ಷಣವೂ ಇತ್ತು ಅವರಿಗೆ.

ಅವರೀರ್ವರೂ ಅವನನ್ನು ಪ್ರೀತಿಸಿದ್ದು ಒಂದೇ ಅಲ್ಲ ಆರಾಧಿಸಲಾರಂಭಿಸಿದರು! ಕೆಲವು ಸುಂದರ ಸ್ತ್ರೀಯರು ಉನ್ಮಾದಗ್ರಸ್ತ ನರಹಂತಕನನ್ನೋ ಅಥವಾ ಹೆದ್ದಾರಿ ಕಳ್ಳನನ್ನೋ ಪ್ರೀತಿಸಲು ಸದಾ ತುದಿಗಾಲ ಮೇಲೆ ನಿಂತಿರುತ್ತಾರೆಂಬ ಮಾತನ್ನು ಇಲ್ಲಿ ಉದಾಹರಿಸುತ್ತೇನೆ.

ಜಗತ್ತಿನ ಚರಿತ್ರೆಯ ಪುಟಗಳನ್ನು ನೀವೇನಾದರೂ ತಿರುವಿ ಹಾಕಿದರೆ, ಒಬ್ಬನೇ ಪುರುಷನನ್ನು ಎಲ್ಲಿ ಇಬ್ಬರು ಸ್ತ್ರೀಯರು ಪ್ರೀತಿಸುವರೋ ಅಲ್ಲಿ ಸದಾ ಕ್ಲೇಶ ಇದ್ದೇ ಇದೆ ಎಂಬುದನ್ನು ನೀವು ನಂಬುವಿರಿ. ನಮ್ಮ ಕಥಾನಾಯಕನ ಜೀವನದಲ್ಲೂ ಕೂಡ ಅದೇ ಘಟಿಸಿತು. ಅವನಿಗೆ ಅವನ ಇಬ್ಬರು ಅಂದಗಾತಿ ಕಾರ್ಯದರ್ಶಿಗಳು ಹೇಗೆ ಅವನ ಬೆನ್ನು ಬಿದ್ದರೋ ಹಾಗೆಯೇ ಮಂದಿ ಕೂಡ ಹೃತ್ಪೂರ್ವಕವಾಗಿ ತಮ್ಮ ಪ್ರೀತ್ಯಾಭಿಮಾನವನ್ನು ಅವನಿಗೆ ತೋರಿಸಿದರು. ಆ ವಿಶ್ವವಿಖ್ಯಾತ ಮೂಗು, ಉದ್ದನೆಯದು, ಚಿತ್ತಾಕರ್ಷಕವಾದದ್ದು ಸೊಂಟದವರೆಗೂ ಇಳಿಬಿದ್ದ ಆ ಮೂಗು ಅತ್ಯದ್ಭುತದ ಸಂಕೇತವಲ್ಲದೆ ಮತ್ತೇನು....?

ನಮ್ಮ ಹೀರೋ ಈಗ ಎಲ್ಲ ಅಂತರರಾಷ್ಟ್ರೀಯ ಪ್ರಾಮುಖ್ಯತೆಯ ಘಟನೆಗಳ ಬಗೆಗೂ ಹೇಳಿಕೆಗಳನ್ನು ಕೊಡುತ್ತಿದ್ದ ಹಾಗೂ ಅವನ ಹೇಳಿಕೆಗಳನ್ನು ವರದಿಗಾರರು ತುದಿಗಾಲ ಮೇಲೆ ನಿಂತು ಸ್ವೀಕರಿಸುತ್ತಿದ್ದರು:

"ಗಂಟೆಗೆ 10,000 ಕಿ.ಮೀ. ವೇಗದಲ್ಲಿ ಚಲಿಸುವ ಹೊಸ ತಲೆಮಾರಿನ ಜೆಟ್‌ವಿಮಾನದ ಸ್ಪರ್ಧೆ ಕುರಿತಂತೆ ನಮ್ಮ ಕಥಾನಾಯಕನ ಅಭಿಪ್ರಾಯ ಹೀಗಿತ್ತು..."

"ಡಾ|| ಪುರಾಸಿ ಬರೊಸ್ ಸತ್ತ ವ್ಯಕ್ತಿಯೋರ್ವನನ್ನು ಪವಾಡ ಸದೃಶ ರೀತಿಯಲ್ಲಿ ಮರಳಿ ಉಸಿರಾಡುವಂತೆ ಮಾಡಿದ ಯಶಸ್ಸಿನ ಬಳಿಕ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದಾಗ ನಮ್ಮ ಹೀರೋ ಆರಾಮವಾಗಿ ನಸುನಗುತ್ತಾ ತನ್ನ ನಿಗೂಢ ಹೇಳಿಕೆಯನ್ನು ದ್ವಂದ್ವಾರ್ಥದ ಮಾತಿನ ಮೂಲಕ..." ಹೊರಗೆಡವಿದ.

ಜಗತ್ತಿನಲ್ಲಿ ಅತ್ಯಂತ ಎತ್ತರದ ಶಿಖರವನ್ನು ಆರೋಹಣ ಮಾಡಿದ ಸುದ್ದಿ ಯಾವಾಗ ಬಿತ್ತರವಾಯಿತೋ "ಸರಿ, ನಮ್ಮ ಹೀರೋ ಏನು ಹೇಳ್ತಾರೆ?" ಮಾತನಾಡಿಕೊಂಡರು ಅವರವರೆ.

ಆದರೆ ಅದನ್ನು ಕುರಿತಂತೆ ಅವನೇ[...] ಎತ್ತಲಿಲ್ಲವೆಂದರೆ... "ಅಚ್ಛಾ! ಅದೇನು ಅಂತಹ ಕೆಲ್ಸ ಅಲ್ಲ ಬಿಡಿ" ಎಂದು ಭಾವಿಸುತ್ತಿದ್ದರು ಈ ಮಂದಿ.

ಹಲವು ಬಗೆಬಗೆಯ ವಸ್ತು ವಿಷಯಗಳ[...] ವಿಶ್ವದ ಉಗಮ, ಕಸದ ವಿತರಣೆ, ಚಿತ್ತಪ್ರಭಾವದ ವಿ[...] ಚಿತ್ರರಚನೆ, ಕಥೆಗಳಲ್ಲಿ ಪ್ರಜ್ಞಾಪ್ರವಾಹ, ಟಾಯ್‌ಲೆ[...] ಸಾವಿನ ನಂತರದ ಬದುಕು, ಕೊಳಚೆ ಸಂಸ್ಕರಣ[...] ಸ್ಥಾಪನೆ, ಭೂಮಂಡಲದ ಬಿಸಿ... ಸೂರ್ಯನಡಿ[...] ಅಥವಾ ಅವನಿಂದಾಚೆಯ ವಿಷಯಗಳ ಕುರಿ[...] ಹೀರೋಗೆ ಎಸೆಯದೆ ಇದ್ದ ಪ್ರಶ್ನೆಗಳೇ ಇರಲ[...]

ಈ ಸಂದರ್ಭದಲ್ಲಿ, ಪಿತೂರಿಗಳ ಸರಮಾಲೆ[...] ನಮ್ಮ ಹೀರೋ ಮುಗಿಸಲು ಒಳಸಂಚುಗಳು[...] ಚರಿತ್ರೆಯನ್ನು ನೀವು ಸಾಕಷ್ಟು ಓದಿದ್ದರೆ, ನಿಮಗೆ ಒಳಸಂಚು ಹೊಸದೇನು ಅಲ್ಲ, ಹಾಗೂ ಪ್ರಮುಖವಾದ ಅಸಲು ಏನೂ ಇಲ್ಲ ಅಂತ, ವಾ[...] ಮಾನವ ಸಮಾಜದ ಚರಿತ್ರೆಯೇ ಒಳಸಂಚಿನ[...]

ಒಳಸಂಚು ಎಂದರೇನು? ವಿವರಿಸುವೆ ನೋ[...] ಜಮೀನಿನಲ್ಲಿ ನೀವು ತೆಂಗಿನ ಸಸಿ ನೆಟ್ಟು ನಿತ್ಯ [...] ವರುಷಗಳು ಉರುಳುತ್ತವೆ. ಸಸಿ ದೊಡ್ಡದಾಗಿ[...] ಗುದಿ/ ಹೊತ್ತು ಮರ ತೂಗುತ್ತದೆ. ಒಂದು [...] ನಿಮ್ಮ ನೆರೆಯವನು, ವರ್ಷಪೂರಾ ಪ್ರಾಮ[...] ದುಡಿದು ಅನ್ನ ತಿನ್ನದ ಸೋಂಭೇರಿ ನಾ[...] ಅನ್ಯಾಯವೋ ನಿಮ್ಮ ತೆಂಗಿನ ಫಸಲನ್ನು ದೋಚಿ[...] ಇದೇ ಒಳಸಂಚು!

ಸುಲಿಗೆಗಾರ ಸೊಂಡಿಲ ಮೂಗಿನವ!

ಈ ಧೋರಣೆ ಬಹು ಮಂದಿಗೆ ಇದ[...] ಬಂದಿತು.

ಸರ್ಕಾರದಿಂದಲೇ ಪ್ರಪ್ರಥಮವಾಗಿ ಬ[...] ವ್ಯವಹಾರ ಮೂಕ್ಕನ್ ಮೇಲೆ ನಡೆಯಿತು, ಅದೂ[...] ಕ್ರಾಂತಿಯ ರೀತಿಯಲ್ಲಿ, ಸರ್ಕಾರ ಈವರೆಗೆ[...] ಮಾಡಿದ್ದಿಲ್ಲ ಈ ತರಹದ್ದೊಂದನ್ನು, ಅದೊಂದು[...] ಅತ್ಯಂತ ಚಾಣಾಕ್ಷ ರೀತಿಯ ತೀರ್ಮಾನ. ವ[...] 'ನೈಟ್ ಕಮ್ಯಾಂಡರ್ ಆಫ್ ಲಾಂಗ್‌ನೋಸ್' (ಕೆಸಿ[...] ಬಿರುದನ್ನು ಅನುಗ್ರಹಿಸಿತು ಚಿನ್ನದ ಮೆಡಲ್[...] ವಿಶೇಷವಾಗಿ ಏರ್ಪಡಿಸಿದ್ದ ಸಮಾರಂಭವೊಂದ[...] ಮೆಡಲ್‌ನ್ನು ರಾಷ್ಟ್ರಪತಿಗಳ ಕೈಯಿಂದಲೇ ಕೊ[...] ಅತಿಥಿಗಳು ಮೂಕ್ಕನ್ ಕೈ ಕುಲುಕುವುದರ[...] ಅವನ ಉದ್ದನೆಯ ಮೂಗನ್ನು ಕುಲುಕಿದರು[...] ಉದ್ದಗಲಕ್ಕೆ ಚಿತ್ರಮಂದಿರಗಳಲ್ಲಿ, ಟಿ.ವಿ.ಯ[...] ಸಮಾರಂಭದ ಸುದ್ದಿ ಪ್ರಸಾರವಾಯಿತು.

ಇದರ ನಂತರದ ಸರದಿ ರಾಜಕೀಯ ಪಕ್ಷಗ[...] ಜನರ ಚಾರಿತ್ರಿಕ ಹೋರಾಟದ ಮುಂಚೂಣಿ ನೇ[...] ಕಾಮ್ರೇಡ್ ಮೂಕ್ಕನ್ ನೇತೃತ್ವ ವಹಿಸಿದ! ಮೂಕ್ಕನ್! ಬಡಪಾಯಿ ಮೂಕ್ಕನ್! ರಾಜಕೀಯಕ್ಕೆಳೆದು ತರಲು ಇನ್ನಿಲ್ಲದ ಶತಪ್ರಯತ್ನ[...]

ಆದರೆ ಯಾವ ಪಾರ್ಟಿಗೆ ಮೂಕ್ಕನ್ ಸೇ[...] ಒಂದೇ ಎರಡೇ, ಹಲವು ಪಾರ್ಟಿಗಳಿದ್ದವು[...] ಉದ್ದಗಲಕ್ಕೂ. ಈ ಎಲ್ಲ ಪಾರ್ಟಿಗಳ ಪ್ರಧಾ[...] ಜನರ ಕ್ರಾಂತಿ! ಜನರು ಎಲ್ಲಾ ಕ್ರಾಂತಿಕಾರಿ ಪಾಟ[...] ನಿಷ್ಠೆ ತೋರಿಸಲು ಸಾಧ್ಯವಿಲ್ಲವಲ್ಲ ಏಕಕಾಲಕ್ಕೆ.

"ಅವರ ಪಾರ್ಟಿಗೆ ನಾನು ಸೇರ[...] ಹಾಳಾಗಿಹೋಗ್ಲಿ!" ಎಂದು ಮೂಕ್ಕನ್ ತನ್ನಷ್ಟ[...] ಗೊಣಗಿಕೊಂಡ. ಇದೇ ವೇಳೆಗೆ ಅವನ ಕಾರ್ಯದರ್ಶಿಗಳಲ್ಲಿ ಒಬ್ಬಳು ಈ ಅವಕಾ[...] ಬಳಸಿಕೊಂಡಳು.

"ನೀವು ನನ್ನನ್ನು ಪ್ರೀತಿಸುವುದು ನಿಜವಾ[...] ನಮ್ಮ ಪಾರ್ಟಿಗೆ ಸೇರಿ ಕಾಮ್ರೇಡ್ ಮೂಕ್ಕನ್[...]

ಮೂಕ್ಕನ್ ಮಾತನಾಡಲಿಲ್ಲ.

ಮತ್ತೊಬ್ಬಳು ಸುಂದರಿ ಕಾರ್ಯದರ್ಶಿಯನ್ನು[...] ಮೂಕ್ಕನ್ "ಯಾವ ಪಾರ್ಟಿಗೆ ಸೇರಲಿ ನಾನು?[...] ಕೇಳಿದ. ಅವಳಿಗೆ ಶೀಘ್ರವೇ ಮೂಕ್ಕನ್‌ನ ಅಂ[...] ಗುಟ್ಟು ರಟ್ಟಾಯಿತು.

"ಓ! ನೀವ್ಯಾಕೆ ಸೇರ್ಕೊಳ್ಳೀರಾ?" ಎಂದಳು[...] ಭುಜ ಕುಣಿಸುತ್ತ.

ಆದರೆ ಜನರ ಕ್ರಾಂತಿಕಾರಿ ಪಾರ್ಟಿಯ[...] ಕಾರ್ಯಕರ್ತರಿಗೆ ಮೂಕ್ಕನ್ ತಮ್ಮ ಪಾರ್ಟಿಯ[...] ಖಾತ್ರಿಯಾಗಿ ಬಿಟ್ಟಿತು ಆಗಲೆ.

"ಕಾಮ್ರೇಡ್ ಮೂಕ್ಕನ್ ಜಿಂದಾಬಾದ್! ಕ[...] ಪಾರ್ಟಿ ಜಿಂದಾಬಾದ್!" ಎಂದು ಕೂಗಿದ[...] ಘೋಷಣೆ ಅನುರಣಿತವಾಯಿತು. ಇದು ಇತರ [...]

ಗಗೆ ರುಚಿಸಲಿಲ್ಲ. ಅವರೆಲ್ಲ ಒಗ್ಗೂಡಿ ಅವನ
ರ್ತಿಗಳಲ್ಲೊಬ್ಬಳನ್ನೂ ಬುಟ್ಟಿಗೆ ಹಾಕಿಕೊಂಡು ಅವಳ
ಮೂಕನ್ ಹೆಸರಿಗೆ ಕಳಂಕ ತರುವಂತಹದೊಂದು
ಯನ್ನು ಕೊಡಿಸಿದರು ಪತ್ರಿಕೆಗಳಿಗೆ.

ಮಸ್ಥಿತಿ ಏನೆಂದರೆ ನಮ್ಮ ಕಾಲದ ಓರ್ವ ಕೆಟ್ಟ
ವಾಳಶಾಹಿ ಪ್ರತಿಗಾಮಿ ಈ ಮೂಕನ್ ಎಂದೇಳಲು
ದಿಸುತ್ತೇನೆ. ಈತ ದಿಗಿಲು ಹುಟ್ಟಿಸುವಂತಹ ವಂಚನೆ
ಅದಕ್ಕೆ ನನ್ನನ್ನು ಓರ್ವ ಸದಸ್ಯಳನ್ನಾಗಿ ಮಾಡಿದ್ದಾನೆ.
ಗಿ ನಾನು ಜನರ ಕ್ಷಮೆ ಯಾಚಿಸುವೆ. ತಡವಾದರೂ
ಗಿಲ್ಲ ಸತ್ಯ ಏನೆಂದು ಎಲ್ಲವನ್ನು ಹೇಳಿಬಿಡ್ತೇನೆ.
ಅವನ ಮೂಗು ಕುರಿತು: ಅದು, ಅದು, ರಬ್ಬರಿನ
ಕು!"



ಅಬ್ಬಾ! ಪ್ರಪಂಚದಾದ್ಯಂತ ವೃತ್ತಪತ್ರಿಕೆಗಳು ಪ್ರಮುಖ
ಯಾಗಿ ಮುಖಪುಟದಲ್ಲಿ ಈ ಸುದ್ದಿ ಪ್ರಕಟಿಸಿದವು.
ಮೂಗಿನ ಪವಾಡ ಬಯಲಾಯಿತು! ಚತುರ
ಸಗಾರ ಸುಲಭ ವಂಚನೀಯ, ಸಾರ್ವಜನಿಕರ ಮೇಲೆ
ಾಜಕೀಯ ಅವಕಾಶವಾದಿ ತನ್ನ ಕೈಚಳಕ ತೋರಿದ್ದಾನೆ.
ಪ ರಾಜಕೀಯ ಶಕ್ತಿಗೆ ಮೌನಸಮ್ಮತಿ ಇದೆಲ್ಲ.
ನ ಅಸಲಿ ಮೂಗಿಗೆ ನನ್ನ ಎಕ್ಕಡ...! ಎಂದೆಲ್ಲ
ಗಟ್ಟಳೆ ಮಸಿ ಖರ್ಚಾಯಿತು ಬರೆದೂ ಬರೆದು.

ಅಧಿಕಾರದ ಕೇಂದ್ರ ಬಿಂದುಗೆ ಈ ಸುದ್ದಿ ಈಗ
ತಂದಿತ್ತಿತು. ರಾಷ್ಟ್ರಾಧ್ಯಕ್ಷರಿಗೆ ಟೆಲಿಗ್ರಾಮ್‌ಗಳ
ಲಕ, ಫೋನ್ ಕರೆಗಳ ಮೂಲಕ, ಪತ್ರಗಳ ಮೂಲಕ
ವಾಗಿ ತಾಡಿಸಿದರು.

"ರಬ್ಬರ್ ಮೂಗಿನ ನೈಟ್ ಕಮ್ಯಾಂಡರ್ ಪ್ರಶಸ್ತಿ
ನನನ್ನು ನೇಣಿಗೇರಿಸಿ! ಡೌನ್‌ವಿತ್ ಇನ್‌ಕ್ವಿಲಾಬ್
ಬಾದ್! ಪ್ರತಿಗಾಮಿ ಮೂಕನ್ ಎಂದು ಕ್ರಾಂತಿಕಾರಿ
ರ ಕಾರ್ಯಕರ್ತರು ಬೊಬ್ಬೆ ಹಾಕಿದರು (ಮೂಕನ್
ೋಧಿ ಬಣ) ಆಗ ಮೂಕನ್ ಪರ ಕ್ರಾಂತಿಕಾರಿ
ಒಡನೆಯೇ ರಂಗಕ್ಕಿಳಿಯಿತು. ತತ್ಫಲ, ಮೂಕನ್‌ನ
ರ್ವ ಚೆಲುವೆ ಕಾರ್ಯದರ್ಶಿಯಿಂದ ಪತ್ರಿಕಾಹೇಳಿಕೆ
ರಬಿದ್ದಿತು:

"ಕಾಮ್ರೇಡ್ಸ್ ಅಂಡ್ ಫ್ರೆಂಡ್ಸ್, ನನ್ನ ಗೆಳತಿ ನೀಡಿದ
ಕೆ ಕಪೋಲ ಕಲ್ಪಿತ, ಸುಳ್ಳಿನ ಬೊಂತೆ. ಆಕೆಯ
ಕೆ ಮತ್ಸರದಿಂದ ಕೂಡಿದ ಪ್ರಚಾರವಷ್ಟೆ. ಕಾಮ್ರೇಡ್
ಕನ್ ಅವಳ ಅನಪೇಕ್ಷಣೀಯ ಪ್ರೇಮಸಂಧಾನಕ್ಕೆ
ಕಾಶ ನೀಡಲಿಲ್ಲ ಎಂಬ ಏಕೈಕ ಕಾರಣಕ್ಕೆ
ಯಿಂದ ಈ ರೀತಿ ಮಾಡಿದ್ದಾಳೆ. ಎಲ್ಲರಿಗೂ
ರುವಂತೆ, ಮೂಕನ್‌ರ ಹಣ ಹಾಗೂ ಅವರ
ದರ್ಶಿಯಾಗಿದ್ದರ ಪರಿಣಾಮ ತನಗೊದಗಿದ ಪ್ರಚಾರದ
ಬೆನ್ನುಹತ್ತಿದ ಆಕೆಯ ವರ್ತನೆ ಈಗ
ಶಗೊಂಡಿದೆ. ಜೊತೆಗೆ, ಅವಳ ಸಹೋದರ
ಾಶವಾದಿ ಪಾರ್ಟಿಯ ಒಬ್ಬ ಸದಸ್ಯ. ಅವರು ನಾಚಿಕೆ
ದೆ ತಮ್ಮನ್ನು ತಾವೇ 'ಜನರ ಕ್ರಾಂತಿಕಾರಿ ಪಾರ್ಟಿ'
ದು ಕರೆದುಕೊಳ್ಳುತ್ತಾರೆ. ಈ ಘಟಿಂಗರನ್ನು ಹಾಗೂ
ೀಚಾಸುರರನ್ನು ನಾನು ಬಯಲಿಗೆಳೆಯಲು, ಈ
ಾಶವನ್ನು ಬಳಸಿಕೊಳ್ಳುತ್ತಿದ್ದೇನೆ. ಕಾಮ್ರೇಡ್ ಮೂಕನ್‌ನ
ಗೆಯ, ನಿಷ್ಠೆಯ, ವಿಧೇಯ ಕಾರ್ಯದರ್ಶಿಯಾಗಿ ನಾನು
ವೆ ಅವರ ಮೂಗು ಅಸಲಿ ಎಂದು- ನನ್ನ
ಮುದಷ್ಟೇ ಈ ಮಾತು ಸತ್ಯ ಈ ಕ್ಲಿಷ್ಟ ಕಾಲದ
ದಲ್ಲಿ ಅವರ ನಾಯಕತ್ವದ ಬೆನ್ನಿಗೆ ಬೆನ್ನೆಲುಬಾಗಿ
ಕಾರ್ಯಕರ್ತರನ್ನು ಅಭಿನಂದಿಸುವೆ. ಕಾಮ್ರೇಡ್ ಮೂಕನ್
ಬಾದ್! ಜನರ ಕ್ರಾಂತಿಕಾರಿ ಪಾರ್ಟಿ ಜಿಂದಾಬಾದ್!
ಕ್ವಿಲಾಬ್ ಜಿಂದಾಬಾದ್!" ಜನರಾದರೂ ಏನು
ಬೇಕಿತ್ತು? ಎಲ್ಲ ಕಡೆ ಹೇಳತೀರದಷ್ಟು ಗೊಂದಲವಿತ್ತು,
ಕನ್‌ನ ವಿರೋಧಿ ರಾಜಕೀಯ ಪಕ್ಷ ಸರ್ಕಾರದ
ದ್ಧ ಆಪಾದನೆಗಳ ಸುರಿಮಳೆಗೈದಿತು.

"ಸುಲಭ ವಂಚನೀಯ ಪ್ರಜೆಗಳನ್ನು ಹೊರತುಪಡಿಸಿ
ಗೂ ಇದು ಪಾರದರ್ಶಕವಿದೆ. ಅದೇ ಮೂಕನ್‌ನನ್ನು
, 'Knight Commandor of the long
' ಪ್ರಶಸ್ತಿ ನೀಡಿ ಗೌರವಿಸಿತು? ಹಾಗೂ ವಜ್ರದ
ಅದ್ವಿತ ಮೆಡಲ್ ಏಕೆ ಕೊಟ್ಟಿತು? ಜನರಿಗೆ
ವಂಚನೆ ಮಾಡಿದ ಈ ಸಂಚಿನ ರಾಷ್ಟ್ರಾಧ್ಯಕ್ಷ

➜19

ಜೂನ್ ತಿಂಗಳ 9 ರಂದು ದಲಿತ ಸಂಘರ್ಷ ಸಮಿತಿಯ ಸ್ಥಾಪಕ ರಾಜ್ಯಸಂಚಾಲಕರಾದ ಪ್ರೊ. ಬಿ. ಕೃಷ್ಣಪ್ಪರವರ 78ನೇ ಜನ್ಮದಿನ. ಅವರ ನೆನಪಿಗಾಗಿ, ಅವರ ಸಂಗಾತಿಯಾಗಿ ಚಳವಳಿಯಲ್ಲಿ ಭಾಗವಹಿಸಿದ್ದರ ಕುರಿತು ಒಂದು ಮೆಲುಕು.

ದಲಿತ ಚಳವಳಿಯ ಒಂದು ನೆನಪು ಗುಡಿಸಲಿನ ಹಣತೆ ಪ್ರೊ. ಬಿ. ಕೃಷ್ಣಪ್ಪ

ಕೋಲಾರದ ಡೂಮ್‌ಲೈಟ್ ಸರ್ಕಲ್ಲಿನ ಬಾಡಿಗೆ ಕೊಠಡಿಯಲ್ಲಿ ಪಿಯುಸಿ ವಿದ್ಯಾರ್ಥಿಯಾಗಿ ವಾಸವಿದ್ದ ನಾನು ಅಂದು ಬೆಳಗ್ಗೆ ಬೇಗ ಎದ್ದು, ಬೋವಿ ಬಡಾವಣೆಯಲ್ಲಿದ್ದ ಪರಿಶಿಷ್ಟರ ಹಾಸ್ಟೆಲ್ಲಿನ ಬಳಿ ದಲಿತ ವಿದ್ಯಾರ್ಥಿಗಳ ಗುಂಪನ್ನು ಸೇರಿಕೊಂಡೆ. ಕೆಜಿಎಫ್‌ಗೆ ಹೋಗಲು ಎಲ್ಲರೂ ಲಾರಿಯನ್ನು ಹತ್ತಿಕೊಳ್ಳುತ್ತಿದ್ದರು. ದಲಿತ ಸಂಘರ್ಷ ಸಮಿತಿಯ ಕೋಲಾರ ಜಿಲ್ಲಾ ಸಂಚಾಲಕರಾದ ಸಿ.ಎಂ.ಮುನಿಯಪ್ಪ, ತಾಲ್ಲೂಕು ಸಂಚಾಲಕರಾದ ವಿಜಯಕುಮಾರ್, ದಸಂಸದ ಒಡನಾಡಿಗಳಾಗಿದ್ದ ಸೋಮಶೇಖರಗೌಡ, ಕೆ.ಮೂರ್ತಿಯವರು ಎಲ್ಲ ವಿದ್ಯಾರ್ಥಿಗಳನ್ನು ಲಾರಿಗೆ ಹತ್ತಿಸುತ್ತಿದ್ದರು. ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿದ್ದ ಲಾರಿಗೆ ರೈಟ್ ಹೇಳಿದ ಅವರು "ನೀವು ನಡೆಯಿರಿ, ನಾವು ಬರುತ್ತೇವೆ" ಎಂದರು.

1982 ನೇ ಇಸವಿಯ ಜನವರಿ ತಿಂಗಳಿನ ಯಾವುದೋ ಒಂದು ದಿನ. ಅಂದು ಕೆಜಿಎಫ್ ಚಲೋ ಕಾರ್ಯಕ್ರಮ. ಅಲ್ಲಿನ ದಲಿತ ಶಾಸಕ ಸಿ.ಎಂ.ಆರ್ಮುಗಂ ವಿರುದ್ಧ ಪ್ರತಿಭಟನೆ, ಬಹಿರಂಗ ಸಭೆಯ ಆಯೋಜನೆ. ಅದಕ್ಕೂ ಮೊದಲು, ಕೆಲ ದಿನಗಳ ಹಿಂದಷ್ಟೇ ದಸಂಸ ರಾಜ್ಯವ್ಯಾಪಿ ಚಳವಳಿಯನ್ನು ಹಮ್ಮಿಕೊಂಡಿತ್ತು. ಬೆಲ್ಚಿ, ಪಿಪ್ರಾ, ವಿಳ್ಳುಪುರಂ, ಕಿಲ್ವೆನ್ಮೇಣಿ.. ಹೀಗೆ ದಲಿತರ ಮೇಲೆ ಅಸಂಖ್ಯ ಹತ್ಯಾಕಾಂಡಗಳಾಗುತ್ತಿದ್ದರೂ ದಲಿತ ಮಂತ್ರಿ ಶಾಸಕರು, ಸಂಸದರೇಕೆ ಸುಮ್ಮನಿದ್ದಾರೆ? ಅವರ ಮನೆಗಳ ಮುಂದೆ ರಾಜ್ಯಾದ್ಯಂತ ಧರಣಿ ನಡೆಸಿ, ವಿಧಾನ ಸಭೆ, ಪಾರ್ಲಿಮೆಂಟುಗಳಲ್ಲಿ ನಮ್ಮ ಪ್ರತಿನಿಧಿಗಳು ದನಿಯೆತ್ತಲೆಂದು ಒತ್ತಾಯಿಸುವ ಚಳವಳಿಯಾಗಿತ್ತದು. ಧರಣಿ ನಿರತರ ಮೇಲೆ ಕೆಜಿಎಫ್‌ನಲ್ಲಿ ಸಿ.ಎಂ.ಆರ್ಮುಗಂ ಹಾಗೂ ಮೈಸೂರಿನಲ್ಲಿ ಶ್ರೀನಿವಾಸ್ ಪ್ರಸಾದ್ ಹಿಂಬಾಲಕರು ಹಲ್ಲೆ ನಡೆಸಿದ್ದರು. ಇದು ದಸಂಸದ ಮುಖವಾಣಿಯಾಗಿದ್ದ 'ಪಂಚಮ' ಪತ್ರಿಕೆಯಲ್ಲಿ ವರದಿಯಾಯಿತು. 'ಆರ್ಮುಗಂ, ಶ್ರೀನಿವಾಸ್ ಪ್ರಸಾದ್‌ಗೆ ತಾಕತ್ತಿದ್ದರೆ...' ಎನ್ನುವುದು ಆ ವರದಿಯ ತಲೆಬರಹವಾಗಿತ್ತು. ಹೀಗೆ ಪೆಟ್ಟುತಿಂದ ದಸಂಸ ಬೃಹತ್ ಪ್ರಮಾಣದ ಪ್ರತಿಭಟನೆಗೆ ಮುಂದಾಗಿತ್ತು. ಕೆಜಿಎಫ್‌ನಲ್ಲಿ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಯುವುದಿತ್ತು. ನಮ್ಮ ನರನಾಡಿಗಳಲ್ಲಿ ದಸಂಸವೇ ಹರಿಯುತ್ತಿತ್ತು.

ವಿದ್ಯಾರ್ಥಿಗಳನ್ನು ಹೊತ್ತ ಲಾರಿ ಕೋಲಾರ ನಗರದ ಅದ್ಯಾವುದೋ ಮೂಲೆಯಿಂದ ಆಚೆ ಹೊರಟು ಬೇತಮಂಗಲ ಮಾರ್ಗವಾಗಿ ಕೆಜಿಎಫ್ ತಲುಪಿತು. ಮೆರವಣಿಗೆ ಎಲ್ಲಿಂದ, ಯಾವ ಮೈದಾನಕ್ಕೆ ಹೋಗಬೇಕು ಎಂಬ ತಿಳಿವಳಿಕೆ ಲಾರಿಯ ಚಾಲಕನಿಗಾಗಲಿ, ಲಾರಿಯಲ್ಲಿದ್ದ ಎರಡು, ಮೂರನೇ ಸಾಲಿನ ನಾಯಕರಿಗಾಗಲಿ ಇದ್ದಂತಿರಲಿಲ್ಲ. ಕೆಜಿಎಫ್ ನನಗೆ ಹೊಚ್ಚ ಹೊಸದು. ರಾಬರ್ಟ್‌ಸನ್ ಪೇಟೆಯಲ್ಲಿ ಯಾವುದೋ ಕಾಲೇಜಿನ ಬಳಿ ಹೋಗುತ್ತಿದ್ದಂತೆ, ದಸಂಸದ ಸಂಗಾತಿಗಳಂತೆ ನಟಿಸಿದ ಕೆಲವು ದಾಂಡಿಗರು 'ತಂಬಿ ಸ್ಟಾಫ್' (ತಮ್ಮ ನಿಲ್ಲಿಸು) ಎನ್ನುತ್ತಿದ್ದಂತೆ ಚಾಲಕನು ಲಾರಿ ನಿಲ್ಲಿಸಿದ.

ಯಾವ ಮಾಯದಲ್ಲಿ ದೊಣ್ಣೆಗಳನ್ನು ಅಡಗಿಸಿಟ್ಟುಕೊಂಡಿದ್ದರೋ ತಕ್ಷಣವೇ ಲಾರಿ ಏರಿದ ಆ ದಾಂಡಿಗರು ಎಲ್ಲರನ್ನೂ ಚಚ್ಚಲಾರಂಭಿಸಿದರು. 'ಎರಗು, ಪೋ' (ಇಳಿ, ಒಡು) ಎಂದು ಚಚ್ಚುತ್ತಲೇ ಇದ್ದರು. ನನ್ನ ತಲೆಗೆ ಭಾರಿ ಏಟು ಬಿತ್ತು. ಮೆದುಳು ಅರೆಕ್ಷಣ ಘಾಸಿಗೊಂಡಿತೇನೋ? ಲಾರಿಯೇ ಆಕಾಶಕ್ಕೆ ಜಿಗಿದಂತಾಯಿತು. ಒಂದರೆಕ್ಷಣ........ ಓ, ಲಾರಿ ಜಿಗಿದಿಲ್ಲ, ನನಗೆ ಬಿದ್ದ ಭಾರಿ ಏಟಿನಿಂದ ಹೀಗಾಗಿದೆಯೆಂದು ಮನಸ್ಸಿಗೆ ಅನ್ನಿಸಿತು. ಲಾರಿಯಲ್ಲೇ ಇನ್ನೂ ಕೆಲವು ವಿದ್ಯಾರ್ಥಿಗಳು ಅಡಗಿಕೊಳ್ಳಲು ಯತ್ನಿಸುತ್ತಿದ್ದರು. ಇಲ್ಲ, ಅವರು ಬಿಡುತ್ತಿಲ್ಲ. ಲಾರಿಯಿಂದ ಆಚೆಗೆ ಧುಮುಕಿದೆ. ಧುಮುಕಿದಾಗ ಬಿದ್ದು ಏಳುತ್ತಿದ್ದಂತೆ, ಮೊಣಕಾಲಿನಿಂದ ಕೆಳಗೆ ಎರಡೂ ಕಾಲಿಗೆ ದೊಣ್ಣೆಯಿಂದ ಮತ್ತೊಂದು ಬಲವಾದ ಹೊಡೆತ ಬಿತ್ತು.

ಧುಮುಕಿದ ದಿಕ್ಕಿನಲ್ಲಿ ಮನೆ, ಅಂಗಡಿಗಳು ಇರಲಿಲ್ಲ. ಇದ್ದದ್ದು ಒಂದು ಅಗಲವಾದ ಚರಂಡಿಯಂತಹ ಕಾಲುವೆ. ಅದು ದಾಟಿದರೆ ಚಿನ್ನದ ಗಣಿಯಿಂದ ಹೊರತೆಗೆದ ಮಣ್ಣಿನ ದಿಬ್ಬ, ಅದು ಬೆಟ್ಟದಂತೆಯೇ ಇದೆ. ಅದನ್ನೆಲ್ಲಾ ದಾಟಿ ನಾವು ಮೂರ್ನಾಲ್ಕು ವಿದ್ಯಾರ್ಥಿಗಳು ಆ ಹನ್ನೊಂದು ಗಂಟೆಯ ಬಿಸಿಲಿನಲ್ಲಿ ರಕ್ತ ಸುರಿಸಿಕೊಂಡು ಕೋಲಾರಕ್ಕೆ ಹೋಗುವ ರಸ್ತೆಗೆ ನಡೆದು ಬಂದೆವು. ಉಳಿದವರು ದಿಕ್ಕಾಪಾಲಾಗಿ ಓಡಿಹೋಗಿದ್ದಾರೆ. ಅಂದಾಜು ಮೂರ್ನಾಲ್ಕು ಕಿಲೋಮೀಟರುಗಳ ನಡಿಗೆ. ಹಾದಿಯಲ್ಲಿ ಗಣಿಕಾರ್ಮಿಕರ ಗುಡಿಸಲಿನಂತಹ ಮನೆಗಳು. ಆ ಮನೆಗಳವರು ನಮ್ಮನ್ನೂ, ನಮ್ಮ ರಕ್ತಸಿಕ್ತ ಬಟ್ಟೆಗಳನ್ನು ನೋಡಿ ದಂಗಾದರು. ನನ್ನ ಬುರುಡೆಗೆ ಬಿದ್ದ ಏಟಿನಿಂದ ಹರಿದ ರಕ್ತವು ತಿಳಿ ಹಸಿರು ಅಂಗಿಯನ್ನೆಲ್ಲ ಕೆಂಪಾಗಿಸಿತ್ತು, ಅವರಿಗೆ ಏನೂ ಹೇಳುವ ಸ್ಥಿತಿಯಲ್ಲಿ ನಾವಿರಲಿಲ್ಲ. ರಕ್ತ ಸುರಿದುಹೋಗಿದ್ದ ದೇಹಕ್ಕೆ ತೀವ್ರ ದಣಿವಾಗಿತ್ತು, ಕುಡಿಯಲು ನೀರು ಕೇಳಿದರೆ ಕೊಟ್ಟರು.

ಕೆಜಿಎಫ್ ಪಟ್ಟಣದಿಂದಾಚೆ, ಕೋಲಾರ ರಸ್ತೆಯಲ್ಲಿ ಬಸ್ಸಿಗಾಗಿ ಮರದ ನೆರಳಿನಲ್ಲಿ ಕಾಯುತ್ತಿದ್ದೆವು. ಬಂದ ಕೆಂಪು ಬಸ್ಸನ್ನು ಹತ್ತಿಕೊಂಡೆವು. ಕೋಲಾರಕ್ಕೆ ಟಿಕೆಟು ತೆಗೆದುಕೊಳ್ಳಲು ನನ್ನ ಬಳಿ ದುಡ್ಡಿರಲಿಲ್ಲ. ಜತೆ ವಿದ್ಯಾರ್ಥಿಯ ಬಳಿ ದುಡ್ಡಿತ್ತಾದರೂ ಅವನು ನನಗೆ ಟಿಕೆಟು ತೆಗೆದುಕೊಳ್ಳಲಿಲ್ಲ. ನನಗಿಂತಲೂ ಅವನಿಗೆ ಹಗುರವಾದ ಪೆಟ್ಟು ಬಿದ್ದಿತ್ತಾದರೂ ಚಿಂತಾಕ್ರಾಂತನಾಗಿ ಹೋಗಿದ್ದ, ಬಸ್ಸಿನಲ್ಲಿದ್ದ ಅಪರಿಚಿತ ಪ್ರಯಾಣಿಕನೊಬ್ಬ ಕರುಣೆಯಿಂದ ನನಗೆ ಟಿಕೆಟು ತೆಗೆದುಕೊಂಡ.

ಕೋಲಾರದ ಶ್ರೀ ನರಸಿಂಹರಾಜ ಆಸ್ಪತ್ರೆಗೆ ಬಂದು ಅಡ್ಮಿಟ್ ಆದೆ. ನನ್ನ ತಲೆಗೆ ನಾಲ್ಕೈದು ಹೊಲಿಗೆಗಳನ್ನು ಹಾಕಿದರು. ಉಳಿದವರು ಹೊರರೋಗಿಗಳಾದರು. ಪತ್ರಿಕೆಯವರು ಆಸ್ಪತ್ರೆಯ ವಾರ್ಡಿಗೆ ಬಂದರು. ಫೋಟೋ ಕ್ಲಿಕ್ಕಿಸಿಕೊಂಡರು. ಹಳ್ಳಿಯಲ್ಲಿ ರಾಗಿ ಕಣದ ಕೆಲಸದಲ್ಲಿದ್ದ ಅಮ್ಮ, ಅಣ್ಣ, ಅಕ್ಕ, ಮಾವ ಆಸ್ಪತ್ರೆಗೆ ಬಂದು ಕಣ್ಣೀರು ಹಾಕಿ ಹೋದರು. ಸಂಜೆಯಾಗುತ್ತಿದ್ದಂತೆ ಸ್ಥಳೀಯ ದಲಿತ ನಾಯಕರು ಆಸ್ಪತ್ರೆಗೆ ಬಂದು "ಕೆಜಿಎಫ್‌ನ ಮೆರವಣಿಗೆ, ಬಹಿರಂಗ ಸಭೆ ಯಶಸ್ವಿಯಾದವು. ದಸಂಸದ ರಾಜ್ಯ ಸಂಚಾಲಕರಾದ ಬಿ.ಕೃಷ್ಣಪ್ಪನೋರು ಬೆಂಗಳೂರಿನಿಂದ ಕೆಜಿಎಫ್‌ಗೆ ಬರುವುದು ತಡವಾಗಿತ್ತಷ್ಟೇ. ಅವರು ಬಹಿರಂಗ ಸಭೆಯಲ್ಲಿ ನಿಮ್ಮ ಮೇಲೆ ನಡೆದ ಹಲ್ಲೆಯನ್ನು, ಆರ್ಮುಗಂರವರ ಗೂಂಡಾಗಿರಿಯನ್ನು ಖಂಡಿಸಿದರು, ಚೆನ್ನಾಗಿ ಬೈದರು" ಎಂದರು. ನನಗೇನೂ ಆನಂದವಾಗಲಿಲ್ಲ. "ನಿಮ್ಮ ರಕ್ತ ಸಿಕ್ತ ಅಂಗಿ ಕೊಡಿ, ಅದನ್ನು ಅಸೆಂಬ್ಲಿಗೆ ಕಳುಹಿಸುತ್ತೇವೆ" ಎಂದರು. "ಅಯ್ಯೋ, ನನಗಿರುವುದು ಎರಡೇ ಶರ್ಟು" ಎಂದೆ. ವಾಪಸ್ಸು ತಂದು ಕೊಡುವುದಾಗಿ ತೆಗೆದುಕೊಂಡು ಹೋದರು.

ಮಾರನೇ ದಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವರದಿಯೊಂದಿಗೆ ನನ್ನ ತಲೆಗೆ ಬ್ಯಾಂಡೇಜು ಹಾಕಿದ ಫೋಟೋ ಅಚ್ಚಾಗಿತ್ತು. ಪ್ರಜಾವಾಣಿಯಲ್ಲಿ ವರದಿಯಿತ್ತು. ಕೋಲಾರದ ಅಂದಿನ ಪ್ರಜಾವಾಣಿ ವರದಿಗಾರರಾದ ಬಿ.ಪಿ.ನಾಗರಾಜುರವರು ದಲಿತ ಚಳವಳಿಯೊಂದಿಗೆ ಆತ್ಮೀಯ ಸ್ನೇಹದಿಂದಿದ್ದರು. ಬೆಂಗಳೂರಿನ ಯಾತ್ರೆಗೆ ಹೋಗಿದ್ದ ನನ್ನ ರಕುತದ ಶರಟು ವಿಧಾನಸೌಧ ತಲುಪಿತು. ನನ್ನ ಶರಟನ್ನು ಎ.ಕೆ.ಸುಬ್ಬಯ್ಯನವರು ಬ್ರೀಫ್ ಕೇಸಿನಲ್ಲಿ ತೆಗೆದುಕೊಂಡು ಹೋಗಿದ್ದರು. ಆಗ ಗುಂಡೂರಾಯರ ಸರ್ಕಾರ. "ನೋಡಿ ಇಲ್ಲಿ ನಿಮ್ಮ ಆರ್ಮುಗಂರವರ ದಲಿತ ಕಲ್ಯಾಣ ಇಲ್ಲಿದೆ. ನಿನ್ನೆ ದಸಂಸದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದರ ಫಲ ಇದು" ಎಂದು ರಕ್ತಮಯವಾದ ನನ್ನ ಶರಟನ್ನು ಪ್ರದರ್ಶಿಸಿದರಂತೆ. ಈ ಕುರಿತು ಪತ್ರಿಕೆಗಳಲ್ಲಿ ವರದಿಗಳೂ ಬಂದವು.

ಗುಂಡೂರಾಯರ ಸರ್ಕಾರ ಹೋಯಿತು. ಆರ್ಮುಗಂರವರು ಸೋತು ಹೋದರು. 1983 ರಲ್ಲಿ ರಾಮಕೃಷ್ಣ ಹೆಗಡೆಯವರ ಸರ್ಕಾರ ಬಂತು. ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರರಂತೆ ಬಿ. ಕೃಷ್ಣಪ್ಪನವರೂ ದಲಿತ ಪ್ರತಿನಿಧಿಗಳ 'ರಾಜಕೀಯ ಚೀಕ'ದ ಬಗ್ಗೆ ಮಾತನಾಡುತ್ತಲೇ ಇದ್ದರು. ರಾಜ್ಯದ ವಿಧಾನಸಭೆಯಲ್ಲಿ 35 ದಲಿತ ಪ್ರತಿನಿಧಿಗಳು ಅಸೆಂಬ್ಲಿಯಲ್ಲಿ ದಲಿತರ ಸಮಸ್ಯೆಗಳ ಕುರಿತು ಮಾತನಾಡಬೇಕು ಎನ್ನುತ್ತಿದ್ದರು. ಒಂದು ದಿನ ಕಬ್ಬನ್ ಪಾರ್ಕಿನ ಎನ್‌ಜಿಒ ಸಭಾಂಗಣದಲ್ಲಿ ದಲಿತ ಮಂತ್ರಿ ಶಾಸಕರ ಸಭೆ ಕರೆದರು. ನಾನು ಕೋಲಾರ ಬಿಟ್ಟು ಬೆಂಗಳೂರು ಸೇರಿಕೊಂಡಿದ್ದೆ. ಜಿಕೆವಿಕೆಯಲ್ಲಿ ಪಶುವೈದ್ಯಕೀಯ ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿಯಾಗಿದ್ದೆ. ಕೃಷ್ಣಪ್ಪನವರು ಕರೆದ ಸಭೆಗೆ ನಾನೂ ಹೋಗಿದ್ದೆ. ಸಭೆಗೆ ಬಂದ ಶಾಸಕರ ಸಂಖ್ಯೆ ಕೇವಲ ಎರಡೋ, ಮೂರೋ ಮಾತ್ರ. ಅದರಲ್ಲೊಬ್ಬರು ಕಮ್ಯುನಿಸ್ಟ್ ಪಕ್ಷದಿಂದ ಗುಲ್ಬರ್ಗಾ ಜಿಲ್ಲೆಯಿಂದ ಆಯ್ಕೆಯಾಗಿ ಬಂದಿದ್ದ ಕೆ.ಬಿ.ಶಾಣಪ್ಪನವರು. ಈಗವರು ಬಿಜೆಪಿಯಲ್ಲಿದ್ದಾರೆ. ಅಂದಿನ ಸಭೆಗೆ ಶಾಸಕರ ಪೂರ್ ರೆಸ್ಪಾನ್ಸ್‌ಗೆ ಪ್ರತಿಯಾಗಿ ಪ್ರೊ.ಬಿ.ಕೃಷ್ಣಪ್ಪನವರು ಆಡಿದ ಮಾತು: "ನಮ್ಮ ಹೋರಾಟ ನಿರಂತರ." ಕೃಷ್ಣಪ್ಪನವರದು ಗಟ್ಟಿ ನಾಯಕತ್ವ. ರಾಜಿ ಮನೋಭಾವವೇ ಇಲ್ಲ, ವಿಧಾನ ಸೌಧಕ್ಕೆ ಎಡತಾಕಿದವರೂ ಅಲ್ಲ.

ಮುಂದೆ, 1987-88ರ ಸಮಯ. ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿಯ ಪ್ರಕಟಣೆಯಲ್ಲಿ ಪರಿಶಿಷ್ಟರ ಮೀಸಲಾತಿಯನ್ನು ಉಲ್ಲಂಘಿಸಲಾಗಿತ್ತು, ದಿನಾಂಕ 12.12.1986ರ ಸರ್ಕಾರದ ಮೀಸಲಾತಿ ಆದೇಶಕ್ಕೆ ಅನುಗುಣವಾಗಿ ರೋಸ್ಟರ್ ಪದ್ಧತಿಯಂತೆ ಹುದ್ದೆಗಳ ವರ್ಗೀಕರಣ ಮಾಡಿರಲಿಲ್ಲ. ಇದನ್ನು ನಾನು ಅರ್ಥಮಾಡಿಕೊಂಡು ಪ್ರಶ್ನಿಸಲಾರಂಭಿಸಿದೆ. ಈ ಮಧ್ಯೆ ನನಗೆ, ಸಿ.ಎಂ.ಆರ್ಮುಗಂರವರು ಚೇರಮನ್ ಆಗಿದ್ದ ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿಯು 1979ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದ ಆರನೇ ವಿಧಾನಸಭೆಯ ಮೂರನೇ ವರದಿ ಸಿಕ್ಕಿತು. ಅದೊಂದು ಉತ್ಕೃಷ್ಟ ವರದಿ. ನನ್ನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ ವರದಿ. ಸಿ.ಎಂ.ಆರ್ಮುಗಂರವರು ಅಂಬೇಡ್ಕರ್‌ವಾದಿಯಾಗಿದ್ದವರು. 1957 ರ ವಿಧಾನ ಸಭಾ ಚುನಾವಣೆಯಲ್ಲಿ ಡಾ.ಅಂಬೇಡ್ಕರ್‌ರವರು ಸ್ಥಾಪಿಸಿದ್ದ ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ (ಎಸ್‌ಸಿಎಫ್) ಪಕ್ಷದಿಂದಲೂ, 1974 ಮತ್ತು 1978ರಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ನಿಂದಲೂ ಕೆಜಿಎಫ್ ಕ್ಷೇತ್ರದಿಂದ ಶಾಸಕರಾಗಿದ್ದವರು. ಕೋಟಿಗಾನಹಳ್ಳಿ ರಾಮಯ್ಯನವರು ಹೇಳುವಂತೆ ಆರ್ಮುಗಂರವರು ವಿಚಿತ್ರ ವರ್ತನೆಯ ಮನುಷ್ಯ. ಅವರು ಉತ್ತಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಆ ವರದಿಯ ಕೆಲವು ಶಿಫಾರಸ್ಸುಗಳು ಅಧಿಕಾರಿಗಳ ಕಣ್ಣು ತೆರೆಸಿವೆ. ಅಂತಹ ವರದಿಯ ತಿರುಳನ್ನು ಬಳಸಿಕೊಂಡು ಅಧಿಕಾರಿಗಳೊಂದಿಗೆ ಚರ್ಚಿಸಿ ಲೋಕಸೇವಾ ಆಯೋಗದ ಮೀಸಲಾತಿ ಉಲ್ಲಂಘನೆಯನ್ನು ಸರಿಪಡಿಸುವಲ್ಲಿ ಯಶಸ್ವಿಯಾದೆ. ಆದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟರಿಗೆ ಹುದ್ದೆಗಳು ಸಿಕ್ಕವು.



ಒಂದು ಅಪರೂಪದ ಫೋಟೋ ಸವಿತಾ ಅಂಬೇಡ್ಕರ್ ಜೊತೆ ಪ್ರೊ.ಬಿ.ಕೃಷ್ಣಪ್ಪನವರು (ಎಡಗಡೆಯಿಂದ ಮೂರನೆಯವರು)

ಈ ಮಧ್ಯೆ, 1988-89ರ ಸುಮಾರಿಗೆ ಒಂದು ಸಂಜೆ ಶಾಸಕರ ಭವನದಲ್ಲಿ ಎಂಎಲ್‌ಸಿಯಾಗಿದ್ದ ಕವಿ ಡಾ.ಸಿದ್ದಲಿಂಗಯ್ಯನವರ ಕೊಠಡಿಯಲ್ಲಿ ಪ್ರೊ.ಬಿ.ಕೃಷ್ಣಪ್ಪನವರು ಮಾತಿಗೆ ಸಿಕ್ಕರು. ದಲಿತ ಚಳವಳಿಯ ಬಗ್ಗೆ ಏನೇನೋ ಹರಟಿದೆವು. ಅವರ ಸೂಕ್ಷ್ಮತೆ, ಬದ್ಧತೆ, ಹೋರಾಟದ ಸಿದ್ಧತೆಗಳು ಹೊಸದಾಗಿಯೇ ಇದ್ದವು. ದಲಿತ ಚಳವಳಿಯ ದಾರಿ ತಪ್ಪಿದ ನಾಯಕರನ್ನು ಮುಲಾಜಿಲ್ಲದೆ ತಮ್ಮ ಭಾಷಣದಲ್ಲಿ ನೇರವಾಗಿ ಟೀಕಿಸುತ್ತಿದ್ದರು. ಕರ್ನಾಟಕ ಕಂಡ ಧೀಮಂತ ನಾಯಕರವರು. ತಾಯಿ ಮನಸ್ಸಿನ ಪ್ರೊ.ಕೃಷ್ಣಪ್ಪನವರು ನಾಡಿನಲ್ಲಿ ದಲಿತ ಆಂದೋಲನವನ್ನು ಹುಟ್ಟುಹಾಕಿದವರಲ್ಲೊಬ್ಬರು. ಅವರ ಕೊಡುಗೆ ಅಪಾರ. ದಲಿತರ ಗುಡಿಸಲುಗಳಲ್ಲಿ ಬೆಳಗಿದ ಹಣತೆ [illegible]. ಅದನ್ನು ಆರದಂತೆ ಕಾಪಾಡಿಕೊಳ್ಳಬೇಕು.

ಪ್ರೊ.ಎಂ.ನಾರಾಯಣಸ್ವಾಮಿ

ಇಸ್ಲಾಂ ಧರ್ಮದ ಅರ್ಥವ್ಯವಸ

ಸಂಪತ್ತಿನಲ್ಲಿ ಮಹಿಳೆಯರಿಗೂ ಪಾಲಿದೆ ಎಂದು ಕುರಾನ್ 15 ಶತಮಾನಗಳಷ್ಟು ಹಿಂದೆಯೆ ಸಾರಿದೆ.

"ಮಾತಾಪಿತೃಗಳೂ ಆಪ್ತ ಬಂಧುಗಳೂ ಬಿಟ್ಟುಹೋದ ಧನದಲ್ಲಿ ಪುರುಷರಿಗೆ ಪಾಲಿದೆ. ಮಾತಾಪಿತೃಗಳೂ ಆಪ್ತ ಬಂಧುಗಳೂ ಬಿಟ್ಟುಹೋದ ಧನದಲ್ಲಿ ಸ್ತ್ರೀಯರಿಗೂ ಪಾಲುಂಟು. ಆ ಧನ ಕಡಿಮೆ ಇರಲಿ, ಹೆಚ್ಚು ಇರಲಿ ಅದು ನಿರ್ಣಯಿಸಿದ ಪಾಲು." (4-7)

ಅಷ್ಟೇ ಅಲ್ಲದೆ ಕುರಾನ್

"ವಿವಾಹ ವಿಚ್ಛೇದನ ಮಾಡಲ್ಪಟ್ಟ ಸ್ತ್ರೀಯರಿಗೆ ವಾಡಿಕೆಯಂತೆ ಜೀವನೋಪಾಯಕ್ಕೆ ಏನಾದರೂ ಕೊಡಬೇಕು. ಇದು ದೈವಭಕ್ತರ ಮೇಲೆ ಇರುವ ಬಾಧ್ಯತೆಯಾಗಿದೆ." (2-241)

ಎಂದು ಹೇಳುವುದರ ಮೂಲಕ ತಲಾಖ್ ಪಡೆದ ಮಹಿಳೆಯರ ಬಗ್ಗೆಯೂ ತನ್ನ ಆರ್ಥಿಕ ಕಾಳಜಿ ವ್ಯಕ್ತಪಡಿಸಿದೆ. ಅಷ್ಟೇ ಅಲ್ಲದೆ ಕುರಾನ್ ಸ್ತ್ರೀಯರಿಗೆ ಮಹ್ರ್ (ವಿವಾಹಧನ) ವ್ಯವಸ್ಥೆಯನ್ನೂ ಮಾಡಿದೆ. ಪುರುಷನು ಮದುವೆ ಸಂದರ್ಭದಲ್ಲಿ ಮಹ್ರ್ (ವಿವಾಹಧನ) ನೀಡುವುದನ್ನು ಘೋಷಿಸಬೇಕು. ತದನಂತರ ತನ್ನ ಜೀವಿತ ಕಾಲದಲ್ಲಿ ಆ ನಿಗದಿಪಡಿಸಿದ ಹಣವನ್ನು ಅವಳಿಗೆ ಕೊಡಬೇಕು. ತಲಾಖ್ ಕೊಡುವ ಪ್ರಸಂಗ ಬಂದರೆ ಆ ಸಂದರ್ಭದಲ್ಲಿ ಮಹ್ರ್ ಹಣ ಕೊಡಬೇಕು. ಈ ವಿವಾಹಧನ ಕೂಡ ಮಹಿಳೆಯರ ಆರ್ಥಿಕ ಭವಿಷ್ಯಕ್ಕೆ ಪೂರಕವಾಗಿದೆ. ಅರಬಸ್ತಾನದಲ್ಲಿ ಭಾರಿ ಮೊತ್ತದ ಮಹ್ರ್ ಇಲ್ಲದೆ ಮದುವೆಯಾಗುವುದಿಲ್ಲ. ಹೀಗಾಗಿ ಅಲ್ಲಿನ ಮಹಿಳೆಯರು ತಲಾಖ್ ಪಡೆದ ಮೇಲೆ ನಿರ್ಗತಿಕರಾಗುವುದಿಲ್ಲ. ಭಾರತದಂಥ ದೇಶದಲ್ಲಿ ಮಹ್ರ್ ಹೆಚ್ಚಿಸಿದರೆ ತಲಾಖ್ ಕೊಡುವವರ ಸಂಖ್ಯೆಯೂ ಕಡಿಮೆಯಾಗುವುದು. ಅಲ್ಲದೆ ತಲಾಖ್ ಪಡೆದ ಮಹಿಳೆಯರ ಆರ್ಥಿಕ ಭವಿಷ್ಯ ಸುಸೂತ್ರವಾಗಿ ಇರುವುದು.

"ಸ್ತ್ರೀಯರಿಗೆ ಅವರ ಮಹ್ರ್ (ವಿವಾಹಧನ) ಅನ್ನು ಪೂರ್ಣ ಮನಸ್ಸಮಾಧಾನದೊಂದಿಗೆ ಕೊಡಿರಿ. ಆದರೆ ಅದರಲ್ಲಿ ಏನಾದರೂ ಅವರು ಸ್ವಮನಸ್ಸಿನಿಂದ ನಿಮಗೆ ಬಿಟ್ಟುಕೊಟ್ಟರೆ, ನೀವು ಅದನ್ನು ಸಂತೋಷದಿಂದ 'ಭೋಗಿಸಬಹುದು" (4-4)

ಎಂದು ಕುರಾನ್ ವಿವರಿಸಿದೆ.

"ಮುಂದೆ ಒಬ್ಬಳು ಪತ್ನಿಯ ಸ್ಥಾನದಲ್ಲಿ ಇನ್ನೊಬ್ಬ ಪತ್ನಿಯನ್ನು ಸ್ವೀಕರಿಸಲು ಉದ್ದೇಶಿಸುವುದಾದರೆ, ಅವರಲ್ಲೊಬ್ಬಳಿಗೆ ಧನದ ಒಂದು ರಾಶಿಯನ್ನೇ ನೀವು ಕೊಟ್ಟಿದ್ದರೂ ಅದರಿಂದ ನೀವು ಏನನ್ನೂ ಮರಳಿ ತೆಗೆಯಬೇಡಿರಿ." (4-20)

ಎಂದು ಕುರಾನ್ ಹೇಳುವಲ್ಲಿ ಒಬ್ಬ ಮಹಿಳೆ ಗಂಡನನ್ನು ಕಳೆದುಕೊಂಡರೂ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬಾರದು ಎಂಬುದನ್ನು ಸೂಚಿಸುತ್ತದೆ.

ದಾನಧರ್ಮ, ಜಕಾತ್, ಮಹ್ರ್, ತಲಾಖ್ ಕೊಡುವಾಗ ಪರಿಹಾರಧನ, ಮಹಿಳೆಯರಿಗೆ ತಂದೆಯ ಮನೆಯಲ್ಲಿ ಕೂಡ ಆಸ್ತಿ ಪಾಲು, ಬಡ್ಡಿ ನಿಷೇಧ, ಜೂಜಾಟ ನಿಷೇಧ, ಉಯಿಲು, ಸಾಲ, ಗಿರವಿ, ಆರ್ಥಿಕ ವ್ಯವಹಾರಗಳನ್ನು ದಾಖಲು ಮಾಡುವುದು, ಸಾಕ್ಷಿ, ವ್ಯಾಪಾರ ಮುಂತಾದ ಹಣ ಮತ್ತು ಸಂಪತ್ತಿಗೆ ಸಂಬಂಧಿಸಿದಂತೆ ಕುರಾನ್ ನಿಯಮಗಳನ್ನು ಹಾಕಿದೆ. ಅದು ಕೌಟುಂಬಿಕ ಅರ್ಥಶಾಸ್ತ್ರ ಮತ್ತು ಸಾಮಾಜಿಕ ಅರ್ಥಶಾಸ್ತ್ರದ ಆಗರವಾಗಿದೆ. ರಾಜಕೀಯ ಅರ್ಥಶಾಸ್ತ್ರ ಹೇಗಿರಬೇಕು ಎಂಬುದಕ್ಕೆ ಮಾರ್ಗದರ್ಶಿಯಾಗಿದೆ.

"ಅಜ್ಞನಾದ ಉದಾರಿ ಮನುಷ್ಯನು, ಪ್ರಾರ್ಥಿಸುವ ಜಿಪುಣನಿಗಿಂತ ಅಲ್ಲಾಹನ ಅತ್ಯಂತ ಹೆಚ್ಚು ಪ್ರೀತಿಗೆ ಪಾತ್ರನಾಗಿರುತ್ತಾನೆ" ಎಂದು ಪೈಗಂಬರ್ ತಿಳಿಸಿರುತ್ತಾರೆ. "ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಿರಲಾರನು" ಎಂದು ಅವರು ಸಾರಿದ್ದಾರೆ. ಅವರಿಗೆ ಬಡವರ ಬಗ್ಗೆ ಎಷ್ಟೊಂದು ಕಾಳಜಿ ಇತ್ತೆಂದರೆ "ನನ್ನನ್ನು ಬಡವರು ಮತ್ತು ಬಲಹೀನರ ಮಧ್ಯೆ ಹುಡುಕಿರಿ. ನಿಶ್ಚಯವಾಗಿಯೂ ನೀವು ಅವರ ದುಡಿಮೆಯಿಂದಲೇ ಆಹಾರವನ್ನೂ ಸಹಾಯವನ್ನೂ ಪಡೆಯುತ್ತೀರಿ" ಎಂದು ತಮ್ಮನ್ನು ದುಡಿಯುವ ವರ್ಗದ ಜೊತೆ ಗುರುತಿಸಿಕೊಂಡಿದ್ದಾರೆ.



"ಹಜರತ್ ಮುಹಮ್ಮದ್ ಪೈಗಂಬರ್ (ಅವರ ಮೇಲೆ ಶಾಂತಿ ನೆಲೆಸಲಿ) ಒಂಟೆಗಳಿಗೆ ಸ್ವತಃ ಮೇವನ್ನು ಹಾಕುತ್ತಿದ್ದರು. ಅವರು ಮನೆಗೆಲಸಗಳನ್ನು ಮಾಡುತ್ತಿದ್ದರು. ಹಾಗೆಯೆ ತಮ್ಮ ಬಟ್ಟೆಬರೆಗಳಿಗೆ ಬಿದ್ದ ತೂತುಗಳನ್ನು ತಾವೆ ಹೊಲಿದುಕೊಳ್ಳುತ್ತಿದ್ದರು. ಅವರು ಸ್ವತಃ ಆಡಿನ ಹಾಲನ್ನು ಕರೆಯುತ್ತಿದ್ದರು ಮತ್ತು ಸೇವಕರೊಡನೆ ಕುಳಿತು ಉಣ್ಣುತ್ತಿದ್ದರು. ಧಾನ್ಯವನ್ನು ಬೀಸುವಾಗ ಸೇವಕನಿಗೆ ಆಯಾಸವಾದರೆ ಆತನಿಗೆ ಅವರು ಸಹಾಯ ಮಾಡುತ್ತಿದ್ದರು. ಪೇಟೆಯಿಂದ ಸಾಮಾನುಗಳನ್ನು ಹೊತ್ತು ತರುವುದನ್ನು ಅವರು ಅಪಮಾನವೆಂದು ಭಾವಿಸುತ್ತಿರಲಿಲ್ಲ. ಅವರು ಶ್ರೀಮಂತರೊಂದಿಗೂ ಬಡವರೊಂದಿಗೂ ಹಸ್ತ ಲಾಘವ ಮಾಡುತ್ತಿದ್ದರು ಮತ್ತು ಅವರೇ ಸಲಾಂ ಹೇಳಲು ಎಲ್ಲರಿಗಿಂತ ಮುಂದಾಗುತ್ತಿದ್ದರು. ಅವರು ಯಾವುದೇ ಆಮಂತ್ರಣವನ್ನು ತಿರಸ್ಕರಿಸುತ್ತಿರಲಿಲ್ಲ, ಅದು ಖರ್ಜೂರು ತಿನ್ನುವ ಆಮಂತ್ರಣವಿದ್ದರೂ. ಅವರು ಬೇರೆಯವರಿಗೆ ಸಹಾಯ ಮಾಡಲು ಸದಾ ಸನ್ನದ್ಧರೂ ಮಧುರ ಸ್ವಭಾವಗಳನ್ನು ಹೊಂದಿದವರೂ ಸೌಹಾರ್ದಪೂರ್ಣವಾಗಿ ವರ್ತಿಸುವವರೂ ಪ್ರಸನ್ನವದನರೂ ಆಗಿದ್ದರು. ಅವರು ಮಂದಸ್ಮಿತರಾಗಿರುತ್ತಿದ್ದರು. ಆದರೆ ಉಚ್ಚ ಸ್ವರದಿಂದ ನಗುತ್ತಿರಲಿಲ್ಲ. ಅವರು ದುಃಖಿತರಾಗುವಾಗ ಅವರ ಮುಖ ಕಳೆಗುಂದುತ್ತಿರಲಿಲ್ಲ. ಅವರು ಬಹಳ ವಿನಯಶೀಲರಾಗಿದ್ದರು. ಗೌರವಯುತವಾಗಿ ನಡೆದುಕೊಳ್ಳುತ್ತಿದ್ದರು. ಅವರು ಉದಾರವಾದಿಗಳಾಗಿದ್ದರೂ ಮಿತಿಮೀರುತ್ತಿರಲಿಲ್ಲ. ಅವರು ಬಹಳ ಕೋಮಲ ಹೃದಯದವರಾಗಿದ್ದರು ಮತ್ತು ಪ್ರತಿಯೊಬ್ಬ ಮುಸ್ಲಿಮರಿಗೆ ದಯೆ ತೋರುವವರಾಗಿದ್ದರು. (ಅಲ್ಲಿನ ಉಳಿದವರು ನವಸಮಾಜದ ಬದ್ಧ ವೈರಿಗಳಾಗಿ ಮುಸ್ಲಿಮರನ್ನು ಹಿಂಸಿಸುತ್ತಿದ್ದರು.) ಅವರು ಎಂದೂ ಹೊಟ್ಟೆತುಂಬ ತಿಂದು ತೇಗು ಬರುವಂತೆ ಮಾಡುತ್ತಿರಲಿಲ್ಲ ಮತ್ತು ದುರಾಸೆಯಿಂದ ಏನನ್ನಾದರೂ ಸ್ವೀಕರಿಸಲು ತಮ್ಮ ಕೈಯನ್ನು ಎಂದೂ ಮುಂದೆ ಚಾಚುತ್ತಿರಲಿಲ್ಲ" ಎಂದು ಹಜರತ್ ಅಬೂ ಸಯೀದ್ ಖಾದ್ರಿ ಹೇಳಿರುವುದನ್ನು ಮಿಶ್ಕಾತ್ ದಾಖಲಿಸಿದ್ದಾರೆ.

ಪೈಗಂಬರರು ಸುಸಂಸ್ಕೃತ ವ್ಯಕ್ತಿತ್ವದ ಸಂಕೇತವಾಗಿದ್ದಾರೆ. ಅಪರಿಗ್ರಹದ ಬದುಕಿನಿಂದ ಮಾತ್ರ ಸಂಸ್ಕೃತಿ ಮತ್ತು ನಿಜವಾದ ನಾಗರಿಕತೆಯಿಂದ ಕೂಡಿದ ಅರ್ಥಪೂರ್ಣವಾದ ಸ್ವಸ್ಥ ಸಮಾಜವನ್ನು ಸೃಷ್ಟಿಸಲು ಸಾಧ್ಯ ಎಂಬುದು ಪೈಗಂಬರರ ದೃಢ ನಂಬಿಕೆಯಾಗಿತ್ತು.

ಜಕಾತ್; ಸಮಾಜದಲ್ಲಿ ಹಾಹಾಕಾರವನ್ನು ತಪ್ಪಿಸುವ ಸಾಮರ್ಥ್ಯ ಪಡೆದಿದೆ. ಸಮಾಜದಲ್ಲಿ ಶಾಂತಿ ಹಾಗೂ ಶಿಸ್ತು ಪಾಲನೆಗೆ ಜಕಾತ್ ಪರೋಕ್ಷವಾಗಿ ಬೆಂಬಲ ನೀಡುವುದು. ಮುಸ್ಲಿಮರ ಆರ್ಥಿಕರೂಪಿ ಆರಾಧನಾ ವಿಧಿಯಾಗಿರುವ ಜಕಾತ್ ಮೂಲಕ ಶ್ರೀಮಂತರ ಹಣದ ಒಂದು ಭಾಗ ಪ್ರತಿ ರಂಜಾನ್‌ನಲ್ಲಿ ಬಡವರ ಕಡೆ ಹರಿಯುತ್ತದೆ. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳ ಕಡೆಗೂ ಹರಿಯುತ್ತದೆ. "ಅವರ ಸೊತ್ತಿನಲ್ಲಿ ಒಂದು ವಿಧಿವತ್ತಾದ ಪಾಲಿದೆ. ಬೇಡುವವರದು ಮತ್ತು ಪಡೆಯದೆ ಉಳಿದುಬಿಟ್ಟವರದು" (24-25) ಎಂದು ಕುರಾನ್ ಜ್ಞಾಪಿಸುತ್ತದೆ. ಇಸ್ಲಾಂ ಭಿಕ್ಷೆಯ ಬದಲು ಪಡೆಯುವ ಹಕ್ಕನ್ನು ಒದಗಿಸುತ್ತದೆ. ಅದೇ ರೀತಿ ದುಡಿಯುವ ಹಕ್ಕನ್ನೂ ಒದಗಿಸುತ್ತದೆ.

ಇಸ್ಲಾಂ ಬಡ್ಡಿಯನ್ನು ನಿಷೇಧಿಸಿರುವುದಕ್ಕೆ ಮುಖ್ಯ ಕಾರಣವೆಂದರೆ, ಬಡ್ಡಿ ಐಹಿಕ ಆಸೆಬುರುಕತನದಿಂದ ಕೂಡಿದ ವಿಕಾರಮಯವಾದ ಸಮಾಜವನ್ನು ಸೃಷ್ಟಿಸುತ್ತದೆ. ಬಡ್ಡಿಯು ಸಾಮಾಜಿಕ ಕಲ್ಯಾಣದ ಅರ್ಥಶಾಸ್ತ್ರಕ್ಕೆ ವಿರುದ್ಧವಾಗಿದೆ. ಅಂತೆಯೆ "ಅಲ್ಲಾಹನು ಬಡ್ಡಿಯನ್ನು ನಾಶಗೊಳಿಸಿ, ದಾನಧರ್ಮಗಳನ್ನು ಪೋಷಿಸುತ್ತಾನೆ" ಎಂದು ಕುರಾನ್‌ನಲ್ಲಿ ಬರೆಯಲಾಗಿದೆ.

ಬಡ್ಡಿಯು ಮಾನವೀಯ ಸಂಸ್ಕೃತಿಗೆ ವ್ಯತಿರಿಕ್ತವಾದ ಸಮಾಜದ ನಿರ್ಮಾಣ ಮಾಡುತ್ತದೆ. ನಿರ್ದಯ ಮನುಕುಲವನ್ನು ನಿರ್ಮಿಸುವಲ್ಲಿ ಅದರ ಪಾತ್ರ ಹಿರಿದಾಗಿದೆ. ಅದು ಸಾಮಾಜಿಕ ಸಂಬಂಧಗಳ ಕೊಂಡಿಯನ್ನು ಕಳಚುತ್ತದೆ. ಅದು ಹಣದ ದರ್ಪದ ಮುಂದೆ ಮನುಷ್ಯ ಕಂಗಾಲಾಗುವಂತೆ ಮಾಡುತ್ತದೆ. ಆದ್ದರಿಂದ ತನ್ನ ಆವಶ್ಯಕತೆಗಿಂತ ಹೆಚ್ಚಿಗೆ ಸಂಪಾದಿಸುವವನು ಅದರ ಒಂದು ಭಾಗವನ್ನಾದರೂ ತನ್ನ ಬಂಧುಬಳಗದವರಿಗೆ, ಬಡವರಿಗೆ ಮತ್ತು ಸಾಮಾಜಿಕ ಸತ್ಕಾರ್ಯಗಳಿಗೆ ವಿನಿಯೋಗಿಸಲೇಬೇಕು ಎಂಬುದು ಕುರಾನಿನ ಆಶಯವಾಗಿದೆ. ಆತ ತನ್ನಲ್ಲಿರುವ ಹೆಚ್ಚಿನ ಹಣವನ್ನು ಬಡ್ಡಿರಹಿತ ಸಾಲವಾಗಿ ಕೊಡಬಹುದು. ವಾಪಸು ಕೊಡಲು ಸಾಧ್ಯವಾಗದವರಿಗೆ ಆ ಹಣವನ್ನು ಬಿಟ್ಟುಕೊಟ್ಟರೆ ಅಲ್ಲಾಹನ ಕೃಪೆ ಅವನ ಮೇಲಿರುವುದು.

ಯುದ್ಧದ ಸಂದರ್ಭದಲ್ಲಿ ಕೂಡ ಇಸ್ಲಾಂ ಶಾಂತಿ ಮತ್ತು ಜೀವನಾವಶ್ಯಕ ವಸ್ತುಗಳ ಮಹತ್ವವನ್ನು ಸಾರುತ್ತದೆ. ಮೊದಲನೇ ಖಲೀಫಾ ಹಜರತ್ ಅಬೂಬಕರ್ ಅವರು ಸಿರಿಯಾಕ್ಕೆ ಕಳುಹಿಸಿದ ಸೇನಾ ತುಕಡಿಗೆ ಈ ರೀತಿ ಆದೇಶ ನೀಡಿದರು. "ನಿಮ್ಮ ವಿಜಯವು ಸ್ತ್ರೀಯರ ಮತ್ತು ಮಕ್ಕಳ ರಕ್ತದಿಂದ ಕಳಂಕಿತವಾಗದಿರಲಿ. ಮರಗಳನ್ನು ನಾಶ ಮಾಡದಿರಿ. ಹೊಲಗಳನ್ನು ಸುಡದಿರಿ. ಫಲಭರಿತ ಮರಗಳನ್ನು ಕಡಿಯದಿರಿ. ಸಾಕುಪ್ರಾಣಿಗಳಿಗೆ ಕಿರುಕುಳ ಕೊಡಬೇಡಿರಿ. ಕೊಟ್ಟ ಮಾತಿಗೆ ಮತ್ತು ಆಶ್ವಾಸನೆಗೆ ಭಂಗ ತರಬೇಡಿರಿ. ಧಾರ್ಮಿಕ ವ್ಯಕ್ತಿಗಳು ತಮ್ಮದೇ ಆದ ವಿಧಾನದಲ್ಲಿ ದೇವಮಾರ್ಗದಲ್ಲಿ ಸೇವೆ ಸಲ್ಲಿಸುತ್ತಿರಬಹುದು. ಅವರನ್ನು ಅವರಷ್ಟಕ್ಕೇ ಬಿಟ್ಟುಬಿಡಿ. ಅವರನ್ನು ವಧಿಸದಿರಿ. ಅವರ ಮಠ ಮಂದಿರಗಳನ್ನು ಹಾಳುಗೆಡವದಿರಿ."

ಜರುಸಲೇಂ ನಗರ ಶರಣಾಗತವಾದಾಗ ಎರಡನೇ ಖಲೀಫಾ ಹಜರತ್ ಉಮರ್ ಅವರು ನೀಡಿದ ಆಶ್ವಾಸನೆ ಇದು: "ನಾನು ಅವರ ಪ್ರಾಣ, ಸ್ವತ್ತು, ಸಂತಾನ, ಚರ್ಚ್‌ಗಳು, ಶಿಲುಬೆಗಳು ಹಾಗೂ ಅವರಿಗೆ ಮತ್ತು ಅವರ ಧರ್ಮಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂರಕ್ಷಿಸುವ ಭರವಸೆ ನೀಡುತ್ತೇನೆ."

"ಪ್ರಾಮಾಣಿಕ ಗಳಿಕೆಯಿಂದ ಉಪಜೀವನ ಮಾಡುವುದು ಬಾಧ್ಯತೆಯಾಗಿದೆ" ಎಂದು ಪೈಗಂಬರರು ತಿಳಿಸಿದ್ದಾರೆ. ಆದ್ದರಿಂದ ಇಸ್ಲಾಂನಲ್ಲಿ ಲೂಟಿ, ಸುಲಿಗೆ ಮತ್ತು ಭ್ರಷ್ಟಾಚಾರದಿಂದ ಬದುಕಲು ಅವಕಾಶವೇ ಇಲ್ಲ. "ಪಾಳು ಭೂಮಿಯನ್ನು ಉಳುವವರು ಅದರ ಒಡೆಯರಾಗುತ್ತಾರೆ" ಎಂದು ಪೈಗಂಬರರು ಸ್ಪಷ್ಟಪಡಿಸಿದ್ದಾರೆ. 'ಉಳುವವನೇ ಭೂಮಿಯ ಒಡೆಯ' ಎಂಬುದು ಇದರ ತಾತ್ಪರ್ಯವಾಗಿದೆ. "ಸಂಗ್ರಹಿಸುವವನು ಆರೋಪಿ" ಎಂದು ಅವರು ತಿಳಿಸಿದ್ದಾರೆ. "ಏಕಸ್ವಾಮ್ಯಕ್ಕೆ ಒಳಪಡಿಸುವವನು ತಪ್ಪು ಮಾಡುವವನು. ಸರಕುಗಳು ಮಾರುಕಟ್ಟೆಗೆ ಬರದಂತೆ ತಡೆಯಬಾರದು" ಎಂದು ಅವರು ಹೇಳಿದ್ದಾರೆ. ದೇಶದಲ್ಲಿ ಇಂದು ಜೀವನಾವಶ್ಯಕ ವಸ್ತುಗಳ ಹಾಹಾಕಾರಕ್ಕೆ ಕಳ್ಳಸಂತೆಕೋರರ ಸ್ವಾರ್ಥ ಬುದ್ಧಿಯೆ ಕಾರಣ ಎಂಬುದನ್ನು ಮರೆಯಬಾರದು. "ಸಂಪತ್ತು ಐಶ್ವರ್ಯವಂತರ ನಡುವೆಯೆ ತಿರುಗುತ್ತ ಇರಬಾರದು" ಎಂಬುದು ಕುರಾನಿನ ಬಯಕೆಯಾಗಿದೆ. "ತುಳಿತಕ್ಕೀಡಾದವರು ಜಗತ್ತಿನ ನಾಯಕರು ಮತ್ತು ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ" (28-6) ಎಂದು ಕುರಾನ್‌ನಲ್ಲಿ ಘೋಷಿಸಲಾಗಿದೆ. ಬಡವರು ಈ ಜಗತ್ತಿನ ನಾಯ... ಎಲ್ಲಾ ಅನ್ಯಾಯಗಳಿಗೆ ತೆರೆ ಬೀಳುವುದು ಎಂ... ಕುರಾನ್ ಸೂಚ್ಯವಾಗಿ ತಿಳಿಸಿದೆ. ಶ್ರೀಮಂತ... ಪ್ರಾಮಾಣಿಕರನ್ನು ಗುರುತಿಸುವಲ್ಲಿ ಶ್ರೀಮಂತ ಮ... ಬಡವರ ಬಗ್ಗೆ ಕಾಳಜಿ ತೋರುವಂತೆ ಮಾಡುವಲ್ಲಿ... ಅನೇಕ ಸಂದರ್ಭಗಳಲ್ಲಿ ತಲ್ಲೀನವಾಗಿದೆ. "ಸತ್ಯ... ಪ್ರಾಮಾಣಿಕನೂ ಆದ ವ್ಯಾಪಾರಿಯು ನಿ... ದಿನದಂದು ಪ್ರವಾದಿಗಳ, ಸತ್ಯಸಂಧರ ಮತ್ತು ಹ... ಜೊತೆಗಾರನಾಗಿರುವನು" ಎಂದು ಕುರಾನ್ ಹ...


ಕಾಯಕ ಪ್ರಜ್ಞೆಯ ಪೈಗಂಬರರು ಮತ್ತು... ಅನುಯಾಯಿಗಳು ಸದಾ ಬಡತನ... ನೆಚ್ಚಿಕೊಂಡವರಾಗಿದ್ದರು. ಅರೇಬಿಯಾದ ಅಧಿ... ತಮ್ಮ ಅಧೀನವಾದಮೇಲೂ ಪೈಗ... ಚಾಪೆಯ ಮೇಲೆ ಮಲಗುತ್ತಿದ್ದರು! ... ಉಮರ್ ಅವರು ಸರ್ಕಾರದ ಕೆಲಸ... ಕೂಡಲೆ ದೀಪ ಆರಿಸುತ್ತಿದ್ದರು... ಖಜಾನೆಯ ಒಂದು ಪೈಸ... ದುರ್ವ್ಯಯವಾಗದಂತೆ ಖಲೀಫಾಗಳು... ನಡೆಸಿ ವಿಶ್ವಕ್ಕೇ ಮಾದರಿಯಾಗಿದ್ದಾರೆ... ಕಾಲಾನಂತರ ನಿಮಗೆ ಬಡತನ ಬಂದಿ... ನಾನು ಹೆದರುವುದಿಲ್ಲ. ಆದರೆ ಐಹಿಕ... ಅನುಗ್ರಹ, ಅಲಂಕಾರಗಳು... ಮುಕ್ತವಾಗುವುದರ ಬಗ್ಗೆ ನಾನು ಹೆದ... ಎಂದು ಪೈಗಂಬರರು ಆತಂಕ ವ್ಯಕ್ತಪ... ಈ ಆತಂಕ ನಿಜವಾಗುತ್ತಿದೆ. ಇಡೀ... ಐಹಿಕ ದುರಾಸೆಯ ಸೆಳೆತಕ್ಕೆ ಒಳಗಾ...

ಇಸ್ಲಾಂ, ಸಮಾಜದ ಆವಶ್ಯಕ... ನಿಯಂತ್ರಿಸುವುದು. ಉಪಜೀ... ಮಾರ್ಗಗಳನ್ನು ನಿಯಂತ್ರಿಸಿ ಮ... ಹಾಳಾಗುವುದನ್ನು ತಪ್ಪಿಸುವುದು. ... ಆರ್ಥಿಕ ವ್ಯವಸ್ಥೆ ನ್ಯಾಯಸಮ್ಮತವಾದ ಸ... ವಿತರಣೆಯನ್ನು ಬಯಸುವುದು.

"ಸಂಪತ್ತಿನ ಗುಲಾಮರನ್ನು ದೇವರು ತಿರಸ್ಕರಿಸ... "ತಿನ್ನಿರಿ ತಿನ್ನಿಸಿರಿ; ದುಂದು ವೆಚ್ಚಗಾರರಾಗ... ಗರ್ವಿಷ್ಠರಾಗಬೇಡಿರಿ", "ಜಗತ್ತಿನ ಎಲ್ಲರ... ಅನುಕಂಪವಿರಲಿ; ಸ್ವರ್ಗಗಳ ಒಡೆಯನು ನಿಮ್ಮ... ಅನುಕಂಪ ತೋರುವನು", "ಕಾಯಕಜೀವಿಗಳು... ಪ್ರೀತಿಗೆ ಪಾತ್ರರಾಗುವರು", "ಐಹಿಕ ವಸ್ತುಗಳಲ್ಲಿ... ಪಾಲನ್ನು ಮರೆಯಬೇಡಿರಿ. ದೇವರು ನಿಮಗೆ ಒಳ್ಳೆ... ಮಾಡಿದ ಹಾಗೆಯೆ ಬೇರೆಯವರಿಗೆ ಒಳ್ಳೆಯ... ಮಾಡಿರಿ", "ಕೂಲಿಯ ಒರಟು ಕೈಗಳನ್ನು ಪ್ರೀತಿ... ಎಂದು ಪೈಗಂಬರರು ಸಾರಿದ್ದಾರೆ.

ಇಸ್ಲಾಮೀ ವ್ಯವಸ್ಥೆಗೆ ವಿಶಿಷ್ಟವಾದ ಉ... ಸಾಧನಗಳಿಲ್ಲ, ವಿಶಿಷ್ಟವಾದ ಉತ್ಪಾದನಾ ವಿಧಾನ... ಆದರೆ ಅದು ನೈತಿಕತೆಯ ತಳಹದಿಯ ಮೇಲೆ ... ನೀತಿಯು ಆರ್ಥಿಕ ಪ್ರಯತ್ನಗಳ ರೂ... ಹೊರಹೊಮ್ಮಬೇಕು ಎಂಬುದು ಅದರ ಆಶಯ. ... ಬಗ್ಗೆ ಕಾಳಜಿ. ಅವಕಾಶಗಳಲ್ಲಿ ಸಮಾನತೆ. ಸುಲಿಗೆಗೆ ಕ... ನೈತಿಕತೆಯ ಆಧಾರದ ಮೇಲೆ ಸಂಪನ್ಮೂಲಗಳ ... ನೈಸರ್ಗಿಕ ಸಂಪನ್ಮೂಲಗಳ ಸಮತೋಲನ ಹಾಳು ... ಉತ್ಪಾದನೆಯಲ್ಲಿ ತೊಡಗುವುದು. ಸಂಪನ್ಮೂಲಗಳನ್ನು... ಉತ್ಪನ್ನಗಳನ್ನು ದುರ್ವ್ಯಯ ಮಾಡದೆ ಬಳಸುವುದು. ... ಪೂರಕವಾಗುವಂಥ ವಸ್ತುಗಳನ್ನು ಮಾತ್ರ ಉತ್ಪಾದಿ... ತಮ್ಮಲ್ಲಿರುವ ಸಂಪತ್ತಿಗೆ ತಾವು ಧರ್ಮದರ್ಶಿ ... ಭಾವಿಸುವುದು. ತಮ್ಮ ಸಂಪತ್ತಿನಲ್ಲಿ ಬಡವರ ಹ... ಎಂದು ಭಾವಿಸುವುದು. ಪ್ರತಿಯೊಬ್ಬರಿಗೆ ಆಹಾರ... ವಸತಿ, ಆರೋಗ್ಯ ಮತ್ತು ಶಿಕ್ಷಣದ ಹಕ್ಕು ಇದ್ದು ... ಮತ್ತು ಸಮಾಜದ ಉಳ್ಳವರು ಬಡವರ ಬೇಡಿ... ಪೂರೈಸುವುದು - ಇವೆಲ್ಲ ಇಸ್ಲಾಮೀ ಅರ್ಥವ... ತಿರುಳು.

20ನೇ ಶತಮಾನದಲ್ಲಿ ನೈಸರ್ಗಿಕ ವ... ಹಾಳಾದಷ್ಟು ಹಿಂದೆ ಎಂದೂ ಆಗಿಲ್ಲ. ಹಿಂದಿ... ಶತಮಾನಗಳ ವಿಶ್ವ ಸಮುದಾಯ ಹಾಳು ಮಾಡಿ... ಹೆಚ್ಚು ಈ ಶತಮಾನದ ವಿಶ್ವ ಸಮುದಾಯ ಮಾಡಿದೆ. ಇದೇ ರೀತಿ ಹೆಚ್ಚು ಮಾಲಿನ್ಯ ಮಾಡಿದೆ, ಹೆಚ್ಚು ವಿಕಾರಗೊಂಡಿದೆ. 21ನೇ ಶತಮಾನ ಇದೆಲ್ಲ ಸರಿಪಡಿಸದಿದ್ದರೆ ಕೆಲವೇ ಶತಮಾನಗಳಲ್ಲಿ ವಿಶ್ವ ನಾಶ ವಾಗುವುದರಲ್ಲಿ ಸಂಶಯವಿಲ್ಲ.



○ರಂಜಾನ್ ದರ್ಗಾ

ಯೋಗೇಶ್ ಮಾಸ್ಟರ್

ಸುಗಾಣದ ಹೂರಣ

ಶೀಲ ಅಶ್ಲೀಲಗಳಾಚೆಯ ಮನಸ್ಸುಗಳು

ಮಾಡುವ ಒಳ್ಳೆಯ ಕೆಲಸಗಳಿಗೆ ಪಾರಿತೋಷಕವೂ, ಕೆಲಸಗಳಿಗೆ ಶಿಕ್ಷೆ ಎಂಬ ಪರಿಕಲ್ಪನೆ ಅಥವಾ ರೂಢಿಯೇ ಮತ್ತು ನರಕಗಳ ನೇರ ಪ್ರತಿಮೆಗಳು. ಅದರಲ್ಲಿ ವ ಅನುಮಾನವೂ ಇಲ್ಲ. ಆದರೆ ಮೂಲಸಮಸ್ಯೆ ದದ್ದು ಇಲ್ಲಿಯೇ? ಯಾವುದೇ ಒಂದು ಕೆಲಸವನ್ನು ಯದು ಎಂದು ಅಥವಾ ಕೆಟ್ಟದು ಎಂದು ತೀರ್ಮಾನಿಸು ರು ಯಾರು? ಅವರು ಏನನ್ನು ಅಥವಾ ಯಾರನ್ನು ನಿಧಿಸುತ್ತಾರೆ? ಯಾರೇ ಒಬ್ಬರ ಒಳ್ಳೆಯದು ಅಥವಾ ದು ಎಂಬ ದೃಷ್ಟಿಕೋನವು ಸಮಗ್ರ ಮಾನವ ಕುಲದ ವಾ ಇಡೀ ಸಮೂಹದ ಒಳ್ಳೆಯದು ಕೆಟ್ಟದು ಆಗಿಬಿಡು ಯೇ? ಕ್ರಿಯೆಗಳು ನಿಸರ್ಗಪ್ರೇರಿತ ವಾಗಿರಬೇಕೋ ವಾ ಸಮಾಜಪ್ರೇರಿತವಾಗಿರಬೇಕೋ? ಸಮಾಜಕ್ಕೆ ವಾ ಧಾರ್ಮಿಕತೆಗೆ ಅನುಗುಣವಾಗಿ ನಡೆಯುವಾಗ ರ್ಗದ ನೈಸರ್ಗಿಕ ಪ್ರಭಾವಗಳು ಅವಕ್ಕೆ ವಿರುದ್ಧವಾಗಿದ್ದರೆ ನು ಮಾಡುವುದು? ಇಂಥಾ ವಾಸ್ತವದ ದ್ವಂದ್ವವು ರುವುದರಿಂದಲೇ ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಗಳು ವಾಸ್ತವ ಪ್ರತಿಮೆಗಳಾಗಿದ್ದು, ಅವುಗಳನ್ನು ವಿವಿಧ ರೀತಿಯಲ್ಲಿ ವರಿಸುವಂತಹ ಪ್ರಯತ್ನವನ್ನು ವಿಶ್ವದ ಮೂಲೆಮೂಲೆ ಲ್ಲಿಯೂ ಇರುವಂತಹ ಸಂಸ್ಕೃತಿಗಳು ಮಾಡುತ್ತಲೇ ದಿವೆ. ಪುರಾತನ ಗ್ರೀಕ್, ಈಜಿಪ್ಟ್, ರೋಂ, ಆಫ್ರಿಕಾ, ನಾ ಮತ್ತು ಭಾರತದ ಸಾಂಸ್ಕೃತಿಕ (ಮೌಖಿಕ ಮತ್ತು ಖಿತ) ದಾಖಲೆಗಳೂ ಕೂಡ ಇವುಗಳ ಬಗ್ಗೆ ತಮ್ಮದೇ ದಂತಹ ವಿವರಣೆಗಳನ್ನು ಹೊಂದಿವೆ. ಇವುಗಳ ವಳಿಕೆಗಳಿಂದ ನಮಗೆ ವಿಶ್ವದ ವಿವಿಧ ಭಾಗಗಳಲ್ಲಿರುವ ನಸಮೂಹಗಳು ಸಾಂಸ್ಕೃತಿಕ ನೆಲೆಗಳಲ್ಲಿ ವೈವಿಧ್ಯತೆಗಳನ್ನು ಹೊಂದಿದ್ದರೂ ಕೂಡ ಮೂಲಭೂತವಾಗಿ ಹಲವು ಶಗಳನ್ನು ಸಾಮಾನ್ಯವಾಗಿ ಹೊಂದಿದ್ದರು ಎಂದು ರಿವಾಗುತ್ತದೆ. ನಿದ್ರೆ, ಹಸಿವು, ದಾಹ, ಮೈಥುನ, ಭಯ, ಇಂಥಾ ಹಲವು ಸಂಗತಿಗಳು ನೈಸರ್ಗಿಕವಾಗಿರುವುದೇ ದಕ್ಕೆ ಮುಖ್ಯ ಕಾರಣ. ಮಾನವನ ದೇಹಪ್ರಕೃತಿಯ ಮೇಲೆ ಉಂಟಾಗುವ ಪ್ರಕೃತಿಯ ಪ್ರಭಾವವನ್ನು ಯಾರೂ ರಾಕರಿಸಲಾರರು. ಆದರೆ, ಮಾನವ ತನ್ನ ಇಂದ್ರಿಯಗಳ ಮೂಲಕ ವಿವಿಧ ಭೌಗೋಳಿಕ ಮತ್ತು ಹವಾಮಾನಗಳ ರೂಪ ಮತ್ತು ಸ್ಥಿತಿಗಳನ್ನು ಹೇಗೆ ಗ್ರಹಿಸುತ್ತಾ ಹೋಗುತ್ತಾನೋ ಅದಕ್ಕೆ ತಕ್ಕಂತೆ ತನ್ನ ಮನೋಭೂಮಿಕೆ ಯನ್ನೂ ರಚಿಸಿಕೊಳ್ಳುತ್ತಾ ಹೋಗಿದ್ದು, ನಂತರ ಅವುಗಳು ಟ್ಟಯಾದಂತೆ ನಂಬಿಕೆ, ಸಿದ್ಧಾಂತ, ಆಚಾರವಿಚಾರಗಳನ್ನು ರೂಢಿಸಿಕೊಳ್ಳತೊಡಗಿದ. ಅದಕ್ಕೆ ಅವನ ವಾಸಸ್ಥಳ, ಭೌಗೋಳಿಕ ಪರಿಸರ, ಹವಾಮಾನ, ಕಸುಬು, ಆಹಾರ ದ್ಧತಿ, ಪರಿಚಿತ ಪರಿಕರಗಳು ಎಲ್ಲವೂ ಕಾರಣವಾದವು.

ಅವೇನೇ ಇರಲಿ, ಒಳ್ಳೆಯದು ಮತ್ತು ಕೆಟ್ಟದು ಎಂಬ ರಿಕಲ್ಪನೆ ಬಹಳ ಸೂಕ್ಷ್ಮವಾದದ್ದು ಮತ್ತು ವಿವಿಧ ಯಾಮಗಳಿಂದ ವಿಶ್ಲೇಷಿಸಲಾಗುವಂಥದ್ದು. ಈ ನೈತಿಕ ಚೌಕಟ್ಟೇ ಸಮಾಜವನ್ನು, ಮಾನವರ ಜೀವನವನ್ನು ಮತ್ತು ಕ್ತಿಗತವಾದ ಬದುಕನ್ನು ಆರೋಗ್ಯಪೂರ್ಣವಾಗಿ ಮತ್ತು ಮೃತಿಸಲು ಸಾಧ್ಯವಾಗುವಂತೆ ಇರಿಸುವುದು ಎಂಬ ಬುಗೆಯೇ ಮನೋರಂಗದಲ್ಲಿ ಬಲವಾಗಿ ಬೇರೂರುತ್ತಾ ದು, ನೈತಿಕ ಚೌಕಟ್ಟು ವ್ಯಕ್ತಿಯನ್ನು ಉಸಿರುಗಟ್ಟಿಸುವಂತೆ ಧಿಸುವಂತಹ ಸರಪಳಿಗಳಾದವು. ಅದರಿಂದಲೇ ನೈಸರ್ಗಿಕ ತಗಳ ವಿರುದ್ಧವಾಗಿ ನಿಲ್ಲಲಾಗದೇ, ತಂತಾನೇ ಹುಟ್ಟುವ ಮನೆಗಳನ್ನು ಅದುಮಿಡಲಾಗದೇ ಅನ್ಯದಾರಿ ಡಿಯುವಂತಹ ಪರಿಸ್ಥಿತಿಗಳೂ ಉಂಟಾಗಿ ಅಕ್ರಮ ಮತ್ತು ಶ್ಲೀಲಗಳ ಮತ್ತೊಂದು ಸಮಾಜದಲ್ಲಿ ತಿರಸ್ಕಾರ ಗಳಾಗುವಂತಹ ಪರಿಕಲ್ಪನೆಗಳೂ ಉದಯಿಸಿದವು.


ಇವುಗಳ ಬೆಳವಣಿಗೆಗಳೇ ಸೋಜಿಗ. ಸ್ವರ್ಗನರಕಗಳ ಗ್ಗೆ ತಿಳಿದುಕೊಳ್ಳಬೇಕಾದರೆ ಪ್ರಕೃತಿಯ ದ್ಯಮಾನಗಳನ್ನು ತಿಳಿದುಕೊಳ್ಳಬೇಕು. ಆ ದ್ಯಮಾನಗಳ ಕ್ರಿಯೆ, ಪ್ರತಿಕ್ರಿಯೆ, ಪ್ರಕ್ರಿಯೆ ಮತ್ತು ಭಾವಗಳು ಮನುಷ್ಯನಲ್ಲಿ ಹೇಗೆ ಕೆಲಸ ಮಾಡತೊಡಗಿದವು ಎಂದು ತಿಳಿದುಕೊಳ್ಳಬೇಕು. ಕೃತಿ ಸಹಜವಾಗಿರುವ ಪ್ರಾಣಿಗಳಲ್ಲಿ ಯಾವುದು ಸರ್ಗಿಕವಾಗಿದೆಯೋ ಅದು ಮನುಷ್ಯರಲ್ಲಿ ಸಹಜ ಅಥವಾ ಅಕ್ರಮ ಹಾಗೂ ಅಶ್ಲೀಲಗಳು ಗಾದವು ಎಂದು ತಿಳಿದುಕೊಳ್ಳಬೇಕು. ಅಷ್ಟೆಲ್ಲ ಕೆ, ಯಾವ ವ್ಯಕ್ತಿಯು ಒಳ್ಳೆಯದು ಮತ್ತು ಕೆಟ್ಟದು ಬ ಪರಿಕಲ್ಪನೆಯನ್ನು ನಿರಾಕರಿಸುತ್ತಾನೋ ಥವಾ ಅವುಗಳನ್ನು ವಿಧಿತವಾಗಿರುವಂತೆ ಆಚರಿಸಲು ಸಕ್ತಿ ಮಾಡುವುದಿಲ್ಲವೋ ಅವನನ್ನು ಇಡೀ ಸಮಾಜವೇ ನಿಷ್ಕರಿಸುತ್ತದೆ. ಅವನನ್ನು ಸಮುದಾಯದೊಳಗೆ ಸೇರಿಸಿಕೊಳ್ಳುವುದಿಲ್ಲ, ಮಾನಸಿಕವಾಗಿಯೇ ಅಸ್ಪೃಶ್ಯನೆಂದು ರುತ್ತದೆ. ವ್ಯಕ್ತಿಗತ ಮನಸ್ಥಿತಿಯೂ ಕೂಡ ಸಾಮಾಜಿಕ ಸ್ಥಿತಿಗಳಲ್ಲಿ ಒಂದೋ ಬಂಧಿತವಾಗಿರುತ್ತದೆ ಅಥವಾ ಮುಕ್ತವಾಗಲು ತೊಡಕಾದುತ್ತಿರುತ್ತದೆ. ಒಟ್ಟಾರೆ ಮನಸ್ಥಿತಿಗಳ ಮೇಲೆ ಸಾಮಾಜಿಕ ಸ್ಥಿತಿಗತಿಗಳ, ಕಟ್ಟಳೆಗಳ ಪ್ರಭಾವವು ಇರುವುದು ನಿಜವೆಂದಾಯಿತು. ಹಾಗೆಯೇ ಅದೇ ವ್ಯಕ್ತಿಯ ಮನಸ್ಥಿತಿಯು ಪ್ರಕೃತಿಯ ನೈಸರ್ಗಿಕ ಪ್ರಚೋದನೆಗಳಿಗೂ ಒಳಗಾಗುತ್ತಿರುತ್ತದೆ ಎಂಬುದನ್ನು ಮರೆಯಬಾರದು.

ಒಂದು ಸೆಳೆತದ ಕಥೆ


ಕೆಲವು ವರ್ಷಗಳ ಹಿಂದೆ ಟಿವಿ ಚಾನೆಲ್‌ಗಳಲ್ಲಿ (ಕ್ರೈಂ ಡೈರಿ ಮತ್ತು ಕ್ರೈ ರಿಪೋರ್ಟ್‌ಗಳು ಜನಪ್ರಿಯವಾಗಿದ್ದ ಕಾಲದಲ್ಲಿ) ಓರ್ವ ಮಹಿಳೆಯ ಸಂಬಂಧದ ಬಗ್ಗೆ (ಅವರ ಲೇಬಲ್ ಪ್ರಕಾರ ಅಕ್ರಮ ಸಂಬಂಧ. ಆದರೆ ನಾನಿಲ್ಲಿ ಅದನ್ನು ಬರಿಯ ಸಂಬಂಧವಾಗಿಯಷ್ಟೇ ಪರಿಗಣಿಸುತ್ತೇನೆ) ಸವಿಸ್ತಾರವಾಗಿ ವಿವರಿಸಿತ್ತು. ಒಂದು ಮಗ್ಗದ ಫ್ಯಾಕ್ಟರಿ. ಯಜಮಾನನಿಗೆ ಓರ್ವ ಹೆಂಡತಿ. ಅವಳಿಗೆ ಹೈಸ್ಕೂಲ್‌ಗೆ ಹೋಗುತ್ತಿರುವ ಬೆಳೆದ ಇಬ್ಬರು ಗಂಡುಮಕ್ಕಳು. ಆಕೆ ತಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಮತ್ತೊಬ್ಬ ವಿವಾಹಿತ ಕಾರ್ಮಿಕನೊಂದಿಗೆ ದೈಹಿಕ ಸಂಪರ್ಕವನ್ನು ಇರಿಸಿಕೊಂಡಳು. ಇಬ್ಬರೂ ಪರಸ್ಪರ ಸಮ್ಮತದಿಂದ ಬೆರೆಯುತ್ತಿದ್ದರು. ನಂತರ ಈ ವಿಷಯದ ಸುಳಿವು ಗಂಡನಿಗೆ ದೊರೆತಾಗ ಅಪರಾಧಪ್ರಜ್ಞೆಗೆ ಒಳಗಾದ ಆಕೆಗೆ ತನ್ನ ಹೊಸತಾಗಿ



ಇರಿಸಿಕೊಂಡ ಸಂಬಂಧದಿಂದಲೂ ಹೊರತಾಗಲು ಸಾಧ್ಯವಾಗಲಿಲ್ಲ. ಅದಕ್ಕೆ ಅವಳು ಆಯ್ದುಕೊಂಡ ಮಾರ್ಗವೆಂದರೆ ಆ ಕಾರ್ಮಿಕನೊಂದಿಗೆ ಮನೆಯನ್ನು ಬಿಟ್ಟುಹೋಗುವುದು. ಅದಕ್ಕೆ ಅವನೂ ಸಮ್ಮತಿಸಿ ಇಬ್ಬರೂ ಮನೆಬಿಟ್ಟು ಹೋದರು. ಇಬ್ಬರ ಮನೆಯಲ್ಲೂ ಹೀಗೆ ವ್ಯಕ್ತಿಗಳು ಗೃಹತ್ಯಾಗ ಮಾಡಿದ್ದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರುಗಳು ದಾಖಲಾದವು. ಎಲ್ಲಿಯೋ ಮನೆ ಮಾಡಿಕೊಂಡಿದ್ದ ಆಕೆಯನ್ನೂ ಮತ್ತು ಕಾರ್ಮಿಕನನ್ನೂ ಠಾಣೆಗೆ ಕರೆಸಿದಾಗ ಆಕೆ ಬಹಳ ದಿಟ್ಟವಾಗಿ ತನ್ನಲ್ಲಿ ಹುಟ್ಟುತ್ತಿದ್ದ ಕಾಮನೆಗಳನ್ನು ತೃಪ್ತಿಪಡಿಸದ ತನ್ನ ಗಂಡನ ನಿರಾಸಕ್ತಿಯ ಬಗ್ಗೆ ತಿಳಿಸಿದಳು. ಗಂಡ ಮತ್ತು ಮಕ್ಕಳ ಜೊತೆಗೇ ಇದ್ದು ತನ್ನ ಕಾಮನೆಗಳನ್ನು ಕಾರ್ಮಿಕ ಸಂಗಾತಿಯೊಡನೆ ಮುಂದುವರಿಸಿಕೊಂಡು ಹೋಗುವುದಕ್ಕೆ ತನಗೆ ಮನಸ್ಸಿದ್ದರೂ ತನ್ನ ಗಂಡ ತನ್ನ ಈ ಸಂಬಂಧವನ್ನು ಮನ್ನಿಸದ ಕಾರಣ ಹಾಗೂ ಅದರ ಬಗ್ಗೆ ಖಂಡನೆಗಳು ಬಂದ ಕಾರಣ ತಾನು ಮನೆ ಬಿಟ್ಟುಹೋಗುವ ನಿರ್ಧಾರವನ್ನೂ ತೆಗೆದುಕೊಂಡದ್ದಾಗಿ ಹೇಳಿದಳು. ಅವಳು ತನ್ನ ಮಕ್ಕಳನ್ನು ಪ್ರೀತಿಸುವುದಾಗಿಯೂ, ಮನೆಯ ಜವಾಬ್ದಾರಿಯನ್ನು ನಿರ್ವಹಿಸುವುದಾಗಿಯೂ ಆದರೆ ಆತನೊಂದಿಗೆ ಉಂಟಾಗಿರುವ ತನ್ನ ಅನುರಾಗವನ್ನು ನಿರಾಕರಿಸುವುದಿಲ್ಲ ಎಂಬುದಾಗಿಯೂ ತಿಳಿಸಿದಾಗ, ಆಕೆಯ



ಮಕ್ಕಳೂ ಆಕೆಯನ್ನು ತಿರಸ್ಕರಿಸಿದರು. ಇಂಥಾ ನೀತಿಗೆಟ್ಟ ಹೆಂಗಸನ್ನು ತಮ್ಮ ತಾಯಿ ಎಂದು ಕರೆಯಲು ನಾಚಿಕೆ ಯಾಗುತ್ತದೆ ಎಂದರು. ಇನ್ನು ಗಂಡನಂತೂ ತನ್ನ ಮನೆಯಲ್ಲಿ ಆಕೆಯ ಗೃಹಿಣಿಯೆಂಬ ಸ್ಥಾನವನ್ನು ನಿರಾಕರಿಸಿದ್ದ, ಇನ್ನು ವಿವಾಹಿತ ಕಾರ್ಮಿಕ ತಾನು ತಪ್ಪು ಮಾಡಿದ್ದಾಗಿಯೂ, ಆಕೆಯ ಪ್ರಚೋದನೆಯಿಂದ ಹೀಗೆ ಮಾಡಿದ್ದಾಗಿಯೂ,



ತನ್ನ ಹೆಂಡತಿ ಮತ್ತು ಮಗುವಿನೊಂದಿಗೆ ತಾನು ಇರುವುದಾಗಿಯೂ, ಇನ್ನು ಎಂದೂ ಆಕೆಯನ್ನು ನೋಡುವುದಿಲ್ಲ ಆಕೆಯ ಸಂಬಂಧವನ್ನು ಹೊಂದುವುದಿಲ್ಲ ಎಂಬುದಾಗಿಯೂ ಸ್ಪಷ್ಟೀಕರಿಸಿದ. ಹಾಗೆಯೇ ಅವಳನ್ನು ನಿರಾಕರಿಸಿದ. ಕೊನೆಗೆ ಆಕೆ ತನ್ನ ಮನೆಗೂ ಹೋಗಲಾಗಲಿಲ್ಲ, ತನ್ನ ತಾಯಿಯ ಮನೆಯ ಕದವಂತೂ ಮುಚ್ಚಿಹೋಗಿತ್ತು, ಮಕ್ಕಳು ನಿರಾಕರಿಸಿದ್ದರು. ತಾನು ಯಾರೊಂದಿಗೆ ಸಂಬಂಧವಿರಿಸಿ ಕೊಂಡಿದ್ದಳೋ ಆತನೂ ಈಕೆಯನ್ನು ನಿರಾಕರಿಸಿ, ನಡೆದದ್ದು ಕೆಟ್ಟಕನಸೆಂದು ಮರೆತು ತನ್ನ ಹೆಂಡತಿ ಮತ್ತು ಮಗುವಿನೊಂದಿಗೆ ಹೊಸ ಬದುಕು ನಡೆಸಲು ಸಿದ್ಧನಾಗಿದ್ದ, ಎಲ್ಲರಿಂದಲೂ ನಿರಾಕರಿಸಲ್ಪಟ್ಟ ಆಕೆಗೆ ಕೊನೆಗೆ ಕಂಡಿದ್ದು ಆತ್ಮಹತ್ಯೆ. ತನ್ನ ತಾನು ಕೊಂದುಕೊಂಡು ತನ್ನ ಜೀವನವನ್ನು ಕೊನೆಗಾಣಿಸಿಕೊಂಡಳು. ಅವಳ ಶವವು ಅನಾಥವಾಗಿ ದೊರೆತಾಗ ಪೊಲೀಸರು ಅವಳ ಗಂಡನಿಗೆ ಮತ್ತು ಮಕ್ಕಳಿಗೆ ಹೇಳಿಕಳುಹಿಸಿದರು. ಅವರು ಪಾಪಿ ಹೆಣಕ್ಕೆ ಸಂಸ್ಕಾರ ಮಾಡಲು ಒಪ್ಪಲಿಲ್ಲ. ಅವಳೊಂದಿಗೆ ಸಂಬಂಧವಿರಿಸಿ ಕೊಂಡಿದ್ದಾತನೂ ನಿರಾಕರಿಸಿದ. ತಾಯಿಯ ಮನೆಯವರೂ ಬರಲಿಲ್ಲ. ಕಡೆಗೆ ಪೊಲೀಸರೇ ಶವಸಂಸ್ಕಾರವನ್ನು ಮಾಡಿದರು. ಅಲ್ಲಿಗೆ ಒಂದು ತನ್ನ ಕಾಮನೆಗಳನ್ನು ದಿಟ್ಟವಾಗಿ ಒಪ್ಪಿಕೊಂಡ ಓರ್ವ ಹೆಣ್ಣಿನ ಬದುಕು ಕೊನೆಗೊಂಡಿತು.

ಆಕೆ ತನ್ನ ಪ್ರಿಯತಮನೊಂದಿಗೆ ತನ್ನ ಸಂಬಂಧವನ್ನು ಸಮರ್ಥಿಸಿಕೊಂಡು ಮಾತಾಡಿದ್ದನ್ನು ಪ್ರಸಾರ ಮಾಡಿದ ಚಾನೆಲ್‌ಗಳು ಆಕೆಯ ಧಾರ್ಷ್ಟ್ಯವನ್ನು ಖಂಡಿಸಿದ್ದರೆ, ಅದೇ ಚಾನೆಲ್‌ಗಳು ಆಕೆ ಸತ್ತ ಮೇಲೆ ಆಕೆಯ ದುರಂತ ಬದುಕನ್ನೂ ಶೋಕಾಲಾಪದ ಹಿನ್ನೆಲೆ ಸಂಗೀತದೊಡನೆ ಪ್ರಸಾರ ಮಾಡಿದ್ದವು.

ನೈಸರ್ಗಿಕತೆ ವರ್ಸಸ್ ನೈತಿಕತೆ

ವಿವಾಹಿತ ಮಹಿಳೆಯೊಬ್ಬಳು ಮತ್ತೊಬ್ಬ ವಿವಾಹಿತ ಪುರುಷನೊಂದಿಗೆ ಒಮ್ಮೆಯಾದರೂ ಅಥವಾ ಪುನರಾವರ್ತಿತವಾಗಿಯಾದರೂ ದೈಹಿಕ ಸಂಪರ್ಕವನ್ನು



ಇರಿಸಿಕೊಂಡರೆ ಕೂಡಲೇ ಅವಳ ಸಂಬಂಧವನ್ನು ಅಕ್ರಮಗೊಳಿಸಲಾಗುತ್ತದೆ. ಅವಳ ಶೀಲ, ಅವನ ಚಾರಿತ್ರ್ಯದ ಬಗ್ಗೆ ಕಟುವಾದ ಟೀಕೆಗಳನ್ನು ಎದುರಿಸಬೇಕಾಗುತ್ತದೆ. ಅದಕ್ಕೆ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಶಿಕ್ಷೆ ಮತ್ತು ಬಹಿಷ್ಕಾರಗಳನ್ನು ವಿಧಿಸಲಾಗುತ್ತದೆ. ಅವನಲ್ಲಿ ಮತ್ತು ಅವಳಲ್ಲಿ ಕಠಿಣವಾದಂತಹ ಅಪರಾಧಿ ಪ್ರಜ್ಞೆಯನ್ನು ಉಂಟುಮಾಡುವಂತಹ ಪ್ರತಿಕ್ರಿಯೆಗಳನ್ನು ಕಾಣಬಹುದು. ಯಾರೇ ಅವರನ್ನು ಬೆಂಬಲಿಸಿದರೆ ಅಥವಾ ಅವರ ಕೃತ್ಯವನ್ನು ಸಮರ್ಥಿಸಿದರೆ ಅವರನ್ನೂ ಖಂಡಿಸಲಾಗುತ್ತದೆ. ತಂದೆ, ತಾಯಿ, ಸೋದರ ಮತ್ತು ಸೋದರಿಗಳಲ್ಲಿ ದೈಹಿಕ ಸಂಬಂಧವನ್ನು ಹೊಂದುವ ಯಾರನ್ನೇ ಆಗಲಿ ನಿರ್ದಾಕ್ಷಿಣ್ಯವಾಗಿ ಖಂಡಿಸುವ ಮತ್ತು ಅಪಮಾನಿಸುವ ದೃಷ್ಟಿಯನ್ನು ಬಹಳ ಗಾಢವಾಗಿ ಧಾರ್ಮಿಕತೆಯಲ್ಲಿ ಮಾತ್ರವಲ್ಲದೇ ಸಾಮಾಜಿಕ ವ್ಯವಸ್ಥೆಯಲ್ಲೂ ಕಾಣುತ್ತೇವೆ. ಸಂಸ್ಕೃತಿಗಳಲ್ಲೂ ಕಾಣುತ್ತೇವೆ. ಏಕೆ? ಪ್ರಕೃತಿಯಲ್ಲಿ ನೈಸರ್ಗಿಕವಾಗಿ ಪಶುಗಳು ಇರುವಂತೆ ಮನುಷ್ಯರಲ್ಲೂ ಅಂತಹ ನಡಾವಳಿಗಳು ಇಲ್ಲದೇ ಹೋಗಿದ್ದಕ್ಕೆ ಕಾರಣವಿಲ್ಲದೇ ಏನಿಲ್ಲ, ಮಾನವನು ತನ್ನ ಬದುಕಿನ ಪ್ರಾರಂಭದಲ್ಲಿ ಎಲ್ಲಾ ಪ್ರಾಣಿಗಳಂತೆಯೇ ಇದ್ದವನಾಗಿದ್ದ ಮತ್ತು ಅವನಲ್ಲಿ ತಂದೆ, ತಾಯಿ, ಸೋದರ, ಸೋದರಿ ಎಂಬ ಸಂಬಂಧಗಳ ಗುರುತೂ ಇರಲಿಲ್ಲ ನಿಜ. ಆದರೆ ಅವುಗಳು ಹುಟ್ಟುವುದಕ್ಕೆ, ಅವುಗಳಲ್ಲಿ ನೈತಿಕತೆಯನ್ನು ಕಾಪಾಡಿಕೊಳ್ಳುವುದಕ್ಕೆ, ಅವುಗಳಿಗೆ ವಿಶಿಷ್ಟ ರೂಪಗಳನ್ನು ಕೊಟ್ಟು ಅಕ್ರಮ, ಸಕ್ರಮ, ಶೀಲ ಮತ್ತು ಅಶ್ಲೀಲಗಳನ್ನು ಹುಟ್ಟುಹಾಕುವುದಕ್ಕೆ ನಾನಾ ಕಾರಣಗಳಿವೆ. ಈ ಕಾರಣಗಳಲ್ಲಿ ಹಲವು ಸ್ವಹಿತಾಸಕ್ತಿಯದಾದರೆ ಮತ್ತೆ ಕೆಲವು ಸಾಮಾಜಿಕ ಆರೋಗ್ಯವನ್ನು ಕಾಪಾಡುವುದಕ್ಕೂ ಇವೆ. ಕೆಲವು ದುರ್ಬಲರ ಮೇಲೆ ಶಕ್ತಿವಂತರ ದಬ್ಬಾಳಿಕೆಯನ್ನು ತಡೆಯುವುದಕ್ಕೂ ಇವೆ. ಕೆಲವು ಜನಾಂಗೀಯ ಕಾರಣಗಳಾಗಿಯೂ ಮುಂದುವರಿದಿವೆ. ಹೀಗೆ ಹತ್ತು ಹಲವು ಕಾರಣಗಳು ಮನುಷ್ಯನ ನೈಸರ್ಗಿಕ ನಡವಳಿಕೆಗಳನ್ನು ನೈತಿಕ ಚೌಕಟ್ಟಿಗೆ ಕೂಡಿಸಲು ಮುಂದಾದವು. ಒಟ್ಟಾರೆ, ಯಾವ ನೈತಿಕತೆಯನ್ನು ನಾವು ಬಹಳ ಸಕಾರಾತ್ಮಕವಾಗಿ ಕೊಂಡಾಡುತ್ತೇವೆಯೋ ಅವು ನಿಜವಾಗಿ ನೈಸರ್ಗಿಕ ವಾದುದ್ದೇನಲ್ಲ, ಯಾವುದು ನೈಸರ್ಗಿಕವಾದುದಲ್ಲವೋ ಅವು ಕೃತಕವಾಗುತ್ತದೆ. ಹಾಗಾದರೆ ನೈತಿಕತೆಯನ್ನು ಕಾಪಾಡಿಕೊಳ್ಳುವುದು ಎಂದರೆ ಅದು ಒಂದು ಕೃತಕತೆಯ ಭಾಗವೇ? ಈ ಪ್ರಶ್ನೆ ಸಮಾಜದಲ್ಲಿ ತನ್ನನ್ನು ಗುರುತಿಸಿ ಕೊಂಡಿರುವ ಯಾವುದೇ ಸಾಮಾನ್ಯ ವ್ಯಕ್ತಿಯನ್ನು ಅಧೀರ ಗೊಳಿಸುವುದು ಮಾತ್ರವಲ್ಲದೇ ಅವನ ನಡವಳಿಕೆ, ನಂಬಿಕೆ, ಆಚಾರ, ವಿಚಾರ, ಸಿದ್ಧಾಂತ; ಈ ಎಲ್ಲದರ ಮುಂದಿನ ಮಾರ್ಗ ತಟ್ಟನೆ ಮಂಕಾಗುವುದೋ ಏನೋ! ಅಥವಾ ಮತ್ತೆ ಯಾವುದು ಸರಿ, ಯಾವುದು ತಪ್ಪು ಎಂಬಂತಹ ದ್ವಂದ್ವಗಳು ಕಾಡತೊಡಗುವುದೋ ಏನೋ.

ಅಂತಃಕರಣ ಮತ್ತು ಅಪರಾಧ


ಮಾನವೀಯ ಅಂತಃಕರಣದಿಂದ ಲೋಕ ಕರೆಯುವ ಯಾವುದೇ ವ್ಯಭಿಚಾರದ ಕಥೆಯನ್ನು ನೋಡಿದಾಗ, ಮುಕ್ತ ಚಿಂತನೆಗಳ ಆಯಾಮದಿಂದ ವಿಶ್ಲೇಷಿಸಿದಾಗ ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಗಳೊಂದಿಗೆ ಒಳ್ಳೆಯದು ಮತ್ತು ಕೆಟ್ಟದು ಎಂಬ ದೃಷ್ಟಿಕೋನಗಳೂ ಧೂಳೀಪಟವಾಗಿಬಿಡುತ್ತದೆ.


ವ್ಯಭಿಚಾರಿಯೊಬ್ಬಳಿಗೆ ಸಮಾಜವು ಕಲ್ಲುಬೀರಿ ಕೊಲ್ಲುವ ಶಿಕ್ಷೆ ನೀಡುವ ಅದೊಂದು ಸಂದರ್ಭದಲ್ಲಿ ಯೇಸು ಕ್ರಿಸ್ತನು ನಿಮ್ಮಲ್ಲಿ ಯಾರು ತಪ್ಪನ್ನು ಮಾಡಿಲ್ಲವೋ ಅವರು ಮೊದಲು ಕಲ್ಲನ್ನು ಬೀರಿ ಎಂದಾಗ ಅಲ್ಲಿದ್ದವರೆಲ್ಲಾ ಕಲ್ಲುಗಳನ್ನು ಬೀರದೇ ಹೊರಟುಹೋದರಂತೆ. ಆಕೆಯನ್ನು ಯೇಸು ಕ್ಷಮಿಸಿದನಂತೆ. ಆದರೆ ಈ ಕಥೆಯನ್ನು ಚಾರಿತ್ರಿಕವಾಗಿ ನೋಡುವುದಕ್ಕಿಂತ ರೂಪಕವಾಗಿಯಷ್ಟೇ ಸಮರ್ಥವೆನಿಸುತ್ತದೆ. ಏಕೆಂದರೆ, ವ್ಯಭಿಚಾರಿಗೆ ಕಲ್ಲು ಬೀರಿ ಕೊಲ್ಲುವಷ್ಟು ಉನ್ಮತ್ತವಾಗಿರುವ ಸಮಾಜವು ಯೇಸುವಿನ ಒಂದು ಮಾತಿಗೆ ಆತ್ಮಾವಲೋಕನ ಮಾಡಿಕೊಂಡು ಹಿಂದಕ್ಕೆ ಸರಿದುಬಿಟ್ಟರೆಂದು ಹೇಳಲಾಗದು. ಅದು ಒಂದು ಉತ್ಪ್ರೇಕ್ಷೆಯಾಗಿ ನನಗೆ ಕಾಣುತ್ತದೆ. ಏಕೆಂದರೆ ಅದೇ ಸಮಾಜವು ಮುಂದೆ ಯಾವ ಆತ್ಮಾವಲೋಕವನ್ನೂ ಮಾಡಿಕೊಳ್ಳದೇ ಅದೇ ಯೇಸುವಿಗೆ ವೃಥಾ ಮರಣ ದಂಡನೆ ನೀಡುವುದಕ್ಕೆ ಸಾಕ್ಷಿಯಾಗುತ್ತದೆ. ಆತ್ಮಾವಲೋಕನವು ಸಾಮೂಹಿಕವಾಗಿ ಸಮಾಜಕ್ಕೆ ಆಗುವುದಿಲ್ಲ. ಸಾಮಾಜಿಕವಾಗಿ ಅಭಿವ್ಯಕ್ತಿಗೊಂಡ ಅಭಿಪ್ರಾಯಗಳು ಕೂಡ ವ್ಯಕ್ತಿಗತವಾದ ಆಲೋಚನೆಗಳಿಗೆ ಹಚ್ಚುತ್ತಾ ಬದಲಾವಣೆಗಳನ್ನು ಉಂಟುಮಾಡುವ ಪ್ರಕ್ರಿಯೆಗೆ ಒಳಗಾಗುತ್ತದೆ. ಕ್ರಿಯೆಗೆ ಪ್ರತಿಕ್ರಿಯಿಸಿದಂತೆ ಸಮಾಜ ಬದಲಾವಣೆಯ ಪ್ರಕ್ರಿಯೆಗೆ ತಕ್ಷಣವೇ ಒಳಪಡುವುದಿಲ್ಲ. ಸಂಘಟಿತ ವ್ಯಕ್ತಿಗಳು ತಮ್ಮಲ್ಲಾದ ಬದಲಾವಣೆಗಳನ್ನು ಅಭಿವ್ಯಕ್ತಿಗೊಳಿಸುತ್ತಾ ದೃಢಗೊಳಿಸುತ್ತಾ ನೆಲೆ ನಿಲ್ಲತೊಡಗಿದಾಗಲೇ ಸಮಾಜದಲ್ಲಿಯೂ ಕಾಲಾನಂತರದಲ್ಲಿ ಬದಲಾವಣೆಗಳನ್ನು ಹೊಂದಲು ಸಾಧ್ಯ. ಆರ್ಥಿಕ ಅಥವಾ ವಾಣಿಜ್ಯ ನೀತಿಗಳಿಂದ ಬದಲಾವಣೆಗಳಾದಂತೆ ತತ್‌ಕ್ಷಣವೇ ನೈತಿಕತೆಯಲ್ಲಿ ಬದಲಾವಣೆಗಳಾಗಿ ಜನರು ಪ್ರಜ್ಞಾವಂತರಾಗಿಬಿಡುವುದಿಲ್ಲ ಅಥವಾ ಜ್ಞಾನಿಗಳಾಗಿಬಿಡುವುದಿಲ್ಲ.

ಈ ಕಾರಣಗಳ ಹಿನ್ನೆಲೆಯಲ್ಲಿ ಎಲ್ಲಾ ಸಂಸ್ಕೃತಿಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಗಳನ್ನೂ ಮತ್ತು ಒಳ್ಳೆಯದು ಹಾಗೂ ಕೆಟ್ಟದರ ದೃಷ್ಟಿಕೋನಗಳನ್ನೂ ಬಲಪಡಿಸುತ್ತಾ ಬರಲಾಯಿತು. ಅವುಗಳು ವಿಸ್ತಾರವಾದ ರೀತಿಗಳಂತೂ ರೋಚಕ. ◆

ಬಾಳಿಗ ಮತ್ತು ಪಾಂಡ್ಯ ಕೊಲೆಗಳಲ್ಲಿನ ಸಾಮ್ಯತೆ

ಮಂಗಳೂರಿನ ವಿನಾಯಕ ಬಾಳಿಗ ಮತ್ತು ಗುಜರಾತಿನ ಬಿಜೆಪಿ ಮುಖಂಡ ಹರೇನ್ ಪಾಂಡ್ಯ ಇವರಿಬ್ಬರ ಕೊಲೆ ಕೇಸಿನಲ್ಲಿ ಬಹಳಷ್ಟು ಸಾಮ್ಯತೆ ಇದೆ. ಹರೇನ್ ಪಾಂಡ್ಯ ಮತ್ತು ವಿನಾಯಕ ಬಾಳಿಗ ಇವರಿಬ್ಬರ ಕೊಲೆಯೂ





ಬೆಳಗಿನ ಜಾವ ಸುಪಾರಿ ಹಂತಕರಿಂದ ಆಗಿರುವುದು. ಇಬ್ಬರ ಕೊಲೆಯೂ ಮಾರ್ಚ್ ಮೂರನೇ ವಾರದಲ್ಲಿ ಆಗಿದೆ. ಇಬ್ಬರೂ ಹಿಂದೂತ್ವ ಸಂಘಟನೆಗಳವರು. ಇಬ್ಬರೂ ಬ್ರಾಹ್ಮಣರು. ಇಬ್ಬರನ್ನೂ ಕೊಲೆ ಮಾಡಿಸಿದ್ದು ಸ್ವತಃ ಅವರದೇ ಹಿಂದೂತ್ವ ಸಂಘಟನೆಯವರು. ನರೇಶ್ ಶೆಣೈಯ ದೇವಸ್ಥಾನದಲ್ಲಿಯ ಅಧಿಕಾರ ದುರುಪಯೋಗ ಬಯಲಿಗೆಳೆದಿದ್ದಕ್ಕಾಗಿ ವಿನಾಯಕ ಬಾಳಿಗ ಕೊಲೆಯಾದರೆ, ಹರೇನ್ ಪಾಂಡ್ಯ 2002 ರಲ್ಲಿಯ ಗುಜರಾತ್ ಹತ್ಯಾಕಾಂಡದ ರೂವಾರಿಗಳ ಗುಟ್ಟನ್ನು ಬಯಲಿಗೆಳೆದಿದ್ದಕ್ಕಾಗಿ 2003 ಮಾರ್ಚ್‌ನಲ್ಲಿ ಕೊಲೆಯಾದರು. ಎರಡೂ ಕೊಲೆ ಮಾಡಿದವರು ಸತ್ತವರಿಗೆ ಏನೇನೂ ಸಂಬಂಧವಿಲ್ಲದ ಮೂರನೆಯ ವ್ಯಕ್ತಿಗಳು ಹಾಗೂ ಹಣದ ಆಸೆಗಾಗಿ ಮಾಡಿದವರು. ಪಾಂಡ್ಯಾ ಕೇಸಿನಲ್ಲಿ ಧೈರ್ಯವಹಿಸಿ ಸತ್ಯ ಬಯಲಿಗೆಳೆದ ಸಂಜೀವ್ ಭಟ್ ಎಂಬ ಪೊಲೀಸ್ ಅಧಿಕಾರಿ ಹಲವಾರು ವರ್ಗಾವಣೆಗೆ ಈಡಾಗಿ ಕೊನೆಗೆ ಕೆಲಸ ಕಳೆದುಕೊಂಡರು. ಅಂತೆಯೇ ಮೂರು ತಿಂಗಳ ಸತತ ಪ್ರಯತ್ನದಿಂದ ನರೇಶ್ ಶೆಣೈನನ್ನು ಹಿಡಿದು ಹಾಕಿದ ಮಂಗಳೂರಿನ ಎಸಿಪಿ ತಿಲಕಚಂದ್ರ ನಿನ್ನೆಯೋ ವರ್ಗಾವಣೆಗೊಂಡು ಹೋದರು. ಇನ್ನು ಅವರದೂ ಗುಜರಾತಿನ ಸಂಜೀವ್ ಭಟ್ ಗತಿಯೇ ಆಗಬಹುದೇನೋ.


ಭೇದ ಇಷ್ಟೇ - ಹರೇನ್ ಪಾಂಡ್ಯ ಕೊಲೆಗೆ ತುಳಸಿರಾಮ್ ಪ್ರಜಾಪತಿ ಹಾಗೂ ಸೊಹ್ರಾಬುದ್ದೀನ್ ಎಂಬವರಿಗೆ ಸುಪಾರಿ ಕೊಟ್ಟವನು ಒಬ್ಬ ಜೈನ, ಆದರೆ ಬಾಳಿಗರ ಕೊಲೆಗೆ ಸುಪಾರಿ ಕೊಟ್ಟವನು ಅವರದೇ ಜಾತಿಯ ಸಾರಸ್ವತ ಬ್ರಾಹ್ಮಣ. ಆದರೆ ಕೊನೆಗೆ ತುಳಸಿರಾಮ್ ಮತ್ತು ಸೊಹ್ರಾಬುದ್ದೀನರ ನಕಲಿ ಎನ್‌ಕೌಂಟರ್ ಆಯಿತು ಹಾಗೂ ಸಾಕ್ಷಿ ಎಲ್ಲಾ ನಾಶವಾಯಿತು. ಇನ್ನು ಮಂಗಳೂರಲ್ಲಿ ಸುಪಾರಿ ಪಡೆದು ಕೊಲೆ ಮಾಡಿದ ಪೂಜಾರಿ ಮತ್ತು ದೇವಾಡಿಗ ಇವರಿಬ್ಬರ ಗತಿ ಕೊನೆಗೆ ಏನಾಗುತ್ತದೋ? ಕಾರಣ ಕೊಲೆ ಮಾಡಿಸಿದ ನರೇಶ್ ಶೆಣೈನನ್ನು ಬಚಾವು ಮಾಡಲು ಕೇವಲ ಬಿಜೆಪಿಯವರು ಮಾತ್ರವಲ್ಲ ಕಾಂಗ್ರೆಸ್ಸಿನವರೂ ಪ್ರಯತ್ನಿಸುತ್ತಿದ್ದಾರೆ. ಯಾಕೆಂದರೆ ಕೊಲೆಯಾದ ವಿನಾಯಕ ಬಾಳಿಗ ಕೇವಲ ನರೇಶ್ ಶೆಣೈನ ಅಕ್ರಮಗಳನ್ನು ಹೊರಗೆಡವಿದ್ದು ಮಾತ್ರವಲ್ಲ ಅವರು ಕಾಂಗ್ರೆಸ್ಸಿಗೆ ಲಗತ್ತಾಗಿರುವ ಬಿಲ್ಡರುಗಳು ಮತ್ತು ಶಿಕ್ಷಣ ಮಾಫಿಯಾದವರ ಅಕ್ರಮಗಳನ್ನೂ ಬಯಲಿಗೆಳೆದಿದ್ದರು. ಒಟ್ಟಾರೆ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಒಂದೇ ನಾಣ್ಯದ ಎರಡು ಮುಖಗಳು ಅಷ್ಟೇ. ನಮ್ಮಂತಹ ಸಾಮಾನ್ಯ ಜನರು ಮಾತ್ರ - ನಾನು ಈ ಪಾರ್ಟಿ ನೀನು ಆ ಪಾರ್ಟಿ ಎಂದು ನಮ್ಮನಮ್ಮಲ್ಲಿ ಸುಮ್ಮನೆ ಜಗಳಾಡುತ್ತಿರುವುದು ಅಷ್ಟೇ. ಇಂತಹ ಕೊಳಕು ವಿಷಯಗಳಲ್ಲಿ ಭಾರತ ವಿಶ್ವಗುರು ಎಂಬುದು ನಿಜ.

ಪಾಂಡ್ಯಾ ಮತ್ತು ಬಾಳಿಗ ಇವರಿಬ್ಬರ ಕುಟುಂಬದವರೂ ನಿಜವಾದ ಕೊಲೆಗಾರರನ್ನು ಗುರುತಿಸಿ ಅವರಿಗೆ ಶಿಕ್ಷೆಯಾಗುವಂತೆ ಮಾಡಲು ವಿಪರೀತ ಹೆಣಗಿದ್ದಾರೆ. ಆದರೆ ಪಾಂಡ್ಯ ಕುಟುಂಬ 16 ವರ್ಷಗಳಿಂದ ಯಶಸ್ವಿಯಾಗಿಲ್ಲ ಹಾಗೂ ಕೊಲೆ ರೂವಾರಿ ತಪ್ಪಿಸಿಕೊಂಡು ದಿಲ್ಲಿಯಲ್ಲಿ ಅಧಿಕಾರ ಸ್ತರದಲ್ಲಿ ಎರಡನೇ ಕ್ರಮಾಂಕಕ್ಕೆ ಏರಿದ್ದಾನೆ. ಹಾಗಾಗಿ ಮಂಗಳೂರಿನ ಬಾಳಿಗಾ ಕುಟುಂಬದ ಪ್ರಯತ್ನ ಯಶಸ್ವಿ ಆಗುತ್ತದೋ ಇಲ್ಲವೋ ಕಾದುನೋಡಬೇಕು.


- ಜಿ. ರವಿಕಿರಣ ರೈ, ಮೈಸೂರು

ಎತ್ತಿನಹೊಳೆ ಯೋಜನೆಗೆ ವಿರೋಧ ಅರ್ಥವಿಹೀನ

ಈಗ ಕೇವಲ ಒಂದು ತಿಂಗಳ ಮಳೆಯಿಂದ ಕರಾವಳಿಯ ಎಲ್ಲಾ ನದಿ ಹೊಳೆಗಳು ಉಕ್ಕಿ ಹರಿಯುತ್ತಿದ್ದು ಕೆಲವು ಹಳ್ಳಿಗಳು ಪ್ರವಾಹ ಪೀಡಿತವಾಗಿವೆ. ಸದ್ಯದಲ್ಲಿಯೇ ಪ್ರವಾಹಪೀಡಿತರು ಸರಕಾರದಿಂದ ಪರಿಹಾರಕ್ಕೆ ದುಂಬಾಲು ಬೀಳಬಹುದು. ಆದರೆ ಮುಖ್ಯ ವಿಷಯವೇನೆಂದರೆ ಕೇವಲ ಮೊದಲ ಒಂದು ತಿಂಗಳ ಮಳೆಯಿಂದ ಕರಾವಳಿಯ ಎಲ್ಲಾ ನದಿಗಳು ತುಂಬಿ ಹೆಚ್ಚಿನ ನೀರು ಸಮುದ್ರ ಸೇರುತ್ತಿದೆ. ಹಾಗಾದರೆ ಇನ್ನೂ ಉಳಿದಿರುವ ಮೂರು ತಿಂಗಳ



ಮಳೆಗಾಲದಲ್ಲಿ ಇನ್ನೂ ಎಷ್ಟು ಮಳೆ ನೀರು ಸಮುದ್ರ ಸೇರಬಹುದು ಊಹಿಸಿ. ವಿಪರ್ಯಾಸವೆಂದರೆ ಈವರೆಗೂ ಯಾವನೇ ಒಬ್ಬ ನೀರಾವರಿ ತಜ್ಞ ಎತ್ತಿನಹೊಳೆ ಯೋಜನೆಯ ವಿರುದ್ಧ ತನ್ನ ಅಭಿಪ್ರಾಯ ವ್ಯಕ್ತ ಮಾಡಿಲ್ಲ. ಹೀಗಿದ್ದರೂ ಒಳನಾಡಿಗೆ ಕುಡಿಯುವ ನೀರಿಗಾಗಿ ಸರಕಾರ ಕೈಗೆತ್ತಿಕೊಂಡಿರುವ ಎತ್ತಿನಹೊಳೆ ಯೋಜನೆಗೆ ಸ್ವಲ್ಪವೂ ತಾಂತ್ರಿಕ ಜ್ಞಾನವಿಲ್ಲದ ಕರಾವಳಿಯ ರಾಜಕಾರಣಿಗಳು ಮತ್ತು ಮಠಾಧೀಶರು ವಿನಾಕಾರಣ ಆಕ್ಷೇಪ ಎತ್ತುತ್ತಿದ್ದಾರೆ. ಕರಾವಳಿಯಲ್ಲಿ ಹೀಗೊಂದು ಗಾದೆಯಿದೆ- ನಮ್ಮ ಹಣ್ಣು ಕೊಳೆತು ಹೋದರೂ



ಪರವಾಗಿಲ್ಲ ಆದರೆ ಅದು ದಾನ ಕೊಟ್ಟು ಹೋಗ... ಬಹುಶಃ ಈ ಸಂಕುಚಿತ ಬುದ್ಧಿಯ ಗಾದೆಯನ್ನೇ ಅ... ಇಲ್ಲಿಯ ನದಿಗಳ ನೀರು ಸಮುದ್ರ... ಅನುಪಯುಕ್ತವಾದರೂ ಪರವಾಗಿಲ್ಲ... ಒಳನಾಡಿನವರಿಗೆ ಕುಡಿಯಲು ಸಿಗಬಾರದು... ಮಾನವ ವಿರೋಧಿ ನೀತಿ ಇಲ್ಲಿಯ... ಅನುಸರಿಸುತ್ತಿರುವುದು ಕರ್ನಾಟಕದ ದುರ...

ಇದೇ ಬೇಸಿಗೆಯಲ್ಲಿ ಕರಾವಳಿಯಲ್ಲಿ ... ನೀರಿನ ಕೊರತೆ ಕಂಡು ಬಂದಾಗ ಎಲ್ಲರ... ನೀರಿನ ಕೊಯ್ಲಿನ ಬಗ್ಗೆ ಉಪದೇಶ ... ಮಾಡಿದ್ದು. ಆದರೆ ಈಗ ಚೆನ್ನಾಗಿ ಮಳೆ ಬರು... ಯಾರೂ ಮಳೆ ನೀರಿನ ಕೊಯ್ಲಿನ ಬಗ್ಗೆ ... ಆಸಕ್ತಿ ತೋರಿಸುತ್ತಿಲ್ಲ. ಅತೀಹೆಚ್ಚು ... ಉಪಯೋಗಿಸುತ್ತಿರುವ ಎಮ್‌ಆರ್‌ಪಿಎಲ್... ಬೃಹತ್ ಉದ್ಯಮಗಳೂ ಮಳೆ ನೀರಿನ ... ಬಗ್ಗೆ ಕಿಂಚಿತ್ತೂ ಆಸಕ್ತಿ ತೋರಿಸುತ್ತಿಲ್ಲ. ಜಿಲ್ಲೆಯ ಜನರ ಬುದ್ಧಿವಂತಿಕೆ ಕೇವಲ ... ಉಪದೇಶಿಸುವುದಕ್ಕೆ ಮಾತ್ರ ಸೀಮಿತವೇ? ಈಗ...



ಪುಣೆಯ ಆರು ವರ್ಷದ ಹುಡುಗಿ ವೈಶಾಲಿ ಪ್ರಧಾನಿ ಮೋದಿಗೆ ಪತ್ರ ಬರೆದು ತನ್ನ ಹೃದಯ ಚಿಕಿತ್ಸೆಯ ಬಗ್ಗೆ ಹೇಳಿಕೊಂಡಳಂತೆ ಹಾಗೂ ಆ ಪತ್ರಕ್ಕೆ ತಕ್ಷಣ ಸ್ಪಂದಿಸಿದ ಮೋದಿ ಅವಳ ಹೃದಯದ ಚಿಕಿತ್ಸೆ ಮಾಡಿಸುವ ವ್ಯವಸ್ಥೆ ಮಾಡಿಸಿ, ಕಳೆದ ತಿಂಗಳು ಅವರು ಪುಣೆಗೆ ಹೋಗಿದ್ದಾಗ ಆ ಹುಡುಗಿಯನ್ನು ಸ್ವತಃ ಭೇಟಿಯಾಗಿ ಅವಳ ಆರೋಗ್ಯ ವಿಚಾರಿಸಿದರಂತೆ. ಈ ಸುದ್ದಿ ದೇಶದ ಎಲ್ಲಾ ಪತ್ರಿಕೆಗಳು ಮತ್ತು ಟಿವಿಗಳು ಬಿತ್ತರಿಸಿದವು. ಎಷ್ಟೊಂದು ಹೃದಯವಂತ ನಮ್ಮ ಮೋದಿ ಅಲ್ಲವೇ ಎಂಬ ಪ್ರಶಂಸೆಯ ಸುರಿಮಳೆ ಕೇಸರಿ ಪತ್ರಿಕೆಗಳು ಸುರಿಸಿದ್ದೇ ಸುರಿಸಿದ್ದು. ಅಸಲಿ ವಿಷಯವೆಂದರೆ ಆ ಆರು ವರ್ಷದ ವೈಶಾಲಿಗೆ ಇನ್ನೂ ಅಕ್ಷರ ಮಾಲೆಯೇ ಪೂರ್ತಿ ಗೊತ್ತಿಲ್ಲ, ದೇಶದ ಪ್ರಧಾನಿ ಯಾರೆಂದು ಗೊತ್ತಿಲ್ಲ, ಪತ್ರ ಹೇಗೆ ಬರೆಯುವುದು, ವಿಳಾಸ ಎಲ್ಲಿ ಬರೆಯುವುದು, ದೇಶದ ಪ್ರಧಾನಿಯ ಕಚೇರಿ ಎಲ್ಲಿದೆ, ಇವು ಯಾವುದೂ ಗೊತ್ತಿಲ್ಲ, ಆದರೂ ಅವಳು ಮೋದಿಗೆ ಪತ್ರ ಬರೆದಳಂತೆ ಹಾಗೂ ಮಹಾ ದಯಾನಿಧಿ ಭಯಂಕರ ಕರುಣಾಳು ಮೋದಿ ಅವಳ ಪತ್ರ ನೋಡಿ ತಕ್ಷಣ ಸ್ಪಂದಿಸಿದರಂತೆ. ಇದು ಯಾವುದೋ ಚಂದಮಾಮ ಕಥೆಯಂತೆ ಇಲ್ಲವೇ?

ಹಿಂದಿನ ಒಂದು ವರ್ಷದಿಂದ ಮೋದಿಯ ಪ್ರಚಾರ ವಿಭಾಗವು ಇಂತಹ ಅನೇಕ ಮಕ್ಕಳ ಕಥೆಯನ್ನು ದೇಶದ ಎಲ್ಲೆಡೆಯ ಪತ್ರಿಕೆಗಳಲ್ಲಿ ಪ್ಲಾಂಟ್ ಮಾಡುತ್ತಿದೆ ಹಾಗೂ ಇದಕ್ಕೆ ಪೂರಕ ಫೋಟೋಗಳನ್ನು ಮೋದಿ ಹಾಗೂ ಮಕ್ಕಳನ್ನು ಜತೆಯಾಗಿಸಿ ತೆಗೆಯಲಾಗುತ್ತದೆ. ಸಂಘ ಪರಿವಾರದವರು ತಮ್ಮವರದೇ ಮಕ್ಕಳಿಂದ ತಮ್ಮೂರಿನ ರಸ್ತೆ ಸರಿಯಿಲ್ಲ ಅಥವಾ ಇಂತಿಂತಹ ಕುಂದುಕೊರತೆಯಿದೆ ಎಂದು ಮೋದಿಗೆ ಪತ್ರ ಬರೆಸುತ್ತಾರೆ. ನಂತರ ಪ್ರಧಾನಿ ಕಚೇರಿಯಿಂದ ಅದಕ್ಕೆ ಸಂಬಂಧಪಟ್ಟ ಇಲಾಖೆಗೆ ಆದೇಶ ಬಂದಂತೆ ಮಾಡಲಾಗುತ್ತದೆ. ಜತೆಗೆ ಆ ಹುಡುಗನಿಗೆ ಅದರ ಕಾಪಿ ಸಹ ಕಳುಹಿಸುವ ವ್ಯವಸ್ಥೆಯಾಗುತ್ತದೆ. ನಂತರ ಆ ಪ್ರಧಾನಿ ಕಚೇರಿಯ ಪತ್ರವನ್ನು ಸ್ಥಳೀಯ ಮಾಧ್ಯಮಗಳಿಗೆ ಸಂಘಿಗಳು ಬಿಡುಗಡೆ ಮಾಡಿ, ನೋಡಿ ನಮ್ಮ ಮೋದಿ ಎಷ್ಟು ಜನಪರ ಕಾಳಜಿಯುಳ್ಳವರು ಎಂದು ಪ್ರಚಾರ ಮಾಡಲಾಗುತ್ತದೆ. ಈಗೀಗ ಸಂಘಿಗಳ ಈ ನಾಟಕಗಳನ್ನೆಲ್ಲಾ ಜನರು ಅರ್ಥ ಮಾಡಿಕೊಂಡಿದ್ದಾರೆ. ಹೇಗೆಂದರೆ ಹಿಂದಿನ ಪ್ರಧಾನಿಗಳಿಗೂ ಜನಸಾಮಾನ್ಯರು ಪತ್ರ ಬರೆದರೆ ನಿಯಮದ ಪ್ರಕಾರ ಕ್ರಮ ಕೈಗೊಂಡು ಅದಕ್ಕೆ ಪ್ರಧಾನಿ ಕಚೇರಿ ಉತ್ತರಿಸುತ್ತಲೇ ಇತ್ತು, ಆದರೆ ಆಗ ಸಣ್ಣ ಮಕ್ಕಳನ್ನು ಅದರಲ್ಲಿ ತೂರಿಸಿ ಮಾಧ್ಯಮದ ಮುಂದೆ ಯಾರೂ ನಾಟಕ


ಭಾರತವನ್ನು ವಿಶ್ವಗುರು ಮಾಡುವುದಿರ... ವಿಶ್ವಗುಲಾಮರನ್ನಾಗಿ ಮಾಡದಿದ್ದರೆ ಸಾಕ...



ಆಡುತ್ತಿರಲಿಲ್ಲ, ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಇಂತಹ ನಾಟಕಗಳು ನಡೆಯುತ್ತಿರಲಿಲ್ಲ, ಕಾರಣ ಅವರು ಜಗತ್ಪ್ರಸಿದ್ಧ ಆರ್ಥಿಕ ತಜ್ಞರಾಗಿದ್ದರೆ ಹೊರತು ಮೋದಿಯಂತೆ ನಾಟಕ ತಜ್ಞರಾಗಿರಲಿಲ್ಲ. 2002 ರಲ್ಲಿ ಗುಜರಾತ್ ನರಮೇಧದಲ್ಲಿ ಈ ವೈಶಾಲಿಯಂತಹ ಚಿಕ್ಕ ಮಕ್ಕಳನ್ನು ಸಂಘಿ ಗೂಂಡಾಗಳು ತ್ರಿಶೂಲದಿಂದ ಚುಚ್ಚಿ ಚುಚ್ಚಿ ಭೀಕರವಾಗಿ ಕೊಲ್ಲುತ್ತಿದ್ದಾಗ ಆ ಮೋದಿಯ ಕರುಣಾಳು ಹೃದಯ ಎಲ್ಲಿ ಅಡಗಿತ್ತೋ?

ಮೂರು ವರ್ಷಗಳ ಹಿಂದೆ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಅಂದರೆ ಜೂನ್ 2013 ರಲ್ಲಿ ಈಗಿನಂತೆ ಉತ್ತರಾಖಂಡ್‌ನಲ್ಲಿ ಮೇಘ ಸ್ಫೋಟದಿಂದ ಭಾರಿ ಪ್ರವಾಹ ಬಂದಿತ್ತು ಮತ್ತು ಕೇದಾರನಾಥ್ ಸಹ ಮುಳುಗಿಹೋಗಿತ್ತು, ಆಗ ತಕ್ಷಣ ಆಗಿನ ಮನಮೋಹನ್ ಸಿಂಗ್ ಸರಕಾರ ಸೇನಾಪಡೆ ಮತ್ತು ಅರೆಸೇನಾಪಡೆ ಅಲ್ಲಿಗೆ ಕಳುಹಿಸಿ ರಕ್ಷಣಾ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸಿತ್ತು. ಆ ಉತ್ತರಾಖಂಡ್ ರಾಜ್ಯದ ಪ್ರಕೃತಿ ವಿಕೋಪ ಗುಜರಾತ್ ರಾಜ್ಯದ ಮುಖ್ಯಮಂತ್ರಿಗೆ ಸಂಬಂಧಿಸಿದ್ದಲ್ಲವಾಗಿದ್ದರೂ ಆಗ ಮೋದಿ ಕೆಲವು ಚಿಡ್ಡಿ ಪಡೆಯೊಂದಿಗೆ ಉತ್ತರಾಖಂಡಕ್ಕೆ ಹೋಗಿ ತಾನು ಹತ್ತು ಸಾವಿರ ಗುಜರಾತಿ ಯಾತ್ರಿಗಳನ್ನು ರಕ್ಷಿಸಿದ್ದಾಗಿ ಮಾಧ್ಯಮಗಳಿಗೆ ಟಾರ್ಜನ್ ತರ ಭಾರಿ ಪೋಸ್ ಕೊಟ್ಟಿದ್ದರು. ಆ... ಪೇಡ್ ಮೀಡಿಯಾ ಅವರನ್ನು ಸೂಪರ್... ಸ್ಪೈಡರ್‌ಮ್ಯಾನ್, ಬ್ಯಾಟ್ಸ್‌ಮ್ಯಾನ್ ಎಲ್ಲಾ ಮೋದಿ ... ಆಗಿದ್ದರು ಎಂದೆಲ್ಲಾ ಹಾಡಿ ಹೊಗಳಿದ್ದವು. ... ಮೋದಿಯ ನಿಜರೂಪ ಗೊತ್ತಿದ್ದ ಜನರು ಮೋ... ಫೇಕೂಮ್ಯಾನ್ ಎಂದಷ್ಟೇ ಕರೆದು ಸುಮ್ಮನಾದರು... ಟಾರ್ಜನ್ ತರ ಪೋಸ್ ಕೊಟ್ಟಿದ್ದ ಅದೇ ಮೋ... ದೇಶದ ಪ್ರಧಾನಿಯಾದಾಗ ಮಾತ್ರ ತನ್ನ ನಿಜ ... ಮರೆತಿದ್ದಾರೆ. ಕಳೆದ ವಾರ ಮತ್ತೆ ಅದೇ ಉತ್ತರಾ... ಮೇಘಸ್ಫೋಟದಿಂದ ಭೀಕರ ಪ್ರವಾಹ ಬಂದು ... ಸಾವುನೋವಾಗಿದ್ದರೂ ಸೇನಾಪಡೆಯನ್ನು ಅಲ್ಲಿ ... ಕಾರ್ಯಕ್ಕೆ ಮೋದಿ ತಕ್ಷಣ ಕಳುಹಿಸಲಿಲ್ಲ, ಇಷ್ಟ... ಈ ಫೇಕೂ ಮೋದಿ ಅದೆಷ್ಟು ದೊಡ್ಡ ನಾಟಕಕಾರ... ಹೃದಯಹೀನ ವ್ಯಕ್ತಿ ಎಂಬುದನ್ನು ಅರ್ಥಮಾಡಿಕೊ... ಇಂತಹ ವ್ಯಕ್ತಿಯು ಭಾರತವನ್ನು ವಿಶ್ವಗುರು... ಮಾಡುತ್ತಾನಂತೆ. ಈ ಸಂಘಿ ಶಿಷ್ಯ ಭಾರತವನ್ನು ವಿ... ಮಾಡುವುದು ಒತ್ತಟ್ಟಿಗಿರಲಿ ಭಾರತವನ್ನು ಅ... ಒತ್ತೆಯಿಟ್ಟು ಭಾರತೀಯರನ್ನು ವಿಶ್ವಗುಲಾಮ... ಮಾಡದಿದ್ದರೆ ಅಷ್ಟೇ ಸಾಕು!

- ಆರ್.ಬಿ.ಶೆಣಾವ, ಮಂಗ...



ನ್ನಡ-ಉಡುಪಿ ಜಿಲ್ಲೆಯ ಎಲ್ಲಾ ನದಿಗಳು ತುಂಬಿ ರಿಯುತ್ತಿರುವಾಗ ಹಾಗೂ ಹೆಚ್ಚಿನ ನೀರು ಸಮುದ್ರ ೇರುತ್ತಿರುವಾಗ ಈ ನದಿಗಳು ಸಮುದ್ರ ಸೇರುವಲ್ಲಿ ಜಕಾರಣಿಗಳು, ಮಠಾಧೀಶರು ಹಾಗೂ ನೀರಾವರಿ ತಜ್ಞರು ಸೇರಿ ಎತ್ತಿನಹೊಳೆ ಯೋಜನೆಯ ಸಾಧಕ-ಬಾಧಕಗಳನ್ನು ರಾಮರ್ಶಿಸುವುದು ಒಳಿತು. ಕಾರಣ ಅವರ ಕಣ್ಣೆದುರಿಗೇ ೀಕರ ರಭಸದಿಂದ ಸಮುದ್ರ ಸೇರುವ ನದಿಯ ನೀರಿನ ಮಾಣದ ನೈಜ ಅರಿವು ಅವರಿಗೆ ಮೂಡಿ ಎತ್ತಿನಹೊಳೆ ೋಜನೆಗೆ ತಮ್ಮ ವಿರೋಧ ಅರ್ಥವಿಹೀನ ಎಂದು ನದಟ್ಟಾಗಬಹುದು.

- ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ಬಿಜೆಪಿಯವರಿಗಿಂತ ದೊಡ್ಡ ಆಷಾಢಭೂತಿಗಳು ಯಾರಿದ್ದಾರೆ?

ಪ್ರತಿವರ್ಷ ಜೂನ್ 25 ತಾರೀಖು ಬಂದಕೂಡಲೇ ಬಿಜೆಪಿಯವರಿಗೆ 1975-77ರ ಇಂದಿರಾ ಗಾಂಧಿಯ ಮರ್ಜನ್ಸಿ ನೆನಪಾಗುತ್ತದೆ. ಅದರ ಬಗ್ಗೆ ಪಾರ್ಲಿಮೆಂಟಿನಲ್ಲಿ ರ್ಚೆಯಾಗಲಿ ಎಂದು ಕೇಸರಿ ಪಕ್ಷದವರು ಮೊನ್ನೆ ಮತ್ತೆ ೊಬ್ಬೆ ಹಾಕಿದ್ದಾರೆ. ಆದರೆ ಅವರ ಪಕ್ಕದಲ್ಲಿಯೇ ತುರ್ತು ಪರಿಸ್ಥಿತಿಯ ಕರಾಳ ಕೈಗಳಲ್ಲಿ ಒಂದಾದ ಮನೇಕಾ ಗಾಂಧಿ ಳಿತಿರುತ್ತದೆ. ಜತೆಗೆ ತುರ್ತು ಪರಿಸ್ಥಿತಿಯ ಸಮಯದಲ್ಲಿ ಾಂಗ್ರೆಸ್ಸಿನಲ್ಲಿದ್ದು ಅದರ ಲಾಭ ಪಡೆದ ಆಗಿನ ಬಹಳಷ್ಟು ುರಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಈಗ ಬಿಜೆಪಿ ಅಥವಾ ಅದರ ಮಿತ್ರ ಪಕ್ಷಗಳಾದ ಎನ್‌ಡಿಎಯಲ್ಲಿ ುನ್ನತ ಸ್ಥಾನದಲ್ಲಿದ್ದಾರೆ. ಇದೆಲ್ಲಾ ಬಿಜೆಪಿಯ ಹುಂಬ ಾಯಿಬಡುಕರಿಗೆ ಕಾಣಿಸುವುದೇ ಇಲ್ಲ. ತುರ್ತುಪರಿಸ್ಥಿತಿಯ ೂವಾರಿ ಸಂಜಯ್ ಗಾಂಧಿಯ ಮಗ ವರುಣ್ ಗಾಂಧಿ ಈಗ ಬಿಜೆಪಿ ಪಕ್ಷದ ಉತ್ತರ ಪ್ರದೇಶದ ಮುಖ್ಯಮಂತ್ರಿ ಸ್ಥಾನದ ಅಘೋಷಿತ ಅಭ್ಯರ್ಥಿಯಂತೆ! ಬಿಜೆಪಿಯವರಿಗಿಂತ ದೊಡ್ಡ ಆಷಾಢಭೂತಿಗಳು ಈ ಜಗತ್ತಿನಲ್ಲಿ ಬೇರೆ ಯಾರಿದ್ದಾರೆ ಹೇಳಿ? 1975-77 ರಲ್ಲಿ ಸೋನಿಯಾ ಅಥವಾ ರಾಜೀವ್ ಗಾಂಧಿ ಮತ್ತು ಮಕ್ಕಳು ಇಂದಿರಾರ ಜತೆಯಲ್ಲಿ ಇರಲೇ ಇಲ್ಲ. ಪೈಲೆಟ್ ಆಗಿದ್ದ ರಾಜೀವ ಗಾಂಧಿ ತನ್ನ ಹೆಂಡತಿ ಮಕ್ಕಳ ಜತೆ ಬೇರೆಯಾಗಿಯೇ ಇದ್ದು ರಾಜಕೀಯದಲ್ಲಿ ಸ್ವಲ್ಪವೂ ಹಸ್ತಕ್ಷೇಪ ಮಾಡಿರಲಿಲ್ಲ. ಆಗ ಇಂದಿರಾರ ಜತೆ ಇದ್ದು ಭಯಂಕರ ಅಧಿಕಾರ ಚಲಾಯಿಸಿದ್ದು ಸಂಜಯ್ ಮತ್ತು ಮನೇಕಾ ಗಾಂಧಿ ಮಾತ್ರ.

1975-77 ರಲ್ಲಿ ಇದ್ದಿದ್ದು ಘೋಷಿತ ತುರ್ತುಪರಿಸ್ಥಿತಿ. ಆದರೆ ಈಗ ಮೋದಿಯಡಿ ಇರುವುದು ಅಘೋಷಿತ ತುರ್ತುಪರಿಸ್ಥಿತಿ. ಸ್ವತಃ ಬಿಜೆಪಿಯ ಭೀಷ್ಮ ಅಡ್ವಾಣಿಯವರೇ ಇದನ್ನು ಹೇಳಿದ್ದಾರೆ. ಇಂದಿರಾರ ತುರ್ತುಪರಿಸ್ಥಿತಿಯಲ್ಲೂ ಮೀಡಿಯಾದ ಕತ್ತು ಹಿಸುಕಲಾಗಿತ್ತು ಹಾಗೂ ಈಗಲೂ ಮೋದಿಯಿಂದ ಅದೇ ಆಗುತ್ತಿದೆ. ಮೋದಿ ವಿರುದ್ಧ ಮಾತನಾಡಿದ ಸುದ್ದಿ ಸಂಪಾದಕನನ್ನು ಆಯಾ ಟಿವಿ ಹಾಗೂ ಪತ್ರಿಕೆಗಳು ಒಂದೇ ದಿನದಲ್ಲಿ ಮನೆಗೆ ಕಳುಹಿಸುವಂತೆ ನೋಡಿಕೊಳ್ಳಲಾಗುತ್ತಿದೆ. ಆಗ 'ಕಿಸ್ಸಾ ಕುರ್ಸಿಕಾ' ಎಂಬ ಹಿಂದಿ ಚಲನಚಿತ್ರವನ್ನು ನಿಷೇಧಿಸಲಾಯಿತು ಹಾಗೂ ಈಗ 'ಉಡ್ತಾ ಪಂಜಾಬ್' ಮತ್ತು ಇತರ ಚಿತ್ರಗಳ ಕತ್ತು ಹಿಸುಕುವ ಪ್ರಯತ್ನ ಮಾಡಲಾಯಿತು. ಆಗ ಬಲಾತ್ಕಾರದಿಂದ ಕುಟುಂಬ ಯೋಜನೆ ಮಾಡಲಾಯಿತು ಆದರೆ ಯಾರನ್ನು ಜೀವಂತ ನೇಣು ಹಾಕಿ ಅಥವಾ ಬಡಿದು ಕೊಲ್ಲಲಿಲ್ಲ. ಆದರೆ ಈಗ ಗೋಮಾಂಸದ ಹೆಸರಲ್ಲಿ ಜನರನ್ನು ಬಡಿದು ಅಥವಾ ನೇಣು ಹಾಕಿ ಕೊಲ್ಲಲಾಗುತ್ತಿದೆ. ಇಂದಿರಾರ ತುರ್ತು ಪರಿಸ್ಥಿತಿಯಲ್ಲಿ ಕಾಳಸಂತೆಖೋರರೆಲ್ಲ ಹೆದರಿ ಬಿಲ ಸೇರಿದ್ದರಿಂದ ಆಹಾರ ಧಾನ್ಯಗಳ ಬೆಲೆ ಹತೋಟಿಗೆ ಬಂದು ಬಡವರ ಜೀವನ ಹಸನಾಗಿತ್ತು. ಆದರೆ ಈಗ ಮೋದಿಯ ಕಾಲದಲ್ಲಿ ಕಾಳಸಂತೆಖೋರರೆಲ್ಲಾ ಬಿಜೆಪಿ ಸದಸ್ಯರೇ ಆಗಿರುವುದರಿಂದ ಅವರ ಅಟ್ಟಹಾಸಕ್ಕೆ ಕಡಿವಾಣ ಹಾಕುವವರೇ ಇಲ್ಲವಾಗಿ ಎಲ್ಲಾ ಆಹಾರ ಧಾನ್ಯಗಳ ಬೆಲೆ ಮೂರು ಪಟ್ಟು ಏರಿ ಬಡವರ ಜೀವನ ದುರ್ಭರವಾಗಿದೆ.


ಸಾಮಾನ್ಯ ಜನರಿಗೆ ಬೇಕಾಗಿರುವುದು ಕೇವಲ ಎರಡು ಹೊತ್ತಿನ ಊಟ, ಸೂರು, ಬಟ್ಟೆ ಹಾಗೂ ಮಕ್ಕಳಿಗೆ ಶಿಕ್ಷಣ. ಪ್ರಜಾಪ್ರಭುತ್ವದ ಮೌಲ್ಯ, ಸಂವಿಧಾನದ ಪಾವಿತ್ರ್ಯತೆ, ಪತ್ರಿಕಾ ಸ್ವಾತಂತ್ರ್ಯ ಇವುಗಳ ಪ್ರಾಮುಖ್ಯತೆ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಹಾಗಾಗಿ ಇಡೀ ರಾಷ್ಟ್ರದ ಜನತೆ ಇಂದಿರಾ ಗಾಂಧಿಯ ತಪ್ಪನ್ನು ಕೇವಲ 30 ತಿಂಗಳಲ್ಲಿಯೇ ಕ್ಷಮಿಸಿ ಅವರನ್ನು ಮತ್ತೆ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ತಂದಿತು. ಜನರ ಬಹುಮತದ ತೀರ್ಪು ಯಾವುದೇ ರಾಜಕೀಯ ಪಕ್ಷಗಳ ಸ್ವಾರ್ಥಭರಿತ ಅಭಿಪ್ರಾಯಗಳಿಗಿಂತ ಹೆಚ್ಚು ಮುಖ್ಯವಾದುದು ತಾನೇ!

- ವೀರಪ್ಪ ಡಿ.ಎನ್, ಮಡಿಕೇರಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ankesh70@rediffmail.com ಗೆ ಮಿಡಿ ಯಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಪ್ತವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ಸಿನಿಮಾ ಮಾಡುವುದಷ್ಟೇ ನನ್ನ ಕೆಲಸ: ಪ್ರಶಾಂತ್ ರಾಜ್

ಕಳೆದ ವಾರವಷ್ಟೇ ರಿಲೀಸ್ ಆದ 'ಜೂಮ್' ಸಿನಿಮಾದ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಾಯಕ ಗಣೇಶ್ ಅವರಿಗೆ ಈ ಚಿತ್ರ ಇನ್ನೊಂದು ಬ್ರೇಕ್ ಕೊಟ್ಟಿದೆ ಎಂದು ಅದರ ನಿರ್ಮಾಪಕರು ಹೇಳುತ್ತಿದ್ದಾರೆ. ಜೊತೆಗೆ ತಮ್ಮ ಸಿನಿಮಾ ಹಿಟ್ ಆಗಿದೆ ಎಂದೂ ನಿರ್ಮಾಪಕರು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 'ಜೂಮ್' ಸಿನಿಮಾದ ನಿರ್ದೇಶಕ ಪ್ರಶಾಂತ್ ರಾಜ್ ತಮ್ಮ ಅನಿಸಿಕೆಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.



ಎಲೆಮರೆಕಾಯಿಯಂತೆ ಕೆಲಸ ಮಾಡುವ ನಿರ್ದೇಶಕರಲ್ಲಿ ಪ್ರಶಾಂತ್ ರಾಜ್ ಕೂಡ ಒಬ್ಬರು. ಅವರು ಮಾಡಿದ ಮೂರು ಚಿತ್ರಗಳೂ ಹಿಟ್ ಆಗಿವೆ. ಇವರ ನಿರ್ದೇಶನದ ಚಿತ್ರಕ್ಕಾಗಿಯೇ ರಾಧಿಕಾ ಪಂಡಿತ್‌ಗೆ ಎರಡು ಫಿಲ್ಮ್‌ಫೇರ್ ಪ್ರಶಸ್ತಿ ಸಿಕ್ಕಿವೆ. ಪ್ರಶಾಂತ್ ನಿರ್ದೇಶನಕ್ಕೂ ರಾಜ್ಯ ಪ್ರಶಸ್ತಿ ಬಂದಿದೆ. ನಾಲ್ಕನೇ ಸಿನಿಮಾ 'ಜೂಮ್' ಕಳೆದ ವಾರವಷ್ಟೇ ರಿಲೀಸ್ ಆಗಿದೆ. ಸೋಲಿನ ಸುಳಿಯಲ್ಲಿ ಸಿಲುಕಿದ್ದ ಗಣೇಶ್‌ಗೆ ಈ ಸಿನಿಮಾ ಮತ್ತೊಂದು ಬ್ರೇಕ್ ಕೊಟ್ಟಿದೆ ಎನ್ನುವವರಿದ್ದಾರೆ. ನಿರ್ದೇಶಕರು ಮತ್ತೊಂದು ಸಿನಿಮಾದ ಸಿದ್ಧತೆಯಲ್ಲಿದ್ದಾರೆ. ಈ ಎಲ್ಲದರ ಕುರಿತು ಅವರು ಮಾತಾಡಿದ್ದಾರೆ.

** 'ಜೂಮ್' ಗೆಲ್ಲುತ್ತದೆ ಎಂಬ ಭರವಸೆ ನಿಮಗೆ ಇತ್ತಾ?*

ಸಿನಿಮಾ ಮಾಡಿದ ಪ್ರತಿಯೊಬ್ಬರೂ ತಮ್ಮ ಸಿನಿಮಾ ಗೆಲ್ಲಬೇಕು ಅಂತ ಬಯಸಿರುತ್ತಾರೆ. ಸೂಪರ್ ಹಿಟ್ ಆಗಲಿ ಅಂತ ದುಡಿಯುತ್ತಾರೆ. ನಮ್ಮ ತಂಡಕ್ಕೂ ಅಂಥಾದ್ದೊಂದು ಆಸೆ ಇತ್ತು. ಆದರೆ, ಈ ಪ್ರಮಾಣದಲ್ಲಿ ಸಿನಿಮಾ ಗೆಲ್ಲುತ್ತದೆ ಅಂತ ಅನಿಸಿರಲೇ ಇಲ್ಲ. ನಾವು ನಿರೀಕ್ಷೆ ಮಾಡಿದ್ದಕ್ಕಿಂತಲೂ ಹೆಚ್ಚಿನ ಗೆಲುವು ಸಿಕ್ಕಿದೆ.

** ಸಿನಿಮಾ ಗೆದ್ದಿದೆ ಎಂದು ನೀವು ಹೇಳುತ್ತಿರುವುದು ಪ್ರಚಾರದ ತಂತ್ರ ಅಂತ ಅನಿಸ್ತಿಲ್ಲವಾ?*

ಬೇರೆಯವರ ಬಗ್ಗೆ ನಾನು ಏನೂ ಹೇಳಲಾರೆ. ನನ್ನ ಸಿನಿಮಾದ ಗೆಲುವಿನ ಬಗ್ಗೆ ನಾನು ಸಾಕ್ಷಿಸಮೇತ ಹೇಳಿದ್ದೇನೆ. ಪ್ರೆಸ್‌ಮೀಟ್ ಮಾಡಿ, ಕಲೆಕ್ಷನ್ ವಿವರಣೆ ನೀಡಿದ್ದೇನೆ. ಮೊದಲನೇ ದಿನ 1 ಕೋಟಿ 45 ಲಕ್ಷ ಕಲೆಕ್ಷನ್ ಮಾಡಿದರೆ, ಎರಡನೇ ದಿನ 1 ಕೋಟಿ 60 ಲಕ್ಷ ಹಾಗೂ ಮೂರನೇ ದಿನ 2 ಕೋಟಿ 18 ಲಕ್ಷ ಕಮಾಯಿ ಮಾಡಿದೆ. ಇದಕ್ಕಿಂತ ದಾಖಲೆ ಇನ್ನೇನು ಬೇಕು?

** ಹಣಕಾಸಿನ ವ್ಯವಹಾರದ ಹೊರತಾಗಿ ಬೇರೆ ಏನನ್ನು ಹೇಳಲು ಇಚ್ಛಿಸುತ್ತೀರಿ?*

ಸಿನಿಮಾ ಸಲೀಸಾಗಿ ಮಾಡಿಬಿಡಬಹುದು. ಆದರೆ, ಅದನ್ನು ರಿಲೀಸ್ ಮಾಡುವುದು ತುಂಬಾ ಕಷ್ಟ. ಅದರಲ್ಲೂ ಕೆಲವು ಚಿತ್ರಮಂದಿರಗಳು ಪರಭಾಷೆಯ ಸಿನಿಮಾಗಳ ಪಾಲಿಗಿವೆ. ಅಂತಹ ಥಿಯೇಟರ್‌ನಲ್ಲೂ ನಮ್ಮ ಸಿನಿಮಾ ರಿಲೀಸ್ ಆಗಿದೆ. ಮುಂದೆಯೂ ಕನ್ನಡದ ಚಿತ್ರಗಳು ಆ ಸಿನಿಮಾಮಂದಿರದಲ್ಲಿ ರಿಲೀಸ್ ಆಗುವಂತೆ ಕಲೆಕ್ಷನ್ ಮಾಡಿದೆ. ಬೆಂಗಳೂರಿನ ಊರ್ವಶಿ ಚಿತ್ರಮಂದಿರದಲ್ಲಿ ಎರಡು ಬಾರಿ ಹೌಸ್‌ಫುಲ್ ಪ್ರದರ್ಶನ ಕಂಡಿದ್ದರೆ, ಕಾವೇರಿಯಲ್ಲಿ ಹಲವು ಶೋಗಳು ಹೌಸ್‌ಫುಲ್ ಪ್ರದರ್ಶನ ಕಂಡಿವೆ.

** ಸಿನಿಮಾದಲ್ಲಿ ಡಬ್ಬಲ್ ಮೀನಿಂಗ್ ಸಂಭಾಷಣೆ ಜಾಸ್ತಿ ಆಯಿತು ಅನ್ನುವುದು ವಿಮರ್ಶಕರ ಅಭಿಪ್ರಾಯವಾಗಿದೆಯಲ್ಲಾ?*

ಕೆಲವರು ಹಾಗೆ ಹೇಳಿದ್ದಾರೆ ಅಷ್ಟೆ. ಸಾಧು ಕೋಕಿಲಾ ಪಾತ್ರ ಮಾತ್ರ ಆ ರೀತಿಯ ಒಂದಿಷ್ಟು ಮಾತುಗಳನ್ನು ಆಡುತ್ತದೆ. ಉಳಿದಂತೆ ಯಾರೂ ದ್ವಂದ್ವಾರ್ಥದ ಮಾತುಗಳನ್ನು ಆಡುವುದಿಲ್ಲ. ಕಾಶೀನಾಥ್ ಅಂದಾಕ್ಷಣ ಡಬ್ಬಲ್ ಮೀನಿಂಗ್ ಡೈಲಾಗ್ ಅನ್ನುವ ಮಾತಿತ್ತು. ಇಲ್ಲಿ ಅವರು ಸಿಂಗಲ್ ಮೀನಿಂಗ್ ಸಂಭಾಷಣೆ ಹೊಡೆದಿದ್ದಾರೆ. ಎಲ್ಲವೂ ಹದವಾಗಿದೆ ಎಂದು ಹೇಳಲು ಬಯಸುತ್ತೇನೆ.

** ಹಲವು ಭಾಷೆಗಳಿಗೆ ಈ ಸಿನಿಮಾ ಡಬ್ ಕೂಡ ಆಗಿದೆಯಂತೆ?*

ಸಾಮಾನ್ಯವಾಗಿ ಸಬ್ ಟೈಟಲ್ ಹಾಕಿ ಹೊರ ದೇಶಗಳಲ್ಲಿ ರಿಲೀಸ್ ಮಾಡುವುದು ವಾಡಿಕೆ. ಈ ಬಾರಿ ಆಯಾ ಭಾಷೆಗೆ ಡಬ್ ಮಾಡಿ, ಸಿನಿಮಾ ರಿಲೀಸ್ ಮಾಡುತ್ತಿದ್ದೇವೆ. ಇದು ಕಷ್ಟದ ಕೆಲಸವಾದರೂ, ನಮ್ಮ ಸಿನಿಮಾಗಳನ್ನು ಅಲ್ಲಿನ ಪ್ರೇಕ್ಷಕರು ನೋಡಲಿ ಅನ್ನುವುದು ಮತ್ತು ಕನ್ನಡದ ಮಾರುಕಟ್ಟೆಯನ್ನು ವಿಸ್ತರಿಸುವುದು ಇದರ ಹಿಂದಿನ ಉದ್ದೇಶವಾಗಿದೆ.

** ಯಾವ ಯಾವ ದೇಶದಲ್ಲಿ 'ಜೂಮ್' ರಿಲೀಸ್ ಆಗಲಿದೆ?*

ಇದೇ ಜು.9ಕ್ಕೆ ಲಂಡನ್‌ನಲ್ಲಿ ರಿಲೀಸ್ ಮಾಡುತ್ತಿದ್ದೇವೆ. ನಂತರ ಜರ್ಮನಿ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ದೇಶಗಳಲ್ಲಿ ಬಿಡುಗಡೆ ಮಾಡುವ ಪ್ಲಾನ್ ಇದೆ.

** ನಿಮ್ಮ ಮುಂದಿನ ಸಿನಿಮಾ ಯಾವುದು?*

'ದಳಪತಿ' ಅನ್ನುವ ಮತ್ತೊಂದು ಚಿತ್ರ ತಯಾರಾಗಿದೆ. ನೆನಪಿರಲಿ ಪ್ರೇಮ್ ಈ ಸಿನಿಮಾದ ನಾಯಕರು. ಬಹುತೇಕ ಶೂಟಿಂಗ್ ಮುಗಿದಿದೆ. 'ಜೂಮ್' ಸಿನಿಮಾವನ್ನು ಎಲ್ಲರಿಗೂ ತೋರಿಸಿ, ಆನಂತರ ಹೊಸ ಚಿತ್ರದತ್ತ ಮುಖ ಮಾಡುವೆ.

** 'ಜೂಮ್' ಸಿನಿಮಾವನ್ನೇ ನೀವೇ ರಿವ್ಯೂವ್ ಮಾಡುವುದಾದರೆ?*

ಅಯ್ಯೋ, ನನ್ನ ಸಿನಿಮಾ ನಾನೇ ವಿಮರ್ಶೆ ಮಾಡುವುದು ಕಷ್ಟ. ಈಗಾಗಲೇ ಮೀಡಿಯಾದವರು ಆ ಕೆಲಸ ಮಾಡಿದ್ದಾರೆ. ಒಳ್ಳೊಳ್ಳೆ ಮಾತುಗಳನ್ನೇ ಬರೆದಿದ್ದಾರೆ. ಅವರೇ ಹೇಳಿದ್ದನ್ನು ನಾನು ಹೇಳಬೇಕು ಅಷ್ಟೆ. ಸಿನಿಮಾದ ಕತೆ, ಕಲರ್‌ಫುಲ್ ಲೊಕೇಶನ್, ಹೊಸದಾಗಿರುವ ಹಾಡು ಮತ್ತು ಮೇಕಿಂಗ್ ಬಗ್ಗೆ ಮಾತಾಡಿದ್ದಾರೆ. ಎಲ್ಲರ ಪ್ರತಿಕ್ರಿಯೆಯನ್ನು ನಾನು ಗೌರವಿಸುತ್ತೇನೆ. ◆

ಕತೆ

15⇦

ಹಾಗೂ ಪ್ರಧಾನಿಗಳೂ ಶಾಮೀಲಾಗಿದ್ದಾರೆ. ಇದು ಬೃಹತ್ ಒಳಸಂಚಿನ ಒಂದು ಭಾಗವೆನ್ನುವುದರಲ್ಲಿ ಅನುಮಾನವೇ ಬೇಡ. ರಾಷ್ಟ್ರಾಧ್ಯಕ್ಷರು ರಾಜೀನಾಮೆ ನೀಡಲಿ, ಪ್ರಧಾನಿಗಳು ಸಹ. ಈ ಪ್ರಕರಣದಲ್ಲಿ ಸರ್ಕಾರದ ಅತ್ಯುತ್ತಮ ಕೆಲಸವೆಂದರೆ ಇಡೀ ಸಂಪುಟವೇ ರಾಜೀನಾಮೆ ನೀಡುವುದು. ಆದಷ್ಟು ಶೀಘ್ರ ರಬ್ಬರ್ ಮೂಗಿನ ವಂಚಕನನ್ನು ಬಂಧಿಸಬೇಕು."

ರಾಷ್ಟ್ರಾಧ್ಯಕ್ಷರು ಕೆರಳಿದರು. ಅಂತೆಯೇ ಪ್ರಧಾನಿ ಸಹ! ಟ್ಯಾಂಕುಗಳು ಮೂಕ್ಕನ್ ಬಂಗಲೆ ಕಡೆ ಉರುಳಿದವು. ಮೂಕ್ಕನ್‌ನನ್ನು ಬಂಧಿಸಲಾಯಿತು.

ಈ ಘಟನೆಯ ನಂತರ ಹಲವು ದಿನಗಳವರೆಗೆ ಮೂಕ್ಕನ್ ಬಗೆಗೆ ಯಾವ ಸುದ್ದಿಯೂ ಬರಲಿಲ್ಲ. ಜನ ಮೂಕ್ಕನ್‌ನನ್ನು ಹಾಗೂ ಅವನ ಮೂಗನ್ನು ಮರೆತರು. ಪ್ರತಿಯೊಂದು ನೆಮ್ಮದಿ ಹಾಗೂ ಶಾಂತಿಯಿಂದಿತ್ತು. ಬಳಿಕ ಒಂದು ದಿನ ರಾಷ್ಟ್ರಾಧ್ಯಕ್ಷರು ಬಾಂಬ್‌ವೊಂದನ್ನು ಸಿಡಿಸಿದರು! ಯಾವಾಗ ಮೂಕ್ಕನ್ ಜನಮನದಿಂದ ಕಣ್ಮರೆಯಾಗಿದ್ದನೋ ಆವಾಗಲೇ ರಾಷ್ಟ್ರಾಧ್ಯಕ್ಷರ ಕಚೇರಿಯಿಂದ ಈ ಸುದ್ದಿ ಬಾಂಬ್‌ನಂತೆ ಸಿಡಿದಿತ್ತು!

ಮಾರ್ಚ್ 9ರಂದು ಮೂಕ್ಕನ್ ವಿಚಾರಣೆ ಸಾರ್ವಜನಿಕವಾಗಿ ನಡೆಯಲಿದೆ. ಈತ ಈಗ ಸೆರೆಯಲ್ಲಿದ್ದು ತನ್ನದು ಅತಿ ವಿರಳವಾದ, ಅತಿ ಉದ್ದನೆಯ ಮೂಗು ಎಂದು ರಬ್ಬರ್ ಮೂಗನ್ನು ಅಳವಡಿಸಿಕೊಂಡು ಜನರ ಕಣ್ಣಿಗೆ ಮಣ್ಣೆರಚಿ ಹಣ ದೋಚುತ್ತಿರುವನೆಂಬ ಆರೋಪವಿದೆ. ಈ ಬಗ್ಗೆ 48 ದೇಶಗಳಿಂದ ಬರುವ ವೈದ್ಯಕೀಯ ತಜ್ಞರು ಅವನ ಮೂಗನ್ನು ಕೃತಕವೇ ಅಥವಾ ಅಸಲೀ ಎಂದು ಪರಿಶೀಲಿಸುವರು. ಜಗತ್ತಿನಾದ್ಯಂತ ಇರುವ ಪ್ರಮುಖ ಸಮೂಹ ಮಾಧ್ಯಮಗಳು, ಟಿ.ವಿ. ಸಿಬ್ಬಂದಿ, ರೇಡಿಯೋ ಸಿಬ್ಬಂದಿ ಅಂದು ಹಾಜರಿರುವರು. ಜನರು ಶಾಂತಿ ಕಾಪಾಡಬೇಕೆಂದು ಕೋರಿದೆ.

ಆದರೆ ಜನರಾದರೋ ಹೆದ್ದರ ಗುಂಪು. ಅವರು ಶಾಂತಿಯಿಂದಿರಲಿಲ್ಲ. ರಾಜಧಾನಿಗೆ ಹಿಂಡುಹಿಂಡಾಗಿ ಬಂದರು. ಹೋಟೆಲ್‌ಗಳ ಮೇಲೆ ದಾಳಿ ಇಟ್ಟರು. ಪತ್ರಿಕಾಕಚೇರಿಗಳನ್ನು ಲೂಟಿ ಮಾಡಿದರು, ಚಿತ್ರಮಂದಿರಗಳನ್ನು ಸುಟ್ಟರು, ಮದ್ಯದಂಗಡಿ ದೋಚಿದರು. ಪೊಲೀಸ್ ಠಾಣೆಗಳನ್ನು, ಸರ್ಕಾರಿ ಯಂತ್ರೋಪಕರಣಗಳನ್ನು ಧ್ವಂಸಗೊಳಿಸಿದರು. ಕೋಮುಗಲಭೆ ಭುಗಿಲೆದ್ದಿತು ಹಲವೆಡೆ. ಹಲವು ಸ್ತ್ರೀಪುರುಷರು ಹುತಾತ್ಮರಾದರು ಮೂಕ್ಕನ್‌ನ ಮೂಗಿನ ಕಾರಣದಿಂದ.

ಮಾರ್ಚ್ 9, ರಾಷ್ಟ್ರಾಧ್ಯಕ್ಷರ ಅರಮನೆ ಸುತ್ತಮುತ್ತ ಹಸಿರು ಹಾಸಿನ ಮೇಲೆ ಸಹಸ್ರ ಸಹಸ್ರ ಮಂದಿ ದಟ್ಟೈಸಿದರು. ಗಂಟೆ ಹನ್ನೊಂದು ಹೊಡೆಯುತ್ತಿದ್ದಂತೆ ರಾಷ್ಟ್ರಾಧ್ಯಕ್ಷರ ನಿವಾಸದ ಸುತ್ತ ಕಟ್ಟಿದ್ದ ಧ್ವನಿವರ್ಧಕಗಳು "ಜನರು ಸ್ವಯಂನಿಯಂತ್ರಣದ ತೆಕ್ಕೆಗೆ ಭಾಜನರಾಗಬೇಕೆಂದು, ಶಾಂತಿ ಕಾಪಾಡಬೇಕು" ಎಂದು ಮೊಳಗಿದವು. ಪರೀಕ್ಷೆ ಪ್ರಾರಂಭಗೊಂಡಿತು.

ರಾಷ್ಟ್ರಾಧ್ಯಕ್ಷ ಹಾಗೂ ಪ್ರಧಾನಿ ಎದುರು ಉದ್ದನೆ ಮೂಗಿನವನ ಪರೀಕ್ಷೆಗೆ ತಜ್ಞವೈದ್ಯರ ಗುಂಪು ನೆರೆಯಿತು. ರಾಷ್ಟ್ರಾಧ್ಯಕ್ಷರ ಅರಮನೆ ಹೊರಗೆ ದಟ್ಟೈಸಿದ್ದ ಜನಸಾಗರ ಉಸಿರು ಬಿಗಿಹಿಡಿದು ನಿರೀಕ್ಷಿಸುತ್ತಿತ್ತು!

ವೈದ್ಯಕೀಯ ತಂಡದ ಓರ್ವ ತಜ್ಞ ಮೂಕ್ಕನ್ ಮೂಗನ್ನು ಮುಚ್ಚಿದ. ಆಗ ಮೂಕ್ಕನ್ ಬಾಯಿ ತೆರೆದ. ಮತ್ತೋರ್ವ ತಂಡದ ತಜ್ಞ ಅವನ ಲಂಬೂ ಮೂಗನ್ನು ಪಿನ್ನಿನಿಂದ ಚುಚ್ಚಿದ. ಆಮೇಲೆ... ಕೌತುಕಗಳ ಸರಮಾಲೆ! ಪ್ರಖ್ಯಾತಿವೆತ್ತ ಹಾಗೂ ವಿವಾದಾಸ್ಪದ ಮೂಗಿನ ತುದಿಯ ಮೇಲೆ ಪಿನ್ನು ಚುಚ್ಚಿದ ಜಾಗದಿಂದ ರಕ್ತ ಒಸರಲು ಪ್ರಾರಂಭಿಸಿತು ಮೂಗು ರಕ್ತ ಮಾಂಸದ್ದು ಅಸಲಿ, ತಜ್ಞವೈದ್ಯರ ತೀರ್ಪು ಒಮ್ಮತವಿತ್ತು.

ಕಷ್ಟಕಾಲದಲ್ಲೂ ಮೂಕ್ಕನ್ ಜೊತೆಯೇ ಇದ್ದ ಅವನ ಸ್ವಾಮಿನಿಷ್ಠ ಕಾರ್ಯದರ್ಶಿ, ಭದ್ರತಾ ದಳದ ಕೋಟೆ ಹಾಗೂ ತಜ್ಞವೈದ್ಯರ ಸಮೂಹವನ್ನು ಬೇಧಿಸಿಕೊಂಡು, ಮೂಕ್ಕನ್ ಬಳಿ ದಿಢೀರನೇ ಓಡಿದಳು, ಉತ್ಕಟಭಾವದಿಂದ ಆ ಲಂಬೂ ಅಸಲಿ ಮೂಗಿನ ತುದಿಗೆ ಮುತ್ತಿಟ್ಟಳು!

ಕಾಮ್ರೇಡ್ ಮೂಕ್ಕನ್ ಜಿಂದಾಬಾದ್! ಜನರ ಕ್ರಾಂತಿಕಾರಿ ಪಾರ್ಟಿ ಜಿಂದಾಬಾದ್! ಅವರ ಅಸಲಿ ಮೂಗಿಗೆ ನಮ್ಮ ಸಲಾಮ್! ಘೋಷಣೆಗಳು ರಾಷ್ಟ್ರಾಧ್ಯಕ್ಷರ ಅರಮನೆಯನ್ನೂ ಅಲ್ಲಾಡಿಸಿಬಿಟ್ಟವು.

ಘೋಷಣೆ ತಣ್ಣಗಾದ ಮೇಲೆ ಅಧ್ಯಕ್ಷರು ಮತ್ತೊಂದು ಜಾಣತನದ ಕೃತ್ರಿಮವೊಂದನ್ನು ಹಿಡಿದುಬಂದರು. ಧ್ವನಿವರ್ಧಕದ ಮೂಲಕ ಮಿ॥ ಮೂಕ್ಕನ್‌ರನ್ನು ಶೀಘ್ರವೇ ಮುಕ್ಕಶ್ರೀ ಪ್ರಶಸ್ತಿಯೊಂದಿಗೆ ಸನ್ಮಾನಿಸಲಾಗುವುದೆಂದು ಹೇಳಿದರು ಹಾಗೂ ಸಂಸತ್ತಿಗೆ ನಾಮಕರಣ ಮಾಡಲಾಗುವುದೆಂದರು.

ಮುಕ್ಕಶ್ರೀ ಮುಕ್ಕೇನ್ ಈಗ ಎಂ.ಪಿ.! ಖ್ಯಾತಿವೆತ್ತ ವಿಶ್ವವಿದ್ಯಾನಿಲಯವೊಂದು ಅವನಿಗೆ ಎಂ.ಲಿಟ್. ಪದವಿ ಅನುಗ್ರಹಿಸಿದರೆ! ಮತ್ತೊಂದು ವಿ.ವಿ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಡಿ.ಲಿಟ್ ಪದವಿ ನೀಡಿತು!

ಆದರೆ ಮೂಕ್ಕನ್ ವಿರೋಧಿ ಬಣ ಸಂಯುಕ್ತ ರಂಗ ಏರ್ಪಡಿಸಿಕೊಂಡು ಸರ್ಕಾರದ ವಿರುದ್ಧ ಹೋರಾಟಕ್ಕಿಳಿಯಿತು. ತಜ್ಞವೈದ್ಯರ ತಂಡ ಒಮ್ಮತಾಭಿಪ್ರಾಯ ನೀಡಿದರೂ ಅವರು ರಾಷ್ಟ್ರಾಧ್ಯಕ್ಷರಿಗೆ ಧಿಕ್ಕಾರ! ಪ್ರಧಾನಿಗೆ ಧಿಕ್ಕಾರ! ಎಂದು ಬೊಬ್ಬೆ ಹಾಕಿದರು. "ಮೂಕ್ಕನ್ ನೇಣಿಗೇರಿಸಿ! ಜನರಿಗೆ ಬೃಹತ್ ಪ್ರಮಾಣದಲ್ಲಿ ವಂಚನೆಗೈದವರಿಗೆ ಕುಮ್ಮಕ್ಕು ನೀಡುವವರಿಗೆ ಗಲ್ಲಾಗಲಿ!"

ಜನರ ಕ್ರಾಂತಿಯ ಮಾರ್ಗ ಎಂದೂ ಸುಲಲಿತವಾಗಿ ನಡೆಯದು!

ಇನ್ನು ತತ್ವಜ್ಞಾನಿಗಳು ಹಾಗೂ ಬುದ್ಧಿಜೀವಿಗಳು ಈ ಎಲ್ಲ ಗದ್ದಲ, ಗೊಂದಲದಿಂದ ಏನು ತಾನೇ ಮಾಡಿಯಾರು? ಅವರು ಸಾರ್ವತ್ರಿಕವಾಗಿ ಘೋಷಿಸಿದ ಮೂಗಿನ ಮೇಲೆ ವಿಶ್ವಾಸವಿಡಬೇಕಿತ್ತು.

ಚರಿತ್ರಕಾರ ಹೊರಟ ಹೊರಗೆ.

ಮಲೆಯಾಳಂ ಮೂಲ:
ವೈಕಮ್ ಮೊಹಮದ್ ಬಷೀರ್
ಕನ್ನಡಕ್ಕೆ: ಸೊಂದಲಗೆರೆ ಲಕ್ಷ್ಮೀಪತಿ

Registered No.RNP/KA/BGS/2036/2014-16 Posted at :PSO, Mysore Road, Bangalore-26 Thursday R B P LANKESH, Kannada Weekly Price Rs. 15/- 20-07-2016 RNI No. KARKAN20

ಯೋಗಿಯ ದುನಿಯಾ



ಲೂಸ್‌ಮಾದ ಅಲಿಯಾಸ್ ಯೋಗೀಶನ ದುನಿಯಾ ಸದ್ಯಕ್ಕೆ ಸರಿ ಇಲ್ಲ. ಹೀಗಾಗಿಯೇ ಈಗ ಅವರ ಕೈಯಲ್ಲಿ ಯಾವುದೇ ಸಿನಿಮಾಗಳೂ ಇಲ್ಲ, ಶೂಟಿಂಗ್ ಮುಗಿಸಿರುವ ಚಿತ್ರಗಳೂ ಬಿಡುಗಡೆ ಆಗುತ್ತಿಲ್ಲ. ಹೀಗಾಗಿಯೇ ಮತ್ತೆ ದುನಿಯಾ ಹಿಂದೆ ಬಿದ್ದಿದ್ದಾರೆ ಯೋಗೀಶ್ ತಂದೆ ಟಿ.ಪಿ.ಸಿದ್ಧರಾಜು. ಮಗನ ಅದೃಷ್ಟ ಪರೀಕ್ಷೆಗಾಗಿ ಮತ್ತೆ ಅವರು 'ದುನಿಯಾ 2' ಚಿತ್ರ ಮಾಡಲು ಮುಂದಾಗಿದ್ದಾರೆ.

ಸೂರಿ ನಿರ್ದೇಶನದ 'ದುನಿಯಾ' 2007ರಲ್ಲಿ ತೆರೆಗೆ ಬಂದಿತ್ತು. ಅದು ಬಾಕ್ಸ್ ಆಫೀಸ್‌ನಲ್ಲೂ ಸಖತ್ ಸದ್ದು ಮಾಡಿತ್ತು. ಈ ಚಿತ್ರದಲ್ಲಿ ವಿಲನ್ ಆಗಿದ್ದ ಯೋಗಿ, ಈಗ 'ದುನಿಯಾ-2'ರಲ್ಲಿ ಹೀರೋ ಆಗಿ ಮಿಂಚಲಿದ್ದಾರಂತೆ. ಸೂರಿ ಬದಲು ಈ ಚಿತ್ರವನ್ನು ಹರಿ ಎಂಬುವರು ನಿರ್ದೇಶನ ಮಾಡುತ್ತಿದ್ದಾರೆ. ಅಂದಹಾಗೆ 'ದುನಿಯಾ' ಚಿತ್ರಕ್ಕೂ 'ದುನಿಯಾ-2' ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ, ಶೀರ್ಷಿಕೆ ಮಾತ್ರ ಬಳಕೆಯಾಗಿದೆ. ಚಿತ್ರದ ಮತ್ತೊಂದು ವಿಶೇಷತೆ ಅಂದರೆ, ಕತೆಯನ್ನು ಯೋಗಿ ಅವರೇ ಬರೆದಿದ್ದಾರೆ. ಬಹುತೇಕ ಸಿನಿಮಾ ಕೆ.ಆರ್ ಮಾರುಕಟ್ಟೆಯಲ್ಲಿ ಚಿತ್ರೀಕರಣಗೊಳ್ಳಲಿದೆ. ಅಲ್ಲದೇ ಪ್ರಸ್ತುತ ಸಮಾಜದ ಚಿತ್ರವನ್ನು ಚಿತ್ರ ಹೊಂದಿದೆ. ದುನಿಯಾ ರಶ್ಮಿಯ ಬದಲಾಗಿ ಹಿತಾ ಚಂದ್ರಶೇಖರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಇವರು ಸಿಹಿಕಹಿ ಚಂದ್ರು ಅವರ ಮೊದಲನೇ ಮಗಳು. ಯೋಗಿ ಮತ್ತು ಹಿತಾ ಈ ಹಿಂದೆ 'ಸ್ನೇಕ್‌ನಾಗ' ಎಂಬ ಸಿನಿಮಾದಲ್ಲಿ ನಟಿಸಿದ್ದರು. ಅದಿನ್ನೂ ಬಿಡುಗಡೆ ಆಗಿಲ್ಲ.

ಸೆಂಚುರಿ ಚಿತ್ರದಲ್ಲಿ ಪ್ರಣೀತಾ

ತೆಲುಗು ಮತ್ತು ತಮಿಳು ಸಿನಿಮಾ ರಂಗದಲ್ಲಿ ಬಿಜಿ ಆಗಿದ್ದ ಕನ್ನಡದ ಹುಡುಗಿ ಪ್ರಣೀತಾ ಮತ್ತೆ ಸ್ಯಾಂಡಲ್‌ವುಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕೇವಲ ಸ್ಟಾರ್ ನಟರ ಸಿನಿಮಾಗಳಲ್ಲಿ ಮಾತ್ರ ನಟಿಸುವ ಇವರು, ಸದ್ಯ ಸೆಂಚುರಿ ಸ್ಟಾರ್ ಶಿವರಾಜ್ ಕುಮಾರ್ ನಾಯಕರಾಗಿ ನಟಿಸುತ್ತಿರುವ 'ಲೀಡರ್' ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಇದು ಹೊಸ ಬಗೆಯ ಪಾತ್ರವಾದ್ದರಿಂದ, ಕ್ಯಾರೆಕ್ಟರ್ ಒಪ್ಪಿಕೊಂಡೆ ಅನ್ನುವುದು ಪ್ರಣೀತಾ ಮಾತು.

ಬಟ್ಟಲುಗಣ್ಣಿನ ಚೆಲುವೆ ಈಗಾಗಲೇ ದರ್ಶನ್, ಉಪೇಂದ್ರ ಸೇರಿದಂತೆ ಹಲವು ನಟರ ಜತೆ ತೆರೆ ಹಂಚಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಶಿವರಾಜ್‌ಕುಮಾರ್ ಜತೆ ನಟಿಸುತ್ತಿದ್ದಾರೆ.

ಹಲವು ಕಾರಣಗಳಿಂದಾಗಿ 'ಲೀಡರ್' ಸಿನಿಮಾ ಕುತೂಹಲ ಮೂಡಿಸಿದೆ. ಈ ಟೈಟಲ್‌ಗಾಗಿಯೇ ವಿವಾದ ಕೂಡ ಆಗಿದೆ. ಈಗ ಅದೆಲ್ಲವನ್ನೂ ಮರೆತು, ಸಿನಿಮಾ ಮಾಡಲು ಮುಂದಾಗಿದ್ದಾರೆ ನಿರ್ಮಾಪಕ ತರುಣ್ ಶಿವಪ್ಪ. 'ರೋಸ್' ಚಿತ್ರ ಖ್ಯಾತಿಯ ಸಹನಾಮೂರ್ತಿ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲಿದ್ದು, ವಿಜಯ ರಾಘವೇಂದ್ರ, ಗುರು ಜಗ್ಗೇಶ್ ತಾರಾಬಳಗದಲ್ಲಿದ್ದಾರೆ. ಆಗಸ್ಟ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದ್ದು, ವೀರಸಮರ್ಥ್ ಸಂಗೀತ, ಗುರುಪ್ರಶಾಂತ್ ರೈ ಛಾಯಾಗ್ರಹಣ ಚಿತ್ರಕ್ಕಿದೆ.



ಶಿವಣ್ಣ ಹೀರೋ, ಸುದೀಪ್ ವಿ




ಜೋಗಿ ಪ್ರೇಮ್ ಮತ್ತೊಂದು ಅಚ್ಚರಿಯ ಸುದ್ದಿ ಕೊಟ್ಟಿದ್ದಾರೆ. ಅದು ಸುಳ್ಳಾಗುವ ಮುಂಚೆಯೇ ಅದನ್ನು ಓದಿಬಿಡುವುದು ಉತ್ತಮ. ಪ್ರೇಮ್ ಈ ಹಿಂದೆ ನೂರು ಕೋಟಿ ಬಜೆಟ್‌ನಲ್ಲಿ 'ಕಲಿ' ಚಿತ್ರವನ್ನು ಮಾಡುವುದಾಗಿ ಘೋಷಿಸಿದ್ದರು. ಶಿವರಾಜ್‌ಕುಮಾರ್ ಮತ್ತು ಸುದೀಪ್ ಈ ಸಿನಿಮಾದಲ್ಲಿ ಒಟ್ಟಾಗಿ ನಟಿಸುತ್ತಾರೆ ಎಂದೂ ಸುದ್ದಿ ಆಗಿತ್ತು, ಟೈಟಲ್ ಕೂಡ ಅದ್ದೂರಿಯಾಗಿ ಲಾಂಚ್ ಆಗಿತ್ತು, ಆಮೇಲೆ ಸಿನಿಮಾ ನಿಂತೇಹೋಯಿತು. ಈಗ ಮತ್ತೊಮ್ಮೆ ... ಸಿಕ್ಕಿದ್ದಾರೆ ಅದೇ ಪ್ರೇಮ್. ಅವರು ಮತ್ತೆ ಶಿವಣ್ಣ ಮತ್ತು ಸುದೀಪ್ ... ಬಗ್ಗೆ ಮಾತಾಡಿದ್ದಾರೆ. 'ಕಲಿ' ಚಿತ್ರಕಥೆಯಲ್ಲಿನ ತೊಡಕಿನಿಂದಾಗಿ ... ಹೋಗಿದೆಯಂತೆ. ಈ ಗ್ಯಾಪ್‌ನಲ್ಲೇ ಪ್ರೇಮ್ ಮತ್ತೊಂದು ಕತೆ ಬರೆದಿ... ಊಟಿಯಲ್ಲಿ ಬೀಡುಬಿಟ್ಟಿರುವ ಪ್ರೇಮ್ ಮತ್ತು ಅವರ ತಂಡ ಶಿವಣ್ಣ ... ಸುದೀಪ್‌ಗಾಗಿ ಹೊಸ ಕತೆ ಹೆಣೆದಿದ್ದಾರಂತೆ. ನೂತನ ಚಿತ್ರ ಆಗಸ್ಟ್ ... ಸೆಟ್ಟೇರಲಿದೆಯಂತೆ. ಅಲ್ಲದೇ ಕನ್ನಡ, ತೆಲುಗು ಮತ್ತು ತಮಿಳು ಭಾ... ಈ ಚಿತ್ರವು ತೆರೆಕಾಣಲಿದೆಯಂತೆ.

ಕನ್ನಡದಲ್ಲಿ ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿದ್ದರೆ, ... ಪಾತ್ರದಲ್ಲಿ ನಟ ಸುದೀಪ್ ಅಭಿನಯಿಸಲಿದ್ದಾರೆ ಅನ್ನುವ ಮಾಹಿ... ಇನ್ನೆರಡು ಭಾಷೆಗಳಲ್ಲಿ ಆಯಾ ರಂಗದ ನಾಯಕರೇ ಪ್ರಮುಖ... ನಿರ್ವಹಿಸುತ್ತಿದ್ದರೆ, ಮೂರು ಭಾಷೆಗಳಲ್ಲಿ ಕಿಚ್ಚ ಅವರೇ ಖಳ... ಎನ್ನಲಾಗುತ್ತಿದೆ. ಆದರೆ, ಇದು ಖಚಿತ ಮಾಹಿತಿ ಅಲ್ಲ ಅನ್ನು... ಮರೆಯುವಂತಿಲ್ಲ. ಸುದೀಪ್ ಖಳನಟನ ಪಾತ್ರಕ್ಕೆ ಒಪ್ಪುತ್ತಾರಾ ... ಪ್ರಶ್ನೆಗೂ ಸದ್ಯಕ್ಕೆ ಉತ್ತರವಿಲ್ಲ.

ಇದು ಬದ್ಮಾಶ್ ಯುಗ

ಕನ್ನಡದ ಅನೇಕ ಸಿನಿಮಾಗಳನ್ನು ಬೇರೆ ಬೇರೆ ಭಾಷೆಯ ಚಿತ್ರ ತಯಾರಕರು ಮೆಚ್ಚುತ್ತಿದ್ದಾರೆ. ಆ ಸಾಲಿಗೆ ಹೊಸದಾಗಿ ಸೇರ್ಪಡೆ ಆಗಿದೆ ಧನಂಜಯ್ ಮುಖ್ಯ ಭೂಮಿಕೆಯ 'ಬದ್ಮಾಶ್' ಚಿತ್ರ. ಈ ಸಿನಿಮಾದ ಟೀಸರ್ ನೋಡಿದ್ದ ಬಾಲಿವುಡ್ ನಟ ಸಲ್ಮಾನ್ ಖಾನ್, ಈ ಚಿತ್ರವನ್ನು ಬಾಲಿವುಡ್‌ನಲ್ಲಿ ರೀಮೇಕ್ ಮಾಡುವುದಾಗಿ ಹೇಳಿದ್ದರು. ಈ ಬೆನ್ನಲ್ಲೇ ಮತ್ತೊಬ್ಬ ಹೆಸರಾಂತ ನಟ ಮತ್ತು ನಿರ್ದೇಶಕ ಪ್ರಭುದೇವ್, ಚಿತ್ರದ ಮೇಕಿಂಗ್‌ಅನ್ನು ಹೊಗಳಿದ್ದಾರೆ. ಇಂತಹ ಚಿತ್ರಗಳು ಇನ್ನೂ ಹೆಚ್ಚಾಗಲಿ ಎಂದು ಪ್ರಭು ಮಾತಾಡಿದ್ದಾರೆ.

ಚಿತ್ರದ ನಿರ್ದೇಶಕರು ಸಿನಿಮಾದ ಹಾಡು ಮತ್ತು ಮೇಕಿಂಗ್ ವಿಡಿಯೋವನ್ನು ಪ್ರಭುದೇವ ಅವರಿಗೆ ತೋರಿಸಿದ್ದಾರೆ. ಅದನ್ನು ನೋಡಿದ ಪ್ರಭುದೇವ ನಿರ್ದೇಶಕರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಬದ್ಮಾಶ್' ಆಕಾಶ್ ಶ್ರೀವತ್ಸ ನಿರ್ದೇಶನದ ಚಿತ್ರ. 'ಸುಳ್ಳೇ ಸತ್ಯ' ಎಂಬ ಕಿರುಚಿತ್ರದ ಮೂಲಕ ದೊಡ್ಡ ಮಟ್ಟದಲ್ಲಿ ಸದ್ದು ಮಾಡಿದವರು ನಿರ್ದೇಶಕರು. ಸಿನಿಮಾದಲ್ಲಿ ಅನೇಕ ವಿಶೇಷತೆಗಳಿವೆ. ಸ್ಕ್ರೀನ್ ಪ್ಲೇ ಸಿನಿಮಾದ ಜೀವಾಳ. ಹೊಸದಾಗಿರುವ ಮೇಕಿಂಗ್, ಪಂಚಿಂಗ್ ಡೈಲಾಗ್ಸ್ ಮತ್ತು ಸ್ಟೈಲಿಶ್ ನಟನೆಯಿಂದಾಗಿ ಚಿತ್ರವು ಗಮನ ಸೆಳೆಯಲಿದೆಯಂತೆ.



ಕಬಾಲಿಗೆ ಬೆದರಿದ ದಕ್ಷಿಣ ರ

ರಜನೀಕಾಂತ್ ನಟನೆಯ 'ಕಬಾಲಿ' ಸಿನಿಮಾದ ಬಿಡುಗಡೆ ... ಹೋಗುತ್ತಲೇ ಇದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಜುಲೈ ... ಚಿತ್ರ ರಿಲೀಸ್ ಆಗಬೇಕಿತ್ತು, ಅದಕ್ಕಾಗಿ ಸರ್ವ ಸಿದ್ಧತೆಯೂ ನಡೆದಿತ್ತು ... ಈಗ ಮತ್ತೆ ಒಂದು ವಾರ ಮುಂದೆ ಹೋಗಿದೆ. ಜುಲೈ 22ಕ್ಕೆ ಬಿ... ಮಾಡುವುದಾಗಿ ನಿರ್ಮಾಪಕರು ಹೇಳಿದ್ದಾರೆ. ಆದರೂ ಅದನ್ನು ನಂಬ... ಅನ್ನುತ್ತಿದೆ ದಕ್ಷಿಣ ಭಾರತ ಚಿತ್ರರಂಗ. ಇದು ಭಾರೀ ಬಜೆಟ್‌ನ ... ಅಲ್ಲದೇ ರಜನಿ ಅಭಿಮಾನಿಗಳು ಎಲ್ಲಾ ಕಡೆ ಇರುವುದರಿಂದ ಸಾ... ಚಿತ್ರಮಂದಿರಗಳಲ್ಲಿ 'ಕಬಾಲಿ' ರಿಲೀಸ್ ಆಗಲಿದೆ. ಹೀಗಾಗಿಯೇ ... ಚಿತ್ರಗಳು ರಿಲೀಸ್ ಆಗದೇ ಕಾಯುತ್ತಿವೆ. ಈ ಬಿಸಿ ಕನ್ನಡ ಸಿನಿಮಾ... ತಟ್ಟಿದೆ. 'ಕಬಾಲಿ' ಹವಾ ದಕ್ಷಿಣ ಭಾರತದಲ್ಲಷ್ಟೇ ಅಲ್ಲ ಉತ್ತರ ಭಾರ... ಜೋರಾಗಿದೆ. 1000 ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ '... ಪ್ರದರ್ಶನಗೊಳ್ಳಲಿದೆ. ಈ ಸಿನಿಮಾ ತಮಿಳಿನಲ್ಲಿ ನಿರ್ಮಾಣವಾಗಿದ್ದರೂ ... ಮತ್ತು ತೆಲುಗು ಭಾಷೆಗಳಲ್ಲಿ ಡಬ್ ಕೂಡ ಆಗಿದೆ.

ಕರ್ನಾಟಕದಲ್ಲಿ ವಿತರಣೆಯ ಹಕ್ಕುಗಳನ್ನು ರಾಕ್‌ಲೈನ್ ಪಡೆ... ದೊಡ್ಡ ಮಟ್ಟದಲ್ಲೇ ರಿಲೀಸ್ ಮಾಡುವ ಪ್ಲಾನ್ ಮಾಡಿದ್ದಾರೆ. ... ಥಿಯೇಟರ್ ಸಮಸ್ಯೆಗೆ ಇತರ ಚಿತ್ರಗಳಿಗೆ ಎದುರಾಗಲಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604526, E-mail : lankesh70@rediffmail.com